ಶ್ರೀ

ವ್ಯಾಸಮಹರ್ಷಿಪ್ರಣೀತ

# ಶ್ರೀಮಹಾಭಾರತವು

(ಕರ್ನಾಟಕ ವಚನವು)

## ಆಶ್ರಮವಾಸಿಕಪರ್ವವು.

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರ್ ವಿರಚಿತವು.

ಪ್ರಕಾಶಕರು:

ಕರ್ನಾಟಕ ಡೆಪೋ,

1/59, ಸನ್ನಿಧಿ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

1935

## All Rights Reserved.

ಕಾಪಿರೈಟ್, ೧೯೩೨–ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಇದರ ಗ್ರಂಥಕರ್ತರಿಗೆ ಸೇರಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಭಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

# ವಿಷಯಾನುಕ್ರಮಣಿಕೆ.


| ಅಧ್ಯಾಯ | | ಪುಟ. |
|---|---|---|
| ೧. | ಯುಧಿಷ್ಠಿರನ ಆಳ್ವಿಕೆ. ಕುಂತಿ ಮುಂತಾದವರು ಗಾಂಧಾರಿಯನ್ನು ಸತ್ಕರಿಸುತ್ತಿದ್ದುದು. ಭೀಮನುಹೊರತು ಇತರರೆಲ್ಲರೂ ಯುಧಿಷ್ಠಿರನ ಅನುಮತಿಯಂತೆ ಧೃತರಾಷ್ಟ್ರನ ಆಜ್ಞೆಯಲ್ಲಿ ನಡೆಯುತ್ತಿದ್ದುದು . | ೧ |
| ೨. | ಯುಧಿಷ್ಠಿರನು ತನ್ನ ತಮ್ಮಂದಿರೊಡನೆ ಧೃತರಾಷ್ಟ್ರನನ್ನು ಸಂತೋಷಪಡಿಸಿದುದು . . . . | ೪ |
| ೩. | ಭೀಮನ ನಿಂದೆಯನ್ನು ಕೇಳಿ ಸಹಿಸಲಾರದ ಧೃತರಾಷ್ಟ್ರನು ಗಾಂಧಾರಿಯೊಡನೆ ಕಾಡಿಗೆ ಹೊರಡಲುದ್ಯೋಗಿಸಿದುದು. ನಗರದ ಜನರನ್ನು ಬರಮಾಡಿ ತನ್ನ ಮನೋನಿಶ್ಚಯವನ್ನು ಅವರಿಗೆ ತಿಳಿಸಿದುದು . | ೬ |
| ೪. | ಯುಧಿಷ್ಠಿರನು ದುಃಖದಿಂದ ಧೃತರಾಷ್ಟ್ರನನ್ನು ತಡೆದುದು ವ್ಯಾಸಾಗಮನವು . . . . | ೧೯ |
| ೫. | ವ್ಯಾಸನು ಧೃತರಾಷ್ಟ್ರನ ವನವಾಸಕ್ಕಾಗಿ ಅನುಮತಿ ಕೊಡುವಂತೆ ಯುಧಿಷ್ಠಿರನಿಗೆ ತಿಳಿಸಿದುದು. ಯುಧಿಷ್ಠಿರನು ವ್ಯಸನದಿಂದ ಅದಕ್ಕೆ ಸಮ್ಮತಿಸಿದುದು . . . . | ೧೪ |
| ೬. | ಧೃತರಾಷ್ಟ್ರನು ಯುಧಿಷ್ಠಿರನಿಗೆ ರಾಜನೀತಿಯನ್ನು ಉಪದೇಶಿಸಿದುದು | ೧೬ |
| ೭. | ಧೃತರಾಷ್ಟ್ರನು ಧರ್ಮರಾಜನಿಗೆ ರಾಜನೀತಿಗಳನ್ನುಪದೇಶಿಸಿದುದು . | ೨೦ |
| ೮. | ಧೃತರಾಷ್ಟ್ರನ ಉಪದೇಶಗಳು . . . | ೨೨ |
| ೯. | ಧೃತರಾಷ್ಟ್ರನು ನಗರ ಜನರನ್ನು ಕರೆಸಿ, ತಾನು ಅರಣ್ಯಕ್ಕೆ ಹೊರಡಲು ಅನುಮತಿಯನ್ನು ಕೇಳಿದುದು . . | ೨೪ |
| ೧೦. | ಧೃತರಾಷ್ಟ್ರನು ತಾನು ದುರ್ಯೋಧನನ ಮಾತುಗಳಿಗೆ ಮರುಳಾಗಿ ಮಾಡಿದ ದೋಷಗಳನ್ನು ಮನ್ನಿಸುವಂತೆ ಜನರನ್ನು ಬೇಡಿದುದು. ಯುಧಿಷ್ಠಿರನನ್ನು ಅವರಲ್ಲಿ ಒಪ್ಪಿಸಿ, ತಾನು ವನಕ್ಕೆ ಹೊರಡಲು ಅನುಮತಿ ಕೇಳಿದುದು . . . . | ೨೬ |

೧೧. ಪುರಜನರು ಬ್ರಾಹ್ಮಣರ ಮೂಲಕವಾಗಿ ಧೃತರಾಷ್ಟ್ರನನ್ನು ಸಮಾಧಾನಪಡಿಸಿ, ಮಹಾವ್ಯಸನದಿಂದ ಆತನ ವನಪ್ರಯಾಣಕ್ಕೆ ಅನುಮತಿಯನ್ನು ಕೊಟ್ಟದು . . . . ೨೯

೧೨. ಧೃತರಾಷ್ಟ್ರನು ದುರ್ಯೋಧನಾದಿಗಳಿಗೆ ಶ್ರಾದ್ಧವನ್ನು ಮಾಡಲು ಧನವನ್ನು ತರುವುದಕ್ಕಾಗಿ ವಿದುರನಮೂಲಕ ಯುಧಿಷ್ಠಿರನಿಗೆ ಹೇಳಿಕಳುಹಿಸಿದುದು. ಭೀಮನು ಅದಕ್ಕೆ ಸಮ್ಮತಿಸದೆ, ಧೃತರಾಷ್ಟ್ರನ ದುರ್ಬುದ್ಧಿಯನ್ನು ಎತ್ತಿಹೇಳಿ ನಿರಾಕರಿಸಿದುದು . . ೩೩

೧೩. ಭೀಮನು ದುರ್ಯೋಧನಾದಿಗಳ ಶ್ರಾದ್ಧಕ್ಕೆ ಹಣವನ್ನು ಕೊಡಕೂಡದೆಂದು ನಿರೋಧಿಸಿದುದು. ಯುಧಿಷ್ಠಿರನು ತನ್ನ ಸ್ವಂತ ಬೊಕ್ಕಸದಿಂದ ಬೇಕಾದ ವಸ್ತುಗಳನ್ನು ತೆಗೆದುಕೊಳ್ಳುವಂತೆ ಧೃತರಾಷ್ಟ್ರನಿಗೆ ತಿಳಿಸಿದುದು . . . . ೩೫

೧೪ ಶ್ರಾದ್ಧಕ್ಕಾಗಿ ಧನವನ್ನು ಕೊಡಲು ಯುಧಿಷ್ಠಿರನು ಸಮ್ಮತಿಸಿದುದನ್ನು ವಿದುರನು, ಧೃತರಾಷ್ಟ್ರನಿಗೆ ತಿಳಿಸಿದುದು . . ೩೬

೧೫. ಧೃತರಾಷ್ಟ್ರನು ಶ್ರಾದ್ಧ ಮಾಡಿ, ಬ್ರಾಹ್ಮಣರನ್ನು ಅನ್ನಾದಿಗಳಿಂದ ತೃಪ್ತಿಪಡಿಸಿದುದು . . . . ೩೮

೧೬. ಧೃತರಾಷ್ಟ್ರನು ಗಾಂಧಾರಿಯ ಭುಜವನ್ನೂ, ಗಾಂಧಾರಿಯು ಕುಂತಿಯ ಭುಜವನ್ನೂ ಹಿಡಿದುಕೊಂಡು, ಕಾಡಿಗೆ ಪ್ರಯಾಣ ಹೊರಟುದು . ೩೯

೧೭. ಧೃತರಾಷ್ಟ್ರನನ್ನು ಹಿಂಬಾಲಿಸಿ, ವಿದುರನೂ, ಸಂಜಯನೂ ಅವನ ಜತೆಯಲ್ಲಿ ಹೊರಟುದು. ಪಾಂಡವರು ಎಷ್ಟೋ ಸಮಾಧಾನಪಡಿಸಿದರೂ ಕೇಳದೆ ಕುಂತಿಯು, ಅವರನ್ನು ಸಂತೈಸಿ ಗಾಂಧಾರಿಯೊಡನೆ ಕಾಡಿಗೆ ಹೊರಟುದು . . . . ೪೧

೧೮. ಕುಂತಿಯು ತನ್ನನ್ನು ಹಿಂಬಾಲಿಸುತ್ತಿರುವ ಪಾಂಡವರಿಗೆ ತನ್ನ ಉದ್ದೇಶದ ಕಾರಣಗಳನ್ನು ತಿಳಿಸಿ, ಅವರನ್ನು ಸಮಾಧಾನಪಡಿಸಿದುದು . ೪೪

೧೯. ಪಾಂಡವಾದಿಗಳು ವ್ಯಾಕುಲದಿಂದ ಹಿಂತಿರುಗಿದುದು. ಧೃತರಾಷ್ಟ್ರನೇ ಮುಂತಾದವರು ಗಂಗಾತೀರದಲ್ಲಿ ಸಾಯಂಕಾಲದ ಆಹ್ನಿಕಗಳನ್ನು ತೀರಿಸಿಕೊಂಡು ಅಲ್ಲಿ ರಾತ್ರಿಯನ್ನು ಕಳೆದುದು . . ೪೫

೨೦. ಧೃತರಾಷ್ಟ್ರನು ವಿದುರಾದಿಗಳೊಡನೆ ಕುರುಕ್ಷೇತ್ರಕ್ಕೆ ಹೋಗಿ ಶತಯೂಪಾಶ್ರಮದಲ್ಲಿ ವ್ಯಾಸನು ಉಪದೇಶಿಸಿದಂತೆ ಉಗ್ರತಪಸ್ಸನ್ನು ಮಾಡಿದುದು . . . . . ೪೭

೨೧. ನಾರದಾದಿಗಳು ಧೃತರಾಷ್ಟ್ರನನ್ನು ಕಾಣುವುದಕ್ಕೆ ಬಂದುದು. ನಾರದನು ಆ ವನದ ಮಹಿಮೆಯನ್ನು ಧೃತರಾಷ್ಟ್ರನಿಗೆ ತಿಳಿಸಿದುದು . ೪೯

೨೨. ಮೂರುವರ್ಷಗಳು ಕಳೆದಮೇಲೆ ಧೃತರಾಷ್ಟ್ರನು ಗಾಂಧಾರಿಯೊಡನೆ ಕುಬೇರಲೋಕವನ್ನು ಸೇರುವನೆಂದು ನಾರದನು ತಿಳಿಸಿದುದು . ೫೧

೨೩ ಯುಧಿಷ್ಠಿರಾದಿಗಳು ಕುಂತಿ ಮೊದಲಾದವರ ಅಗಲಿಕೆಯಿಂದಲೂ, ಅಭಿಮನ್ಯು ಮುಂತಾದವರ ಮರಣದಿಂದಲೂ ಉಂಟಾದ ದುಃಖದಿಂದ, ತಮ್ಮತಮ್ಮ ಕಾರ್ಯಗಳನ್ನೇ ಗಮನಿಸದಿದ್ದುದು . . ೫೨

೨೪. ಯುಧಿಷ್ಠಿರನು ದ್ರೌಪದಿ ಮೊದಲಾದವರೊಡನೆಯೂ, ತನ್ನ ತಮ್ಮಂದಿರೊಡನೆಯೂ, ಪುರವಾಸಿಗಳೊಡನೆಯೂ ಕುಂತಿ ಮೊದಲಾದವರನ್ನು ನೋಡಲು ತಿರುಗಿ ಕಾಡಿಗೆ ಬಂದುದು . . . ೫೪

೨೫. ಯುಧಿಷ್ಠಿರನು ಸಹೋದರರೊಡನೆ ಶತಯೂಪಾಶ್ರಮಕ್ಕೆ ಹೋದುದು ೫೬

೨೬. ಯುಧಿಷ್ಠಿರಾದಿಗಳು ಧೃತರಾಷ್ಟ್ರನೇ ಮುಂತಾದವರನ್ನು ಕಂಡು, ತಮ್ಮತಮ್ಮ ಹೆಸರುಗಳನ್ನು ಹೇಳಿ ನಮಸ್ಕರಿಸಿದುದು ಧೃತರಾಷ್ಟ್ರನು ತನಗಾಗಿ ದುಃಖಿಸುತ್ತಿರುವ ಜನರನ್ನು ಸಮಾಧಾನಪಡಿಸಿದುದು . ೫೮

೨೭. ಸಂಜಯನು ತಾಪಸರಿಗೆ ಪಾಂಡವರನ್ನು ತೋರಿಸಿ ಅವರ ಪರಿಚಯವನ್ನು ಮಾಡಿಸಿದುದು . . . . ೫೯

೨೮. ಧೃತರಾಷ್ಟ್ರನೂ, ಯುಧಿಷ್ಠಿರನೂ ಪರಸ್ಪರ ಕ್ಷೇಮಲಾಭಗಳನ್ನು ವಿಚಾರಿಸಿದುದು ವಿದುರನು ಎಲ್ಲಿರುವನೆಂದು ಯುಧಿಷ್ಠಿರನು ಕೇಳುತಿದ್ದಾಗ, ವಿದುರನು ಜನಸಮೂಹವನ್ನು ಕಂಡು ಓಡುತ್ತಿದ್ದುದು. ಯುಧಿಷ್ಠಿರನು ವೇಗದಿಂದ ವಿದುರನನ್ನು ಹಿಂಬಾಲಿಸಿ ಹೋದುದು. ಇಷ್ಟರಲ್ಲಿ ವಿದುರನು ಸ್ವಶರೀರತ್ಯಾಗಮಾಡಿ ತನ್ನ ದೇಹದಲ್ಲಿ ಪ್ರವೇಶಿಸಿದುದು. ಯುಧಿಷ್ಠಿರನು ಆ ಅತಿಶಯವನ್ನು ಧೃತರಾಷ್ಟ್ರಾದಿಗಳಿಗೆ ತಿಳಿಸಿದುದು ೬೨

೨೯. ಯುಧಿಷ್ಠಿರನು ಧೃತರಾಷ್ಟ್ರನ ಅನುಮತಿಯನ್ನು ಪಡೆದು ತಮ್ಮಂದಿರೊಡನೆ ಮಹರ್ಷಿಗಳ ಆಶ್ರಮಗಳನ್ನು ನೋಡಿದುದು ಶತಯೂಪಾದಿಗಳೂ, ಶಿಷ್ಯರೊಡನೆ ವ್ಯಾಸನೂ ಧೃತರಾಷ್ಟ್ರಾಶ್ರಮಕ್ಕೆ ಬಂದುದು . ೬೫

೩೦. ವ್ಯಾಸನು ಧೃತರಾಷ್ಟ್ರನ ಕ್ಷೇಮಲಾಭಗಳನ್ನು ವಿಚಾರಿಸಿ, ವಿದುರನ ನಿಜರೂಪವನ್ನೂ, ಇತರ ವಿಷಯಗಳನ್ನೂ ಅವನಿಗೆ ತಿಳಿಸಿ, ಮಹಾಮುನಿಗಳಿಗೂ ದುರ್ಲಭವಾದ ಧೃತರಾಷ್ಟ್ರನ ಕೋರಿಕೆಯನ್ನು ನೆರವೇರಿಸುವಂತೆ ಪ್ರತಿಜ್ಞೆಮಾಡಿದುದು . . . ೬೭

೩೧ ಪಾಂಡವರು ಧೃತರಾಷ್ಟ್ರಾಶ್ರಮದಲ್ಲಿ ಒಂದು ತಿಂಗಳಕಾಲ ವಾಸಮಾಡಿದುದು. ಗಾಂಧಾರಿಯು ಧೃತರಾಷ್ಟ್ರನಿಗೆ ಪುತ್ರರನ್ನು ಪ್ರತ್ಯಕ್ಷವಾಗಿ ಕಾಣುವ ಅಪೇಕ್ಷೆಯಿರುವುದನ್ನು ವ್ಯಾಸನಿಗೆ ತಿಳಿಸಿದುದು. ವ್ಯಾಸನು ಕುಂತಿಯ ಅಭಿಲಾಷೆಯೇನೆಂದು ಅವರನ್ನು ಕೇಳಿದುದು ೬೯

೩೨. ಕುಂತಿಯು ತನ್ನಲ್ಲಿ ಕರ್ಣನ ಜನನರೀತಿಯನ್ನು ತಿಳಿಸಿ, ಆತನನ್ನು ತಾನು ನೋಡಬೇಕೆಂಬ ಅಪೇಕ್ಷೆಯನ್ನು ವ್ಯಾಸನಿಗೆ ತಿಳಿಸಿದುದು. ವ್ಯಾಸನು ಅದು ನಿರ್ದೋಷವಾದುದೆಂದು ಸಕಾರಣವಾಗಿ ಕುಂತಿಯ ಸಂದೇಹವನ್ನು ನೀಗಿದುದು . . . ೭೪

೩೩. ವ್ಯಾಸನು ಯುದ್ಧದಲ್ಲಿ ಸತ್ತವರನ್ನು ರಾತ್ರಿ ತೋರಿಸುವುದಾಗಿ ಗಾಂಧಾರಿಗೆ ತಿಳಿಸಿದುದು ಧೃತರಾಷ್ಟ್ರಾದಿಗಳೆಲ್ಲ ಗಂಧರ್ವಾಂಶವೆಂಬುದನ್ನು ತಿಳಿಸಿ, ಎಲ್ಲರನ್ನೂ ಗಂಗಾತೀರಕ್ಕೆ ಹೋಗುವಂತೆ ಆಜ್ಞಾಪಿಸಿದುದು ೭೭

೩೪. ವ್ಯಾಸನು ಆ ರಾತ್ರಿ ಗಂಗೆಯಲ್ಲಿಳಿದು, ಯುದ್ಧದಲ್ಲಿ ಸತ್ತವರನ್ನು ಆಹ್ವಾನಿಸಿದೊಡನೆ ಉಭಯಪಕ್ಷದಲ್ಲಿ ಮೃತರಾದವರೂ, ತಮ್ಮ ತಮ್ಮ ಮೊದಲಿನ ಉಡಿಗೆತೊಡಿಗೆಗಳೊಡನೆಯೂ, ಆಯುಧಗಳೊಡನೆಯೂ, ವಾಹನಗಳೊಡನೆಯೂ ಗಂಗೆಯಲ್ಲಿ ಕಾಣಿಸಿ ತೀರದಕಡೆಗೆ ಬಂದುದು. ವ್ಯಾಸನು ಅನುಗ್ರಹಿಸಿದ ಜ್ಞಾನಚಕ್ಷುಸ್ಸಿನಿಂದ ಧೃತರಾಷ್ಟ್ರನು ಅವರೆಲ್ಲರನ್ನೂ ಕಂಡುದು . . . ೭೯

೩೫ ಧೃತರಾಷ್ಟ್ರ ಯುಧಿಷ್ಠಿರಾದಿಗಳೆಲ್ಲ ಆ ರಾತ್ರಿಯನ್ನು ಯುದ್ಧಹತರಾಗಿ ಅಲ್ಲಿ ಗೋಚರಿಸಿದವರೊಡನೆ ಸಂತೋಷದಿಂದ ಕಳೆದುದು . ೮೦

೩೬. ಸತ್ತವರು ಹಿಂತಿರುಗಿ ಬಂದುದು ಹೇಗೆಂದು ಜನಮೇಜಯನು ಕೇಳಲು ವೈಶಂಪಾಯನನು ಸಕಾರಣವಾಗಿ ಅದನ್ನು ನಿರೂಪಿಸಿದುದು . ೮೩

೩೭. ಜನಮೇಜಯನು ತನ್ನ ತಂದೆಯಾದ ಪರೀಕ್ಷಿತ್ತನ್ನು ತಾನು ಕಾಣಬೇಕೆಂದು ಕೇಳಲು, ವ್ಯಾಸನು ಪರೀಕ್ಷಿತ್ತನ್ನೂ, ಶಮೀಕನನ್ನೂ, ಶೃಂಗಿ

ಮೊದಲಾದವರನ್ನೂ ತೋರಿಸಿದುದು. ಜನಮೇಜಯನು ಅವಭೃಥ
ಸ್ನಾನಮಾಡಿ ಆಸ್ತಿಕನನ್ನು ಪೂಜಿಸಿದುದು . . ೮೫

೪೮. ಧೃತರಾಷ್ಟ್ರನು ತನ್ನ ಮಕ್ಕಳನ್ನು ಕಂಡಮೇಲೆ ಗಂಗಾತೀರದಿಂದ ಹಿಂತಿ
ರುಗಿ ಆಶ್ರಮಕ್ಕೆ ಬಂದುದು. ವ್ಯಾಸನು ಯುಧಿಷ್ಠಿರಾದಿಗಳನ್ನು
ಪಟ್ಟಣಕ್ಕೆ ಹಿಂತಿರುಗಿಸುವಂತೆ ಧೃತರಾಷ್ಟ್ರನಿಗೆ ಹೇಳಿದುದು. ಇಷ್ಟ
ವಿಲ್ಲದಿದ್ದರೂ, ಧರ್ಮರಾಜನು, ತಾಯ್ತಂದೆಗಳ ನಿರ್ಬಂಧಕ್ಕಾಗಿ
ತನ್ನ ಪರಿವಾರಗಳೊಡನೆ ಹಿಂತಿರುಗಿದುದು . . ೮೭

೪೯. ನಾರದನು ಹಸ್ತಿನಾಪುರಕ್ಕೆ ಬಂದು, ಧೃತರಾಷ್ಟ್ರನೇ ಮೊದಲಾದವರು
ಸ್ವರ್ಗಸ್ಥರಾದುದನ್ನೂ, ಧೃತರಾಷ್ಟ್ರನ ಆಜ್ಞೆಯಂತೆ ಸಂಜಯನು
ಹಿಮಾಲಯಪರ್ವತಕ್ಕೆ ಹೋದುದನ್ನೂ ಯುಧಿಷ್ಠಿರನಿಗೆ ತಿಳಿಸಿದುದು ೯೨

೫೦ ಪಾಂಡವರು ಧೃತರಾಷ್ಟ್ರನೇ ಮುಂತಾದವರ ಮರಣವೃತ್ತಾಂತವನ್ನು
ಕೇಳಿ ವ್ಯಸನಪಟ್ಟುದು . . . . ೯೭

೫೧ ಧೃತರಾಷ್ಟ್ರಾದಿಗಳು ದಗ್ಧರಾದುದು. ಆತನ ಮಂತ್ರಾಗ್ನಿಯಿಂದಲೇ
ಎಂದು ನಾರದನು ತಿಳಿಸಿದುದು ಯುಧಿಷ್ಠಿರನು ಯುಯುತ್ಸುವಿ
ನಿಂದ ಗಾಂಧಾರೀ ಧೃತರಾಷ್ಟ್ರರಿಗೆ ತರ್ಪಣ ಶ್ರಾದ್ಧಾದಿಗಳನ್ನು ಮಾ
ಡಿಸಿ, ಕುಂತಿಗೆ ತಾನು ಅಪರಕ್ರಿಯೆಗಳನ್ನು ಮಾಡಿದುದು. ಯುಧಿ
ಷ್ಠಿರನ ರಾಜ್ಯಭಾರವು . . . . ೯೮

# ಚಿತ್ರಪಟಗಳ ಪಟ್ಟಿ.

---

## ಆಶ್ರಮವಾಸಿಕಪರ್ವವು


ಕುಂತಿ, ಗಾಂಧಾರಿ, ಧೃತರಾಷ್ಟ್ರ, ವಿದುರ, ಸಂಜಯರು ವಾನಪ್ರಸ್ಥಾಶ್ರಮಕ್ಕಾಗಿ ಹೊರಟಾಗ, ಪಾಂಡವರೂ, ಪುರಜನರೂ ಅವರನ್ನು ಹಿಂಬಾಲಿಸಿ ಬೇಡವೆಂದು ನಿವಾರಿಸಿದುದು . . . . ೪


## ಮೌಸಲಪರ್ವವು


ನಾರದ, ವಿಶ್ವಾಮಿತ್ರ, ಕಣ್ವರೆಂಬ ಮೂವರು ಮಹರ್ಷಿಗಳ ಮುಂದೆ ಯಾದವರು ಸಾಂಬನಿಗೆ ಸ್ತ್ರೀವೇಷವನ್ನು ಹಾಕಿ ನಿಲ್ಲಿಸಿ, ಆಕೆಯಲ್ಲಿ ಎಂತಹ ಸಂತಾನವಾಗುವುದೆಂದು ಪರಿಹಾಸಕ್ಕಾಗಿ ಕೇಳಿ ಶಾಪಕ್ಕೀಡಾದುದು . ೪

ಬಲರಾಮನು ಯೋಗವನ್ನು ಹಿಡಿದು ಕುಳಿತು, ಶೇಷರೂಪದಿಂದ ಸಮುದ್ರವನ್ನು ಪ್ರವೇಶಿಸಿದಾಗ, ಕೃಷ್ಣನು ನೋಡುತಿದ್ದುದು . . . ೧೭


## ಮಹಾಪ್ರಸ್ಥಾನಿಕಪರ್ವವು


ಪಂಚಪಾಂಡವರೂ, ದ್ರೌಪದಿಯೂ ಮಹಾಪ್ರಸ್ಥಾನಕ್ಕಾಗಿ ಹೊರಟುದು. ಒಂದು ನಾಯಿಯು ಧರ್ಮರಾಜನನ್ನು ಹಿಂಬಾಲಿಸಿದುದು . . ೩


## ಸ್ವರ್ಗಾರೋಹಣಪರ್ವವು


ದೇವದೂತನು ಧರ್ಮರಾಜನನ್ನು ನರಕಮಾರ್ಗವಾಗಿ ಕರೆತಂದುದು. ಅಲ್ಲಿ ತಪ್ತಕುಂಡ, ಕ್ರಕಚ, ಕಶಾಘಾತ, ಮೊದಲಾದ ಕ್ರೂರ ಯಾತನೆಗಳು ಧರ್ಮರಾಜನ ಕಣ್ಣಿಗೆ ಕಾಣಿಸಿದುದು . . ೬



# ಶ್ರೀಮಹಾಭಾರತವು

## ಆಶ್ರಮವಾಸಿಕಪರ್ವವು

ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್

### ಆಶ್ರಮವಾಸಪರ್ವವು.

ಯುಧಿಷ್ಠಿರನ ಆಳ್ವಿಕೆ ಕುಂತಿ ಮುಂತಾದವರು ಗಾಂಧಾರಿಯನ್ನು ಸತ್ಕರಿಸುತ್ತಿದ್ದುದು. ಭೀಮನುಹೊರತು ಇತರರೆಲ್ಲರೂ ಯುಧಿಷ್ಠಿರನ ಅನುಮತಿಯಂತೆ ಧೃತರಾಷ್ಟ್ರನ ಆಜ್ಞೆಯಲ್ಲಿ ನಡೆಯುತ್ತಿದ್ದುದು.

ಆಮೇಲೆ ಜನಮೇಜಯನು ವೈಶಂಪಾಯನನನ್ನು ಕುರಿತು 'ಮುನೀಂದ್ರಾ! ನನ್ನ ತಂದೆಯ ಪಿತಾಮಹರಾದ ಪಾಂಡವರು ತಮ್ಮ ಪಿತ್ರಾರ್ಜಿತರಾಜ್ಯವನ್ನು ಪಡೆದಮೇಲೆ, ಧೃತರಾಷ್ಟ್ರನ ವಿಷಯದಲ್ಲಿ ಹೇಗೆ ನಡೆದುಕೊಂಡರು? ಮಂತ್ರಿಗಳನ್ನೂ, ಪುತ್ರರನ್ನೂ, ಸಂಪತ್ತನ್ನೂ ಕಳೆದುಕೊಂಡ ಧೃತರಾಷ್ಟ್ರನೂ, ಪುತ್ರವ್ಯಸನಕ್ಕೊಳಗಾದ ಗಾಂಧಾರಿಯೂ ಪಾಂಡವರ ವಿಷಯದಲ್ಲಿ ಹೇಗೆ ವರ್ತಿಸುತ್ತಿದ್ದರು? ಮಹಾತ್ಮರಾದ ಆ ಪಾಂಡವರು ಎಷ್ಟುಕಾಲದವರೆಗೆ ರಾಜ್ಯಭಾರಮಾಡುತ್ತಿದ್ದರು? ಇವೆಲ್ಲವನ್ನೂ ನನಗೆ ವಿವರಿಸಬೇಕು' ಎಂದು ಕೇಳಿದನು.

ಆಗ ವೈಶಂಪಾಯನನು 'ಓ ಕುರುಕುಲೋತ್ತಮಾ! ಮಹಾತ್ಮರಾದ ಪಾಂಡವರು ಶತ್ರುಜಯದಿಂದ ರಾಜ್ಯವನ್ನು ಪಡೆದಮೇಲೆ, ಧೃತ

ರಾಷ್ಟ್ರನನ್ನು ಮುಂದಿಟ್ಟುಕೊಂಡೇ ಭೂಮಿಯನ್ನು ಪರಿಪಾಲಿಸುತಿದ್ದರು. ವಿದುರನೂ, ಸಂಜಯನೂ, ದಾಸೀಪುತ್ರನಾದ ಯುಯುತ್ಸುವೂ ಧೃತರಾಷ್ಟ್ರನನ್ನು ಉಪಚರಿಸುತಿದ್ದರು. ಪಾಂಡವರು ಹದಿನೈದುವರ್ಷಗಳವರೆಗೆ ರಾಜಕಾರ್ಯಗಳೆಲ್ಲವನ್ನೂ ಆ ಧೃತರಾಷ್ಟ್ರನಿಗೆ ತಿಳಿಸಿ, ಆತನ ಅನುಮತಿಯನ್ನು ಪಡೆದೇ ನಡೆಸುತ್ತಬಂದರು. ಧರ್ಮರಾಜನ ತಮ್ಮಂದಿರೂ ಅವನ ಕೋರಿಕೆಯನ್ನನುಸರಿಸಿ, ಯಾವಾಗಲೂ ಆ ಧೃತರಾಷ್ಟ್ರರಾಜನ ಸಮೀಪಕ್ಕೆ ಹೋಗಿ ಆತನ ಪಾದಗಳಿಗೆ ನಮಸ್ಕರಿಸಿ ಅವನ ಸೂಚನೆಯಂತೆ ಎಲ್ಲಾ ಕಾರ್ಯಗಳನ್ನೂ ಮಾಡುತ್ತಿದ್ದರು. ಅವರು ನಮಸ್ಕರಿಸಿದಾಗಲೆಲ್ಲಾ ಧೃತರಾಷ್ಟ್ರನೂ ಅವರ ತಲೆಯನ್ನು ಸವರಿ ಹರಸುತ್ತಿದ್ದನು. ಕುಂತಿಯು ಗಾಂಧಾರಿಯನ್ನನುವರ್ತಿಸುತಿದ್ದಳು. ದ್ರೌಪದಿಯೂ, ಸುಭದ್ರೆಯೂ ಇತರ ಪಾಂಡವಸ್ತ್ರೀಯರೂ ಆ ಇಬ್ಬರು ಅತ್ತೆಯರಿಗೂ ಸಮಾನಭಾವದಿಂದ ಸೇವೆಮಾಡುತ್ತಬಂದರು. ಯುಧಿಷ್ಠಿರನು ಧೃತರಾಷ್ಟ್ರನಿಗಾಗಿ ರಾಜಯೋಗ್ಯವಾದ ದಿವ್ಯಶಯನಗಳನ್ನೂ, ಉಡುಪುಗಳನ್ನೂ, ಆಭರಣಗಳನ್ನೂ, ಹಲವುಬಗೆಯ ಭಕ್ಷಣಗಳನ್ನೂ, ಆಹಾರವಸ್ತುಗಳನ್ನೂ ಒದಗಿಸುತ್ತ, ಅವನ ಮನಸ್ಸಿಗೆ ಸ್ವಲ್ಪವೂ ಬೇಸರವಿಲ್ಲದಂತೆ ನೋಡಿಕೊಳ್ಳುತ್ತಿದ್ದನು. ಅದೇರೀತಿಯಲ್ಲಿ ಕುಂತಿಯೂ ಗಾಂಧಾರಿಯ ವಿಷಯದಲ್ಲಿ ಗುರುಭಾವದಿಂದ ನಡೆಯುತ್ತಬಂದಳು. ವಿದುರನೂ, ಸಂಜಯನೂ, ಯುಯುತ್ಸುವೂ ಈ ಮೂವರೂ ಪುತ್ರವಧೆಗಾಗಿ ದುಃಖಿಸುತ್ತಿರುವ ವೃದ್ಧವಯಸ್ಕನಾದ ಆ ಧೃತರಾಷ್ಟ್ರನಿಗೆ ಸದಾ ಸೇವೆಮಾಡುತ್ತಿದ್ದರು. ದ್ರೋಣನ ಮೈದುನನೂ, ಮಹಾತ್ಮನೂ, ಬ್ರಾಹ್ಮಣನೂ, ಧನುರ್ಧಾರಿಗಳಲ್ಲಿ ಶ್ರೇಷ್ಠನೂ ಆದ ಕೃಪನೂ, ಆ ರಾಜನ ಸಮೀಪದಲ್ಲಿಯೇ ಇರುತಿದ್ದನು. ಪೂಜ್ಯನಾದ ವ್ಯಾಸಮುನೀಂದ್ರನೂಕೂಡ, ಯಾವಾಗಲೂ ಆ ಧೃತರಾಷ್ಟ್ರನ ಬಳಿಯಲ್ಲಿಯೇ ಇರುತ್ತ, ಅವನಿಗೆ, ದೇವತೆಗಳು, ಋಷಿಗಳು, ಪಿತೃಗಳು, ರಾಕ್ಷಸರು, ಇವರುಗಳ ಸಂಬಂಧವಾದ ಕಥೆಗಳನ್ನು ಹೇಳಿ ಅವನನ್ನು ಸಂತೋಷಗೊಳಿಸುತಿದ್ದನು. ವಿದುರನು ಧೃತರಾಷ್ಟ್ರನ ಅನುಮತಿಯನ್ನು ಪಡೆದು, ಧರ್ಮಯುಕ್ತವೂ, ವ್ಯವಹಾರಸಮ್ಮತವೂ ಆದ ಕಾರ್ಯಗಳನ್ನು ಧರ್ಮರಾಜನಿಂದ ಮಾಡಿಸುತ್ತಿದ್ದನು. ಧೀಮಂತನೂ, ಮಹಾತ್ಮನೂ ಆದ

ವಿದುರನ ನೀತಿಬಲದಿಂದ ಧರ್ಮರಾಜನಿಗೆ ಪ್ರಿಯವಾದ ಕಾರ್ಯಗಳೆಲ್ಲ ಸಾಮಂತರಿಂದ ಸುಲಭವಾಗಿ ನಡೆದುಹೋಗುತಿದ್ದುವು. ವಿದುರನು ಆಗಾಗ ಸೆರೆಗೊಳಗಾದವರನ್ನೂ, ಮರಣದಂಡನೆಗೆ ಗುರಿಯಾದವರನ್ನೂ ಬಿಡಿಸಿ ಬಿಡುವನು. ಧರ್ಮರಾಜನು ಏನನ್ನೂ ಹೇಳುತ್ತಿರಲಿಲ್ಲ. ಸಂತೋಷ ಯಾತ್ರೆಗಳಲ್ಲಿ ಯುಧಿಷ್ಠಿರನು ಇಷ್ಟವಸ್ತುಗಳೆಲ್ಲವನ್ನೂ ತರಿಸಿ ಧೃತರಾಷ್ಟ್ರ ನಿಗೆ ಕೊಡಿಸುತ್ತಿದ್ದನು. ಆರಾಲಿಕರು, ಸೂಪಕಾರರು, ರಾಗಷಾಡಬಿ ಕರು, ಮೊದಲಾದ ಬೇರೆಬೇರೆ ಅಡಿಗೆಯವರು ಧೃತರಾಷ್ಟ್ರನನ್ನು ಎಂದಿ ನಂತೆ ಉಪಚರಿಸುತ್ತಿದ್ದರು. ಪಾಂಡವರು ದಿವ್ಯವಾದ ಉಡುಪುಗಳನ್ನೂ, ಹಲವುಬಗೆಯ ಹಾರಗಳನ್ನೂ, ಆಯಾಕಾಲಗಳಲ್ಲಿ ಧೃತರಾಷ್ಟ್ರನಿಗೆ ಒಪ್ಪಿ ಸುತ್ತಿದ್ದರು. ಮೈರೇಯವನ್ನೂ, ಮಧುವನ್ನೂ, ಮಾಂಸಗಳನ್ನೂ, ತೆಳುವಾದ ಪಾನಕಗಳನ್ನೂ, ಹಲವು ಬಗೆಯ ಆಹಾರವಸ್ತುಗಳನ್ನೂ ಮೊದ ಲಿನಂತೆಯೇ ಆತನಿಗೆ ಕೊಡುತ್ತಿದ್ದರು. ಅಲ್ಲಲ್ಲಿಂದ ಬಂದ ರಾಜರೆಲ್ಲರೂ ಕೂಡ, ಹಿಂದಿನಂತೆಯೇ ಧೃತರಾಷ್ಟ್ರನನ್ನು ಉಪಚರಿಸುತ್ತಿದ್ದರು. ಕುಂತಿ, ಸುಭದ್ರೆ, ನಾಗಕನ್ನಿಕೆಯಾದ ಉಲೂಪಿ, ಚಿತ್ರಾಂಗದೆ, ಧೃಷ್ಟಕೇತು ವಿನ ಸಹೋದರಿ, ಜರಾಸಂಧನ ಮಗಳು, (ಇವರಿಬ್ಬರೂ ನಕುಲಸಹ ದೇವರ ಪತ್ನಿಯರು) ಈ ಮುಂತಾಗಿ ಇನ್ನೂ ಅನೇಕ ರಾಜಸ್ತ್ರೀಯರು ಗಾಂಧಾರಿಯನ್ನು ಉಪಚರಿಸುತ್ತಿದ್ದರು. ಯುಧಿಷ್ಠಿರನು ಯಾವಾಗಲೂ ತನ್ನ ಸಹೋದರರಿಗೆ ಪುತ್ರವ್ಯಸನಪೀಡಿತರಾದ ಧೃತರಾಷ್ಟ್ರ ಗಾಂಧಾರಿ ಯರ ಮನಸ್ಸನ್ನು ಸ್ವಲ್ಪವೂ ನೋಯಿಸಬಾರದೆಂದು ಎಚ್ಚರಿಸುತ್ತಿದ್ದನು. ಭೀಮನುಹೊರತು ಇತರ ಪಾಂಡವಸಹೋದರರೆಲ್ಲರೂ ಧರ್ಮರಾಜನ ಮಾತುಗಳನ್ನು ಕೇಳಿ ಅದರಂತೆಯೇ ನಡೆಯುತ್ತ ಬಂದರು. ಆ ಧೃತರಾಷ್ಟ್ರನ ಚಪಲಬುದ್ಧಿಯಿಂದ, ಹಿಂದೆ ದ್ಯೂತಸಭೆಯಲ್ಲಿ ನಡೆದ ಅಕಾರ್ಯಕ್ಕಾಗಿ, ಭೀಮಸೇನನೊಬ್ಬನಿಗೆಮಾತ್ರ ಮನಸ್ಸಿನಲ್ಲಿದ್ದ ಅಸ ಮಾಧಾನವು ತೊಲಗಲಿಲ್ಲ.

ಇದು ಮೊದಲನೆಯ ಅಧ್ಯಾಯವು.

{ ಯುಧಿಷ್ಠಿರನು ತನ್ನ ತಮ್ಮಂದಿರೊಡನೆ ಧೃತರಾಷ್ಟ್ರನನ್ನು ಸಂತೋಷಪಡಿಸಿದುದು. }

ಧೃತರಾಷ್ಟ್ರನು ಹೀಗೆ ಪಾಂಡವರಿಂದ ಪೂಜಿಸಲ್ಪಡುತ್ತ, ಅನೇಕ ಋಷಿಗಳಿಂದ ಪರಿವೃತನಾಗಿ, ಮೊದಲಿನಂತೆಯೇ ಸುಖದಿಂದಿದ್ದನು. ಆತನು ಬ್ರಾಹ್ಮಣರಿಗೆ ಆಗಾಗ ಅಗ್ರಹಾರಗಳನ್ನೂ, ಭೂಮಿಗಳನ್ನೂ ದಾನ ಮಾಡುತ್ತಿದ್ದರೂ, ಯುಧಿಷ್ಠಿರನು ಅವೆಲ್ಲವನ್ನೂ ಸಂತೋಷದಿಂದ ಅನುಮೋದಿಸುತ್ತಿದ್ದನು. ಸಾತ್ವಿಕಸ್ವಭಾವವುಳ್ಳ ಆ ಯುಧಿಷ್ಠಿರನು, ತನ್ನ ಮಂತ್ರಿಗಳನ್ನೂ, ಸಹೋದರರನ್ನೂ ಕಂಡಾಗಲೆಲ್ಲ ಸಂತೋಷದಿಂದ 'ನಾವೆಲ್ಲರೂ ಈ ರಾಜನನ್ನು ಗೌರವಿಸುತ್ತಿರಬೇಕು. ಈ ಧೃತರಾಷ್ಟ್ರನ ಆಜ್ಞೆಯನ್ನು ಮೀರದವನೇ ನನಗೆ ಆಪ್ತನು. ಆತನ ಮಾತಿಗೆ ಮೀರತಕ್ಕವನು ನನಗೆ ಶತ್ರು! ಅಂತವನು ನನ್ನ ದಂಡನೆಗೂ ಅರ್ಹನಾಗುವನು' ಎಂದು ಎಚ್ಚರಿಸುತ್ತಿದ್ದನು. ಕೆಲವು ದಿವಸಗಳು ಕಳೆದಮೇಲೆ ಧರ್ಮರಾಜನು ಧೃತರಾಷ್ಟ್ರನ ಪುತ್ರರ ಶ್ರಾದ್ಧಗಳಿಗಾಗಿ, ಆತನಿಗೆ ತೃಪ್ತಿಯಾಗುವವರೆಗೂ ದಾನಧರ್ಮಗಳನ್ನು ನಡೆಸಿದನು. ಧೃತರಾಷ್ಟ್ರರಾಜನೂ ಉತ್ತಮಬ್ರಾಹ್ಮಣರಿಗೆ ಅಪರಿಮಿತವಾದ ದ್ರವ್ಯದಾನವನ್ನು ಮಾಡಿದನು. ಧರ್ಮರಾಜನೂ, ಭೀಮನೂ, ಅರ್ಜುನನೂ, ನಕುಲಸಹದೇವರೂ, 'ವೃದ್ಧನಾದ ಧೃತರಾಷ್ಟ್ರನು ನಮ್ಮಿಂದಲೇ ಈ ಪುತ್ರಶೋಕಕ್ಕೆ ಗುರಿಯಾದನು. ಆ ವ್ಯಸನದಿಂದ ಅವನು ಸಾಯದಂತೆ ನಾವು ನೋಡಿಕೊಳ್ಳಬೇಕು' ಎಂಬ ಪಶ್ಚಾತ್ತಾಪದಿಂದ ಆತನಲ್ಲಿ ಕನಿಕರವಿಟ್ಟು ಆತನ ಇಷ್ಟದಂತೆ ನಡೆಯುತ್ತಿದ್ದರು. ಇದರಿಂದ ಧೃತರಾಷ್ಟ್ರನು ತನ್ನ ಸ್ವಂತಮಕ್ಕಳು ಜೀವಿಸಿದ್ದರೆ ಹೇಗೋ, ಹಾಗೆಯೇ ಸುಖಸಂತೋಷಗಳಿಂದಿದ್ದು, ಆ ದುಃಖವನ್ನೇ ಮರೆತಿದ್ದನು. ಪಂಚಪಾಂಡವರೂ ಧೃತರಾಷ್ಟ್ರನ ಆಜ್ಞೆಯಂತೆ ನಡೆಯುತ್ತ ಬಂದರು. ಧೃತರಾಷ್ಟ್ರನುಕೂಡ ತನಗೆ ವಿನೀತರೂ, ನ್ಯಾಯಪರರೂ ಆಗಿ ತನ್ನಲ್ಲಿ ಶಿಷ್ಯಭಾವದಿಂದ ನಡೆಯುತ್ತಿರುವ ಅವರೆಲ್ಲರನ್ನೂ ಗುರುವಿನಂತೆ ಆದರಿಸುತ್ತಿದ್ದನು. ಗಾಂಧಾರಿಯೂ ಪುತ್ರರಿಗೆ ಶ್ರಾದ್ಧಕರ್ಮಗಳನ್ನೆಲ್ಲ ನಡೆಸಿ, ಬ್ರಾಹ್ಮಣರಿಗೆ ಅಪೇಕ್ಷಿತವಸ್ತುಗಳನ್ನೆಲ್ಲವನ್ನೂ ಕೊಟ್ಟು ಋಣವಿಮುಕ್ತಳಾದಳು. ಧರ್ಮಾತ್ಮರಲ್ಲಿ ಅಗ್ರಗಣ್ಯನಾದ ಧರ್ಮರಾಜನು ಹೀಗೆ

ಪೂಜಿಸುತ್ತಿರಲು, ವೃದ್ಧನಾದ ಆ ಧೃತರಾಷ್ಟ್ರನು, ಪಾಂಡವರಲ್ಲಿ ಯಾವ ನ್ಯೂನತೆಯನ್ನೂ ಕಾಣದೆ, ಆ ಪಾಂಡವರ ವಿಷಯದಲ್ಲಿ ಅತಿಪ್ರೀತಿಯುಳ್ಳವನಾಗಿದ್ದನು. ಗಾಂಧಾರಿಯೂ ತನ್ನ ಪುತ್ರಶೋಕವನ್ನು ಮರೆತು, ತನ್ನ ಪುತ್ರರಲ್ಲಿ ಹೇಗೋ ಹಾಗೆ ಆ ಪಾಂಡವರಲ್ಲಿ ಪ್ರೀತಿಯುಳ್ಳವಳಾಗಿದ್ದಳು. ಧರ್ಮರಾಜನೂಕೂಡ ಗಾಂಧಾರೀ ಧೃತರಾಷ್ಟ್ರರಿಗೆ ಅಪ್ರಿಯವಾದುದೊಂದನ್ನೂ ಮಾಡದೆ, ಅವರು ಯಾವಯಾವ ಕಾರ್ಯಗಳನ್ನು ನಿಯಮಿಸಿದರೂ, ಅದು ಮಹತ್ತಾಗಿರಲಿ, ಸಣ್ಣದಾಗಿರಲಿ, ಅವನ್ನೆಲ್ಲ ವಿಧೇಯತೆಯಿಂದ ಮಾಡುತ್ತಬಂದನು. ಪಾಂಡವರ ಈ ನಡತೆಯಿಂದ, ಧೃತರಾಷ್ಟ್ರನು ಬಹಳ ಸಂತುಷ್ಟನಾದನು. ಆಗ ಅವನಿಗೆ ತನ್ನ ಮಕ್ಕಳ ದುರ್ಬುದ್ಧಿಗಾಗಿ ಪಶ್ಚಾತ್ತಾಪವು ಹುಟ್ಟಿತು. ಆ ರಾಜನು ಯಾವಾಗಲೂ ಬೆಳಗಿನ ಜಾವದಲ್ಲೆದ್ದು, ಶುದ್ಧನಾಗಿ ಜಪವನ್ನು ಮಾಡಿ, ಪಾಂಡವರಿಗೆ ಯುದ್ಧದಲ್ಲಿ ಜಯವನ್ನು ಹಾರೈಸುವನು ಆಮೇಲೆ ಆ ಪಾಂಡವರಿಗಾಗಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸುವನು. ಅಗ್ನಿಯಲ್ಲಿ ಹೋಮ ಮಾಡಿ ಪಾಂಡವರಿಗೆ ಆಯುಷ್ಯವನ್ನು ಬಯಸುವನು. ಧೃತರಾಷ್ಟ್ರನು ಪಾಂಡವರಿಂದ ಪಡೆದ ಪ್ರೀತಿಗೌರವಗಳನ್ನು ಹಿಂದೆ ತನ್ನ ಸ್ವಂತಪುತ್ರರಿಂದಲೂ ಪಡೆದಿರಲಿಲ್ಲ. ಯುಧಿಷ್ಠಿರನೂ ಆಗ ಬ್ರಾಹ್ಮಣರಲ್ಲಿ ಹೇಗೆ ನಡೆದುಕೊಳ್ಳುತಿದ್ದನೋ, ಕ್ಷತ್ರಿಯರ ವಿಷಯದಲ್ಲಿ ಹೇಗಿದ್ದನೋ ಹಾಗೆಯೇ ವೈಶ್ಯ ಶೂದ್ರರಿಗೂ ಪ್ರಿಯನಾಗಿದ್ದನು. ಹಿಂದೆ ಧೃತರಾಷ್ಟ್ರಪುತ್ರರು ತಮಗೆ ಮಾಡಿದ ದುಷ್ಕೃತ್ಯಗಳೊಂದನ್ನೂ ನೆನೆಸದೆ, ಪಾಂಡವರು ಧೃತರಾಷ್ಟ್ರನನ್ನು ಆದರಿಸುತ್ತಿದ್ದರು. ಯಾವನಾದರೊಬ್ಬನು ತಪ್ಪಿ ಧೃತರಾಷ್ಟ್ರನ ವಿಷಯದಲ್ಲಿ ಯಾವುದಾದರೊಂದು ದೋಷವನ್ನು ಹೇಳಿದರೆ, ಆತನು ಯುಧಿಷ್ಠಿರನಿಗೆ ಮಹಾವಿರೋಧಿಯಾಗುತ್ತಿದ್ದನು. ಯುಧಿಷ್ಠಿರನ ಭಯಕ್ಕಾಗಿ ಧೃತರಾಷ್ಟ್ರನಲ್ಲಿಯಾಗಲಿ, ದುರ್ಯೋಧನನಲ್ಲಿಯಾಗಲಿ ಯಾವ ಮನುಷ್ಯನೂ ದೋಷಾರೋಪಣೆ ಮಾಡುತ್ತಿರಲಿಲ್ಲ. ಧೃತರಾಷ್ಟ್ರನೂ, ಗಾಂಧಾರಿಯೂ, ವಿದುರನೂ ಯುಧಿಷ್ಠಿರನ ನಡವಳಿಕೆಯಿಂದಲೂ, ಆತನ ಸತ್ಕಾರಗಳಿಂದಲೂ ಬಹಳ ಸಂತೋಷಗೊಂಡರು. ಆದರೆ ಧೃತರಾಷ್ಟ್ರನಿಗೆ ಭೀಮನವಿಷಯದಲ್ಲಿಮಾತ್ರ ತೃಪ್ತಿಯಿರಲಿಲ್ಲ. ಭೀಮ

ನು ಧರ್ಮರಾಜನನ್ನೇ ಅನುಸರಿಸಿ ನಡೆಯುತಿದ್ದರೂ, ಧೃತರಾಷ್ಟ್ರನನ್ನು ಕಂಡಾಗಲೆಲ್ಲಾ ಅವನಿಗೆ ಅಸಮಾಧಾನವು ತೋರುತಿದ್ದಿತು. ಇದರಿಂದ ಅವನಿಗೆ ಯಾವಾಗಲೂ ಧೃತರಾಷ್ಟ್ರನನ್ನೇ ಅನುಸರಿಸುತ್ತಿರುವ ಧರ್ಮರಾಜನಲ್ಲಿಯೂ ಕೋಪವುಂಟಾಗುತಿದ್ದಿತು. ಅಣ್ಣನ ಮಾತಿನಲ್ಲಿ ತನಗೆ ಪ್ರಿಯವಿಲ್ಲದಿದ್ದರೂ ವಿಧಿಯಿಲ್ಲದೆ ಅವನನ್ನು ಅನುಸರಿಸುತಿದ್ದನು.

ಇದು ಎರಡನೆಯ ಅಧ್ಯಾಯವು.

ಭೀಮನ ನಿಂದೆಯನ್ನು ಕೇಳಿ ಸಹಿಸಲಾರದೆ ಧೃತರಾಷ್ಟ್ರನು ಗಾಂಧಾರಿಯೊಡನೆ ಕಾಡಿಗೆ ಹೊರಡಲುದ್ದೇಶಿಸಿದುದು. ನಗರದ ಜನರನ್ನು ಬರಮಾಡಿ ತನ್ನ ಮನೋನಿಶ್ಚಯವನ್ನು ಅವರಿಗೆ ತಿಳಿಸಿದುದು.

ಆಗ ಜನರು ಧೃತರಾಷ್ಟ್ರಯುಧಿಷ್ಠಿರರಲ್ಲಿ ಯಾವುದೊಂದು ಅತೃಪ್ತಿಯನ್ನೂ ಕಾಣಲಿಲ್ಲ ಆದರೆ ವೃದ್ಧನಾದ ಧೃತರಾಷ್ಟ್ರನಿಗೆ ತನ್ನ ಮಗನ ವಿಷಯವಾದ ಸ್ಮರಣೆ ಬಂದಾಗಲೆಲ್ಲ, ಭೀಮನ ವಿಷಯದಲ್ಲಿ ಅಸೂಯೆ ಹುಟ್ಟುತಿದ್ದಿತು. ಧೃತರಾಷ್ಟ್ರ ಭೀಮರಲ್ಲಿಮಾತ್ರ ಮನಸ್ಸಿನಲ್ಲಿ ಒಬ್ಬರಿಗೊಬ್ಬರಿಗೆ ಸಮಾಧಾನವಿಲ್ಲದಂತಿದ್ದಿತು. ಆದರೆ ಮೇಲಕ್ಕೆಮಾತ್ರ ಪ್ರಿಯವಾಗಿ ಮಾತುಗಳನ್ನಾಡುತ್ತಿದ್ದರು. ಭೀಮನು ಧೃತರಾಷ್ಟ್ರನ ದುರಾಲೋಚನೆಗಳನ್ನೂ, ನಡೆವಳಿಕೆಗಳನ್ನೂ ನೆನೆಸಿಕೊಂಡು, ಅವನಿಗೆ ರಹಸ್ಯವಾಗಿ ಕೆಲಕೆಲವು ಅಪ್ರಿಯಕಾರ್ಯಗಳನ್ನೇ ನಡೆಸುತ್ತಬಂದನು. ಕಪಟಮನುಷ್ಯರನ್ನು ಮುಂದೆ ಬಿಟ್ಟು, ಯಾವಾಗಲೂ ಆತನ ಕಟ್ಟಲೆಗಳನ್ನು ಬದಲಾಯಿಸುತ್ತಿದ್ದನು. ಮತ್ತು ಆಗಾಗ ಧೃತರಾಷ್ಟ್ರನ ಮುಂದೆ "ದುರ್ಬುದ್ಧಿಯುಳ್ಳ ಇವನ ಮಕ್ಕಳಿಗೆ ತಕ್ಕ ಶಿಕ್ಷೆಯಾಯಿತು!" ಎಂದು ಹೇಳುತ್ತಿದ್ದನು. ಅಲ್ಲದೆ ಅಡಿಗಡಿಗೆ ಆ ಭೀಮನು, ದುರ್ಯೋಧನನನ್ನೂ, ಕರ್ಣನನ್ನೂ, ದುಶ್ಶಾಸನನನ್ನೂ ನೆನೆಸಿಕೊಂಡು, ಮಹಾಕೋಪದಿಂದ ಧೃತರಾಷ್ಟ್ರ ಗಾಂಧಾರಿಯರ ಕಿವಿಗೆ ಬೀಳುವಂತೆ ತೋಳುಗಳನ್ನು ತಟ್ಟುತ್ತ ಇಷ್ಟಮಿತ್ರರ ನಡುವೆ 'ಈ ಕುರುಡುದೊರೆಯ ಮಕ್ಕಳು, ನಾನಾತರದ ಶಸ್ತ್ರಾಸ್ತ್ರಗ

ಳನ್ನು ಬಲ್ಲವರಾಗಿ, ಸರ್ವಸನ್ನಾಹದೊಡನೆ ಯುದ್ಧಕ್ಕೆ ಬಂದರೂ, ಪರಿಘ ದಂತೆ ಬಾಹುವುಳ್ಳ ನಾನು, ಅವರೆಲ್ಲರನ್ನೂ ಈ ತೋಳುಗಳಿಂದಲೇ ಪರ ಲೋಕಕ್ಕೆ ಕಳುಹಿಸಿದೆನು! ಇದೋ! ಆ ಧೃತರಾಷ್ಟ್ರಪುತ್ರರನ್ನೆಲ್ಲ ನೆಗ್ಗಿದ ನನ್ನ ಎರಡು ಭುಜಗಳು! ಆ ದುರ್ಯೋಧನನನ್ನು ಪುತ್ರ ಮಿತ್ರ ಬಂಧುಗಳೊಡನೆ ಸೇರಿಸಿ ಸಂಹರಿಸಿಬಂದು, ಈಗ ಚಂದನಾನುಲೇಪಿತ ವಾಗಿ, ಎಲ್ಲರಿಗೂ ವಂದನಾರ್ಹವಾದ ಈ ನನ್ನ ಬಾಹುಯುಗ್ಮವನ್ನು ನೀವೆಲ್ಲರೂ ನೋಡಿರಿ!' ಎಂದು ಗಟ್ಟಿಯಾಗಿ ಕೂಗಿ, ಮರ್ಮಭೇದಕಗ ಳಾದ ಪರುಷವಾಕ್ಯಗಳನ್ನಾಡುತಿದ್ದನು. ಕಿವಿಗಳಿಗೆ ಶಲ್ಯಪ್ರಾಯವಾದ ಇಂತಹ ವಾಕ್ಯಗಳು ಭೀಮನ ಬಾಯಿಂದ ಹೊರಟಾಗ, ಧೃತರಾಷ್ಟ್ರನು ಮನಸ್ಸಿನಲ್ಲಿಯೇ ಕೊರಗುತ್ತಿದ್ದನು. ಧೀಮಂತಳೂ, ಕಾಲಗತಿಯನ್ನು ಚೆನ್ನಾಗಿ ಬಲ್ಲವಳೂ, ಧರ್ಮಜ್ಞಳೂ ಆದ ಗಾಂಧಾರಿಯುಕೂಡ, ಆ ಅಪ್ರಿ ಯವಾಕ್ಯಗಳನ್ನು ಕೇಳಿ ಕೋಪಗೊಂಡರೂ, ಕುಂತಿಯಲ್ಲಿ ದಾಕ್ಷಿಣ್ಯಕ್ಕಾಗಿ ಭೀಮನನ್ನು ಶಪಿಸದೆ ಸುಮ್ಮನೆ ಸಹಿಸುತಿದ್ದಳು. ಹೀಗೆ ಹದಿನೈದುವರ್ಷ ಗಳು ಕಳೆದುವು. ಕೊನೆಕೊನೆಗೆ ಭೀಮನ ವಾಗ್ಬಾಣಗಳಿಂದ ಪೀಡಿತ ನಾದ ಧೃತರಾಷ್ಟ್ರನಿಗೆ, ಇನ್ನುಮೇಲೆ ಪಾಂಡವರ ಬಳಿಯಲ್ಲಿರುವುದು ತನಗೆ ಸರಿಯಲ್ಲವೆಂದು ತೋರಿತು. ಅಲ್ಲಿನ ವಾಸದಲ್ಲಿ ಅವನ ಮನಸ್ಸಿಗೆ ಜಿಹಾಸೆ ಹುಟ್ಟಿತು. ಇನ್ನುಮೇಲೆ ತಾನು ಅಲ್ಲಿದ್ದರೆ ಯುಧಿಷ್ಠಿರನೂ ಕಷ್ಟಪಡು ವನೆಂದು ಆಲೋಚಿಸಿ, ಅವನ ಕ್ಷೇಮಚಿಂತೆಯಿಂದ, ತಾನು ತಪೋವನಕ್ಕೆ ಹೊರಡಲುದ್ದೇಶಿಸಿದನು. ಈ ಅಭಿಪ್ರಾಯವನ್ನು ಮೊದಲು ಧರ್ಮರಾಜಾ ರ್ಜುನರಿಗಾಗಲಿ, ಕುಂತಿಗಾಗಲಿ, ದ್ರೌಪದಿಗಾಗಲಿ ತಿಳಿಸಲಿಲ್ಲ. ಮಾದ್ರೀ ಪುತ್ರರಾದ ನಕುಲಸಹದೇವರಿಬ್ಬರೂ ಭೀಮನ ಅಭಿಪ್ರಾಯವನ್ನೇ ಅನುಮೋ ದಿಸುತಿದ್ದವರಾದರೂ, ಧರ್ಮರಾಜನ ಮಾತಿಗೆ ವಿರೋಧಿಸಬಾರದೆಂದು ಅಪ್ರಿ ಯವಾಕ್ಯಗಳನ್ನೇನೂ ಆಡದಿದ್ದರು. ಆಮೇಲೆ ಧೃತರಾಷ್ಟ್ರನು ತನ್ನಲ್ಲಿ ವಿಶ್ವಾಸವುಳ್ಳ ಕೆಲವರನ್ನು ಕರೆಸಿಕೊಂಡು, ವ್ಯಸನದಿಂದ ಕಣ್ಣೀರು ಬಿಡುತ್ತ 'ಓ ಆಪ್ತಬಂಧುಗಳಿರಾ! ನನ್ನ ಮಕ್ಕಳಾದ ಕೌರವರಿಗೆಲ್ಲ ನಾಶ ವುಂಟಾದ ಕಾರಣವೇನೆಂಬುದು ನಿಮಗೆಲ್ಲ ತಿಳಿದೇ ಇದೆ. ಅದೆಲ್ಲವೂ ನನ್ನ ದೋಷದಿಂದಲೇ! ಮಂದಮತಿಯಾದ ನಾನು, ದುರ್ಬುದ್ಧಿಯುಳ್ಳ

ಮತ್ತು ಜ್ಞಾತಿಗಳಿಗೆ ಕೇಡನ್ನೇ ಕೋರುವ ಆ ದುಷ್ಟದುರ್ಯೋಧನ ನನ್ನು ಕೌರವರಾಜ್ಯಕ್ಕೆಲ್ಲ ಅಧಿಪತಿಯನ್ನಾಗಿ ಮಾಡಿದೆನು. ದುರ್ಬುದ್ಧಿ ಯಿಂದ ಪುತ್ರವಾತ್ಸಲ್ಯಕ್ಕೀಡಾಗಿ ನಾನು ಉತ್ತಮತತ್ವಗಳನ್ನೊಳಕೊಂಡ ಕೃಷ್ಣನ ವಾಕ್ಯಗಳನ್ನೂ ನಿರಾಕರಿಸಿದೆನು. 'ಪಾಪಿಯಾದ ಆ ದುರ್ಯೋ ಧನನನ್ನು ಕೊಂದುಬಿಡು' ಎಂದು ವಿದ್ವಾಂಸನಾದ ವಿದುರನು ಹೇಳಿದ ಮಾತನ್ನೂ ಕೇಳದೆಹೋದೆನು. ಭೀಷ್ಮ, ದ್ರೋಣ, ಕೃಪ, ವ್ಯಾಸರೂ, ಸಂಜಯನೂ, ಗಾಂಧಾರಿಯೂ, ಹೇಳಿದ ಹಿತವಾಕ್ಯಗಳನ್ನೂ ಕೇಳದೆಹೋ ದೆನು. ಇದರಿಂದ ಈಗ ನಾನು ಹೀಗೆ ತಪಿಸಬೇಕಾಯಿತು ಗುಣಶಾಲಿ ಗಳೂ, ಮಹಾತ್ಮರೂ ಆದ ಪಾಂಡುಪುತ್ರರಿಗೆ ಪುತ್ರಪೌತ್ರಪಾರಂಪರ್ಯವಾಗಿ ಬಂದ ಅವರ ರಾಜ್ಯವನ್ನು ಕೊಡಿಸದೆ ನಿರಾಕರಿಸಿದೆನು. ಅದರಿಂದಲೇ ಈಗ ನಾನು ಇಂತಹ ದುಸ್ಥಿತಿಯಲ್ಲಿ ಕೊರಗಬೇಕಾಯಿತು. ಆದರೇನು? ಜನಾರ್ದನನಾದ ಕೃಷ್ಣನಿಗೆ ಎಲ್ಲಾ ಕ್ಷತ್ರಿಯರ ವಿನಾಶವನ್ನೂ ನೋಡಬೇ ಕೆಂಬ ಕುತೂಹಲವಿದ್ದುದರಿಂದ, ಅವನು ಇದನ್ನು ಹಿತವೆಂದೇ ಭಾವಿಸು ವನು. ಹಿಂದೆ ನಾನು ಬಾರಿಬಾರಿಗೂ ನಡೆಸಿದ ಅನೀತಿಗಳೆಲ್ಲ ಈಗ ನನ್ನ ಮನಸ್ಸಿಗೆ ಶಲ್ಯಪ್ರಾಯವಾಗಿ, ಸಾವಿರಾರುವಿಧದಿಂದ ನನ್ನನ್ನು ಬಾಧಿಸು ತ್ತಿವೆ. ಕಳೆದ ಹದಿನೈದುವರ್ಷಗಳಿಂದ ಹೇಗೋ ಸಹಿಸಿಕೊಂಡಿದ್ದೆನು ಈಗೀಗ ಅವು ನನ್ನನ್ನು ಬಹಳ ಸಂತಾಪಗೊಳಿಸುತ್ತಿವೆ. ಅದುದರಿಂದ ಈ ಪಾಪವನ್ನು ನಿವೃತ್ತಿಮಾಡಿಕೊಳ್ಳದೆ ತೀರದು. ಇನ್ನು ನಾನು ಅದಕ್ಕೆ ಸಿದ್ಧ ನಾಗಿರಬೇಕು. ಈಗಲೇ ನನಗೆ ಭೋಜನವೂ ರುಚಿಸುವುದಿಲ್ಲ. ಪ್ರತಿದಿ ನವೂ ನಾಲ್ಕನೆಯ ಜಾಮದಲ್ಲಿ, ಕೆಲವು ವೇಳೆ ಎಂಟನೆಯ ಜಾಮದಲ್ಲಿ, ದಾಹವನ್ನು ತೀರಿಸುವ ಗಂಜಿ ಮೊದಲಾದುವನ್ನುಮಾತ್ರ ಸೇವಿಸುವೆನು ಇದರ ನಿಜವನ್ನು ಗಾಂಧಾರಿಯು ಬಲ್ಲಳು. ಆದರೆ ಯುಧಿಷ್ಠಿರನ ಭಯ ಕ್ಕಾಗಿ ಎಲ್ಲಾ ಸೇವಕರೂ 'ನಾನು ಆಹಾರವನ್ನು ಕ್ರಮವಾಗಿ ಭುಜಿಸುವೆ' ನೆಂದೇ ತಿಳಿದು ನನ್ನಲ್ಲಿಗೆ ಬಂದುಹೋಗುವರು. ಹಾಗಿಲ್ಲದಿದ್ದರೆ ಯುಧಿ ಷ್ಠಿರನು ವ್ಯಸನಗೊಳ್ಳುವನೆಂದು ನಾನೂ ಹಾಗೆಯೇ ನಟಿಸುತ್ತಿರುವೆನು. ಈಗಲೇ ನಾನು ಏನೋ ನಿಯಮವೆಂಬ ನೆವವನ್ನು ಹೇಳಿ, ಕೃಷ್ಣಾಜಿನ ವನ್ನು ಧರಿಸಿ, ನೆಲದಲ್ಲಿ ದರ್ಭೆಯನ್ನು ಹರಡಿ, ಅದರಮೇಲೆ ಮಲಗುವೆನು.

ಗಾಂಧಾರಿಯೂ ಹಾಗೆಯೇ ಮಾಡುತ್ತಿರುವಳು. ನಾನು ನನ್ನ ನೂರು ಮಂದಿ ಮಕ್ಕಳ ಸಾವಿಗಾಗಿ ದುಃಖಿಸುವವನಲ್ಲ ಅವರು ಯುದ್ಧದಲ್ಲಿ ಸತ್ತುದು ಕ್ಷತ್ರಿಯಧರ್ಮವೆಂದೇ ಹಿರಿಯರು ಹೇಳುವರು' ಎಂದನು. ಇಷ್ಟು ಮಾತನ್ನು ಹೇಳಿದಮೇಲೆ ಧೃತರಾಷ್ಟ್ರನು, ಧರ್ಮರಾಜನನ್ನು ಬೇರೆಯಾಗಿ ಕರೆದು 'ಓ ಕುಂತೀಪುತ್ರಾ! ನಿನಗೆ ಕ್ಷೇಮವಾಗಲಿ! ನಾನು ಹೇಳುವುದನ್ನು ಕೇಳು ನಾನು ನಿನ್ನಿಂದ ಚೆನ್ನಾಗಿ ಆದರಿಸಲ್ಪಟ್ಟು, ಇದುವರೆಗೆ ಸುಖವಾಗಿದ್ದೆನು. ಅನೇಕ ದಾನಗಳನ್ನೂ ಮಾಡಿದೆನು ಶ್ರಾದ್ಧಗಳನ್ನೆಲ್ಲ ವಿಜೃಂಭಣೆಯಿಂದ ನಡೆಸಿದೆನು. ಶಕ್ತಿಗನುಗುಣವಾಗಿ ದೊಡ್ಡ ಪುಣ್ಯವನ್ನೂ ಗಳಿಸಿದೆನು ಪುತ್ರರನ್ನು ಕಳೆದುಕೊಂಡ ಈ ಗಾಂಧಾರಿಯೂ ಧೈರ್ಯದಿಂದ ನನ್ನನ್ನು ಕಾಪಾಡುತ್ತಿರುವಳು. ದ್ರೌಪದಿಯಲ್ಲಿ ಮಹಾಪರಾಧಿಗಳೆನಿಸಿ, ನಿನ್ನ ಸಂಪತ್ತನ್ನೆಲ್ಲ ಅಪಹರಿಸಿದ ದುಷ್ಟರಾದ ನನ್ನ ಪುತ್ರರು, ತಮ್ಮ ಅಧರ್ಮದಿಂದಲೇ ಕೊಲ್ಲಲ್ಪಟ್ಟು ಸ್ವರ್ಗಸ್ಥರಾದರು. ಇನ್ನು ಅವರಿಗಾಗಿ ನಾನು ಮಾಡಬೇಕಾದ ಕಾರ್ಯವಾವುದೂ ಇಲ್ಲ. ಕ್ಷತ್ರಧರ್ಮದಿಂದ ಅವರೆಲ್ಲರೂ ಯುದ್ಧದಲ್ಲಿ ಶಸ್ತ್ರಹತರಾಗಿ ವೀರಸ್ವರ್ಗವನ್ನು ಪಡೆದರು ಇನ್ನುಮೇಲೆ ನನಗೂ, ಗಾಂಧಾರಿಗೂ ಪರಲೋಕಸಾಧಕವಾದ ಮಾರ್ಗವೇನೋ ಅದನ್ನು ನೋಡಿಕೊಳ್ಳಬೇಕು. ಓ ರಾಜಾ! ಆದುದರಿಂದ ನೀನು ನಮಗೆ ಅನುಮತಿಯನ್ನು ಕೊಡು. ನೀನಾದರೋ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನು. ಯಾವಾಗಲೂ ಧರ್ಮಾಸಕ್ತನು. ಈಗ ನೀನು ಈ ರಾಜ್ಯಕ್ಕೆಲ್ಲ ಅಧಿಪತಿಯೂ, ಗುರುವೂ ಆಗಿರುವೆ ಅದಕ್ಕಾಗಿ ನಾನು ನಿನ್ನನ್ನು ಕೇಳುವೆನು. ಓ ವೀರಾ! ನಾನು ನಿನ್ನ ಅನುಮತಿಯನ್ನು ಪಡೆದು, ಜಟಾವಲ್ಕಲಗಳನ್ನೂ, ಕೃಷ್ಣಾಜಿನವನ್ನೂ ಧರಿಸಿ, ಈ ಗಾಂಧಾರಿಯೊಡನೆ ವನಕ್ಕೆ ಹೋಗಬೇಕು. ನಾನು ನಿನಗೆ ಶ್ರೇಯಸ್ಸನ್ನು ಕೋರುತ್ತ ವನದಲ್ಲಿ ವಾಸಮಾಡಿಕೊಂಡಿರುವೆನು. ಓ ಭರತಕುಲಶ್ರೇಷ್ಠಾ! ಆಯುಷ್ಯವು ಮುಗಿಯುವಕಾಲದಲ್ಲಿ, ಪುತ್ರರಲ್ಲಿ ಐಶ್ವರ್ಯವೆಲ್ಲವನ್ನೂ ಬಿಟ್ಟು ಕಾಡಿಗೆ ಹೊರಡುವುದು ನಮ್ಮ ಕುಲದಲ್ಲಿ ಹಿಂದಿನಿಂದ ಬಂದ ಪದ್ಧತಿ. ನಾನು ವನದಲ್ಲಿ ಪತ್ನೀಸಮೇತನಾಗಿ, ವಾಯ್ವಾಹಾರದಿಂದಲೋ, ಅಥವಾ ನಿರಾಹಾರದಿಂದಲೋ ತಪಸ್ಸನ್ನು ಮಾಡುವೆನು. ನೀನು ರಾಜ

ನಾದುದರಿಂದ, ನಮ್ಮ ತಪಸ್ಸಿನ ಫಲದಲ್ಲಿ ನೀನೂ ಭಾಗವನ್ನು ಪಡೆಯುವೆ. ರಾಜರು ಪ್ರಜೆಗಳ ಪಾಪಪುಣ್ಯಗಳೆರಡರಲ್ಲಿಯೂ ಫಲಭಾಗಿಗಳಲ್ಲವೆ?' ಎಂದನು.

ಇದು ಮೂರನೆಯ ಅಧ್ಯಾಯವು.

{ಯುಧಿಷ್ಠಿರನು ದುಃಖದಿಂದ ಧೃತರಾಷ್ಟ್ರನನ್ನು ತಡೆದುದು ವ್ಯಾಸಾಗಮನವು.}

ಆಗ ಯುಧಿಷ್ಠಿರನು 'ಜನಕಾ! ನೀನು ಹೀಗೆ ದುಃಖಪಡುವುದರಿಂದ, ಈ ರಾಜ್ಯವು ನನಗೆ ಸ್ವಲ್ಪಮಾತ್ರವೂ ತೃಪ್ತಿಯನ್ನುಂಟುಮಾಡದು. ಮುಖ್ಯವಾಗಿ ರಾಜ್ಯದಾಸೆಯಿಂದ ಇಂತಹ ಅನರ್ಥಕ್ಕೆಲ್ಲ ಕಾರಣಭೂತನಾದ ನನ್ನ ದುರ್ಬುದ್ಧಿಯನ್ನು ಸುಡಬೇಕು ನೀನು ಹೀಗೆ ದುಃಖಪೀಡಿತನಾಗಿ, ಉಪವಾಸದಿಂದ ಕೃಶನಾಗುತ್ತಿರುವುದೂ, ಭೂಮಿಯಲ್ಲಿ ಮಲಗುತ್ತಿರುವುದೂ, ನನಗಾಗಲಿ, ನನ್ನ ಸಹೋದರರಿಗಾಗಲಿ ತಿಳಿಯದು. ನೀನು ಹಿಂದೆ ನಮಗೆ ನಂಬಿಕೆಯನ್ನುಂಟುಮಾಡಿ ಇಂತಹ ದುಃಖವನ್ನನುಭವಿಸಿದೆಯಲ್ಲವೆ! ಆದುದರಿಂದ ಮನೋಭಿಪ್ರಾಯವನ್ನು ವ್ಯಕ್ತಪಡಿಸದೆ ಮುಚ್ಚಿಟ್ಟ ನಿನ್ನಿಂದ ಮೂಢನಾದ ನಾನು ವಂಚಿಸಲ್ಪಟ್ಟೆನು. ರಾಜಾ! ನನ್ನ ತಂದೆಯಾದ ನೀನು ನಮ್ಮ ಬಳಿಯಲ್ಲಿದ್ದು ಇಂತಹ ದುಃಖಕ್ಕೊಳಗಾದಮೇಲೆ, ನನಗೆ ಇನ್ನು ಈ ರಾಜ್ಯದಿಂದಾಗಲಿ, ರಾಜಭೋಗಗಳಿಂದಾಗಲಿ, ಯಜ್ಞಗಳಿಂದಾಗಲಿ, ಇತರ ಸುಖಗಳಿಂದಾಗಲಿ ಆಗುವುದೇನು? ಇಂತಹ ದುಃಖಕ್ಕೊಳಗಾಗಿ ನೀನು ಈ ಮಾತನ್ನಾಡಿದುದರಿಂದ, ನಾನೂ, ನನ್ನ ರಾಜ್ಯವೂ ಮೊತ್ತಕ್ಕೇ ದುಃಖಕ್ಕೊಳಗಾದಂತಾಯಿತು. ನೀನೇ ನಮಗೆ ತಾಯಿ! ನೀನೇ ತಂದೆ! ಉತ್ತಮಗುರುವೂ ನೀನೇ! ನಾವು ನಿನ್ನನ್ನು ಬಿಟ್ಟು ಎಲ್ಲಿ ಹೇಗೆತಾನೇ ಜೀವಿಸಬಲ್ಲೆವು? ಓ ಮಹಾರಾಜಾ! ಈಗ ನಿನಗೆ ಔರಸಕುಮಾರನಾಗಿ ಉಳಿದಿರುವ ಯುಯುತ್ಸುವೇ ಇನ್ನುಮೇಲೆ ರಾಜನಾಗಿರಲಿ! ಇಲ್ಲವೇ ನೀನೇ ರಾಜನಾಗಿದ್ದು ಈ ರಾಜ್ಯವನ್ನಾಳುತ್ತಿರು. ನಾನು ಕಾಡಿಗೆ ಹೋಗುವೆನು. ಮೊದಲೇ ಅಪಕೀರ್ತಿಯಿಂದ ದಗ್ಧನಾದ ನನ್ನನ್ನು

ನೀನು ಮೇಲಿಮೇಲೆ ವ್ಯಸನಪಡಿಸಬೇಡ. ಇನ್ನು ನಾನು ರಾಜನಲ್ಲ. ನೀನೇ ಅರಸನು. ನಾನು ನಿನ್ನ ವಶನಾಗಿರುವೆನು ನಮ್ಮೆಲ್ಲರಿಗೆ ಹಿತೋಪದೇಶಕನಾದ ಗುರುವೂ, ಧರ್ಮಜ್ಞನೂ ಆದ ನಿನಗೆ, ಈಗ ನಾನು ಹೇಗೆ ವನವಾಸಕ್ಕಾಗಿ ಅನುಮತಿ ಕೊಡಲಿ? ಜನಕಾ! ದುರ್ಯೋಧನನ ವಿಷಯದಲ್ಲಿ ನನಗೆ ಯಾವ ಕೋಪವೂ ಇಲ್ಲ. ಅದು ಹಾಗೆ ನಡೆಯಬೇಕಾಗಿದ್ದುದು ನಡೆದುಹೋಯಿತು. ಆದಕ್ಕೆ ತಕ್ಕಂತೆ ನಾವೆಲ್ಲರೂ ಬುದ್ಧಿಮೋಹಗೊಂಡೆವು. ಆದುದಾಯಿತು. ಇನ್ನು ದುರ್ಯೋಧನಾದಿಗಳಂತೆ ನಾವೂ ನಿನಗೆ ಪುತ್ರರಲ್ಲವೆ? ನಾನು ಗಾಂಧಾರಿಗೂ, ಕುಂತಿಗೂ ಭೇದವಿಲ್ಲವೆಂದೇ ಭಾವಿಸುವೆನು. ನೀನು ನನ್ನನ್ನು ಬಿಟ್ಟು ಹೊರಡುವುದಾದರೆ, ನಾನೂ ನಿನ್ನ ಹಿಂದೆಯೇ ಬರುವೆನು. ನನ್ನಮೇಲೆ ಆಣೆಯಿಟ್ಟು ಇದನ್ನು ಹೇಳುವೆನು. ಸರ್ವಸಂಪತ್ಸಮೃದ್ಧವಾಗಿ, ಸಮುದ್ರಪರ್ಯಂತವಾದ ಈ ಸಮಸ್ತಭೂಮಿಯೂ ನಿನ್ನನ್ನಗಲಿದ ನನಗೆ ಪ್ರೀತಿಕರವಾಗಿಲ್ಲ. ಇವೆಲ್ಲವೂ ನಿನ್ನವೇ! ನಾವು ನಿನ್ನ ಅಧೀನರು. ನಿನ್ನನ್ನು ಶಿರಸಾವಂದಿಸಿ ಪ್ರಾರ್ಥಿಸುವೆನು. ನಿನ್ನ ಮನಸ್ಸಿನ ದುಃಖವನ್ನು ತೊಲಗಿಸು. ಅನುಭವಿಸಬೇಕಾದುದನ್ನು ನೀನು ಅನುಭವಿಸಿದುದಾಯಿತು ಇನ್ನಾದರೂ ನಾನು ಸಂತೋಷದಿಂದ ನಿನ್ನ ಸೇವೆಮಾಡುತ್ತ ಮನಸ್ಸಂತಾಪವನ್ನು ನೀಗಿಸಿಕೊಳ್ಳುವೆನು' ಎಂದನು.

ಆಗ ಧೃತರಾಷ್ಟ್ರನು 'ಕುರುನಂದನಾ! ಹಾಗಲ್ಲ! ಈಗ ನನ್ನ ಮನಸ್ಸು ತಪೋವನದಕಡೆಗೆ ತಿರುಗಿಬಿಟ್ಟಿತು. ಅಂತ್ಯಕಾಲದಲ್ಲಿ ವನವಾಸಕ್ಕಾಗಿ ಹೊರಡುವುದು ನಮ್ಮ ಕುಲಪದ್ಧತಿಯಾಗಿಯೂ ಇದೆ. ನಾನು ಬಹುಕಾಲ ಇಲ್ಲಿ ವಾಸಮಾಡಿದೆನು. ನೀನೂ ನನಗೆ ದೀರ್ಘಕಾಲದವರೆಗೆ ಸೇವೆಮಾಡಿದೆ. ರಾಜಾ! ಇನ್ನು ನೀನು ನನಗೆ ಅನುಮತಿಕೊಡಬೇಕು' ಎಂದನು.

ಧೃತರಾಷ್ಟ್ರನು ತನ್ನ ಮುಂದೆ ಭಯದಿಂದ ನಡುಗುತ್ತ ಕೈಜೋಡಿಸಿ ನಿಂತಿದ್ದ ಧರ್ಮರಾಜನಿಗೆ ಹೀಗೆಂದು ಹೇಳಿದಮೇಲೆ, ವಿದುರನನ್ನೂ, ಸಂಜಯನನ್ನೂ, ಕೃಪನನ್ನೂ ಕುರಿತು 'ನೀವೆಲ್ಲರೂ ಈಗ ಈ ಯುಧಿ

ಷ್ಠಿರರಾಜನನ್ನು ಸಮಾಧಾನಪಡಿಸಬೇಕು. ಮೊದಲೇ ನಾನು ವಯಸ್ಸು ಕಳೆದ ಮುದುಕನು. ಇದರಮೇಲೆ ಈಗ ಅಧಿಕವಾಗಿ ಮಾತನಾಡಿದ ಶ್ರಮದಿಂದ ನನ್ನ ಮನಸ್ಸು ಮಂದವಾಗಿರುವುದು. ಬಾಯಿಯು ಒಣಗುತ್ತಿರುವುದು' ಎಂದನು.

ಧರ್ಮಾತ್ಮನೂ, ವೃದ್ಧನೂ, ಧೀಮಂತನೂ ಆದ ಧೃತರಾಷ್ಟ್ರನು ಹೀಗೆ ಹೇಳುತ್ತಿರುವಾಗಲೇ ಪ್ರಾಣಹೋದವನಂತೆ, ಗಾಂಧಾರಿಯ ಮೈಮೇಲೆ ಒರಗಿ ಮಲಗಿಬಿಟ್ಟನು. ಆ ಸ್ಥಿತಿಯನ್ನು ನೋಡಿ ಯುಧಿಷ್ಠಿರನು ಮಹಾವ್ಯಾಕುಲದಿಂದ 'ಅಯ್ಯೋ! ಇನ್ನೇನುಗತಿ? ಯಾವನು ನೂರು ಸಾವಿರ ಆನೆಗಳಿಗೆ ಸಮಾನಬಲವುಳ್ಳವನೆನೆಸಿದ್ದನೋ, ಅಂತಹ ರಾಜನು ಈಗ ಪ್ರಾಣಹೋದವನಂತೆ ಸ್ತ್ರೀಯನ್ನು ನೆಮ್ಮಿ ಮಲಗಿರುವನಲ್ಲವೆ? ಹಿಂದೆ ಬಲಶಾಲಿಯಾದ ಯಾವನು ಕಬ್ಬಿಣದಿಂದ ತಯಾರಿಸಿದ ಭೀಮಸೇನನ ಪ್ರತಿಮೆಯನ್ನು ಕೈಗಳಿಂದಲೇ ನೆಗ್ಗಿ ಪುಡಿಮಾಡಿದನೋ, ಆತನು ಈಗ ಅಬಲೆಯಾದ ಸ್ತ್ರೀಯ ದೇಹವನ್ನೊರಗಿ ಮಲಗಿದನಲ್ಲಾ! ಧರ್ಮವನ್ನರಿಯದ ನನ್ನನ್ನೂ, ನನ್ನ ಬುದ್ಧಿಯನ್ನೂ, ನನ್ನ ವಿದ್ಯೆಯನ್ನೂ ಸುಡಬೇಕು. ನನ್ನ ದೆಸೆಯಿಂದಲ್ಲವೇ ಈತನಿಗೆ ಈ ದುಸ್ಥಿತಿಯು ಬಂದಿತು! ಈತನೂ, ಗಾಂಧಾರಿಯೂ ಭೋಜನಮಾಡದಿದ್ದಮೇಲೆ, ನಾನೂ ಇವರಂತೆಯೇ ಉಪವಾಸವಿದ್ದು ಸಾಯುವೆನು' ಎಂದನು. ಓ ರಾಜಾ! ಆಮೇಲೆ ಧರ್ಮಜ್ಞನಾದ ಧರ್ಮರಾಜನು, ನೀರಿನಲ್ಲಿ ಅದ್ದಿ ತಣ್ಣಗೆ ಮಾಡಿದ ತನ್ನ ಕೈಯಿಂದ ಧೃತರಾಷ್ಟ್ರನ ಎದೆಯನ್ನೂ, ಮುಖವನ್ನೂ ಮೆಲ್ಲಗೆ ಒತ್ತಿದನು. ರತ್ನೌಷಧಿಗಳಿಂದ ಕೂಡಿ, ಪುಣ್ಯಕರವಾದ ಆ ಧರ್ಮರಾಜನ ಕೈಗಳ ಸ್ಪರ್ಶನದಿಂದ ರಾಜನಿಗೆ ಪ್ರಜ್ಞೆಯು ಬಂದಿತು. ಹೀಗೆ ತನ್ನನ್ನುಪಚರಿಸುತಿದ್ದ ಧರ್ಮರಾಜನನ್ನು ಧೃತರಾಷ್ಟ್ರನು ಕೈಯಿಂದ ಸವರುತ್ತ 'ಕುಮಾರಾ! ನಿನ್ನ ಹಸ್ತಸ್ಪರ್ಶದಿಂದ ಈಗ ನಾನು ಬದುಕಿದೆನು. ನನ್ನ ಪ್ರಾಣಗಳಿಗೆ ಆಪ್ಯಾಯಕವಾದ ನಿನ್ನನ್ನು ಕೈಗಳಿಂದ ತಬ್ಬಿಕೊಂಡು, ನಿನ್ನ ಶಿರಸ್ಸನ್ನಾಘ್ರಾಣಿಸಲಪೇಕ್ಷಿಸುವೆನು. ಓ ಕೌರವೋತ್ತಮಾ! ನಾನು ಆಹಾರವನ್ನು ತೆಗೆದುಕೊಂಡು ಈಗ ಎಂಟು ವೇಳೆಗಳಾದುವು. ಆದರಿಂದ ನನಗೆ ಕೈ

ಕಾಲುಗಳನ್ನಾಡಿಸುವುದಕ್ಕೂ ಶಕ್ತಿಯಿಲ್ಲದಂತಿದೆ ನಿನ್ನನ್ನು ಕೇಳಿಕೇಳಿ ನಾನು ಬಹಳವಾಗಿ ಬಳಲಿದೆನು. ಅದರಿಂದ ನನ್ನ ಮನಸ್ಸು ತಬ್ಬಿಬ್ಬಾಗಿ, ನಾನು ಪ್ರಜ್ಞೆತಪ್ಪಿದಂತಾದೆನು. ಓ ಕುರುಕುಲೋತ್ತಮಾ! ಈಗ ಅಮೃತ ಸಮಾನವಾದ ನಿನ್ನ ಕರಸ್ಪರ್ಶದಿಂದ ನನಗೆ ತಿರುಗಿ ಪ್ರಜ್ಞೆಬಂದಂತಿದೆ' ಎಂದನು.

ಆಮೇಲೆ ಯುಧಿಷ್ಠಿರನು, ಮನಸ್ಸು ಕರಗಿ, ಆತನ ಶರೀರವೆಲ್ಲ ವನ್ನೂ ಬಾರಿಬಾರಿಗೂ ಕೈಯಿಂದ ಸವರಿದನು. ಆಗ ಧೃತರಾಷ್ಟ್ರನು ಪ್ರಜ್ಞೆತಿಳಿದು ಎಚ್ಚೆತ್ತು, ಧರ್ಮಪುತ್ರನನ್ನು ತನ್ನ ಕೈಗಳಿಂದ ಅಪ್ಪಿಕೊಂಡು ಆತನ ತಲೆಯನ್ನಾಘ್ರಾಣಿಸಿದನು. ವಿದುರನೇ ಮೊದಲಾದವರೆಲ್ಲರೂ ದುಃಖಾಕ್ರಾಂತರಾಗಿ ರೋದಿಸಿದರು. ಯಾರೊಬ್ಬರೂ ಯಾವ ಮಾತನ್ನೂ ಆಡಲಿಲ್ಲ. ಆಗ ಧರ್ಮಜ್ಞಳಾದ ಗಾಂಧಾರಿಯು, ತನ್ನ ಅಪಾರ ದುಃಖ ವನ್ನು ತನ್ನಲ್ಲಿಯೇ ಅಡಗಿಸಿಕೊಂಡು 'ಹೀಗೆ ಮಾಡಬೇಡ'ವೆಂದುಮಾತ್ರ ಹೇಳಿದಳು. ಕುಂತಿ ಮೊದಲಾದ ಇತರ ಸ್ತ್ರೀಯರೆಲ್ಲರೂ ದುಃಖಾಕ್ರಾಂತ ರಾಗಿ, ಕಣ್ಣೀರುತುಂಬಿಕೊಂಡು ಸುತ್ತಲೂ ನಿಂತರು. ಆಗ ಧೃತರಾ ಷ್ಟ್ರನು ತಿರುಗಿ ಧರ್ಮರಾಜನನ್ನು ಕುರಿತು 'ಓ ರಾಜಾ! ಭರತಶ್ರೇಷ್ಠಾ! ನನ್ನ ತಪಸ್ಸಿಗೆ ಅನುಮತಿಯನ್ನು ಕೊಡು. ಅಯ್ಯಾ! ಅಡಿಗಡಿಗೆ ಮಾತ ನಾಡುವುದರಿಂದ ನನ್ನ ಮನಸ್ಸು ಕಳವಳಿಸುವುದು. ಓ ಪುತ್ರಾ! ಇನ್ನು ಮೇಲೆ ನೀನು ನನ್ನನ್ನು ಈ ವಿಷಯದಲ್ಲಿ ನಿರ್ಬಂಧಿಸಬಾರದು' ಎಂದನು. ಆಗ ಪುರಸ್ತ್ರೀಯರೆಲ್ಲರೂ ಗಟ್ಟಿಯಾಗಿ ರೋದಿಸತೊಡಗಿದರು. ಆಗ ತಿರುಗಿ ಯುಧಿಷ್ಠಿರನು, ದುಃಖದಿಂದ ಕಳೆಗುಂದಿ ಕೃಶನಾಗಿ, ಉಪ ವಾಸದಿಂದಲೂ ಕ್ಷೀಣಿಸಿ, ಅಸ್ಥಿ ಚರ್ಮಾವಶಿಷ್ಟನಾದ ತನ್ನ ತಂದೆ ಯನ್ನು ಸಮಾಧಾನಗೊಳಿಸುತ್ತ ಶೋಕದಿಂದ ಕಣ್ಣೀರುಬಿಟ್ಟು ಹೀಗೆ ಹೇಳುವನು. 'ಓ ಪುರುಷೋತ್ತಮಾ! ನಿನಗೆ ಪ್ರಿಯವನ್ನುಂಟುಮಾಡ ಬೇಕೆಂಬುದೊಂದೇ ನನ್ನ ಕೋರಿಕೆ. ನನ್ನ ಜೀವದಮೇಲೆಯೂ, ಭೂಮಿ ಯಲ್ಲಿಯೂ ನನಗೆ ಅಷ್ಟು ಅಪೇಕ್ಷೆಯಿಲ್ಲ. ನಾನು ನಿನ್ನ ಅನುಗ್ರಹಕ್ಕೆ ಪಾತ್ರನೂ, ನಿನಗೆ ಇಷ್ಟನೂ ಆಗಿರುವಪಕ್ಷದಲ್ಲಿ, ಈಗ ನೀನು ಮೊದಲು

ಬಂದು ಭೋಜನಮಾಡು. ಆಮೇಲೆ ನಿನ್ನ ಕರ್ತವ್ಯವನ್ನು ತಿಳಿದುಕೊಳ್ಳುವೆನು' ಎಂದನು. ಆಗ ಧೃತರಾಷ್ಟ್ರನು ಯುಧಿಷ್ಠಿರನನ್ನು ಕುರಿತು 'ಓ ಪುತ್ರಾ! ನೀನು ಅನುಮತಿಕೊಡುವುದಾದರೆ ಭೋಜನಮಾಡುವೆನು' ಎಂದನು. ಧೃತರಾಷ್ಟ್ರಮಹಾರಾಜನು ಹೀಗೆ ಹೇಳುತ್ತಿರುವಾಗಲೇ ಸತ್ಯವತಿಯ ಪುತ್ರನೂ, ಮಹಾತ್ಮನೂ ಆದ ವ್ಯಾಸನು ಅಲ್ಲಿಗೆ ಬಂದು ಕಾಣಿಸಿಕೊಂಡು, ಧರ್ಮರಾಜನಿಗೆ ಹೀಗೆಂದು ಹೇಳುವನು.

ಇದು ನಾಲ್ಕನೆಯ ಅಧ್ಯಾಯವು.

ವ್ಯಾಸನು ಧೃತರಾಷ್ಟ್ರನ ವನವಾಸಕ್ಕಾಗಿ ಅನುಮತಿಕೊಡುವಂತೆ ಯುಧಿಷ್ಠಿರನಿಗೆ ತಿಳಿಸಿದುದು. ಯುಧಿಷ್ಠಿರನು ವ್ಯಸನದಿಂದ ಅದಕ್ಕೆ ಸಮ್ಮತಿಸಿದುದು.

'ಯುಧಿಷ್ಠಿರಾ! ಮಹಾತೇಜಸ್ವಿಯಾದ ಧೃತರಾಷ್ಟ್ರನು ಹೇಗೆ ಹೇಳುವನೋ ಅದರಂತೆ ನಡೆಸು. ಆಲೋಚಿಸಬೇಡ! ಪುತ್ರರನ್ನೆಲ್ಲ ಕಳೆದುಕೊಂಡು ವೃದ್ಧನಾದ ಈ ಅರಸನು, ಇನ್ನು ಹೆಚ್ಚುಕಾಲದವರೆಗೆ ಈ ಕಷ್ಟವನ್ನನುಭವಿಸುತ್ತ ಬದುಕಿರಲಾರನೆಂದು ತೋರುವುದು. ಮಹಾರಾಜಾ! ಮಹಾಭಾಗ್ಯಶಾಲಿನಿಯಾದ ಈ ಗಾಂಧಾರಿಯೂ ಪುತ್ರಶೋಕವನ್ನು ಎಷ್ಟೋ ಕಷ್ಟದಿಂದ ಸಹಿಸುತ್ತಿರುವಳು. ಈ ವಿಷಯವನ್ನು ತಿಳಿಸುವುದಕ್ಕಾಗಿಯೇ ನಾನು ಈಗ ನಿನ್ನ ಬಳಿಗೆ ಬಂದೆನು. ನನ್ನ ಮಾತಿನಂತೆ ಕೇಳು. ಧೃತರಾಷ್ಟ್ರರಾಜನಿಗೆ ಅನುಮತಿಯನ್ನು ಕೊಡು. ಈತನು ಇಲ್ಲಿ ಹೀಗೆಯೇ ಮೃತನಾಗಲು ಅವಕಾಶಕೊಡಬೇಡ. ಈತನು ಮಧುಗಂಧದಿಂದಕೂಡಿದ ವನಗಳಲ್ಲಿ ಸ್ವಲ್ಪಕಾಲವಾದರೂ ನಿಶ್ಚಿಂತನಾಗಿರಲಿ. ಈತನೂ ಪುರಾತನ ರಾಜರ್ಷಿಗಳ ದಾರಿಯನ್ನು ಅವಲಂಬಿಸಲಿ! ರಾಜರ್ಷಿಗಳೆಲ್ಲರಿಗೂ ಕಡೆಗಾಲದಲ್ಲಿ ಅರಣ್ಯಕ್ಕೆ ಹೋಗುವುದೇ ಪದ್ಧತಿ' ಎಂದನು. ವ್ಯಾಸನ ಈ ಮಾತುಗಳನ್ನು ಕೇಳಿ ಧರ್ಮರಾಜನು ಆತನನ್ನು ಕುರಿತು 'ಈತನೇ ನಮ್ಮೆಲ್ಲರಿಗೂ ಪೂಜಾರ್ಹನು! ನಮಗೆ ಗುರುವೂ ಈತನೇ! ಈ ರಾಜ್ಯಕ್ಕೂ, ನಮ್ಮ ಕುಲಕ್ಕೂ ಇವನೇ ಮುಖ್ಯಗತಿ! ಈ ಧೃತರಾಷ್ಟ್ರ

ರಾಜನು ನಮಗೆ ಪಿತನೂ, ಗುರುವೂ ಆಗಿರುವನು. ಧರ್ಮಾನುಸಾರವಾಗಿ ನಾನು ಪಿತ್ರಾಜ್ಞೆಗೆ ಒಳಪಟ್ಟವನು' ಎಂದನು. ಈ ವಾಕ್ಯಗಳನ್ನು ಕೇಳಿ ವೇದಪಾರಂಗತನೂ, ಮಹಾತೇಜಸ್ವಿಯೂ, ಮಹಾಕವಿಯೂ ಆದ ವ್ಯಾಸನು, ತಿರುಗಿ ಯುಧಿಷ್ಠಿರನನ್ನು ಕುರಿತು 'ಓ ಮಹಾಭಾಗ್ಯಶಾಲಿ! ನೀನು ಹೇಳುವುದು ನಿಜವು! ಈ ರಾಜನು ವೃದ್ಧನು! ನಮ್ಮೆಲ್ಲರಿಗೂ ಪ್ರಮಾಣಭೂತನು ಈ ಅರಸನಿಗೆ ನಾನು ಅನುಮತಿಯನ್ನು ಕೊಟ್ಟುಬಿಟ್ಟೆನು. ನೀನೂ ಅನುಮತಿಯನ್ನು ಕೊಡು. ಈತನು ತನ್ನ ಇಷ್ಟದಂತೆ ನಡೆಯಲು ನೀನು ಅಡ್ಡಿಮಾಡಬಾರದು. ರಾಜರ್ಷಿಗಳಿಗೆ ಇದೇ ಉತ್ತಮ ಧರ್ಮವು. (ಕ್ಷತ್ರಿಯರು) ಯುದ್ಧದಲ್ಲಿ ಸಾಯಬೇಕು. ಇಲ್ಲದಿದ್ದರೆ ವಿಧ್ಯುಕ್ತರೀತಿಯಲ್ಲಿ ಅರಣ್ಯದಲ್ಲಿ ಸಾಯಬೇಕು. ಓ ರಾಜೋತ್ತಮಾ! ನಿನ್ನ ತಂದೆಯಾದ ಪಾಂಡುರಾಜನೇ ಇವನಿಗೆ ಶಿಷ್ಯನಂತಿದ್ದುಕೊಂಡು, ಈ ರಾಜನನ್ನು ಗುರುವಿನಂತೆ ಉಪಾಸಿಸಿದನು. ಈತನು ದಕ್ಷಿಣಾಸಮೇತವಾಗಿ ದೊಡ್ಡ ರತ್ನರಾಶಿಗಳಿಂದ ಮಹಾಯಾಗಗಳನ್ನು ಮಾಡಿದನು ರಾಜ್ಯಭೋಗಗಳನ್ನೂ ಅನುಭವಿಸಿರುವನು. ಪ್ರಜೆಗಳನ್ನೂ ಪರಿಪಾಲಿಸಿರುವನು ನೀನು ಕಾಡಿಗೆ ಹೋಗಿದ್ದಾಗ, ತನ್ನ ಪುತ್ರನಲ್ಲಿದ್ದ ವಿಶಾಲರಾಜ್ಯವನ್ನು ಹದಿಮೂರುವರ್ಷಗಳವರೆಗೆ ಸುಖವಾಗಿ ಅನುಭವಿಸಿದನು. ನಾನಾಬಗೆಯ ದಾನಗಳನ್ನೂ ಮಾಡಿದನು. ನೀನುಕೂಡ ನಿನ್ನ ಸೇವಕರೊಡನೆ ಈತನನ್ನೂ, ಗಾಂಧಾರಿಯನ್ನೂ ಪೂಜಿಸಿದೆ. ಯುಧಿಷ್ಠಿರಾ! ಇನ್ನು ನೀನು ತಂದೆಯಾದ ಇವನಿಗೆ ಅನುಮತಿಯನ್ನು ಕೊಡು. ಈತನಿಗೆ ತಪಸ್ಸುಮಾಡಲು ಇದೇ ತಕ್ಕ ಸಮಯವು. ಇದರಿಂದ ಈತನಿಗೆ ಸ್ವಲ್ಪವೂ ಕೋಪವಿಲ್ಲ' ಎಂದನು. ವ್ಯಾಸನು ಇಷ್ಟು ಮಾತನ್ನು ಹೇಳಿ ಯುಧಿಷ್ಠಿರನನ್ನು ಸಮಾಧಾನಪಡಿಸಿ, ಅವನು ತನ್ನ ಬಾಯಿಂದ 'ಹಾಗೆಯೇ ಆಗಲಿ' ಎಂದು ಒಪ್ಪಿದಮೇಲೆ, ಕಾನನಕ್ಕೆ ಹೊರಟುಹೋದನು. ಆತನು ಹೋದೊಡನೆಯೇ ಇತ್ತಲಾಗಿ ಯುಧಿಷ್ಠಿರನು ತನ್ನ ತಂದೆಯನ್ನು ಕುರಿತು ನಮ್ರತೆಯಿಂದ 'ಜನಕಾ! ಪೂಜ್ಯನಾದ ವ್ಯಾಸನೂ, ಮಹಾಧನುರ್ಧಾರಿಯಾದ ಕೃಪನೂ, ವಿದುರನೂ, ಯುಯುತ್ಸುವೂ, ಸಂಜಯನೂ ಏನು ಹೇಳುವರೋ, ನಿನಗೆ ಹೇಗೆ ಇಷ್ಟವೋ, ಅದರಂತೆ ನಡೆಸಬೇಕಾದುದು ನನ್ನ

ಕರ್ತವ್ಯವು. ಅವರೆಲ್ಲರೂ ನನಗೆ ಪೂಜಾರ್ಹರು. ಕುಲಕ್ಕೆ ಕ್ಷೇಮಚಿಂತಕರು ಆದರೆ, ಈಗ ನಾನು ನಿನಗೆ ಶಿರಸಾವಂದಿಸಿ ಇದೊಂದನ್ನು ಮಾತ್ರ ಯಾಚಿಸುವೆನು. ಈಗ ನೀನು ಬಂದು ಮೊದಲು ಭೋಜನವನ್ನು ಮಾಡು! ಆಮೇಲೆ ಆಶ್ರಮವನ್ನು ಕುರಿತು ಹೊರಡಬಹುದು' ಎಂದನು.

ಇದು ಐದನೆಯ ಅಧ್ಯಾಯವು.

## ಧೃತರಾಷ್ಟ್ರನು ಯುಧಿಷ್ಠಿರನಿಗೆ ರಾಜನೀತಿಯನ್ನು ಉಪದೇಶಿಸಿದುದು.

ರಾಜಾ! ವೃದ್ಧಾಪ್ಯದಿಂದಲೂ, ದುಃಖದಿಂದಲೂ ಕೇವಲ ದುರ್ಬಲನಾಗಿದ್ದ ಧೃತರಾಷ್ಟ್ರನು, ಹೀಗೆ ಯುಧಿಷ್ಠಿರನಿಂದ ಅನುಮತಿಪಡೆದಮೇಲೆ ಗಾಂಧಾರಿಯೊಡನೆ ಅಲ್ಲಿಂದ ಹೊರಟು, ಜರಾಜೀರ್ಣವಾದ ಆನೆಯಂತೆ ಮೆಲ್ಲಗೆ ಬಹಳ ಕಷ್ಟದಿಂದ ಅಡಿಯಿಡುತ್ತ, ತನ್ನ ಅರಮನೆಗೆ ಹೋದನು. ವಿದುರನೂ, ಸಂಜಯನೂ, ಮಹಾಧನುರ್ಧಾರಿಯಾದ ಕೃಪನೂ ಅವನನ್ನು ಹಿಂಬಾಲಿಸಿದರು. ರಾಜನು ಮನೆಗೆ ಹೋಗಿ, ಅಲ್ಲಿ ಪ್ರಾತಃಕಾಲದ ಆಹ್ನಿಕಗಳನ್ನು ತೀರಿಸಿಕೊಂಡು, ನಿತ್ಯದಾನಾದಿಗಳಿಂದ ಬ್ರಾಹ್ಮಣೋತ್ತಮರನ್ನು ತೃಪ್ತಿಗೊಳಿಸಿದಮೇಲೆ ತಾನು ಭೋಜನಮಾಡಿದನು. ಆಮೇಲೆ ಗಾಂಧಾರಿಯು ಸೊಸೆಯರಿಂದ ಉಪಚರಿಸಲ್ಪಡುತ್ತ ಕುಂತಿಯೊಡನೆ ಕುಳಿತು ಭೋಜನಮಾಡಿದಳು. ಹಾಗೆಯೇ ವಿದುರಾದಿಗಳೂ, ಪಾಂಡವರೂ ಭೋಜನಮಾಡಿ ಬಂದು, ಧೃತರಾಷ್ಟ್ರನ ಸಮೀಪದಲ್ಲಿ ಕುಳಿತರು. ಆಗ ಧೃತರಾಷ್ಟ್ರನು ಸಮೀಪದಲ್ಲಿ ಕುಳಿತಿದ್ದ ಯುಧಿಷ್ಠಿರನ ಬೆನ್ನನ್ನು ಸವರಿ, 'ಓ ಕುರುನಂದನಾ! ಧರ್ಮವನ್ನೇ ಮುಂದಿಟ್ಟುಕೊಂಡು ನಡೆಸಬೇಕಾದ, ಮತ್ತು ಅಷ್ಟಾಂಗಗಳುಳ್ಳ ರಾಜ್ಯಭಾರವಿಷಯದಲ್ಲಿ ನೀನು ಬಹಳ ಎಚ್ಚರಗೊಂಡಿರಬೇಕು. ಯಾವ ವಿಧದಿಂದಲೂ ಎಚ್ಚರತಪ್ಪದೆ ಧರ್ಮದಿಂದಲೇ ರಕ್ಷಿಸಬೇಕು. ನೀನು ವಿದ್ವಾಂಸನಾದುದರಿಂದ ಅದೆಲ್ಲ ನಿನಗೂ ತಿಳಿದುದೇ! ನೀನು ಯಾವಾಗಲೂ ಪ್ರಾಜ್ಞರಾದ ಹಿರಿಯರನ್ನು ಉಪಾಸಿಸಬೇಕು. ಅವರು ಹೇಳುವುದನ್ನು ಸ್ವಲ್ಪವೂ ವಿಚಾರಮಾಡದೆ

ಆದರಂತೆ ಆಚರಿಸಬೇಕು. ಓ ರಾಜಾ! ಬೆಳಗಿನಜಾವದಲ್ಲಿಯೇ ಎದ್ದು ಅವರನ್ನು ವಿಧ್ಯುಕ್ತರೀತಿಯಲ್ಲಿ ಪೂಜಿಸು. ಆಯಾಕಾರ್ಯವು ಬಂದೊದಗಿದಾಗ ಆ ವಿಷಯವಾಗಿ ಅವರೊಡನೆ ಆಲೋಚಿಸಬೇಕು. ಲೋಕಕ್ಷೇಮಚಿಂತಕನಾದ ನೀನು ಅವರೆಲ್ಲರನ್ನೂ ಪೂಜಿಸಿದರೆ, ಅವರು ಎಲ್ಲಾ ವಿಧದಿಂದಲೂ ನಿನಗೆ ಹಿತವಾದ ಆಲೋಚನೆಗಳನ್ನೇ ಕೊಡುವರು. ನಿನ್ನ ಇಂದ್ರಿಯಗಳೆಲ್ಲವನ್ನೂ ಕುದುರೆಗಳನ್ನು ಹೇಗೋ ಹಾಗೆ ವಶದಲ್ಲಿರಿಸಿ ಕಾಪಾಡುತ್ತಿರು. ಆಗ ಅವು ಸುರಕ್ಷಿತವಾದ ಧನದಂತೆ ಉತ್ತಮಫಲಕಾರಿಗಳೇ ಆಗುವುವು. ಪಿತೃ ಪಿತಾಮಹ ಪಾರಂಪರ್ಯವಾಗಿ ಬಂದವರೂ, ಉಪಧಾಶುದ್ಧರೂ, ಮನೋನಿಗ್ರಹವುಳ್ಳವರೂ, ಆಯಾಕಾರ್ಯಗಳಲ್ಲಿ ಪ್ರಧಾನರೂ ಆದ ಮಂತ್ರಿಗಳನ್ನು ಚೆನ್ನಾಗಿ ಮೊದಲು ಪರೀಕ್ಷಿಸಿ, ಆಮೇಲೆ ಆಯಾ ಮುಖ್ಯಕಾರ್ಯಗಳಲ್ಲಿ ನಿಯಮಿಸು. ರಹಸ್ಯದಲ್ಲಿ ಪರೀಕ್ಷಿಸಿ ನಂಬಿಕೆಗೆ ಪಾತ್ರರಾದ ಹಲವು ಬಗೆಯ ಚಾರರನ್ನು ನಿನ್ನ ದೇಶದಲ್ಲಿಯೂ, ಇತರ ದೇಶಗಳಲ್ಲಿಯೂ ಶತ್ರುಗಳಿಗೆ ತಿಳಿಯದಂತೆ ಸಂಚಾರಕ್ಕಾಗಿ ಕಳುಹಿಸು. ನಿನ್ನ ಪಟ್ಟಣವನ್ನು ನೀನು ಭದ್ರವಾಗಿ ರಕ್ಷಿಸಿಡಬೇಕು. ದೊಡ್ಡ ಪ್ರಾಕಾರಗಳೂ, ಬಾಗಿಲುಗಳೂ, ಅಟ್ಟಗಳೂ, ಅಟ್ಟಲೆಗಳೂ ಉಳ್ಳುದಾಗಿ, ಅಂತಃಪುರವನ್ನು ಬಿಟ್ಟು, ಬೇರೆ ಆರು ದುರ್ಗಸ್ಥಾನಗಳುಳ್ಳ ಪಟ್ಟಣವನ್ನು ಎಚ್ಚರಿಕೆಯಿಂದ ಎಲ್ಲಾ ಕಡೆಯೂ ರಕ್ಷಿಸುತ್ತಿರು. ಆ ಪಟ್ಟಣದ ದೊಡ್ಡ ದ್ವಾರಗಳೆಲ್ಲವೂ ಎಲ್ಲಾ ಕಡೆಗಳಲ್ಲಿಯೂ ಯಂತ್ರಗಳಿಂದ ಸುರಕ್ಷಿತವಾಗಿರಬೇಕು. ಕುಲಶೀಲಗಳನ್ನು ತಿಳಿದು, ಅಂತಹ ಮನುಷ್ಯರಿಂದಲೇ ಎಲ್ಲಾ ಕಾರ್ಯಗಳನ್ನೂ ಮಾಡಿಸಿಕೊಳ್ಳುವನಾಗು. ಆಹಾರ, ವಿಹಾರ, ಭೋಜನಕಾಲಗಳಲ್ಲಿಯೂ, ಹಗಲು ರಾತ್ರಿಗಳಲ್ಲಿಯೂ, ಶಯನಾಸನಗಳಲ್ಲಿಯೂ, ಯಾವಾಗಲೂ ನಿನ್ನನ್ನು ನೀನು ಎಚ್ಚರದಿಂದ ರಕ್ಷಿಸಿಕೊಳ್ಳಬೇಕು. ನಿನ್ನ ಅಂತಃಪುರಸ್ತ್ರೀಯರನ್ನು ಕೂಡ, ವೃದ್ಧರೂ, ಆಪ್ತರೂ, ಒಳ್ಳೇ ನಡತೆಯುಳ್ಳವರೂ, ಒಳ್ಳೇ ಕುಲದಲ್ಲಿ ಹುಟ್ಟಿದವರೂ, ವಿದ್ವಾಂಸರೂ ಆದ ಜನರ ರಕ್ಷಣೆಯಲ್ಲಿರಿಸಬೇಕು. ವಿದ್ಯಾವಿನಯಸಂಪನ್ನರೂ, ಕುಲೀನರೂ, ಧರ್ಮಾರ್ಥವಿಚಾರಸಮರ್ಥರೂ ಆದ ಒಳ್ಳೇ ಬ್ರಾಹ್ಮಣರನ್ನೇ ನೀನು ಮಂತ್ರಿಗಳನ್ನಾಗಿ ನಿಯಮಿಸಿಕೊಂಡು, ಅವರೊಡನೆ ನೀನು ಕಾರ್ಯಗಳನ್ನಾಲೋ

ಚಿಸು. ಆದರೆ, ಒಬ್ಬರೊಡನೆ ಬಹಳವಾಗಿ ಆಲೋಚಿಸುತ್ತಿರಬಾರದು. ಅನೇಕರೊಡನೆ ಒಟ್ಟಿಗೆ ಕಲೆತೂ ಯೋಚಿಸಬಾರದು. ಒಂದು ಮುಖ್ಯ ಕಾರ್ಯವನ್ನು ಮಿತವಾಗಿ ಆಲೋಚಿಸಿಯೇ ಮಾಡಬೇಕು. ಎಲ್ಲರನ್ನೂ ಸೇರಿಸಿ ಒಟ್ಟಾಗಿಯೂ, ಆಮೇಲೆ ಬೇರೆಬೇರೆಯಾಗಿಯೂ ಆಲೋಚನೆಗಳನ್ನು ಕೇಳಬೇಕು. ವ್ಯಾಜಾಂತರದಿಂದ ಮಾತನಾಡಿ, ಅವರವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕು. ಗುಪ್ತವಾದ ಮಂತ್ರಗೃಹದಲ್ಲಿಯಾಗಲಿ, ವಿವಿಕ್ತಸ್ಥಳದಲ್ಲಿಯಾಗಲಿ, ಮಂತ್ರಾಲೋಚನೆಯನ್ನು ನಡೆಸಬೇಕು. ಮರಗಿಡಗಳೂ, ಹುಲ್ಲುಪೊದೆಗಳೂ ಇಲ್ಲದ ಕಾಡಿನ ಬಯಲಿನಲ್ಲಿ ಆಲೋಚಿಸಬಹುದು. ಯಾವಾಗಲೂ ರಾತ್ರಿಯಲ್ಲಿ ಆಲೋಚನೆ ಮಾಡಬಾರದು. ಮಂತ್ರಗೃಹದಲ್ಲಿ ಮನುಷ್ಯರನ್ನು ಅನುಕರಿಸಬಲ್ಲ ಕಪಿಗಳು, ಪಕ್ಷಿಗಳು, ಮಂಕರು, ಕುಂಟರು, ಇವರಾರೂ ಇರಬಾರದು. ಮಂತ್ರಾಲೋಚನೆಗಳು ಬಹಿರಂಗವಾದರೆ, ಅದರಿಂದ ರಾಜರಿಗೆ ಉಂಟಾಗುವ ಹಾನಿಯನ್ನು ಯಾವ ರೀತಿಯಲ್ಲಿಯೂ ತಡೆಯುವುದು ಸಾಧ್ಯವಿಲ್ಲವೆಂಬುದು ನನ್ನ ಅಭಿಪ್ರಾಯವು ಓ ರಾಜಾ! ಮಂತ್ರಾಲೋಚನೆಗಳು ಬಹಿರಂಗವಾಗುವುದರಿಂದ, ಸಂಭವಿಸುವ ಹಾನಿಯನ್ನೂ, ಅದು ರಹಸ್ಯವಾಗಿರುವುದರಿಂದುಂಟಾಗುವ ಉತ್ತಮಗುಣಗಳನ್ನೂ, ಮಂತ್ರಿಗಳ ಕೂಟದಲ್ಲಿ ಆಗಾಗ ಹೇಳಿ ತಿಳಿಸಿ ಎಚ್ಚರಿಸುತ್ತಿರಬೇಕು. ಓ ಯುಧಿಷ್ಠಿರಾ! ನಗರದಲ್ಲಿಯೂ, ಗ್ರಾಮದಲ್ಲಿಯೂ ಇರುವ ಜನಗಳ ನಡತೆಯಲ್ಲಿರುವ ಗುಣಾಗುಣಗಳನ್ನು ತಿಳಿಯುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡು! ನಿನ್ನ ರಾಜ್ಯವ್ಯವಹಾರವನ್ನು ಯಾವಾಗಲೂ ನಿನ್ನ ಆಪ್ತರಿಂದಲೇ ನೋಡಿಸು. ಯಾವಾಗಲೂ ಸಂತೋಷವುಳ್ಳವರೂ, ಆಪ್ತರೂ ಆದ ಚಾರರಿಂದ ಕೆಲಸಮಾಡಿಸಬೇಕು. ನಿನ್ನ ಅಧಿಕಾರಿಗಳು ಅಪರಾಧಿಗಳ ತಪ್ಪಿತವನ್ನೂ, ಅವರಿಗೆ ವಿಧಿಸತಕ್ಕ ದಂಡನೆಯನ್ನೂ ಸರಿಯಾಗಿ ತೂಗಿ, ಇವುಗಳ ಪರಿಮಾಣವನ್ನರಿತು, ದಂಡನಾರ್ಹರಿಗೆ ತಕ್ಕ ದಂಡನೆಯನ್ನೇ ವಿಧಿಸಬೇಕು. ಲಂಚಕೋರರು, ಪರಸ್ತ್ರೀಸ್ಪರ್ಶಮಾಡಿದವರು, ಕ್ರೂರದಂಡನೆಯನ್ನು ಮಾಡಿದವರು, ಸುಳ್ಳುನ್ಯಾಯಗಳನ್ನು ಹೇಳುವವರು, ಮುಂಗೋಪಿಗಳು, ಅತ್ಯಾಶೆಯುಳ್ಳವರು, ಚೋರರು, ಸಾಹಸಕೃತ್ಯಮಾಡತಕ್ಕವರು, ವಿತಂಡವಾದಿ

ಗಳು, ಸಂತೋಷಕೂಟಗಳನ್ನು ಕದಲಿಸಿದವರು, ವರ್ಣಸಂಕರಮಾಡು ವವರು, ಇವರಿಗೆಲ್ಲ ಆಯಾ ದೇಶಕಾಲಗಳನ್ನನುಸರಿಸಿ, ದ್ರವ್ಯದಂಡ ವನ್ನೋ, ಕೊಲೆಯ ಶಿಕ್ಷೆಯನ್ನೋ ವಿಧಿಸಬಹುದು. ಅಂತಃಪುರಸಮಾಪ ಪ್ರದೇಶದಲ್ಲಿ ನೀನು ಸೇವಕರೊಡನೆ ಸೇರಿ ಮಧುಪಾನಮಾಡಬಾರದು. ಅವರು ಮತ್ತೇರಿ ಬಾಯಿಗೆ ಬಂದಂತೆ ಬೈದಾಡಬಹುದು. ರಾಜಪತ್ನಿಯರ ನ್ನೂ ಸೆಳೆಯಬಹುದು. ಮರೆಯಲ್ಲಿದ್ದು ಆಯುಧಗಳಿಂದ ಕೊಲ್ಲಬಹುದು. ಅಲ್ಲದೆ ಮದಿಸಿ ಕುಣಿದಾಡುವರು ನಿಂದನೆಗಳನ್ನು ಮಾಡುವರು. ಯುಕ್ತಾಯುಕ್ತ ವಿವೇಚನೆಯಿಲ್ಲದೆ ಹೋಗುವರು. ರಾಜನು ಅಧಿಕಪಾ ನಾಸಕ್ತನಾದರೆ ಅವನ ಭಂಡಾರವೆಲ್ಲ ಬರಿದಾಗುವುದು. ಸ್ತುತಿಪಾಠಕರಿಗೆ ವ್ಯರ್ಥವಾಗಿ ಧನರಾಶಿಯನ್ನು ಕೊಡುವನು. ನಿಂದೆಗೂ, ದೋಷಕ್ಕೂ ಪಾತ್ರನಾಗುವನು. ಆದುದರಿಂದ ವೀರ್ಯವೃದ್ಧಿಗಾಗಿ ತನ್ನ ಪತ್ನಿಯೊ ಡನೆ ರಹಸ್ಯದಲ್ಲಿ ಮಿತವಾಗಿ ಪಾನಮಾಡಬಹುದು. ಅದುಕೂಡ ಕೆಲವು ಸೂಚನೆಗಳಿಂದ ಹೊರಕ್ಕೆ ಪ್ರಕಟವಾಗಬಹುದು. ನಿನಗೆ ಪ್ರಿಯವಾದ ಕಾರ್ಯಗಳನ್ನು ಮಾಡುವವರನ್ನು ಪ್ರತಿದಿನದ ಪ್ರಾತಃಕಾಲದಲ್ಲಿಯೇ ನೋಡಿ ಮಾತನಾಡಿಸು! ಆಮೇಲೆ ದೇಹಾಲಂಕಾರಮಾಡಿಕೊಂಡು ಆಹಾರಸೇವನೆ ಮಾಡು. ಯಾವಾಗಲೂ ಯುದ್ಧವೀರರನ್ನು ಸಂತೋಷ ದಿಂದ ರಕ್ಷಿಸುತ್ತಿರಬೇಕು. ದೂತರನ್ನೂ, ಚಾರರನ್ನೂ ಸಾಯಂಕಾಲದಲ್ಲಿ ನೋಡಬೇಕು. ಹಿಂದಿನದಿನ ರಾತ್ರಿಯೇ ಮರುದಿನದ ಕಾರ್ಯಗಳ ವಿಷ ಯವನ್ನು ನಿಶ್ಚಯಿಸಬೇಕು ಯಾವಾಗಲೂ ಮಧ್ಯರಾತ್ರಿಯಲ್ಲಿಯೂ, ಮಧ್ಯಾಹ್ನಕಾಲದಲ್ಲಿಯೂ ನಿನ್ನ ವಿಹಾರಗಳನ್ನೆಲ್ಲ ಮುಗಿಸಬೇಕು. ರಾಜ ಕಾರ್ಯಕ್ಕೆ ಕಾಲನಿಯಮವೆಂಬುದಿಲ್ಲ. ಎಲ್ಲಾ ಕಾಲವೂ ಯೋಗ್ಯವೇ. ಆದುದರಿಂದ ನೀನು ತಕ್ಕ ಕಾಲದಲ್ಲಿ ಅಲಂಕಾರಮಾಡಿಕೊಂಡು ದೊಡ್ಡ ದಕ್ಷಿಣೆಗಳನ್ನು ಕೊಡುವುದಕ್ಕೆ ಸಿದ್ಧನಾಗಿ ನಿಲ್ಲಬೇಕು. ಆಭರಣಗಳನ್ನು ಕಳಚಿಡಬಾರದು. ಬೇಡವೆಂದೂ ಹೇಳಬಾರದು. ಮಂಗಳಕರವೂ, ನಿರ್ದು ಷ್ಟವೂ ಆದ ಅಲಂಕಾರವಸ್ತುವನ್ನುಪಯೋಗಿಸಬೇಕು. ರಾಜಕಾರ್ಯ ಗಳು ಯಾವಾಗಲೂ ಚಕ್ರದಂತೆ ಹೊರಳುತ್ತಲೇ ಇರುವುವು. ನ್ಯಾಯ ರೀತಿಯಲ್ಲಿ ಬೊಕ್ಕಸವನ್ನು ಸೇರಿಸಲು ಪ್ರಯತ್ನಿಸು. ವಿಪರೀತವಾದ ಕಾರ್ಯ

ಗಳನ್ನು ಬಿಟ್ಟುಬಿಡು ಅರಸರಿಗೆ ಕೇಡುಮಾಡಲು ಸಮಯನಿರೀಕ್ಷಣೆಯ ಲ್ಲಿರುವ ಶತ್ರುಗಳಾರೆಂಬುದನ್ನು ಚಾರರಿಂದ ಅರಿತು, ಅಂತವರನ್ನು ಆಪ್ತ ಮನುಷ್ಯರಿಂದ ದೂರದಲ್ಲಿದ್ದಾಗಲೇ ಕೊಲ್ಲಿಸು. ನೀನು ಮೊದಲು ಸೇವ ಕರ ಗುಣಗಳನ್ನು ಪರಿಶೀಲಿಸಿ, ಆಮೇಲೆ ವಿಶ್ವಾಸಾರ್ಹರನ್ನು ನಿಯಮಿಸು. ಕಾರ್ಯಾಕಾರ್ಯಗಳನ್ನರಿತ ಸೇವಕರಿಂದ ಕಾರ್ಯಗಳನ್ನು ಮಾಡಿಸು ದೃಢ ವ್ರತನೂ, ಶೂರನೂ, ಕಷ್ಟಸಹಿಷ್ಣುವೂ, ಒಳ್ಳೇ ಗುಣವುಳ್ಳವನೂ, ಬುದ್ಧಿ ಶಾಲಿಯೂ ಆದ ಮನುಷ್ಯನು ನಿನ್ನ ಸೇನಾನಾಯಕನಾಗಿರಲಿ! ಓ ರಾಜಾ! ದೇಶದಲ್ಲಿರುವ ಸೇವಕರೆಲ್ಲರೂ ವೃಷಭಗಳಂತೆಯೂ, ಕತ್ತಿಗಳಂತೆ ಯೂ ಪೋಷಿಸಲ್ಪಟ್ಟಾಗಲೇ ನಿನ್ನ ಕಾರ್ಯಗಳನ್ನು ರಕ್ಷಿಸುವರು. ನೀನು ಯಾವಾಗಲೂ ನಿನಗೆ ಸೇರಿದವರಲ್ಲಿಯೂ, ಇತರರಲ್ಲಿಯೂ ಕಾಣುವ ರಂಧ್ರ ಗಳನ್ನೆಲ್ಲ ನೋಡಿಕೊಂಡಿರಬೇಕು ಸ್ವಕಾರ್ಯಗಳಲ್ಲಿ ಶೂರರೂ, ಹಿತೈಷಿ ಗಳೂ ಆದ ದೇಶದ ಜನರನ್ನು ನೀನು ತಕ್ಕ ರೀತಿಯಲ್ಲಿ ಆದರಿಸುತ್ತಿರ ಬೇಕು. ಪ್ರಾಜ್ಞನು ಹಿತವನ್ನು ಕೋರುವವರಿಗೆ ಹಿತವನ್ನೇ ಮಾಡಬೇಕು. ಅವರು ಯಾವಾಗಲೂ ಬೆಟ್ಟಗಳಂತೆ ನಿಶ್ಚಲರಾಗಿರುವರು' ಎಂದನು.

ಇದು ಆರನೆಯ ಅಧ್ಯಾಯವು.

### ಧೃತರಾಷ್ಟ್ರನು ಧರ್ಮರಾಜನಿಗೆ ರಾಜನೀತಿಗಳನ್ನು ಪದೇಶಿಸಿದುದು.

ಸ್ವಪಕ್ಷದವರು, ಶತ್ರುಗಳು, ಉದಾಸೀನರು, ಇವರೆಲ್ಲರ ಮಂಡಲ ಗಳನ್ನೂ ತಿಳಿದುಕೊಳ್ಳುತ್ತಿರು. ಶತ್ರುಗಳು, ಶತ್ರುಮಿತ್ರರು, ಉಭಯ ಪಕ್ಷಕ್ಕೂ ಜಯವನ್ನು ಕೋರತಕ್ಕವರು, ಉಭಯಪಕ್ಷಕ್ಕೆ ಹಾನಿಯನ್ನು ಕೋರುವವರು, ಈ ನಾಲ್ಕುಬಗೆಯ ಶತ್ರುಪಕ್ಷದವರನ್ನೂ (ಆರು ಬಗೆಯ) ಆತತಾಯಿಗಳನ್ನೂ, ಮಿತ್ರರನ್ನೂ, ಶತ್ರುಮಿತ್ರರನ್ನೂ ತಿಳಿದುಕೊಳ್ಳು ತ್ತಿರಬೇಕು. ಅಲ್ಲದೆ ನಿನ್ನ ನಾನಾದೇಶಗಳೂ, ಬಗೆಬಗೆಯ ದುರ್ಗಗಳೂ, ಸೈನ್ಯಗಳೂ ಶತ್ರುಗಳಿಂದ ಕೆಡಿಸಲ್ಪಡದಂತೆ ನೋಡಿಕೊಳ್ಳಬೇಕು. ಮೇಲೆ ಹೇಳಿದ ಹನ್ನೆರಡುಬಗೆಯ ರಾಜರೂ ನಾನಾರೂಪವುಳ್ಳವರಾಗಿರುವರು.

ಮಂತ್ರಿ ಮೊದಲಾದ ಅರುವತ್ತು ಅಂಗಗಳೂ, ಮೇಲೆಹೇಳಿದ ಹನ್ನೆರಡು ಬಗೆಯ ರಾಜರೂ ಸೇರಿ ಈ ಎಪ್ಪತ್ತೆರಡಕ್ಕೂ ನೀತಿಶಾಸ್ತ್ರಜ್ಞರು ಮಂಡಲ ವೆಂದು ಹೇಳುವರು. ಸಂಧಿ, ವಿಗ್ರಹ ಮೊದಲಾದ ಆರುಗುಣಗಳೂ ಇವು ಗಳನ್ನನುಸರಿಸಿರುವುದರಿಂದ ಅದನ್ನೆಲ್ಲ ತಿಳಿದಿರಬೇಕು. ಕ್ಷಯ, ಸ್ಥಾನ, ವೃದ್ಧಿಗಳೆಂಬ ತ್ರಿವರ್ಗವನ್ನೂ ತಿಳಿದಿರಬೇಕು. ಈ ತ್ರಿವರ್ಗವೂಕೂಡ ಮಂಡಲವೆನಿಸಿದ ಆ ಎಪ್ಪತ್ತೆರಡಕ್ಕೂ ಸಂಬಂಧಪಟ್ಟಿರುವುದು. ಇವುಗಳ ಮೇಲೆಯೇ ಆರುಗುಣಗಳೂ ಹೊಂದಿರುವುವು. ಯಾವಾಗ ತನ್ನ ಪಕ್ಷವು ಬಲವಾಗಿಯೂ, ಶತ್ರುಪಕ್ಷವು ಬಲಹೀನವಾಗಿಯೂ ಇರುವುದೋ, ಆಗಲೇ ರಾಜನು ಶತ್ರುಗಳನ್ನಿದಿರಿಸಿ ಯುದ್ಧಕ್ಕೆ ಹೊರಡಬೇಕು. ಯಾವಾಗ ಶತ್ರು ಗಳು ಬಲಿಷ್ಠರೂ, ತನ್ನಕಡೆಯವರು ಬಲಹೀನರೂ ಆಗಿರುವರೋ, ಆ ಸಮಯವನ್ನು ತಿಳಿದು ಶತ್ರುಗಳೊಡನೆ ಸಂಧಿಮಾಡಿಕೊಳ್ಳಬೇಕು. ಯಾ ವಾಗಲೂ ದ್ರವ್ಯವನ್ನು ಹೆಚ್ಚಾಗಿ ಸೇರಿಸಿಡಬೇಕು. ಯಾವಾಗ ಯುದ್ಧ ಕ್ಕೆ ಹೊರಡಲು ಶಕ್ತನಾಗಿರುವನೋ ಆಗಲೇ ಶೀಘ್ರವಾಗಿ ಹೊರಟುಬಿಡ ಬೇಕು. ಅದರಿಂದ ತಾನು ನೆಮ್ಮದಿಯಾಗಿರುವ ಸ್ಥಿತಿಯಲ್ಲಿಯೇ ಎಲ್ಲವನ್ನೂ ಸಿದ್ಧಪಡಿಸಿಟ್ಟುಕೊಳ್ಳಬೇಕು ತಾನೂ, ಶತ್ರುವೂ ಸಮಸ್ಥಿತಿಯಲ್ಲಿದ್ದಾಗ ಯುದ್ಧದ ವಿಷಯವಾಗಿ ಆಲೋಚಿಸಬಹುದು. ಶತ್ರುವಿಗೆ ಅಲ್ಪಫಲವುಳ್ಳ ಭೂಮಿಯನ್ನೇ ಕೊಡಬೇಕು. ಸಂಧಿಕಾರ್ಯದಲ್ಲಿ ಚತುರನಾದವನು ಚಿನ್ನ ಬೆಳ್ಳಿಯ ನಾಣ್ಯಗಳಿಂದ ತುಂಬಿದ ರಾಜರನ್ನು ಮಿತ್ರರನ್ನಾಗಿ ಮಾಡಿ ಕೊಳ್ಳಬೇಕು. ಅದಕ್ಕೆ ವಿರುದ್ಧವಾಗಿ ಧನಬಲವಿಲ್ಲದೆ ಕ್ಷೀಣದಶೆಯಲ್ಲಿದ್ದವ ರನ್ನು ಅಡಗಿಸಿಡಬೇಕು. ಧನಬಲವುಳ್ಳ ಶತ್ರುಮಿತ್ರರ ಬೊಕ್ಕಸವನ್ನು ಬರಿದುಮಾಡಿ ಅವರನ್ನು ಕ್ಷೀಣಗತಿಗೆ ತರಬೇಕು. ಸಂಧಿಗಾಗಿ ಬಂದ (ಶತ್ರು) ರಾಜನ ಮಗನನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕು. ಸಂಧಿಯು ಮುರಿದು ಏನಾದರೂ ಆಪತ್ತು ಸಂಭವಿಸಿದಾಗ ಅವನನ್ನು ಬಿಡದಿರಬ ಹುದು ಹಾಗೆ ಮಾಡದಿದ್ದರೆ ಶ್ರೇಯಸ್ಕರವಲ್ಲ. ಉಪಾಯಜ್ಞನಾದ ನೀನು ಅಂತಹ ಆಪತ್ತಿನಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಬೇಕು. ಅರ ಸನು ತನ್ನ ಪ್ರಜೆಗಳಲ್ಲಿ ದೀನರನ್ನು ಆದರಿಸಬೇಕು. ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಬೇಕಾದರೆ ಕಾಲಕ್ರಮದಿಂದಾಗಲಿ, ಅಕಸ್ಮಾತ್ತಾಗಿಯಾಗಲಿ

ಶತ್ರುವ್ಯಸನಗಳ ಬಲಾಬಲಗಳನ್ನರಿತು ಶತ್ರುಗಳಿಗೆ ದುಃಖವನ್ನೋ, ಭಂಗವನ್ನೋ, ಅವರ ದ್ರವ್ಯನಾಶವನ್ನೋ ಮಾಡಬೇಕು. ಕ್ಷೇಮವನ್ನು ಬಯಸುವವನು ತನ್ನ ಬಳಿಗೆ ಬಂದ ಸಾಮಂತರಾಜರನ್ನು ದುಃಖಗೊಳಿಸಬಾರದು. ಭೂಮಿಯನ್ನು ಜಯಿಸಲಪೇಕ್ಷೆಯುಳ್ಳ ನಿನಗೆ ಮೇಲ್ಮೆಯುಂಟಾಗಬೇಕಾದರೆ, ಮಂತ್ರಿಗಳೊಡನೆ ಕಲೆತು ಅವರ ಗುಣಗಳನ್ನು ಕಂಡುಕೊಳ್ಳುವುದರಲ್ಲಿ (ತಿದ್ದುವುದರಲ್ಲಿ) ಉಪಾಯವನ್ನು ಆಲೋಚಿಸು. ಸಾಧುಗಳನ್ನು ಸಂಗ್ರಹಿಸುವುದು, ದುಷ್ಟರನ್ನಡಗಿಸುವುದು, ಗೃಹದ ಆಡಳಿತಗಳೆಲ್ಲವನ್ನೂ ತನ್ನ ವಿಚಾರಣೆಯಲ್ಲಿಟ್ಟುಕೊಳ್ಳುವುದು, ಈ ಮೂರು ಕಾರ್ಯಗಳನ್ನೂ ಮಾಡಬೇಕು. ಬಲಹೀನರನ್ನು ಅನುವರ್ತಿಸಬಾರದು. ಒಂದುವೇಳೆ ಬಲಿಷ್ಠನಾದ ರಾಜನು ದುರ್ಬಲನಾದ ನಿನ್ನನ್ನು ಇದಿರಿಸಿಬಂದರೆ, ಆಗ ನೀನು ನೀರಂಜಿಯ ಮರದಂತೆ (ವೈತಸವೃತ್ತಿಯಿಂದ) ನಡೆಯಬೇಕು. ಅಂತಹರನ್ನು ಕ್ರಮವಾಗಿ ಸಾಮಾದ್ಯುಪಾಯಗಳಿಂದ ಹಿಂತಿರುಗಿಸಿಬಿಡಬೇಕು. ಅದು ಸಾಧ್ಯವಾಗದಿದ್ದರೆಮಾತ್ರ ಮಂತ್ರಿಗಳೊಡನೆ ಸೇರಿ ಯುದ್ಧಕ್ಕೆ ಹೋಗಬಹುದು. ಬೊಕ್ಕಸದ ಮತ್ತು ತನಗೆ ಪ್ರಿಯರಾದ ಪುರವಾಸಿಗಳ ಬಲದಿಂದ ಯುದ್ಧಸನ್ನದ್ಧನಾಗಿ ಶತ್ರುಗಳನ್ನು ಅಟ್ಟಬೇಕು. ಮೇಲೆ ಹೇಳಿದ ಉಪಾಯಗಳೊಂದೂ ಸಾಗದಿದ್ದಾಗಮಾತ್ರ ತಾನೇ ತನ್ನ ಶರೀರದೊಡನೆ ಇದಿರುನಿಲ್ಲಬೇಕು. ಅದರಿಂದ ಮೋಕ್ಷವುಂಟು. ಈ ಶರೀರವೆಂಬುದು ನಿರರ್ಥಕವಾದುದು' ಎಂದನು.

ಇದು ಏಳನೆಯ ಅಧ್ಯಾಯವು.

## ಧೃತರಾಷ್ಟ್ರನ ಉಪದೇಶಗಳು.

'ಓ ಯುಧಿಷ್ಠಿರಾ! ಸಂಧಿವಿಗ್ರಹಗಳಿಗೆ (ಬಲಿಷ್ಠ ದುರ್ಬಲರೆಂಬ) ಮುಖ್ಯಕಾರಣಗಳೆರಡು. ಅದಕ್ಕೆ ಬೇಕಾದ ಉಪಾಯಗಳೂ, ಅವುಗಳ ರೀತಿಯೂ ಹಲವು ವಿಧವಾಗಿವೆ. ಅವೆಲ್ಲವನ್ನೂ ನೀನು ತಿಳಿದಿರಬೇಕು. ನೀನು ಸ್ಥಿರವಾಗಿದ್ದುಕೊಂಡು, ನಿನ್ನ ಬಲಾಬಲಗಳನ್ನು ತಿಳಿದು ಶತ್ರುಗಳಲ್ಲಿ ಪ್ರವರ್ತಿಸು. ತುಷ್ಟ ಪುಷ್ಟ ಪ್ರಜೆಗಳುಳ್ಳ ಶತ್ರುರಾಜ್ಯವನ್ನು

ಬಲಿಷ್ಠರಾಜ್ಯವೆಂದು ತಿಳಿ. ಅಂತವರನ್ನಿದಿರಿಸಬಾರದು. ಹಾಗಿಲ್ಲದ ಶತ್ರುವನ್ನೇ ಇದಿರಿಸಿಹೋಗಬೇಕೆಂದು ವಿಧಿಸಲ್ಪಟ್ಟಿರುವುದು. ಶತ್ರುವು ದುಃಖಕ್ಕೊಳಗಾದ ಕಾಲದಲ್ಲಿ ಯುದ್ಧಕ್ಕೆ ಪ್ರಯತ್ನಿಸುವುದು ಉತ್ತಮವು. ಶತ್ರುಗಳಲ್ಲಿ ವ್ಯಸನವನ್ನೂ, ಭೇದೋಪಾಯಗಳನ್ನೂ, ಅವರಿಗೆ ಕಷ್ಟವನ್ನೂ, ಭಯವನ್ನೂ, ಯುದ್ಧದಲ್ಲಿ ಹಲವು ಬಗೆಯ ಕೆಡುಕುಗಳನ್ನೂ ಮಾಡಲು ಅದೇ ಅನುಕೂಲಕಾಲವು. ಯುದ್ಧಕ್ಕೆ ಹೊರಡುವಾಗ ಶಾಸ್ತ್ರನಿಪುಣನಾದ ಅರಸನು, ತನ್ನ ಮತ್ತು ತನ್ನ ಶತ್ರುಗಳ ಉತ್ಸಾಹಶಕ್ತಿ, ಪ್ರಭುಶಕ್ತಿ, ಮಂತ್ರಶಕ್ತಿ, ಎಂಬೀ ಶಕ್ತಿತ್ರಯವನ್ನೂ ತಿಳಿದು ಆಮೇಲೆ ಹೊರಡಬೇಕು. ಹಾಗಿಲ್ಲದಿದ್ದರೆ ಯುದ್ಧವನ್ನೇ ತ್ಯಜಿಸಬೇಕು. ರಾಜನು ಮೂಲಬಲ, ಭೃತ್ಯಬಲ, ಮಿತ್ರಬಲ, ಶ್ರೇಣಿಬಲ, ಶತ್ರುವಿರೋಧಿಗಳ ಬಲ, ಆಟವಿಕಬಲವೆಂಬ, ಆರು ಬಗೆಯ ಸೈನ್ಯವನ್ನೂ ಸೇರಿಸಿಕೊಳ್ಳಬೇಕು. ಅವುಗಳಲ್ಲಿ ಮಿತ್ರಬಲ, ಮೂಲಬಲಗಳೆರಡೂ ಮೇಲೆನಿಸಿವೆ. ಶ್ರೇಣೀಬಲ, ಭೃತ್ಯಬಲಗಳೆರಡೂ ಸಮಾನಗಳು. ಯುದ್ಧಸಮಯವು ಬಂದು ಸೈನ್ಯವನ್ನು ಲೆಕ್ಕಿಸುವಾಗ, ಚಾರರನ್ನೂ ಸೈನ್ಯಕ್ಕೆ ಸಮಾನವೆಂದು ತಿಳಿಯಬೇಕು. ರಾಜನು (ತನಗೆ) ಸಂಭವಿಸಬಹುದಾದ ವಿಪತ್ತುಗಳು ಬೇರೆಬೇರೆ ಅನೇಕ ರೂಪಗಳೆಂಬುದನ್ನು ತಿಳಿದಿರಬೇಕು. ಆದುದರಿಂದ ಹೇಳುವೆನು ಕೇಳು. ಆಪತ್ತುಗಳಲ್ಲಿ ಹಲವು ಬಗೆಯುಂಟು. ರಾಜನು ಯಾವಾಗಲೂ ಅವುಗಳನ್ನು ಸಾಮಾದ್ಯುಪಾಯಗಳಿಂದ ತೊಲಗಿಸಬೇಕು. ರಾಜನು ಷಡ್ವಿಧಬಲಗಳೊಡನೆ, ದೇಶಕಾಲಗಳನ್ನನುಸರಿಸಿ, ಯುದ್ಧಯಾತ್ರೆಗೆ ಹೊರಡಬೇಕು. ಸೈನ್ಯವು ತನಗೆ ಸಮಾನಗುಣವುಳ್ಳುದಾಗಿರಬೇಕು. ತನಗೆ ಮೇಲ್ಮೆಯನ್ನು ಬಯಸುವ ರಾಜನು, ತುಷ್ಟಿಯಿಂದಲೂ, ಪುಷ್ಟಿಯಿಂದಲೂ ಕೂಡಿದ ಸೈನ್ಯದೊಡನೆ ಯುದ್ಧಕ್ಕೆ ಹೊರಡಬೇಕು. ಪ್ರಬಲಸ್ಥಿತಿಯಲ್ಲಿರುವವನು ಎಂತಹ ಋತುವಿನಲ್ಲಾದರೂ ಹೊರಡಬಹುದು. ಬತ್ತಳಿಕೆಗಳೆಂಬ ಕಲ್ಲುಬಂಡೆಗಳಿಂದಲೂ, ರಥ ರಥಾಶ್ವಗಳೆಂಬ ಪ್ರವಾಹದಿಂದಲೂ, ಧ್ವಜಗಳೆಂಬ ತೀರವೃಕ್ಷಗಳಿಂದಲೂ, ಆನೆ ಮತ್ತು ಕಾಲಾಳುಗಳೆಂಬ ಕೆಸರಿನಿಂದಲೂ ಕೂಡಿದ ಸೇನಾನದಿಯನ್ನು ರಾಜನು ಶತ್ರುರಾಜನ ನಾಶಕ್ಕಾಗಿ ಏರ್ಪಡಿಸಬೇಕು ಮತ್ತು ಶುಕ್ರನೀತಿಯಲ್ಲಿ ಹೇಳಿರುವಂತೆ, ಶಕಟ, ಪದ್ಮ,

ವಜ್ರಾದಿ ಸೇನಾವ್ಯೂಹಗಳನ್ನು ತನ್ನ ಶಕ್ತ್ಯನುಸಾರವಾಗಿ ರಚಿಸಿ, ಶತ್ರು ಬಲವನ್ನು ತನ್ನ ಕಡೆಗೆ ಬರಮಾಡಿಕೊಳ್ಳುವಂತೆ ತನ್ನ ಸೈನ್ಯವನ್ನು ತೋರಿಸಿ ತನ್ನ ಭೂಮಿಯಲ್ಲಿಯೇ ಯುದ್ಧವನ್ನಾರಂಭಿಸಬೇಕು. ಶತ್ರುರಾಜ್ಯದಲ್ಲಿಯೂ ಯುದ್ಧಮಾಡಬೇಕಾಗುವುದು. ರಾಜನು ಸೈನ್ಯಕ್ಕೆ ಒಳ್ಳೇ ಮಾತನ್ನೇ ಆಡಬೇಕು. ಬಲಶಾಲಿಗಳಾದ ಮನುಷ್ಯರನ್ನೇ ಅದರಲ್ಲಿ ಸೇರಿಸಿಕೊಳ್ಳಬೇಕು ಸ್ವವಿಷಯವನ್ನು ಮೊದಲು ನಿಶ್ಚಯಿಸಿಕೊಂಡು, ಸಾಮಾದ್ಯುಪಾಯಗಳಿಂದ ಕಾರ್ಯವನ್ನು ಪ್ರಾರಂಭಿಸಬೇಕು. ಸರ್ವವಿಧದಿಂದಲೂ ಈ ಲೋಕದಲ್ಲಿ ತನ್ನ ಶರೀರವನ್ನು ರಕ್ಷಿಸಿಕೊಳ್ಳುತಿದ್ದು, ಆ ಜೀವಿತಕಾಲದಲ್ಲಿಯೇ, ತನ್ನ ಇಹಪರಗಳೆರಡಕ್ಕೂ ಕ್ಷೇಮಕರವಾದ ಮಾರ್ಗವನ್ನು ಸಾಧಿಸಿಡಬೇಕು. ಪ್ರಜೆಗಳನ್ನು ಧರ್ಮರೀತಿಯಿಂದ ಪರಿಪಾಲಿಸುತ್ತ, ಹೀಗೆ ನಡೆಯುವ ರಾಜನು ಇಹದಲ್ಲಿ ಒಳ್ಳೇ ಕೀರ್ತಿಯನ್ನು ಪಡೆದು, ಗತಿಸಿದ ಮೇಲೆಯೂ ಸ್ವರ್ಗಸ್ಥನಾಗುವನು. ಇಹಪರಗಳೆರಡರ ಸಾಧನೆಗಾಗಿ ನೀನು ಯಾವಾಗಲೂ ಪ್ರಜೆಗಳಲ್ಲಿ ಹೀಗೆಯೇ ಇರಬೇಕು. ಭೀಷ್ಮನೂ, ಕೃಷ್ಣನೂ, ವಿದುರನೂ ನಿನಗೆ ಮೊದಲೇ ಇವೆಲ್ಲವನ್ನೂ ತಿಳಿಸಿರುವರು ಆದರೂ ಈಗ ನಾನೂ ನಿನ್ನಲ್ಲಿರುವ ಪ್ರೀತಿಯಿಂದ ತಿಳಿಸಬೇಕಾದುದು ಅವಶ್ಯವೆಂದು ತಿಳಿಸಿದೆನು. ನೀನು ಇವೆಲ್ಲವನ್ನೂ ನೀತಿಮಾರ್ಗದಿಂದ ಆಚರಿಸು. ಆದರಿಂದ ನೀನು ಪ್ರಜಾಪ್ರಿಯನಾಗಿ, ಸ್ವರ್ಗದಲ್ಲಿ ಸುಖವನ್ನು ಪಡೆಯುವೆ. ಸಾವಿರ ಅಶ್ವಮೇಧಯಾಗಗಳನ್ನು ಮಾಡುವ ಅರಸನೂ, ಪ್ರಜೆಗಳನ್ನು ಧರ್ಮರೀತಿಯಿಂದ ಪರಿಪಾಲಿಸುವ ರಾಜನೂ ಸಮಾನಫಲವನ್ನು ಪಡೆಯುವರು ' ಎಂದನು.

ಇದು ಎಂಟನೆಯ ಅಧ್ಯಾಯವು.

{ ಧೃತರಾಷ್ಟ್ರನು ನಗರ ಜನರನ್ನು ಕರೆಸಿ, ಅರಣ್ಯಕ್ಕೆ ಹೊರಡಲು ಅನುಮತಿಯನ್ನು ಕೇಳಿದುದು. }

ಆಮೇಲೆ ಯುಧಿಷ್ಠಿರನು ' ಓ ರಾಜೋತ್ತಮಾ! ನೀನು ಹೇಳಿದಂತೆಯೇ ಎಲ್ಲವನ್ನೂ ಮಾಡುವೆನು. ಇನ್ನೂ ನನಗೆ ಹೇಳಬೇಕಾದ ಬುದ್ಧಿ

ವಾದಗಳೇನಿದ್ದರೂ ನೀನೇ ತಿಳಿಸು. ಭೀಷ್ಮನೂ ಸ್ವರ್ಗಸ್ಥನಾಗಿ, ವಾಸು ದೇವನೂ, ವಿದುರನೂ, ಸಂಜಯನೂ ಸ್ಥಳಾಂತರಕ್ಕೆ ಹೋದಾಗ, ನನಗೆ ತತ್ವಗಳನ್ನು ತಿಳಿಸುವವರು ನೀನಲ್ಲದೆ ಬೇರೆ ಯಾರಿರುವರು? ನನಗೆ ಹಿತಚಿಂತಕನಾದ ನೀನು ಈಗ ನನಗೆ ಹೇಗೆ ಉಪದೇಶಿಸಿದೆಯೋ, ಅದ ರಂತೆಯೇ ನಡೆಯುವೆನು. ನೀನು ಚಿಂತಿಸಬೇಡ' ಎಂದನು. ಆಗ ಧೃತ ರಾಷ್ಟ್ರನು ಕುಂತೀಪುತ್ರನಿಂದ ಅನುಮತಿಯನ್ನು ಪಡೆಯಲಪೇಕ್ಷಿಸಿ, "ಕುಮಾರಾ! ಇನ್ನು ಈ ಸಂಭಾಷಣವು ಸಾಕು. ನನಗೂ ಮಾತಾಡಿ ಶ್ರಮವು ಅಧಿಕವಾಗಿರುವುದು" ಎಂದು ಹೇಳಿ, ಗಾಂಧಾರಿಯ ಮನೆಗೆ ಹೊರಟನು. ಧರ್ಮಾನುಷ್ಠಾನಪರಳೂ, ಕಾಲಜ್ಞಳೂ ಆದ ಗಾಂಧಾರಿ ಯು, ಬ್ರಹ್ಮಸಮಾನನಾಗಿ ಆಸನದಲ್ಲಿ ಕುಳಿತಿದ್ದ ತನ್ನ ಪತಿಯನ್ನು ನೋಡಿ, 'ನಾಥಾ! ವ್ಯಾಸಮುನಿಯೇ ಪ್ರತ್ಯಕ್ಷವಾಗಿ ಬಂದು ನಿನಗೆ ಅನುಮತಿಯನ್ನು ಕೊಟ್ಟಿರುವನಲ್ಲವೆ? ಇನ್ನು ನೀನು ಯುಧಿಷ್ಠಿರನ ಅನುಜ್ಞೆಯನ್ನು ಪಡೆದು ಯಾವಾಗ ಕಾನನಕ್ಕೆ ಹೊರಡುವೆ?' ಎಂದು ಕೇಳಿದಳು. ಅದಕ್ಕೆ ಧೃತರಾಷ್ಟ್ರನು 'ಓ ಗಾಂಧಾರೀ! ತಂದೆಯೂ, ಮಹಾತ್ಮನೂ ಆದ ವ್ಯಾಸನೇನೋ ನನಗೆ ಅನುಮತಿಕೊಟ್ಟಿರುವನು. ಯುಧಿ ಷ್ಠಿರನ ಅನುಜ್ಞೆಯನ್ನು ಪಡೆದು ಶೀಘ್ರದಲ್ಲಿಯೇ ಹೊರಡುವೆನು. ಆದರೆ ಈಗ ನಾನು ಪ್ರಜೆಗಳನ್ನು ನನ್ನ ಮನೆಗೆ ಬರಮಾಡಿಕೊಂಡು, ಅವರಲ್ಲಿ ಯೂ ಇದಕ್ಕಾಗಿ ಅನುಜ್ಞೆಯನ್ನು ಪಡೆದು, ಅವರ ಕಣ್ಣೆದಿರಾಗಿ ದುಷ್ಟ ರೂ, ಜೂಜಾಳಿಗಳೂ ಆದ ನನ್ನ ಪುತ್ರರೆಲ್ಲರ ಪರಲೋಕಪ್ರಾಪ್ತಿಗಾಗಿ ತಕ್ಕಷ್ಟು ದ್ರವ್ಯವನ್ನು ದಾನಮಾಡುವೆನು' ಎಂದು ಹೇಳಿ ಪ್ರಜಾಪ್ರಮು ಖರನ್ನು ತನ್ನಲ್ಲಿಗೆ ಕರೆತರಿಸುವಂತೆ ಧರ್ಮರಾಜನಿಗೆ ಹೇಳಿಕಳುಹಿಸಿದನು. ಜನಕಾಜ್ಞೆಯಂತೆ ಯುಧಿಷ್ಠಿರನು ಎಲ್ಲರನ್ನೂ ಬರಮಾಡಿದನು. ಸಹೃ ದಯರಾದ ಕುರುಜಾಂಗಲದೇಶದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಬಂದು, ನೆರೆದರು. ಧೃತರಾಷ್ಟ್ರನು ಅಂತಃಪುರದಿಂದ ಹೊರಗೆ ಬಂದು ಅಲ್ಲಿ ಪುರಜನರು, ಗ್ರಾಮಜನರು, ಸುಹೃತ್ತುಗಳು, ಪರದೇಶದಿಂದ ಬಂದ ಬ್ರಾಹ್ಮಣರು, ಇವರೆಲ್ಲರೂ ನೆರೆದಿರುವುದನ್ನು ನೋಡಿ ಹೀಗೆ ಹೇಳು ವನು. 'ಓ ಜನರೇ! ನೀವು ಕುರುಗಳೊಡನೆ ಬಹುಕಾಲದಿಂದ ಒಟ್ಟಿಗೆ

ಸೇರಿ ವಾಸಮಾಡಿದವರು. ನೀವು ಅನ್ಯೋನ್ಯಕ್ಷೇಮಚಿಂತಕರು. ಗುಣ ಗ್ರಾಹಿಗಳು. ನಾನು ಈಗ ಈ ಕಾಲಕ್ಕೆ ತಕ್ಕ ಕೆಲವು ವಾಕ್ಯಗಳನ್ನು ನಿಮಗೆ ತಿಳಿಸುವೆನು. ನೀವು ಅದರಂತೆ ನಡೆಯಬೇಕು ಈಗ ನಾನು ವ್ಯಾಸನಲ್ಲಿಯೂ, ಯುಧಿಷ್ಠಿರರಾಜನಲ್ಲಿಯೂ ಅನುಮತಿಯನ್ನು ಪಡೆದು, ಗಾಂಧಾರಿಯೊಡನೆ ಅರಣ್ಯಕ್ಕೆ ಹೋಗಬೇಕೆಂದು ಉದ್ದೇಶಿಸಿರುವೆನು. ನೀವೂ ನನಗೆ ಅನುಮತಿಯನ್ನು ಕೊಡಬೇಕು. ನಿಮ್ಮ ಆಲೋಚನೆಯು ನನಗೆ ಅತ್ಯಂತಗೌರವಾರ್ಹವು. ನನಗೂ ನಿಮಗೂ ಅನ್ಯೋನ್ಯವಾಗಿದ್ದ ಶಾಶ್ವತಪ್ರೀತಿಯು ಮತ್ತೆ ಯಾವ ದೇಶದ ಪ್ರಜೆಗಳಿಗೂ, ರಾಜರಿಗೂ ಇಲ್ಲ ವೆಂದೇ ಭಾವಿಸುವೆನು. ನಾನೂ, ಗಾಂಧಾರಿಯೂ ವೃದ್ಧಾಪ್ಯದಿಂದಲೂ, ಪುತ್ರರನ್ನು ಕಳೆದುಕೊಂಡುದರಿಂದಲೂ, ಉಪವಾಸದಿಂದಲೂ ದುರ್ಬಲ ರಾಗಿ ಕೃಶರಾಗಿರುವೆವು. ರಾಜ್ಯವು ಯುಧಿಷ್ಠಿರನ ವಶವಾದೊಡನೆ ನನ್ನ ಭಾರವು ನೀಗಿ ಎಷ್ಟೋ ಸುಖಿಯಾದೆನು. ಈತನ ಐಶ್ವರ್ಯವು ದುರ್ಯೋ ಧನನ ಐಶ್ವರ್ಯಕ್ಕಿಂತಲೂ ಹಲವು ವಿಧಗಳಲ್ಲಿ ಮೇಲಾದುದೆಂದೇ ನೆನೆಸು ವೆನು. ಕುರುಡನೂ, ವೃದ್ಧನೂ, ಆಗಿ ಪುತ್ರರನ್ನು ಕಳೆದುಕೊಂಡ ನನಗೆ ಈಗ ವನವನ್ನು ಬಿಟ್ಟು ಬೇರೆ ಗತಿಯೇನು? ಆದುದರಿಂದ ನೀವೆಲ್ಲರೂ ನನಗೆ ಪ್ರಯಾಣಕ್ಕೆ ಅನುಮತಿಯನ್ನು ಕೊಡಬೇಕು' ಎಂದನು. ಆತನ ಆ ಮಾತನ್ನು ಕೇಳಿ ಕುರುಜಾಂಗಲದೇಶಗಳ ಜನರೆಲ್ಲರೂ ಕಣ್ಣೀರುತುಂಬಿ ಕೊಂಡು ಗದ್ಗದಸ್ವರದಿಂದ ಅತ್ತರು. ಮಹಾತೇಜಸ್ವಿಯಾದ ಧೃತರಾ ಷ್ಟ್ರನೂ ಶೋಕದಿಂದ ಪ್ರತಿಮಾತನ್ನಾಡದಿದ್ದನು.

ಇದು ಒಂಭತ್ತನೆಯ ಅಧ್ಯಾಯವು.

ಧೃತರಾಷ್ಟ್ರನು ತಾನು ದುರ್ಯೋಧನನ ಮಾತುಗಳಿಗೆ ಮರು
ಳಾಗಿ ಮಾಡಿದ ದೋಷಗಳನ್ನು ಮನ್ನಿಸುವಂತೆ ಜನರನ್ನು
ಬೇಡಿದುದು. ಯುಧಿಷ್ಠಿರನನ್ನು ಅವರಲ್ಲಿ ಒಪ್ಪಿಸಿ,
ತಾನು ವನಕ್ಕೆ ಹೊರಡಲು ಅನುಮತಿ ಕೇಳಿದುದು.

ಆಮೇಲೆ ಧೃತರಾಷ್ಟ್ರನು 'ಓ ಪ್ರಜೆಗಳಿರಾ! ಶಂತನುವು ಈ ಭೂಮಿಯನ್ನು ಧರ್ಮದಿಂದ ಪರಿಪಾಲಿಸಿದನು. ಹಾಗೆಯೇ ನನ್ನ ತಂದೆ

ಯಾದ ವಿಚಿತ್ರವೀರ್ಯನೂ ಭೀಷ್ಮನಿಂದ ರಕ್ಷಿತನಾಗಿ ಈ ಭೂಮಿಯ ನ್ನಾಳಿದನು. ಇವೆಲ್ಲವೂ ನಿಮಗೆ ತಿಳಿದ ವಿಷಯಗಳೇ! ಇದರಲ್ಲಿ ಸಂಶಯ ವಿಲ್ಲ. ಆಮೇಲೆ ನಿಮಗೆ ಬಹಳ ಪ್ರಿಯನಾದ ನನ್ನ ಸಹೋದರನೂ (ಪಾಂ ಡು) ನೀತಿಸಮ್ಮತವಾಗಿ ರಾಜ್ಯವನ್ನು ಪರಿಪಾಲಿಸಿದನೆಂಬುದು ನಿಮಗೇ ತಿಳಿ ದಿರುವುದು. ಆಮೇಲೆ ನಾನೂ ನಿಮ್ಮನ್ನು ಸ್ವಲ್ಪದಿನಗಳವರೆಗೆ ಆರಾಧಿಸಿ ದೆನು. ನನ್ನ ಆಳ್ವಿಕೆಯು ಅನ್ಯಾಯವಾಗಿದ್ದರೂ, ನೀವು ಅದನ್ನು ಸಹಿಸಿ ಕೊಳ್ಳಬೇಕು. ಆಮೇಲೆ ಮಂದಬುದ್ಧಿಯುಳ್ಳವನೂ, ದುಷ್ಟನೂ ಆದ ನನ್ನ ಮಗ ದುರ್ಯೋಧನನು ನಿಷ್ಕಂಟಕವಾದ ಈ ರಾಜ್ಯವನ್ನನುಭವಿಸಿದಾಗ ಎಷ್ಟೋ ತಪ್ಪಿತಗಳನ್ನು ಮಾಡಿರುವನು. ದುರ್ಬುದ್ಧಿಯುಳ್ಳ ಆ ದುರ್ಯೋ ಧನನ ದೋಷದಿಂದಲೂ, ಗರ್ವದಿಂದಲೂ, ಆತನ ಅನೀತಿಯಿಂದಲೂ, ರಾಜರಲ್ಲಿ ಪ್ರಬಲಯುದ್ಧವು ಸಂಭವಿಸಿತು. ಕೌರವರೆಲ್ಲರೂ ಕೊಲ್ಲಲ್ಪ ಟ್ಟರು. ಭೂಮಿಯೂ ನಾಶಹೊಂದಿತು. ಆ ವಿಷಯದಲ್ಲಿಯೂ ನನ್ನ ಪ್ರವ ರ್ತನೆಗಳು ಒಳ್ಳೆಯದಾಗಿರಲಿ, ಕೆಟ್ಟದಾಗಿರಲಿ ಅವೊಂದನ್ನೂ ನೀವು ಮನಸ್ಸಿನಲ್ಲಿಡಬಾರದು. ಇದೋ! ನಾನು ಬದ್ಧಾಂಜಲಿಯಾಗಿ ಬೇಡು ವೆನು. ನೀವು ನನ್ನ ಸ್ಥಿತಿಯನ್ನು ನೋಡಿ ಕನಿಕರವಿಟ್ಟು 'ಅಯ್ಯೋ ಪಾಪವು! ಈ ರಾಜನು ವೃದ್ಧನು! ಪುತ್ರರನ್ನೆಲ್ಲ ಕಳೆದುಕೊಂಡು ಬಹಳ ನೊಂದವನು! ಹಿಂದೆ ಪ್ರಖ್ಯಾತಿಗೊಂಡ ರಾಜಕುಲದಲ್ಲಿ ಹುಟ್ಟಿದವನು' ಎಂಬಿವನ್ನೆಲ್ಲ ಯೋಚಿಸಿ, ನನ್ನ ಸರ್ವಾಪರಾಧಗಳನ್ನೂ ಮನ್ನಿಸಬೇಕು. ಕೋಮಲಾಂಗಿಯೂ, ವೃದ್ಧಳೂ, ಪುತ್ರಶೋಕಪೀಡಿತೆಯೂ ಆದ ಈ ಗಾಂಧಾರಿಯೂ ನನ್ನಂತೆಯೇ ನಿಮ್ಮಲ್ಲಿ ಯಾಚಿಸುತ್ತಿರುವಳು. ಈ 'ದಂಪತಿ ಗಳಿಬ್ಬರೂ ಪುತ್ರರನ್ನು ಕಳೆದುಕೊಂಡವರು! ವೃದ್ಧರು! ದುಃಖಕ್ಕೆ ಗುರಿ ಯಾದವರು' ಎಂದು ನೀವು ನಮಗೆ ಅನುಮತಿ ಕೊಟ್ಟರೆ ನಿಮಗೂ ಕ್ಷೇಮವುಂಟು. ನಾವು ನಿಮ್ಮಲ್ಲಿ ಶರಣಾಗತರಾಗಿ ಬೇಡುವೆವು. ನೀವೆ ಲ್ಲರೂ ಕುರುಕುಲಜಾತನೂ, ಕುಂತೀಪುತ್ರನೂ ಆದ ಈ ಯುಧಿಷ್ಠಿರರಾಜ ನನ್ನು ಕಷ್ಟಕಾಲಗಳಲ್ಲಿಯೂ, ಸುಖಕಾಲಗಳಲ್ಲಿಯೂ ಸಮವಾಗಿ ನೋಡಿ ಕೊಳ್ಳಿರಿ. ಈತನು ಯಾವಾಗಲೂ ಅಕಾರ್ಯವನ್ನು ಮಾಡತಕ್ಕವನಲ್ಲ. ಈತನಿಗೆ ಮಹಾತೇಜಸ್ವಿಗಳೂ, ಲೋಕಪಾಲಕರಿಗೆ ಸಮಾನರೂ, ಎಲ್ಲಾ

ಧರ್ಮಗಳನ್ನೂ ಅರಿತವರೂ, ಆದ ಈ ನಾಲ್ಕುಮಂದಿ ಸಹೋದರರು ಸಹಾಯಕರಾಗಿರುವರು. ಭಗವಂತನೂ, ಸಕಲ ಪ್ರಾಣಿಲೋಕಗಳಿಗೆಲ್ಲ ಪ್ರಭುವೂ ಆದ ಬ್ರಹ್ಮನು, ನಾಲ್ಕುಮಂದಿ ಲೋಕಪಾಲಕರ ನಡುವೆ ಶೋಭಿಸುವಂತೆ ಈತನೂ ಈ ನಾಲ್ವರ ಮಧ್ಯದಲ್ಲಿ ಶೋಭಿಸುವನು. ಹೀಗೆ ಭೀಮಾರ್ಜುನ ನಕುಲಸಹದೇವರಿಂದ ಪರಿವೃತನಾಗಿ ಮಹಾತೇಜಸ್ವಿಯೆನಿಸಿದ ಈ ಯುಧಿಷ್ಠಿರನು, ನಮ್ಮ ಹಿಂದಿನವರಂತೆ ನಿಮ್ಮನ್ನು ಪರಿಪಾಲಿಸುವನು. ಒಂದು ವಿಷಯವನ್ನು ನಿಮಗೆ ತಿಳಿಸುವುದು ನನ್ನ ಕರ್ತವ್ಯವಾದುದರಿಂದ ತಿಳಿಸುವೆನು ಕೇಳಿರಿ. ನಾನು ಈ ಯುಧಿಷ್ಠಿರನನ್ನು ನಿಮ್ಮೆಲ್ಲರಲ್ಲಿ ನ್ಯಾಸರೂಪವಾಗಿ (ಒತ್ತೆಯಾಗಿ) ಒಪ್ಪಿಸಿರುವೆನು. ಅದೇ ರೀತಿಯಲ್ಲಿ ನಿಮ್ಮನ್ನೂ ನಾನು ವೀರನಾದ ಈ ಯುಧಿಷ್ಠಿರನ ಕೈಗೆ ನ್ಯಾಸವಾಗಿ ಒಪ್ಪಿಸಿರುವೆನು. ಹಿಂದೆ ನನ್ನ ಪುತ್ರರೂ, ನನ್ನ ಇತರ ಸೇವಕರೂ ನಿಮಗೆ ಯಾವ ಅಪ್ರಿಯವನ್ನು ಮಾಡಿದ್ದರೂ ಅವೆಲ್ಲವನ್ನೂ ನೀವು ಮನ್ನಿಸಬೇಕು. ನೀವು ನನ್ನ ವಿಷಯದಲ್ಲಿ ಇದುವರೆಗೆ ಯಾವ ಅಪರಾಧವನ್ನೂ ಮಾಡಿದುದಾಗಿ ನನಗೆ ತೋರಲಿಲ್ಲ. ಗುರುವಿನಂತೆ (ನನ್ನಲ್ಲಿ) ಅಧಿಕ ಭಕ್ತಿಯನ್ನಿಟ್ಟಿದ್ದ ನಿಮಗೆ ಇದೋ! ನಾನು ಕೈಮುಗಿಯುವೆನು ಇದೋ! ನಮಸ್ಕರಿಸುವೆನು. ಚಂಚಲಬುದ್ಧಿಯುಳ್ಳವರಾಗಿ, ದುರಾಶೆಯಿಂದ ಸ್ವೇಚ್ಛಾಪ್ರವರ್ತಕರಾಗಿದ್ದ ನನ್ನ ಪುತ್ರರಿಗಾಗಿ ಈಗ ನಾನೂ, ಗಾಂಧಾರಿಯೂ ನಿಮ್ಮೆಲ್ಲರನ್ನೂ ಬೇಡುವೆವು' ಎಂದನು. ಇದನ್ನು ಕೇಳಿದಾಗ ಅಲ್ಲಿ ನೆರೆದಿದ್ದ ಪೌರಜಾನಪದರಿಗೆಲ್ಲ ಕಣ್ಣೀರು ತುಳುಕುತಿದ್ದಿತು. ಗದ್ಗದಕಂಠದಿಂದ ಅವರು ಯಾವ ಮಾತನ್ನೂ ಆಡದೆ, ಒಬ್ಬರ ಮುಖವನ್ನೊಬ್ಬರು ನೋಡುತಿವರು.

ಇದು ಹತ್ತನೆಯ ಅಧ್ಯಾಯವು

— { ಪುರಜನರು ಬ್ರಾಹ್ಮಣರ ಮೂಲಕವಾಗಿ ಧೃತರಾಷ್ಟ್ರನನ್ನು ಸಮಾಧಾನಪಡಿಸಿ, ಮಹಾವ್ಯಸನದಿಂದ ಆತನ ವನಪ್ರಯಾಣಕ್ಕೆ ಅನುಮತಿಯನ್ನು ಕೊಟ್ಟುದು. } —

ಧೃತರಾಷ್ಟ್ರನ ಮಾತುಗಳನ್ನು ಕೇಳಿ, ಪೌರಜಾನಪದರೆಲ್ಲರೂ ದುಃಖದಿಂದ ಪ್ರಜ್ಞೆತಪ್ಪಿದಂತಾದರು. ಕಣ್ಣೀರು ತುಂಬಿಕೊಂಡು, ಗದ್ಗದಕಂಠರಾದ ಅವರನ್ನು ಕುರಿತು ಧೃತರಾಷ್ಟ್ರನು 'ಓ ಸಾಧುಶ್ರೇಷ್ಠರೇ! ನಾನು ಅಡಿಗಡಿಗೆ ತಲೆಬಾಗಿ ಪ್ರಾರ್ಥಿಸುವೆನು ನಾನು ವೃದ್ಧನು! ಪುತ್ರರನ್ನೆಲ್ಲ ಕಳೆದುಕೊಂಡವನು. ಧರ್ಮಪತ್ನಿಯಾದ ಗಾಂಧಾರಿಯೊಡನೆ ಇದುವರೆಗೆ ಅನೇಕ ದುಃಖಗಳನ್ನನುಭವಿಸಿದ ನಾನು, ಈಗ ನಮ್ಮ ತಂದೆಯಾದ ವ್ಯಾಸನಿಂದಲೂ, ಯುಧಿಷ್ಠಿರರಾಜನಿಂದಲೂ ವನವಾಸಕ್ಕಾಗಿ ಅನುಮತಿಯನ್ನು ಪಡೆದೆನು. ನೀವೂ ನನಗೆ ಅನುಮತಿಯನ್ನು ಕೊಡಬೇಕು' ಎಂದನು ಆ ದೀನವಾಕ್ಯಗಳನ್ನು ಕೇಳಿ ಅಲ್ಲಿ ನೆರೆದಿದ್ದ ಜನರೆಲ್ಲ ನಾನಾಕಡೆಗಳಲ್ಲಿ ರೋದಿಸತೊಡಗಿದರು. ಅವರೆಲ್ಲರೂ ಮಕ್ಕಳ ವಿಯೋಗದಿಂದ ತಂದೆತಾಯಿಗಳು ಹೇಗೋ ಹಾಗೆ ಶೋಕಗ್ರಸ್ತರಾಗಿ ತಪಿಸುತ್ತಾ, ತಮ್ಮ ಮೇಲುಹೊದಿಕೆಗಳಿಂದಲೂ, ಕೈಗಳಿಂದಲೂ ಮುಖಗಳನ್ನು ಮುಚ್ಚಿಕೊಂಡು ಮುಹೂರ್ತಕಾಲದವರೆಗೆ ಗೋಳಿಟ್ಟರು. ಧೃತರಾಷ್ಟ್ರನ ವಿಯೋಗದುಃಖವೊಂದನ್ನೇ ಮನಸ್ಸಿನಲ್ಲಿ ಭಾವಿಸಿ ಪ್ರಜ್ಞಾಹೀನರಾದರು. ಮೆಲ್ಲಮೆಲ್ಲಗೆ ಆ ದುಃಖವನ್ನಡಗಿಸಿಕೊಂಡು ಒಬ್ಬರಿಗೊಬ್ಬರು ಅದೇ ವಿಚಾರವಾಗಿ ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಕಡೆಗೆ ಅವರೆಲ್ಲರೂ ಏಕೀಭಾವದಿಂದ ತಮ್ಮೊಳಗೆ ನಿರ್ಧರಿಸಿಕೊಂಡು, ಒಬ್ಬ ಬ್ರಾಹ್ಮಣನನ್ನು ತಮಗೆ ಪ್ರತಿನಿಧಿಯನ್ನಾಗಿ ಮಾಡಿ, ಅವನ ಮೂಲಕವಾಗಿ ಆ ಸಂಗತಿಯನ್ನು ಧೃತರಾಷ್ಟ್ರರಾಜನಿಗೆ ತಿಳಿಸಿದರು. ಆ ಬ್ರಾಹ್ಮಣನು ಸಜ್ಜನಸಮ್ಮತನು. ಅಭಿಪ್ರಾಯವನ್ನು ವ್ಯಕ್ತಪಡಿಸುವುದರಲ್ಲಿ ಸಮರ್ಥನು! ಗೌರವಾರ್ಹನು. ಅನೇಕ ವೇದಗಳನ್ನು ಅರಿತವನು. ಗಂಭೀರಸ್ವಭಾವವುಳ್ಳವನು. ಮಹಾ ಮೇಧಾವಿ! ಆ ಬ್ರಾಹ್ಮಣನು ಮಹಾರಾಜನ ಮತ್ತು ಸದಸ್ಯರೆಲ್ಲರ ಅನುಮತಿಯನ್ನು ಪಡೆದು ಧೃತರಾಷ್ಟ್ರರಾಜನನ್ನು ಕುರಿತು ಹೀಗೆ ಹೇಳಲುಪಕ್ರಮಿಸಿದನು.

‘ ಓ ರಾಜಾ ! ಸಮಸ್ತಜನರ ಅಭಿಪ್ರಾಯವೂ ನನ್ನಲ್ಲಿ ತಿಳಿಸಲ್ಪಟ್ಟಿರುವುದು. ಅದನ್ನು ತಿಳಿಸುವೆನು ಕೇಳು. ಅದರಂತೆ ನೀನು ನಡೆಯಬೇಕು. ಓ ಪ್ರಭೂ ! ನೀನು ಹೇಳುವುದೆಲ್ಲವೂ ನಿಜವೇ! ಇದರಲ್ಲಿ ಅಪಲಾಪವೇನೂ ಇಲ್ಲ. ನಮಗೆ ನಿಮಗೆ ಯಾವಾಗಲೂ ಸೌಹಾರ್ದವಲ್ಲದೆ ಅಸಮಾಧಾನವೆಂಬುದೇ ಇಲ್ಲ. ಕುರುವಂಶದ ರಾಜರಲ್ಲಿ ಯಾರೊಬ್ಬರೂ, ಯಾವಾಗಲೂ ಪ್ರಜೆಗಳಿಗೆ ಅಪ್ರಿಯವಾಗಿ ರಾಜ್ಯವನ್ನು ನಡೆಸಿದುದಿಲ್ಲ. ನೀವು ನಮ್ಮನ್ನು ತಂದೆತಾಯಿಗಳಂತೆ ಪರಿಪಾಲಿಸುತ್ತಿರುವಿರಿ. ನಿನ್ನ ಮಗನಾದ ದುರ್ಯೋಧನನಾದರೂ ನಮಗೆ ಅಪ್ರಿಯವಾದ ಕಾರ್ಯವೊಂದನ್ನೂ ಮಾಡಿದವನಲ್ಲ. ಎಲ್ಲರಿಗೂ ಪ್ರಿಯವಾದ ಕಾರ್ಯಗಳನ್ನೇ ಮಾಡುತ್ತ, ಎಲ್ಲರನ್ನೂ ಅನುಸರಿಸುವುದರಲ್ಲಿಯೇ ಅಕ್ಕರೆಯುಳ್ಳವನಾಗಿದ್ದನು. ಅದು ಹೋಗಲಿ ! ಈಗ ನೀನು ಸತ್ಯವತೀಪುತ್ರನೂ, ಧರ್ಮಾತ್ಮನೂ ಆದ ವ್ಯಾಸನು ಹೇಗೆ ಹೇಳಿರುವನೋ ಹಾಗೆ ನಡೆಸು. ನಮ್ಮೆಲ್ಲರಿಗೂ ಆತನು ಮಹಾಗುರುವಲ್ಲವೆ ? ನೀನು ನಮ್ಮನ್ನಗಲಿದರೂ ನಾವು ಸದಾ ನಿನ್ನ ಗುಣಗಳನ್ನು ನೆನೆಸಿಕೊಂಡು, ಬಹುಕಾಲಕ್ಕೆ ದುಃಖಶೋಕಗಳಿಂದ ತಪಿಸಬೇಕಾಗುವುದು. ಓ ರಾಜಾ ! ಶಂತನುವೂ, ಚಿತ್ರಾಂಗದರಾಜನೂ, ಭೀಷ್ಮನ ಪರಾಕ್ರಮದಿಂದ ರಕ್ಷಿಸಲ್ಪಟ್ಟ ನಿನ್ನ ಪಿತನೂ, ನಿನ್ನ ಬುದ್ಧಿವಾದದಿಂದ ನಡೆಯುತಿದ್ದ ಪಾಂಡುರಾಜನೂ ಯಾವ ರೀತಿಯಲ್ಲಿ ರಾಜ್ಯವನ್ನು ಪರಿಪಾಲಿಸಿದರೋ ಹಾಗೆಯೇ ದುರ್ಯೋಧನನೂ ನಮ್ಮನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದನು. ರಾಜಾ ! ನಿನ್ನ ಪುತ್ರನು ನಮಗೆ ಯಾವಾಗಲೂ ಅಪ್ರಿಯವನ್ನು ಮಾಡಿದವನಲ್ಲ. ನಾವು ಆ ರಾಜನಿಂದಲೂ, ತಂದೆಯ ಪೋಷಣೆಯಲ್ಲಿದ್ದಂತೆ ಕ್ಷೇಮದಿಂದ ಬಾಳುತ್ತಿದ್ದೆವೆಂಬುದು ನಿನಗೆ ತಿಳಿದ ವಿಷಯವೇ. ಹಾಗೆಯೇ ಬುದ್ಧಿಶಾಲಿಯೂ, ಧೈರ್ಯಶಾಲಿಯೂ ಆದ ಈ ಯುಧಿಷ್ಠಿರನಿಂದಲೂ ಮುಂದೆ ಅನೇಕಸಾವಿರವರ್ಷಗಳವರೆಗೆ ನಾವು ಪಾಲಿತರಾಗಿ ಸುಖದಿಂದಿರುವೆವು ಮಹಾರಾಜಾ ! ಧರ್ಮಾತ್ಮನಾದ ಈ ಯುಧಿಷ್ಠಿರನು ಕುರು, ಸಂವರಣರೇ ಮೊದಲಾದ ನಿನ್ನ ಪೂರ್ವರಾಜರ್ಷಿಗಳ, ಮತ್ತು ಭರತಚಕ್ರವರ್ತಿಯ ಮಾರ್ಗವನ್ನೇ ಹಿಂಬಾಲಿಸುತ್ತ, ಅನೇಕ ಪುಣ್ಯಕಾರ್ಯಗಳನ್ನೂ, ಭೂರಿದಕ್ಷಿಣೆಯುಳ್ಳ ಯಾಗಗಳನ್ನೂ ನಡೆ

ಸುವನು. ಆತನಲ್ಲಿ ಲವಮಾತ್ರವೂ ದೋಷಕ್ಕೆಡೆಯಿಲ್ಲ. ನೀನೂ ನಮ್ಮ ನ್ನು ಚೆನ್ನಾಗಿ ಪಾಲಿಸಿದೆ. ಆದುದರಿಂದ ನಮಗೆ ನಿನ್ನಲ್ಲಿಯಾಗಲಿ, ನಿನ್ನ ಪುತ್ರನಲ್ಲಿಯಾಗಲಿ ಸ್ವಲ್ಪವೂ ಅಪ್ರಿಯವಿಲ್ಲ. ಕುರುನಂದನಾ! ಈ ಜ್ಞಾತಿ ಗಳೊಳಗಿನ ಕಲಹವಿಷಯವಾಗಿ ನೀನು ದುರ್ಯೋಧನನಮೇಲೆ ದೋಷ ವನ್ನು ಹೇಳಿದೆಯಷ್ಟೆ? ಆ ವಿಚಾರವಾಗಿಯೂ ನಿಮಗೆ ಸಮಾಧಾನಹೇಳು ವೆವು. ಕೌರವನಾಶಕ್ಕೆ ದುರ್ಯೋಧನನಾಗಲಿ, ನೀನಾಗಲಿ, ಕರ್ಣನಾ ಗಲಿ, ಶಕುನಿಯಾಗಲಿ ಕಾರಣರಲ್ಲ. ಅದು ದೈವಿಕವಾದುದು. ದೈವವಿಧಿ ಯನ್ನು ತಡೆಯುವುದು ಸಾಧ್ಯವೆ? ದೈವವಿಧಿಯನ್ನು ಮನುಷ್ಯಪ್ರಯತ್ನ ದಿಂದ ತಪ್ಪಿಸಲು ಹೇಗೂ ಸಾಧ್ಯವೇ ಅಲ್ಲ. ಮಹಾರಾಜಾ! ಹದಿನೆಂಟು ಅಕ್ಷೌಹಿಣೀಸೈನ್ಯಗಳು ಯುದ್ಧಕ್ಕೆ ನೆರೆದುವು. ಕೌರವರೂ, ವೀರಶ್ರೇಷ್ಠ ರಾದ ಭೀಷ್ಮ, ದ್ರೋಣ, ಕೃಪಾದಿಗಳೂ, ಮಹಾಬಲವುಳ್ಳ ಕರ್ಣನೂ, ವೀರನಾದ ಯುಯುಧಾನನೂ, ಧೃಷ್ಟದ್ಯುಮ್ನನೂ ಭೀಮಾರ್ಜುನ ನಕು ಲಸಹದೇವರೆಂಬ ನಾಲ್ಕುಮಂದಿ ಪಾಂಡವರೂ ಸೇರಿ ಆ ಸೈನ್ಯಗಳೆಲ್ಲ ವನ್ನೂ ಹದಿನೆಂಟುದಿನಗಳಲ್ಲಿ ಕೊಂದುಬಿಟ್ಟರು. ಇಂತಹ ಮಹಾನಾಶವು ದೈವಬಲವಿಲ್ಲದೆ ನಡೆಯುವುದೆ? ಇಲ್ಲ! ಕ್ಷತ್ರಿಯನು ಯುದ್ಧಭೂಮಿ ಯಲ್ಲಿ ಕ್ಷತ್ರಿಯನೊಡನೆ ಯುದ್ಧಮಾಡಿ ಕೊಲ್ಲುವುದೂ, ಕಾಲವು ಬಂ ದೊಡನೆ ತಾನು ಸಾಯುವುದೂ ಸಹಜವೇ. ವಿದ್ಯಾಬಲ, ಬಾಹುಬಲ ಗಳೆರಡರಿಂದಲೂ ಮಾನ್ಯರಾದ ಪುರುಷಶ್ರೇಷ್ಠರಿಂದಲೇ ಅಷ್ಟೊಂದು ಸೈನ್ಯವೂ ಹತವಾಗಿ ಭೂಮಿಯೆಲ್ಲವೂ ನಾಶವಾಯಿತು. ಆ ರಾಜರ ವಧೆಗೆ ನಿನ್ನ ಪುತ್ರನೂ, ನೀನೂ, ನಿನ್ನ ಸೇವಕರೂ, ಕರ್ಣನೂ, ಶಕುನಿ ಯೂ, ಯಾರೂ ಕಾರಣರಲ್ಲ. ಸಾವಿರಾರುಮಂದಿ ರಾಜರು ಕೊಲ್ಲಲ್ಪಟ್ಟು ದಕ್ಕೆ ದೈವವಿಧಿಯೇ ಕಾರಣವೆಂದು ತಿಳಿ ಈ ವಿಷಯದಲ್ಲಿ ಯಾವನು ಏನನ್ನು ಹೇಳಲು ಸಾಧ್ಯವು? ನೀನು ಈ ಲೋಕಕ್ಕೆಲ್ಲ ಪ್ರಭುವೂ, ಗುರು ವೂ ಆಗಿರುವೆ. ಆದುದರಿಂದ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಪುತ್ರನನ್ನು ನಾವು ಧರ್ಮಾತ್ಮನೆಂದೇ ತಿಳಿಯುವೆವು. ಆ ನಿನ್ನ ಮಗನು ಬ್ರಾಹ್ಮಣೋ ತ್ತಮರ ಆಶೀರ್ವಾದಬಲದಿಂದ ತನ್ನ ಜತೆಯ ವೀರರೊಡನೆ ವೀರಲೋಕ ವನ್ನು ಸೇರಿ ಸುಖಸಂತೋಷದಿಂದಿರಲಿ. ನೀನೂ ಯಾವಾಗಲೂ ಧರ್ಮಾ

ಸಕ್ತನಾಗಿದ್ದುದರಿಂದ ಪುಣ್ಯವನ್ನು ಪಡೆಯುವೆ. ಓ ಮಹಾಬಾಹೂ! ನಿನಗೆ ಲೌಕಿಕ ವೈದಿಕ ಧರ್ಮಗಳೆಲ್ಲ ತಿಳಿದಿರುವುವು. ಪುರುಷೋತ್ತಮರಾದ ಆ ಪಾಂಡವರ ಸ್ವಭಾವವನ್ನು ನಾವೂ ಬಲ್ಲೆವು. ಅವರು ದೇವಲೋಕವನ್ನಾದರೂ ಪರಿಪಾಲಿಸಬಲ್ಲವರು. ಹಾಗಿರುವಾಗ ಅವರು ಭೂಮಿಯನ್ನು ಚೆನ್ನಾಗಿ ಪರಿಪಾಲಿಸುವ ವಿಷಯದಲ್ಲಿ ಸಂದೇಹಕ್ಕೆಡೆಯೇನಿದೆ? ಸುಶೀಲರಾದ ಆ ಪಾಂಡವರನ್ನು ಸುಖದುಃಖಗಳೆರಡರಲ್ಲಿಯೂ ಪ್ರಜೆಗಳು ಅನುಸರಿಸುವರು. ಹಿಂದಿನ ರಾಜರು ಬ್ರಾಹ್ಮಣರಿಗೆ ಕೊಟ್ಟ ಅಗ್ರಹಾರಗಳನ್ನೂ, ಬಿರುದುಗಳನ್ನೂ, ಅವರು ಮಾಡಿದ ದಾನಧರ್ಮಗಳನ್ನೂ ಪಾಂಡವರು ತಪ್ಪದೆ ಪರಿಪಾಲಿಸುತ್ತ ಬರುವರು. ಈ ಯುಧಿಷ್ಠಿರನು ದೀರ್ಘಾಲೋಚನೆಯುಳ್ಳವನು! ಉತ್ತಮಸ್ವಭಾವವುಳ್ಳವನು! ಕುಬೇರನಂತೆ ಮನೋನಿಗ್ರಹವುಳ್ಳವನು! ಒಳ್ಳೇ ಮಂತ್ರಿಗಳುಳ್ಳವನು. ಉದಾರಹೃದಯನು! ಶತ್ರುವಿನಲ್ಲಿಯೂ ದಯೆಯುಳ್ಳವನು! ಶುದ್ಧನು! ಭರತಶ್ರೇಷ್ಠನು! ಮಹಾ ಮೇಧಾವಿ! ಈತನು ನಮ್ಮನ್ನು ಚೆನ್ನಾಗಿಯೇ ನೋಡಿಕೊಳ್ಳುವನು. ಯಾವಾಗಲೂ ನಮ್ಮನ್ನು ತಮ್ಮ ಪುತ್ರರಂತೆ ಪೋಷಿಸುವನು. ಭೀಮಾರ್ಜುನಾದಿಗಳೂ ನಮಗೆ ಯಾವ ಅಪ್ರಿಯವನ್ನೂ ಮಾಡದೆ ಯುಧಿಷ್ಠಿರನನ್ನನುಸರಿಸಿ ಪಾಲಿಸುವರು. ಅವರು ಮೃದುಸ್ವಭಾವವುಳ್ಳವರೊಡನೆ ಮೃದುವಾಗಿಯೂ, ಕ್ರೂರಸ್ವಭಾವವುಳ್ಳವರೊಡನೆ ಕ್ರೂರವಾಗಿಯೂ ವರ್ತಿಸುವರು. ಮಹಾವೀರ್ಯವಂತರು! ಮಹಾತ್ಮರು! ನಗರಜನರಿಗೆ ಒಳ್ಳೆಯದನ್ನು ಮಾಡುವುದರಲ್ಲಿಯೇ ಆಶೆಯುಳ್ಳವರು! ಕುಂತಿ, ದ್ರೌಪದಿ, ಉಲೂಪಿ, ಸುಭದ್ರೆ, ಇವರಲ್ಲಿಯೂ ಯಾರೊಬ್ಬರೂ ಯಾರಿಗೂ ಯಾವಾಗಲೂ ಪ್ರತಿಕೂಲವನ್ನು ಮಾಡತಕ್ಕವರಲ್ಲ. ಮೊದಲು ನಿನ್ನಿಂದ ಅಂಕುರಿಸಿ, ಈಗ ಯುಧಿಷ್ಠಿರನಿಂದ ಬೆಳೆಸಲ್ಪಟ್ಟ ನಮ್ಮೊಳಗಿನ ಅನ್ಯೋನ್ಯಾನುರಾಗವನ್ನು ಪ್ರಜೆಗಳು ಎಂದಿಗೂ ಬಿಡಲಾರರು. ಮಹಾತ್ಮರಾದ ಕುಂತೀಪುತ್ರರು ಅಧರ್ಮಿಷ್ಠರಾದ ಮನುಷ್ಯರನ್ನೂ ಧರ್ಮಮಾರ್ಗವನ್ನು ಅವಲಂಬಿಸುವಂತೆ ಮಾಡಿ ಪರಿಪಾಲಿಸುವರು. ರಾಜಾ! ಆದುದರಿಂದ ನೀನು ಯುಧಿಷ್ಠಿರನ ವಿಷಯದಲ್ಲಿ ನಿಶ್ಚಿಂತನಾಗಿ, ನಿನ್ನ ಧರ್ಮವನ್ನು ನಿನ್ನ ಇಷ್ಟದಂತೆ ನಡೆಸು. ಓ ಭರತಶ್ರೇಷ್ಠಾ! ನಿನಗೆ ನಮಸ್ಕಾರವು'

ಎಂದರು. ಧರ್ಮಸಮ್ಮತವೂ, ಗುಣಯುಕ್ತವೂ ಆದ ಆ ಧೃತರಾಷ್ಟ್ರನ ಮಾತಿಗೆ ಎಲ್ಲಾ ಜನರೂ 'ಒಳ್ಳೆಯದು! ಒಳ್ಳೆಯದು' ಎಂದು ಗೌರವದಿಂದ ಅಂಗೀಕರಿಸಿದರು. ಧೃತರಾಷ್ಟ್ರನೂಕೂಡ ಅಡಿಗಡಿಗೆ ಹಾಗೆಯೇ ಆ ಜನರನ್ನು ಗೌರವಿಸಿ ಕಳುಹಿಸಿದನು. ಹೀಗೆ ಎಲ್ಲಾ ಜನರಿಂದ ಪೂಜಿತನಾಗಿ, ಆ ಜನರನ್ನು ಬದ್ಧಾಂಜಲಿಯಾಗಿ ಗೌರವಿಸಿದಮೇಲೆ ಗಾಂಧಾರಿಯೊಡನೆ ತನ್ನ ಮನೆಯನ್ನು ಸೇರಿ, ರಾತ್ರಿಯಲ್ಲಿ ಸುಖವಾಗಿ ಶಯನಿಸಿದನು.

ಇದು ಹನ್ನೊಂದನೆಯ ಅಧ್ಯಾಯವು.

ಧೃತರಾಷ್ಟ್ರನು ದುರ್ಯೋಧನಾದಿಗಳಿಗೆ ಶ್ರಾದ್ಧವನ್ನು ಮಾಡಲು ಧನವನ್ನು ತರುವುದಕ್ಕಾಗಿ ವಿದುರನಮೂಲಕ ಯುಧಿಷ್ಠಿರನಿಗೆ ಹೇಳಿಕಳುಹಿಸಿದುದು. ಭೀಮನು ಅದಕ್ಕೆ ಸಮ್ಮತಿಸದೆ, ಧೃತರಾಷ್ಟ್ರನ ದುರ್ಬುದ್ಧಿಯನ್ನು ಎತ್ತಿಹೇಳಿ ನಿರಾಕರಿಸಿದುದು.

ರಾತ್ರಿಯು ಕಳೆದೊಡನೆಯೇ ಧೃತರಾಷ್ಟ್ರನು ವಿದುರನನ್ನು ಯುಧಿಷ್ಠಿರನ ಮನೆಗೆ ಕಳುಹಿಸಿದನು. ವಿದುರನು ಅಲ್ಲಿಂದ ಹೊರಟು ಧರ್ಮರಾಜನ ಮನೆಗೆ ಬಂದು ಅವನನ್ನು ಕುರಿತು 'ಓ ರಾಜಾ! ಧೃತರಾಷ್ಟ್ರಮಹಾರಾಜನು ವನವಾಸಕ್ಕಾಗಿ ದೀಕ್ಷೆವಹಿಸಿರುವನು. ಬರುವ ಕಾರ್ತೀಕದಲ್ಲಿ ಅರಣ್ಯಕ್ಕೆ ಹೊರಡುವನು. ಆತನು ನಿನ್ನಲ್ಲಿ ಒಂದು ಕಾರ್ಯಕ್ಕಾಗಿ ನನ್ನನ್ನು ಕಳುಹಿಸಿದನು. ನೀನು ಅನುಮತಿಕೊಡುವುದಾದರೆ, ಅವನು ಗಂಗಾಪುತ್ರನಾದ ಭೀಷ್ಮನಿಗೂ, ದ್ರೋಣನಿಗೂ, ಸೋಮದತ್ತಬಾಹ್ಲೀಕರಿಗೂ, ತನ್ನ ಎಲ್ಲಾ ಪುತ್ರರಿಗೂ, ಇನ್ನೂ ಯುದ್ಧದಲ್ಲಿ ಹತರಾದ ಇತರ ಬಂಧುಗಳಿಗೂ, ಸೈಂಧವನಿಗೂ ತನ್ನ ಕೈಯಿಂದ ಶ್ರಾದ್ಧಮಾಡಲಪೇಕ್ಷಿಸುವನು' ಎಂದನು. ಅದನ್ನು ಕೇಳಿದೊಡನೆ ಧರ್ಮರಾಜನೂ, ಅರ್ಜುನನೂ ಸಂತುಷ್ಟರಾಗಿ ಕೊಂಡಾಡಿದರು. ಸುಲಭಕೋಪವುಳ್ಳ ಭೀಮನಾದರೋ, ಹಿಂದೆ ದುರ್ಯೋಧನನು ತಮಗೆ ಮಾಡಿದ ಅಪರಾಧವ

ನ್ನೆಲ್ಲ ನೆನೆಸಿಕೊಂಡು, ವಿದುರನ ಮಾತಿಗೆ ಅಂಗೀಕರಿಸಲಿಲ್ಲ. ಅರ್ಜುನನು ಭೀಮಸೇನನ ಈ ಅಭಿಪ್ರಾಯವನ್ನು ತಿಳಿದು, ನಮ್ರತೆಯಿಂದ ಆತನನ್ನು ಕುರಿತು 'ಅಣ್ಣಾ! ಧೃತರಾಷ್ಟ್ರನು ನಮಗೆ ತಂದೆ! ವೃದ್ಧನು! ಈಗ ವನವಾಸಕ್ಕಾಗಿ ದೀಕ್ಷೆವಹಿಸಿರುವನು. ಆ ಧೃತರಾಷ್ಟ್ರನು ಎಲ್ಲಾ ಸುಹೃತ್ತುಗಳಿಗೂ ಶ್ರಾದ್ಧಕಾರ್ಯವನ್ನು ಮಾಡಲಪೇಕ್ಷಿಸುವುದು ನ್ಯಾಯವಲ್ಲವೇ? ಅವನು ಈಗ ನಮ್ಮಿಂದ ಜಯಿಸಲ್ಪಟ್ಟ ಹಣವನ್ನು ಭೀಷ್ಮಾದಿಗಳ ಉಪಯೋಗಕ್ಕಾಗಿ ಕೇಳುತ್ತಿರುವಾಗ, ಅದಕ್ಕೆ ನೀನು ಅನುಮತಿಸಬೇಕಲ್ಲವೆ? ಅಣ್ಣಾ! ಅಷ್ಟೇಕೆ? ಹಿಂದೆ ಯಾವ ಧೃತರಾಷ್ಟ್ರನನ್ನು ನಾವು ಬೇಡುತ್ತಿದ್ದೆವೋ, ಈಗ ಅದೇ ಧೃತರಾಷ್ಟ್ರನು ನಮ್ಮನ್ನು ಯಾಚಿಸುತ್ತಿರುವನಲ್ಲವೆ? ಇದು ದೈವಕೃತವು. ಕಾಲವ್ಯತ್ಯಾಸವನ್ನು ನೋಡಿದೆಯಾ? ಹಿಂದೆ ಈತನೇ ಈ ಭೂಮಿಗೆಲ್ಲ ಪ್ರಭುವಾಗಿದ್ದು, ಈಗ ಎಲ್ಲವನ್ನೂ ತೊರೆದು, ಮಂತ್ರಿಗಳನ್ನೂ ಕಳೆದುಕೊಂಡು, ಅರಣ್ಯಕ್ಕೆ ಹೋಗುವುದರಲ್ಲಿರುವನು. ಆದುದರಿಂದ ಭೀಮಸೇನಾ! ದಾನಮಾಡುವ ವಿಷಯದಲ್ಲಿ ನೀನು ಇವನಿಗೆ ತಡೆಮಾಡಬಾರದು ಇದರಿಂದ ನಮಗೆ ಮಹಾ ಅಪಕೀರ್ತಿಯೂ, ಅಧರ್ಮವೂ ಸಂಭವಿಸುವುದು. ನಮಗೆಲ್ಲ ಜ್ಯೇಷ್ಠನೂ, ನಿಯಾಮಕನೂ ಆದ ಯುಧಿಷ್ಠಿರನನ್ನು ಅನುಸರಿಸು. ಕೊಡುವುದಕ್ಕಾಗಲಿ, ಕೊಡದೆ ಇರುವುದಕ್ಕಾಗಲಿ ನಾವು ಯಾರೂ ಅಧಿಕಾರವುಳ್ಳವರಲ್ಲ' ಎಂದನು ಇದನ್ನು ಕೇಳಿ ಯುಧಿಷ್ಠಿರನು ಅರ್ಜುನನ ಮಾತನ್ನು ಅನುಮೋದಿಸಿದನು. ಆಗ ಭೀಮಸೇನನು ಕೋಪದಿಂದ ಅರ್ಜುನನನ್ನು ನೋಡಿ 'ಅರ್ಜುನಾ! ಭೀಷ್ಮನಿಗೂ, ಸೋಮದತ್ತನಿಗೂ, ಭೂರಿಶ್ರವಸ್ಸಿಗೂ, ಬಾಹ್ಲೀಕನಿಗೂ, ಮಹಾತ್ಮನಾದ ದ್ರೋಣನಿಗೂ, ಇತರ ಸುಹೃತ್ತುಗಳಿಗೂ ನಾವೇ ಶ್ರಾದ್ಧವನ್ನು ಮಾಡುವೆವು ಕರ್ಣನಿಗೆ ಕುಂತಿಯು ಮಾಡುವಳು. ಈ ಮುದುಕನ ಕೈಯಿಂದ ಶ್ರಾದ್ಧಮಾಡಿಸಬಾರದೆಂದೇ ನನ್ನ ಅಭಿಪ್ರಾಯವು ಕುಲಗೇಡಿಗಳಾದ ಯಾವ ಪಾಪಿಗಳು ಭೂಮಿಯೆಲ್ಲವನ್ನೂ ನಾಶಮಾಡಿದರೋ, ಆ ದುರ್ಯೋಧನಾದಿಗಳೆಲ್ಲರೂ ಇನ್ನುಮೇಲೆ ಕಷ್ಟಗಳನ್ನನುಭವಿಸುತ್ತ ಬರಲಿ. ಆ ಶತ್ರುಗಳಿಗೆ ಶ್ರಾದ್ಧಾದಿಗಳಿಂದ ತೃಪ್ತಿಯುಂಟಾಗಲೇ ಬಾರದು. ಅವರು ನಮ್ಮಮೇಲೆ ಹನ್ನೆರಡುವರ್ಷಗಳವರೆಗೆ ತೋರಿಸಿದ ವೈರವನ್ನೂ

ದ್ರೌಪದಿಗೆ ದುಃಖಕಾರಣವಾದ ಅಜ್ಞಾತವಾಸಯಾತ್ರೆಯನ್ನೂ ಈಗಲೇ ನೀನು ಹೇಗೆ ಮರೆತೆ? ನೀನು ಹಿಂದೆ ಆಭರಣಗಳನ್ನೂ, ಭೂಷಣಗಳನ್ನೂ ಕಳಚಿ, ಕೃಷ್ಣಾಜಿನವನ್ನು ಉತ್ತರೀಯವಾಗಿ ಹೊದೆದು, ಪಾಂಚಾಲಪುತ್ರಿಯೊಡನೆ ಧೃತರಾಷ್ಟ್ರರಾಜನ ಬಳಿಗೆ ಹೋದೆಯಲ್ಲವೆ? ಆಗ ಧೃತರಾಷ್ಟ್ರನಿಗೆ ನಮ್ಮಲ್ಲಿರಬೇಕಾದ ಸ್ನೇಹವು ಎಲ್ಲಿ ಹೋಯಿತು? ನೀವೆಲ್ಲರೂ ಹನ್ನೆರಡುವರ್ಷಗಳಕಾಲ ಅರಣ್ಯದಲ್ಲಿ ವಾಸಮಾಡುತ್ತ, ಅರಣ್ಯದಲ್ಲಿ ದೊರೆಯುವ ವಸ್ತುಗಳನ್ನೇ ತಿನ್ನುತ್ತಿದ್ದಿರಲ್ಲವೆ? ಆಗ ಆ ದ್ರೋಣನೂ, ಭೀಷ್ಮನೂ, ಸೋಮದತ್ತನೂ ಎಲ್ಲಿದ್ದರು? ಆಗ ನಮ್ಮ ದೊಡ್ಡಪ್ಪನು ನಮ್ಮಲ್ಲಿ ಪುತ್ರವಾತ್ಸಲ್ಯವನ್ನೇಕೆ ತೋರಿಸಲಿಲ್ಲ? ಕುಲಗೇಡಿಯೂ, ಕೆಟ್ಟ ಬುದ್ಧಿಯುಳ್ಳವನೂ ಆದ ಈತನು ದ್ಯೂತಕಾಲದಲ್ಲಿ ವಿದುರನನ್ನು ಕುರಿತು 'ನನ್ನ ಮಗನು ಜೂಜಿನಲ್ಲಿ ಯಾವುದನ್ನು ಜಯಿಸಿದನು?' ಎಂದು ಕೇಳುತ್ತಿದ್ದುದನ್ನೂ ನೀನು ಆಗಲೇ ಮರೆತುಬಿಟ್ಟೆಯಾ?' ಎಂದನು ಹೀಗೆ ಕೋಪದಿಂದ ಹೇಳುತ್ತಿರುವ ಭೀಮಸೇನನನ್ನು ನೋಡಿ ಯುಧಿಷ್ಠಿರನು 'ಸಾಕು ಸುಮ್ಮನಿರು' ಎಂದು ಹೆದರಿಸಿ ನಿವಾರಿಸಿದನು.

ಇದು ಹನ್ನೆರಡನೆಯ ಅಧ್ಯಾಯವು.

---

(ಭೀಮನು ದುರ್ಯೋಧನಾದಿಗಳ ಶ್ರಾದ್ಧಕ್ಕೆ ಹಣವನ್ನು ಕೊಡಕೊಡದೆಂದು ನಿರೋಧಿಸಿದುದು ಯುಧಿಷ್ಠಿರನು ತನ್ನ ಸ್ವಂತ ಬೊಕ್ಕಸದಿಂದ ಬೇಕಾದ ವಸ್ತುಗಳನ್ನು ತೆಗೆದುಕೊಳ್ಳುವಂತೆ ಧೃತರಾಷ್ಟ್ರನಿಗೆ ತಿಳಿಸಿದುದು)

ಅರ್ಜುನನು 'ಭೀಮಸೇನಾ! ನೀನು ನನಗೆ ಜ್ಯೇಷ್ಠನೂ, ಗುರುವೂ ಆಗಿರುವೆ. ಆದುದರಿಂದ ನಾನು ದುಡುಕಿ ಮಾತಾಡಲಾರೆನು. ರಾಜರ್ಷಿಯಾದ ಧೃತರಾಷ್ಟ್ರನಾದರೋ ನಮಗೆ ಎಲ್ಲಾ ವಿಧದಲ್ಲಿಯೂ ಪೂಜಾರ್ಹನು. ಹಿರಿಯರ ಗೌರವವನ್ನು ಕೆಡಿಸದವರೇ ಉತ್ತಮಪುರುಷರು. ಸಾಧುಗಳು ಅಪಕಾರಗಳನ್ನು ನೆನೆಸುವುದಿಲ್ಲ. ಉಪಕಾರಗಳನ್ನೇ ನೆನೆಸುವರು' ಎಂದನು. ಅರ್ಜುನನ ಈ ಮಾತನ್ನು ಕೇಳಿ ಯುಧಿಷ್ಠಿರನು ವಿದು

ರನನ್ನು ಕುರಿತು 'ಆರ್ಯ! 'ಧೃತರಾಷ್ಟ್ರನು ತನ್ನ ಪುತ್ರರಿಗಾಗಿ ಮತ್ತು ತನಗೆ ಉಪಕಾರಮಾಡಿದ ಭೀಷ್ಮನೇ ಮೊದಲಾದ ಸುಹೃತ್ತುಗಳಿಗಾಗಿ ಎಷ್ಟೆಷ್ಟನ್ನು ದಾನಮಾಡಬೇಕೆಂದು ಅಪೇಕ್ಷಿಸುವನೋ ಅಷ್ಟನ್ನೂ ನಾನು ನನ್ನ ಸ್ವಂತ ಬೊಕ್ಕಸದಿಂದ ಕೊಡುವೆನು' ಎಂದು ನಾನು ಹೇಳಿದುದಾಗಿ ರಾಜನಿಗೆ ತಿಳಿಸು. ಇದಕ್ಕಾಗಿ ಭೀಮನೂ ವ್ಯಸನಪಡಬೇಕಾದುದಿಲ್ಲ' ಎಂದು ಹೇಳಿ ಅರ್ಜುನನ ಗುಣಕ್ಕಾಗಿ ಅವನನ್ನು ಕೊಂಡಾಡಿದನು. ಆಗ ಭೀಮಸೇನನು ಅರ್ಜುನನನ್ನು ಕಡೆಗಣ್ಣಿನಿಂದ ನೋಡಿದನು. ಆಗ ಯುಧಿಷ್ಠಿರನು ವಿದುರನನ್ನು ಕುರಿತು 'ರಾಜನು ಭೀಮಸೇನನ ಮಾತಿಗಾಗಿ ಅವನಲ್ಲಿ ಕೋಪಿಸಿಕೊಳ್ಳಬಾರದು! ಏಕೆಂದರೆ, ಈ ಭೀಮಸೇನನೇ ಅರಣ್ಯದಲ್ಲಿ ನಮ್ಮನ್ನು ಕಾಪಾಡುವುದಕ್ಕಾಗಿ ಮಂಜು, ಮಳೆ, ಬಿಸಿಲು ಮುಂತಾದ ನಾನಾದುಃಖಗಳಿಂದ ಹೆಚ್ಚಾಗಿ ಕಷ್ಟಪಟ್ಟವನು. ಇದು ನಿನಗೂ ತಿಳಿದ ವಿಷಯುವೇ. ಆ ಕಷ್ಟವನ್ನು ನೆನೆಸಿಕೊಂಡು ಅವನು ದುಡುಕಿ ಮಾತಾಡಿಬಿಟ್ಟನು. ಆದುದರಿಂದ ನೀನು ಅಪೇಕ್ಷಿಸುವುದನ್ನೆಲ್ಲ ನನ್ನ ಮನೆಯಿಂದ ತೆಗೆದುಕೊಳ್ಳಬಹುದು' ಎಂದು ನಾನು ಹೇಳಿದುದಾಗಿ ಧೃತರಾಷ್ಟ್ರನಿಗೆ ತಿಳಿಸು. 'ಕಷ್ಟಕ್ಕೆ ಗುರಿಯಾದ ಈ ಭೀಮಸೇನನು ಕೋಪದಿಂದ ದುಡುಕಿಹೋದರೂ ಅದನ್ನು ಮನಸ್ಸಿನಲ್ಲಿಡಬಾರದೆಂದು ಆ ರಾಜನಲ್ಲಿ ತಿಳಿಸು. ರಾಜನು ತನ್ನ ಇಷ್ಟಾನುಸಾರವಾಗಿ ದಾನಮಾಡಲಿ! ಬೇಕಾದುದನ್ನು ವೆಚ್ಚಮಾಡಲಿ! ಆತನು ತನ್ನ ಪುತ್ರರ ಮತ್ತು ಸುಹೃತ್ತುಗಳ ಋಣವನ್ನು ತೀರಿಸಿಕೊಳ್ಳಲಿ. ನನ್ನ ಈ ಶರೀರವೂ, ಧನವೂ ಅವನ ಅಧೀನವೇ. ಇದರಲ್ಲಿ ಸಂಶಯವಿಲ್ಲವೆಂದು ತಿಳಿಸು' ಎಂದನು.

ಇದು ಹದಿಮೂರನೆಯ ಅಧ್ಯಾಯವು.

{ ವಿದುರನು, ಶ್ರಾದ್ಧಕ್ಕಾಗಿ ಧನವನ್ನು ಕೊಡಲು ಯುಧಿಷ್ಠಿರನು ಸಮ್ಮತಿಸಿದುದನ್ನು ಧೃತರಾಷ್ಟ್ರನಿಗೆ ತಿಳಿಸಿದುದು. }

ಆಮೇಲೆ ವಿದುರನು ಧೃತರಾಷ್ಟ್ರನ ಬಳಿಗೆ ಹೋಗಿ ಹೀಗೆಂದು ಹೇಳುವನು. 'ನಿನ್ನ ಮಾತನ್ನು ಪೂರ್ಣವಾಗಿ ಯುಧಿಷ್ಠಿರನಿಗೆ ತಿಳಿಸಿ

ದೆನು. ಆತನೂ ನಿನ್ನ ಮಾತನ್ನು ಕೊಂಡಾಡಿದನು. ಮಹಾತೇಜಸ್ವಿಯಾದ ಅರ್ಜುನನೂಕೂಡ, ತನ್ನ ಮನೆಯನ್ನೂ, ಮನೆಯಲ್ಲಿರುವ ಸಮಸ್ತ ಧನವನ್ನೂ, ತನ್ನ ಪ್ರಾಣವನ್ನೂಕೂಡ ನಿನಗೆ ಅರ್ಪಣಮಾಡಿರುವನು. ಯುಧಿಷ್ಠಿರನು, ರಾಜ್ಯವನ್ನೂ, ಪ್ರಾಣಗಳನ್ನೂ, ಧನಗಳನ್ನೂ, ಸಹೋದರರನ್ನೂ, ಇನ್ನೂ ಇತರವಸ್ತುಗಳನ್ನೂ ನಿನಗಾಗಿ ಅರ್ಪಿಸಿರುವನು. ಆದರೆ, ಮಹಾಬಲಶಾಲಿಯಾದ ಆ ಭೀಮಸೇನನೊಬ್ಬನುಮಾತ್ರ ಹಿಂದಿನ ಕಷ್ಟಗಳನ್ನೆಲ್ಲ ನೆನೆಸಿಕೊಂಡು ನಿಟ್ಟುಸಿರು ಬಿಟ್ಟು, ಕೊನೆಗೆ ಕಷ್ಟದಿಂದ ಅನುಮತಿಸಿರುವನು. ಧರ್ಮಶೀಲನಾದ ಯುಧಿಷ್ಠಿರನೂ, ಅರ್ಜುನನೂ ಆತನನ್ನು ಸಮಾಧಾನಪಡಿಸಿ ತಮ್ಮ ಮಾರ್ಗಕ್ಕೆ ಹಿಂತಿರುಗಿಸಿದರು. ಯುಧಿಷ್ಠಿರನು ನಿನ್ನೊಡನೆ ‘ ಭೀಮಸೇನನು ಹಿಂದಿನ ವಿರೋಧವನ್ನು ನೆನೆಸಿ ಅನೀತಿಯಿಂದ ಮಾಡಿದೊಂದನ್ನೂ ನೀನು ಮನಸ್ಸಿನಲ್ಲಿಟ್ಟು ಕೋಪಿಸಿಕೊಳ್ಳಬಾರದು. ಕ್ಷತ್ರಿಯಧರ್ಮವೇ ಇಂತದು. ಈ ಭೀಮಸೇನನು ಶುದ್ಧವಾದ ವೀರಕ್ಷತ್ರಿಯ ಧರ್ಮದಲ್ಲಿ ನೆಲೆಗೊಂಡವನು ಈ ಭೀಮಸೇನನಿಗಾಗಿ ನಾನೂ, ಅರ್ಜುನನೂ, ನಿನ್ನನ್ನು ಯಾಚಿಸುವೆವು. ಕೃಪೆಮಾಡಿ ಮನ್ನಿಸಬೇಕು. ನಮ್ಮ ಸಂಪತ್ತಿಗೆಲ್ಲ ನೀನೇ ಬಾಧ್ಯನು. ಓ ರಾಜಾ ! ನೀನು ಕೋರುವಷ್ಟು ಧನವನ್ನು ದಾನಮಾಡು. ನಮ್ಮ ರಾಜ್ಯಕ್ಕೂ, ಪ್ರಾಣಗಳಿಗೂ ನೀನೇ ಗತಿ ! ’ ಎಂದು ನಿನ್ನೊಡನೆ ಹೇಳುವಂತೆ ತಿಳಿಸಿರುವನು. ಯುಧಿಷ್ಠಿರನೂ, ಅರ್ಜುನನೂ ನನ್ನನ್ನುಕುರಿತು ‘ ಕೌರವಶ್ರೇಷ್ಠನಾದ ಧೃತರಾಷ್ಟ್ರನು ಬ್ರಾಹ್ಮಣರಿಗೆ ಕೊಡತಕ್ಕ ಅಗ್ರಹಾರಗಳನ್ನೂ, ಪುತ್ರರಿಗಾಗಿ ಶ್ರಾದ್ಧಕಾಲದಲ್ಲಿ ಕೊಡತಕ್ಕ ರತ್ನಗಳನ್ನೂ, ಪಶುಗಳನ್ನೂ, ಸೇವಕ ಸೇವಕಿಯರನ್ನೂ, ಆಡು ಕುರಿಗಳನ್ನೂ ಪೂಜಾಪುರಸ್ಕರಗಳೊಡನೆ ಬೇಕಾದಹಾಗೆ ಕೊಡಲಿ. ಓ ವಿದುರಾ ! ನೀನೂ ರಾಜಾಜ್ಞೆಯಿಂದ ಅಲ್ಲಲ್ಲಿ ದರಿದ್ರರಿಗೂ, ಕುರುಡರಿಗೂ, ಅಶಕ್ತರಿಗೂ ಅಧಿಕವಾದ ಅನ್ನಪಾನಗಳನ್ನೊಳಕೊಂಡ ಮಂದಿರಗಳನ್ನೂ, ಹಸುಗಳಿಗೆ ನೀರು ಕುಡಿಯುವ ತೊಟ್ಟಿಗಳನ್ನೂ ಕಟ್ಟಿಸು. ಇನ್ನೂ ಹಲವುಬಗೆಯ ಧರ್ಮಗಳನ್ನು ಮಾಡಿಸು ’ ಎಂದರು. ವಿದುರನು ಹೀಗೆ ತಿಳಿಸಿದೊಡನೆ ಧೃತ

ರಾಷ್ಟ್ರನು ಅವರನ್ನು ಸ್ತುತಿಸಿ, ಕಾರ್ತಿಕದ ದಿನದಲ್ಲಿ ಮಹಾದಾನಕ್ಕಾಗಿ ಮನಸ್ಸಿನಲ್ಲಿ ನಿರ್ಧರಿಸಿದನು.

ಇದು ಹದಿನಾಲ್ಕನೆಯ ಅಧ್ಯಾಯವು.

{ಧೃತರಾಷ್ಟ್ರನು ಶ್ರಾದ್ಧಮಾಡಿ, ಬ್ರಾಹ್ಮಣರನ್ನು ಅನ್ನಾದಿಗಳಿಂದ ತೃಪ್ತಿಪಡಿಸಿದುದು.}

ಧೃತರಾಷ್ಟ್ರನಿಗೆ ಯುಧಿಷ್ಠಿರಾರ್ಜುನರ ಮಾತನ್ನು ಕೇಳಿ ಬಹಳ ಸಂತೋಷವಾಯಿತು ಆಮೇಲೆ ಆತನು, ಭೀಷ್ಮನು, ತನ್ನ ಪುತ್ರನು, ಸುಹೃತ್ತುಗಳು, ಇವರ ಶ್ರಾದ್ಧಕ್ಕಾಗಿ ಸಾವಿರಾರುಮಂದಿ ಬ್ರಾಹ್ಮಣರನ್ನೂ ಋಷಿಶ್ರೇಷ್ಠರನ್ನೂ ಕರೆಸಿ, ಅವರಿಗೆ ಅನ್ನಪಾನಗಳನ್ನು ಮಾಡಿಸಿ, ವಾಹನಗಳನ್ನೂ, ವಸ್ತ್ರಗಳನ್ನೂ, ಸುವರ್ಣಗಳನ್ನೂ, ಮಣಿಗಳನ್ನೂ, ರತ್ನಗಳನ್ನೂ, ಸೇವಕ ಸೇವಕಿಯರನ್ನೂ, ಬಿರುದುಗಳನ್ನೂ, ಒಳ್ಳೇ ಕಂಬಳಿ, ಶಾಲು ಮುಂತಾದುವನ್ನೂ, ಗ್ರಾಮಗಳನ್ನೂ, ನೆಲವನ್ನೂ, ಧನವನ್ನೂ, ಅಲಂಕೃತಗಳಾದ ಆನೆಕುದುರೆಗಳನ್ನೂ, ಕನ್ಯಕೆಯರನ್ನೂ, ಉತ್ತಮ ಸ್ತ್ರೀಯರನ್ನೂ ಕೊಟ್ಟನು. ದ್ರೋಣ, ಭೀಷ್ಮ, ಬಾಹ್ಲಿಕ, ಸೋಮದತ್ತಾದಿಗಳಿಗೂ, ದುರ್ಯೋಧನನೇ ಮುಂತಾದ ತನ್ನ ಮಕ್ಕಳಿಗೂ, ಜಯದ್ರಥನು ಮುಂತಾದ ಬಂಧುಮಿತ್ರರೆಲ್ಲರಿಗೂ, ಅವರವರ ಹೆಸರುಗಳನ್ನು ಬೇರೆ ಬೇರೆಯಾಗಿ ಹೇಳುತ್ತಾ, ಬ್ರಾಹ್ಮಣರನ್ನು ನಿರ್ದೇಶಿಸಿ ಅವರಿಗೆ ದಾನಮಾಡುತ್ತಬಂದನು. ಗೋದಾನ, ಸುವರ್ಣದಾನಗಳಿಂದಲೂ, ಹೇರಳವಾದ ಧನರತ್ನರಾಶಿಗಳಿಂದಲೂಕೂಡಿದ ಆ ಶ್ರಾದ್ಧಯಜ್ಞವು, ಯುಧಿಷ್ಠಿರನ ಅನುಮತಿಯಂತೆಯೇ ನಡೆಯಿತು ಆ ಕಾಲದಲ್ಲಿ ಲೆಕ್ಕಮಾಡಿಕೊಡುವವರೂ, ಅದನ್ನು ಬರೆಯುವವರೂ ಯುಧಿಷ್ಠಿರನ ಆಜ್ಞೆಯಿಂದ ಆಗಾಗ ಧೃತರಾಷ್ಟ್ರನನ್ನು ಕುರಿತು 'ಇವರಿಗೆ ಯಾವ ಯೋಗ್ಯವಸ್ತುವನ್ನು ಕೊಡಬಹುದು? ಇವರಿಗೆ ಕೊಡಬೇಕಾದುದೇನು? ಆಜ್ಞಾಪಿಸು!' ಎಂದು ಕೇಳುತ್ತಾ, ಧೃತರಾಷ್ಟ್ರನು ಆಜ್ಞಾಪಿಸಿದೊಡನೆ ಆಯಾ ವಸ್ತುಗಳನ್ನು ತಂದುಕೊಡುತ್ತಿದ್ದರು. ಅಲ್ಲದೆ ಆ ಕಾಲದಲ್ಲಿ ಧೃತರಾಷ್ಟ್ರನ ಉದ್ದೇಶದಂತೆ

ನೂರನ್ನು ಕೊಡುವ ಸ್ಥಳದಲ್ಲಿ ಸಾವಿರವನ್ನೂ, ಸಾವಿರವನ್ನು ಕೊಡುವಸ್ಥಳದಲ್ಲಿ ಹತ್ತುಸಾವಿರವನ್ನೂ ಕೊಡುವಹಾಗೆ ಧರ್ಮರಾಜನು ಪ್ರೋತ್ಸಾಹಿಸುತ್ತಿದ್ದುದರಿಂದ, ಆ ಧರ್ಮರಾಜಾಜ್ಞೆಯಂತೆಯೇ ನಡೆಸುತ್ತಿದ್ದರು. ಮೇಘವು ಜಲವರ್ಷದಿಂದ ಭೂಮಿಯನ್ನು ತಂಪಿಸುವಹಾಗೆ, ರಾಜನೆಂಬ ಮೇಘವು ಧನವೃಷ್ಟಿಯಿಂದ ಬ್ರಾಹ್ಮಣರನ್ನು ತೃಪ್ತಿಪಡಿಸಿತು. ಆಮೇಲೆ ರಾಜನು ಎಲ್ಲಾ ವರ್ಣದವರನ್ನೂ, ಅನ್ನಪಾನರಸಪ್ರವಾಹದಲ್ಲಿ ಮುಳುಗುವಂತೆ ಭೋಜನದಿಂದ ತೃಪ್ತಿಗೊಳಿಸಿದನು. ಪ್ರಪಂಚವನ್ನೇ ಮುಳುಗಿಸುವಂತೆ ಅಪಾರವಾದ ಆ ಶ್ರಾದ್ಧಸಂಭಾರಗಳೆಂಬ ಸಮುದ್ರವು ಧೃತರಾಷ್ಟ್ರನೆಂಬ ತೆಪ್ಪದಿಂದ ಸುಲಭವಾಗಿಯೇ ದಾಟಿಸಲ್ಪಟ್ಟಿತು. ಧನಕನಕವಸ್ತ್ರರಾಶಿಗಳೇ ಆ ಸಮುದ್ರದ ಪ್ರವಾಹವು! ಮೃದಂಗಶಬ್ದವೇ ಅದರ ಘೋಷವು! ಅಶ್ವಸಮೂಹ ಗೋಸಮೂಹಗಳೇ ಸುಳಿಗಳು! ಮಣಿಕನಕಕಾಂತಿಯೇ ಅದರ ಜಲವು. ಹೀಗೆ ಧೃತರಾಷ್ಟ್ರನು ತನ್ನ ಪುತ್ರ ಪೌತ್ರರಿಗೂ, ಪಿತೃಗಳಿಗೂ, ತನಗೂ, ಗಾಂಧಾರಿಗೂ ಶ್ರಾದ್ಧವನ್ನು ನಡೆಸಿದನು. ಆತನು ತನ್ನ ಮನಸ್ತೃಪ್ತಿಯಾಗುವವರೆಗೆ ದಾನಗಳನ್ನು ಮಾಡಿದನು. ನಟನರ್ತಕರ ನಾಟ್ಯದಿಂದಲೂ, ಅನ್ನದಾನ ದಕ್ಷಿಣಾದಾನಗಳಿಂದಲೂ ಕೂಡಿದ ದಾನವೆಂಬ ಆ ಮಹಾಯಾಗವನ್ನು ಧೃತರಾಷ್ಟ್ರನು ಹತ್ತುದಿನಗಳವರೆಗೂ ಮಾಡಿ, ತನ್ನ ಪುತ್ರ ಪೌತ್ರರ ಋಣವನ್ನು ತೀರಿಸಿಕೊಂಡನು.

ಇದು ಹದಿನೈದನೆಯ ಅಧ್ಯಾಯವು.

ಧೃತರಾಷ್ಟ್ರನು ಗಾಂಧಾರಿಯ ಭುಜವನ್ನೂ, ಗಾಂಧಾರಿಯು ಕುಂತಿಯ ಭುಜವನ್ನೂ ಹಿಡಿದುಕೊಂಡು, ಕಾಡಿಗೆ ಪ್ರಯಾಣ ಹೊರಟುದು.

ಬೆಳಗಿನ ಜಾವದಲ್ಲಿಯೇ ಧೃತರಾಷ್ಟ್ರನು ಗಾಂಧಾರಿಯೊಡನೆ ವನವಾಸಕ್ಕೆ ಸಂಕಲ್ಪಮಾಡಿ, ಪಾಂಡವರನ್ನು ಕರೆಸಿ, ವಿಧ್ಯುಕ್ತರೀತಿಯಲ್ಲಿ ಅವರಿಗೆ ಆಶೀರ್ವಾದಮಾಡಿದನು. ಕಾರ್ತೀಕದಿನದಲ್ಲಿ ವೇದಪಾರಂಗತರಾದ ಬ್ರಾಹ್ಮಣರಿಂದ ಉದವಸನೀಯವೆಂಬ ಇಷ್ಟಿಯನ್ನು ಮಾಡಿಸಿ, ಮರದ

ತೊಗಟೆಯನ್ನೂ, ಕೃಷ್ಣಾಜಿನವನ್ನೂ ಧರಿಸಿ, ಅಗ್ನಿಹೋತ್ರವನ್ನು ಮುಂ
ಟ್ಟುಕೊಂಡು, ಅಂತಃಪುರಸ್ತ್ರೀಯರಿಂದ ಪರಿವೃತನಾಗಿ ಮನೆಯಿಂ
ಹೊರಗೆ ಹೊರಟನು. ಆಗಲೂ ಕೌರವಸ್ತ್ರೀಯರೂ, ಪಾಂಡವಸ್ತ್ರೀಯರೂ
ಕೌರವವಂಶದ ಇತರಸ್ತ್ರೀಯರೂ ಪ್ರಯಾಣವನ್ನು ನಿಲ್ಲಿಸುವಂತೆ ರಾ
ನನ್ನು ಪ್ರಾರ್ಥಿಸಿದರು. ಅವರ ಕೂಗಾಟವೇ ಆಗ ಬಹಳ ಪ್ರಬಲವಾ
ಕೇಳಿಸಿತು. ಆಗ ಧೃತರಾಷ್ಟ್ರನು ಹೂಗಳಿಂದಲೂ, ಭತ್ತದರಳುಗಳಿಂ
ಲೂ ಅರಮನೆಯನ್ನು ಪೂಜಿಸಿ, ಎಲ್ಲಾ ಸೇವಕರಿಗೂ ಕುದುರೆಗಳನ್ನು
ಕೊಟ್ಟು ಹಿಂತಿರುಗಿಸಿ ತಾನು ಮುಂದೆ ಹೊರಟನು. ಆಗ ಯುಧಿಷ್ಠಿರನ
ನಡುಗುತ್ತ, ಬದ್ಧಾಂಜಲಿಯಾಗಿ ಗದ್ಗದಕಂಠದಿಂದ 'ಮಹಾರಾಜಾ! 
ಜನಕಾ! ನಮ್ಮನ್ನು ಬಿಟ್ಟು ನೀನೆಲ್ಲಿಗೆ ಹೋಗುವೆ?' ಎಂದು ಹೇಳುತ್ತ
ಮೂರ್ಛಿತನಾಗಿ ನೆಲದಮೇಲೆ ಬಿದ್ದನು. ಆಗ ಅರ್ಜುನನು ಮಹಾದುಃಖ
ದಿಂದ ತಪಿಸುತ್ತ, ಅಡಿಗಡಿಗೆ ನಿಟ್ಟುಸಿರುಬಿಟ್ಟು ಯುಧಿಷ್ಠಿರನೊಡ
'ಹೀಗೆ ದುಃಖಿಸಬೇಡ' ವೆಂದು ಹೇಳಿ ಆತನನ್ನು ತಡೆದನು. ಭೀಮಾ
ರ್ಜುನ ನಕುಲಸಹದೇವರೂ, ವಿದುರನೂ, ಸಂಜಯನೂ, ಯುಯುತ
ವೂ, ಕೃಪನೂ, ಧೌಮ್ಯನೂ, ಇತರ ಬ್ರಾಹ್ಮಣರೂ ಕಣ್ಣೀರುತುಂ
ಕೊಂಡು, ಗದ್ಗದಕಂಠದೊಡನೆ ಅವರ ಹಿಂದೆ ಹೊರಟರು. ಕಣ್ಣುಗಳನ್ನು
ಕಟ್ಟಿಕೊಂಡಿದ್ದ ಗಾಂಧಾರಿಯ ತೋಳನ್ನು ಕುಂತಿಯು ತನ್ನ ಹೆಗಲಮೇ
ಇಟ್ಟುಕೊಂಡು ಅವಳನ್ನು ಮುಂದುವರಿಸುತಿದ್ದಳು. ಧೃತರಾಷ್ಟ್ರನ
ಗಾಂಧಾರಿಯ ಭುಜದಮೇಲೆ ಕೈಯಿಟ್ಟುಕೊಂಡು ಹೊರಟನು. ಹಾಗೆಯೆ
ದ್ರುಪದಪುತ್ರಿಯಾದ ದ್ರೌಪದಿಯೂ, ಸುಭದ್ರೆಯೂ, ಕೈಕೂಸನ್ನೆ
ಕೊಂಡು ಉತ್ತರೆಯೂ, ಚಿತ್ರಾಂಗದೆಯೂ, ಇತರ ಸ್ತ್ರೀಯರೂ, ರಾಜ
ಸೊಸೆಯರೂ, ಆ ಧೃತರಾಷ್ಟ್ರನೊಡನೆ ಹೊರಟರು. ಆಗ ದುಃಖದಿಂ
ಕುರರಪಕ್ಷಿಗಳಂತೆ ಗೋಳಿಡುತಿದ್ದ ಸ್ತ್ರೀಯರ ರೋದನಧ್ವನಿಯು ಪ್ರಬ
ವಾಯಿತು. ಅದನ್ನು ಕೇಳಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಸ್ತ್ರೀಯ
ಲ್ಲರೂ ನಾಲ್ಕು ಕಡೆಗಳಿಂದ ಬಂದು ಸುತ್ತಿಕೊಂಡರು. ಹಿಂದೆ ಪಾಂಡವ
ಕೌರವಸಭೆಯಲ್ಲಿ ದ್ಯೂತವಾಡಿ ಕಾನನಕ್ಕೆ ಹೋಗುವಾಗ ಹೇಗೋ ಹಾ
ಧೃತರಾಷ್ಟ್ರನು ವನಕ್ಕೆ ಹೊರಡುವಾಗ ಊರಿಗೂರೇ ವ್ಯಸನದಿಂದ ಕೊ

ಗುತಿದ್ದಿತು. ಹಿಂದೆ ಚಂದ್ರ ಸೂರ್ಯರಿಗೂ ಅದೃಶ್ಯರಾಗಿದ್ದ ರಾಜಸ್ತ್ರೀಯರು ಕೆಲವರುಕೂಡ ದುಃಖದಿಂದ ರಾಜಮಾರ್ಗದಲ್ಲಿ ನಡೆದುಬರುತ್ತಿದ್ದರು.

ಇದು ಹದಿನಾರನೆಯ ಅಧ್ಯಾಯವು.

ಧೃತರಾಷ್ಟ್ರನನ್ನು ಹಿಂಬಾಲಿಸಿ, ವಿದುರನೂ, ಸಂಜಯನೂ ಅವನ ಜತೆಯಲ್ಲಿ ಹೊರಟುದು. ಪಾಂಡವರು ಎಷ್ಟೇ ಸಮಾಧಾನಪಡಿಸಿದರೂ ಕೇಳದೆ, ಕುಂತಿಯು ಅವರನ್ನು ಸಂತೈಸಿ ಗಾಂಧಾರಿಯೊಡನೆ ಕಾಡಿಗೆ ಹೊರಟುದು.

ಆಗ ಅರಮನೆಯ ಉಪ್ಪರಿಗೆಗಳಲ್ಲಿಯೂ, ಬೀದಿಗಳಲ್ಲಿಯೂ ಸ್ತ್ರೀ ಪುರುಷರ ದುಃಖಪ್ರಲಾಪಗಳೇ ತುಂಬಿದ್ದುವು. ವೃದ್ಧರಾಜನು ನಡುಗುತ್ತ ಕೈಜೋಡಿಸಿದಂತೆಯೇ ಅನೇಕ ಸ್ತ್ರೀ ಪುರುಷರಿಂದ ನೆರೆದ ರಾಜಮಾರ್ಗದಲ್ಲಿ ಮಹಾಶ್ರಮದಿಂದ ಸಾಗುತಿದ್ದನು. ಹಸ್ತಿನಾಪುರದ ಹೆಬ್ಬಾಗಿಲನ್ನು ಬಿಟ್ಟೊಡನೆ ಆ ರಾಜಸಮೂಹವನ್ನೆಲ್ಲ ಹಿಂತಿರುಗುವಂತೆ ಅಡಿಗಡಿಗೆ ನಿರ್ಬಂಧಿಸುತ್ತಿದ್ದನು. ವಿದುರನೂ, ಸೂತಕುಲದ ಗಾವಲ್ಗಣಿಯೂ (ಸಂಜಯನು) ಅರಸನೊಡನೆ ತಾವೂ ವನಕ್ಕೆ ಹೊರಡುವ ಉತ್ಸಾಹದಲ್ಲಿದ್ದರು. ಧೃತರಾಷ್ಟ್ರನು ಕೃಪನನ್ನೂ, ಯುಯುತ್ಸುವನ್ನೂ ಹಿಂತಿರುಗಿ ಹೋಗುವಂತೆ ಮಾಡಿ ಯುಧಿಷ್ಠಿರನಲ್ಲಿ ಒಪ್ಪಿಸಿದನು. ಜನಸಮೂಹವು ಹಿಂತಿರುಗಿದೊಡನೆಯೇ, ಯುಧಿಷ್ಠಿರನೂ ಧೃತರಾಷ್ಟ್ರನಿಂದ ಅನುಮತಿಪಡೆದು ಹಿಂತಿರುಗಲಪೇಕ್ಷಿಸಿದನು. ಆಗ ಆತನು ತನ್ನ ತಾಯಿಯಾದ ಕುಂತಿಯ ಬಳಿಗೆ ಹೋಗಿ 'ಅಮ್ಮಾ! ನೀನಾದರೂ ಹಿಂತಿರುಗು. ನಾನು ರಾಜನನ್ನು ಪ್ರಾರ್ಥಿಸುವೆನು. ನೀನು ಸೊಸೆಯರೊಡನೆ ಹಿಂತಿರುಗಿ ನಗರಕ್ಕೆ ಹೊರಡು. ತಪಸ್ಸಿನಲ್ಲಿ ಆಸಕ್ತನಾದ ಈ ರಾಜನು ಹೊರಡಲಿ' ಎಂದನು. ಆಗ ಕುಂತಿಯು ಬಾಷ್ಪಜಲದಿಂದ ತುಂಬಿದ ಕಣ್ಣುಗಳುಳ್ಳವಳಾಗಿ, ಗಾಂಧಾರಿಯ ಕೈಯನ್ನು ಹಿಡಿದುಕೊಂಡು ಹೋಗುತ್ತಲೇ ಇದ್ದಳು. ಮತ್ತು ಆಗ ಆಕೆಯು ಧರ್ಮರಾಜನಿಗೆ ಬುದ್ಧಿವಾದಗಳನ್ನು ಹೇಳುತ್ತ 'ವತ್ಸಾ! ಸಹದೇವನಮೇಲೆ ನೀನು ಅಸಮಾಧಾನವನ್ನು ತೋರಿಸಬೇಡ! ಅವನು

ಯಾವಾಗಲೂ ನಿನ್ನಲ್ಲಿಯೂ, ನನ್ನಲ್ಲಿಯೂ ಅಧಿಕಭಕ್ತಿಯುಳ್ಳವನು. ಮತ್ತು ನೀನು ಕರ್ಣನನ್ನು ಯಾವಾಗಲೂ ನೆನೆಸುತ್ತಿರಬೇಕು. ಹಿಂದೆ ಅಜ್ಞಾನದಿಂದ ನಾನು ಆತನ ವ್ರತಗಳನ್ನು ಕದಲಿಸಿದೆನು. ಓ ಪ್ರಿಯ ಪುತ್ರಾ! ಸೂರ್ಯಪುತ್ರನಾದ ಕರ್ಣನ ವಿಷಯದಲ್ಲಿ ಈ ತಪ್ಪಿತವನ್ನು ಮಾಡಿ, ಅವನನ್ನು ಕಳೆದುಕೊಂಡು ಈಗಲೂ ಬದುಕಿರುವ ಈ ನನ್ನ ಹೃದಯವು ಶತಭಾಗವಾಗಿ ಒಡೆಯದಿರುವುದರಿಂದ, ಇದು ನಿಜವಾಗಿಯೂ ಕಬ್ಬಿಣದಿಂದಲೇ ಮಾಡಲ್ಪಟ್ಟಿರಬೇಕು ನಡೆದುಹೋದುದಕ್ಕೆ ಈಗ ನಾನೇನುಮಾಡಬಲ್ಲೆನು? ಆತನು ನನ್ನಲ್ಲಿ ಜನಿಸಿದ ಸೂರ್ಯಪುತ್ರನೆಂಬುದನ್ನು ಹೊರಪಡಿಸದೆ ಮುಚ್ಚಿಟ್ಟುದೂ ನನ್ನ ದೋಷವೇ! ಅದು ದಾಯಿತು! ವತ್ಸಾ! ಧರ್ಮಪುತ್ರಾ! ನಿನ್ನ ಸಹೋದರರೊಡನೆ ನೀನು ಸೂರ್ಯಪುತ್ರನಾದ ಆ ಕರ್ಣನಿಗಾಗಿ ಉತ್ತಮದಾನಗಳನ್ನು ಕೊಡು. ಮತ್ತು ನೀನು ಯಾವಾಗಲೂ ದ್ರೌಪದಿಗೆ ಪ್ರಿಯವನ್ನುಂಟುಮಾಡುತ್ತಿರು. ಭೀಮಾರ್ಜುನ ನಕುಲಸಹದೇವರನ್ನು ಸಮಾಧಾನಪಡಿಸುತ್ತಿರು ಈಗ ನಮ್ಮ ಕುರುಕುಲದ ಭಾರವೆಲ್ಲ ನಿನ್ನಮೇಲೆ ಬಿದ್ದಿರುವುದು. ನಾನು ವನದಲ್ಲಿ ಈ ಅತ್ತೆ ಮಾವಂದಿರ ಸೇವೆಮಾಡಿಕೊಂಡು ನಿರ್ಮಲಚಿತ್ತದಿಂದ ತಪಸ್ಸುಮಾಡುತ್ತಿರುವೆನು' ಎಂದಳು.

ಇದನ್ನು ಕೇಳಿ ಧರ್ಮಾತ್ಮನೂ, ಜಿತೇಂದ್ರಿಯನೂ, ಧೀಮಂತನೂ ಆದ ಯುಧಿಷ್ಠಿರನು, ದುಃಖದಿಂದ ಪ್ರತ್ಯುತ್ತರವೇನನ್ನೂ ಹೇಳದೆ ಸುಮ್ಮನಿದ್ದನು. ಒಂದು ಮುಹೂರ್ತಕಾಲದವರೆಗೆ ಹಾಗೆಯೇ ಆಲೋಚಿಸಿ ದೈನ್ಯಶೋಕಗಳಿಂದ ತಾಯಿಯನ್ನು ಕುರಿತು 'ಅಮ್ಮಾ! ಇದೇನು ನಿನ್ನ ಪ್ರಯತ್ನವು? ನೀನು ಹೀಗೆ ಹೇಳಬಾರದು ನಾನು ನಿನ್ನ ವನವಾಸಕ್ಕೆ ಸಮ್ಮತಿಸಲಾರೆನು. ನನ್ನಲ್ಲಿ ಕೃಪೆಯಿಡು. ನೀನೇ ಹಿಂದೆ ನಮಗೆ ಶುಭವನ್ನು ಕೋರಿ, ವಿದುಲೆಯ ಮಾತಿನಂತೆ ನಮಗೆ ರಣೋತ್ಸಾಹವನ್ನುಂಟುಮಾಡಿ, ಈಗ ನಮ್ಮನ್ನು ಬಿಟ್ಟುಹೋಗುವುದು ಸರಿಯಲ್ಲ. ನಾನು ಶ್ರೀಕೃಷ್ಣಸಾನ್ನಿಧ್ಯದಲ್ಲಿ ನಿನ್ನ ಬುದ್ಧಿವಾದವನ್ನು ಕೇಳಿ, ಅದರಂತೆ ಯುದ್ಧಕ್ಕೆ ನಿಂತು ರಾಜರನ್ನು ಕೊಂದು ಈ ರಾಜ್ಯವನ್ನು ಪಡೆದೆನು ಆ ನಿನ್ನ ಬುದ್ಧಿವಾದವು

ಈಗ ಎಲ್ಲಿ ಹೋಯಿತು ? ಕ್ಷತ್ರಿಯಧರ್ಮದಲ್ಲಿರುವ ನನ್ನನ್ನು ಬಿಟ್ಟು ನೀನು ಹೋಗಬಾರದು. ನನ್ನನ್ನೂ, ನಮ್ಮ ರಾಜ್ಯವನ್ನೂ ಬಿಟ್ಟು, ಶುಶ್ರೂಷೆಗೆ ಸೊಸೆಯರಾರೂ ಇಲ್ಲದ ದುರ್ಗಮವಾದ ಅರಣ್ಯದಲ್ಲಿ ಹೇಗೆ ವಾಸಮಾಡುವೆ? ನನ್ನಲ್ಲಿ ದಯೆಯಿಡು ' ಎಂದನು. ಕಣ್ಣೀರುತುಂಬಿಕೊಂಡು ಗದ್ಗದಸ್ವರ ದಿಂದ ಹೇಳಿದ ತನ್ನ ಪುತ್ರನ ಈ ಮಾತುಗಳನ್ನು ಕೇಳಿ ಕುಂತಿಯು ತಾನೂ ಕಣ್ಣೀರುಸುರಿಸುತ್ತ ಮುಂದೆಸಾಗುತ್ತಲೇ ಇದ್ದಳು ಆಗ ಭೀಮ ಸೇನನು ಆಕೆಯನ್ನು ಕುರಿತು ' ತಾಯೇ ! ಪುತ್ರರಿಂದ ಜಯಿಸಲ್ಪಟ್ಟ ರಾಜ್ಯವನ್ನು ಅನುಭವಿಸುತ್ತ, ನಮ್ಮನ್ನೂ ರಾಜಧರ್ಮಗಳಲ್ಲಿ ನೆಲೆಗೊಳಿಸ ಬೇಕಾದ ಈ ಕಾಲದಲ್ಲಿ ನಿನಗೆ ಈ ಬುದ್ಧಿಯು ಎಲ್ಲಿಂದ ಬಂದಿತು? ನೀನು ಹಿಂದೆ ಲೋಕಕ್ಷಯಕಾರಣವಾದ ಯುದ್ಧಕ್ಕಾಗಿ ನಮ್ಮನ್ನೇಕೆ ಪ್ರೋತ್ಸಾಹಿಸಿದೆ ? ಈಗ ಯಾವ ಕಾರಣದಿಂದ ನಮ್ಮನ್ನು ಬಿಟ್ಟು ವನಕ್ಕೆ ಹೋಗಲಪೇಕ್ಷಿಸುತ್ತಿರುವೆ ? ಮೊದಲೇ ನೀನು ಬಾಲರಾದ ನಮ್ಮನ್ನೂ, ಈ ಮಾದ್ರೀಪುತ್ರರನ್ನೂ ವನದಿಂದ ಇಲ್ಲಿಗೇಕೆ ಕರೆತಂದೆ? ಅಮ್ಮಾ ! ಕೃಪೆಯಿಡು ! ನೀನು ಈಗ ವನಕ್ಕೆ ಹೋಗಕೂಡದು ಅರ್ಜುನನ ಶಸ್ತ್ರ ಬಲದಿಂದ ಸಂಪಾದಿಸಲ್ಪಟ್ಟ ಈ ಯುಧಿಷ್ಠಿರನ ಸಂಪತ್ತನ್ನು ನೀನು ಅನು ಭವಿಸದೆ ಹೋಗಬಾರದು ' ಎಂದನು. ವನವಾಸದಲ್ಲಿಯೇ ಉತ್ಸಾಹ ಗೊಂಡು, ಅದಕ್ಕಾಗಿ ದೃಢನಿಶ್ಚಯ ಮಾಡಿದ್ದ ಕುಂತಿಯು ಹೀಗೆ ವಿಲಪಿಸು ತ್ತಿರುವ ತನ್ನ ಪುತ್ರರ ಮಾತುಗಳೊಂದನ್ನೂ ಗಮನಿಸಲಿಲ್ಲ. ಆಗ ದ್ರೌಪ ದಿಯೂ ದುಃಖದಿಂದ ಅಳುತ್ತ, ಸುಭದ್ರೆಯೊಡಗೂಡಿ ಅತ್ತೆಯನ್ನು ಹಿಂಬಾಲಿಸಿದಳು. ವನವಾಸನಿಶ್ಚಯದಲ್ಲಿದ್ದ ಆ ಕುಂತಿಯು ತನ್ನ ಹಿಂದೆ ರೋದಿಸುತ್ತಬರುವ ಪುತ್ರರೆಲ್ಲರನ್ನೂ ಅಡಿಗಡಿಗೆ ನೋಡುತ್ತ ಮುಂದೆಸಾ ಗುತ್ತಲೇ ಇದ್ದಳು. ಪಾಂಡವರೂ ಸೇವಕರೊಡನೆಯೂ, ನಗರದ ಜನ ರೊಡನೆಯೂ ಅವಳನ್ನು ಹಿಂಬಾಲಿಸಿ ಹೊರಟರು. ಅಮೇಲೆ ಕುಂತಿಯು ಕಣ್ಣೀರನ್ನೊರೆಸಿಕೊಂಡು ಪುತ್ರರನ್ನು ಕುರಿತು ಹೀಗೆ ಹೇಳುವಳು.

ಇದು ಹದಿನೇಳನೆಯ ಅಧ್ಯಾಯವು.

{ ಕುಂತಿಯು ತನ್ನನ್ನು ಹಿಂಬಾಲಿಸುತ್ತಿರುವ ಪಾಂಡವರಿಗೆ ತನ್ನ ಉದ್ದೇಶದ ಕಾರಣಗಳನ್ನು ತಿಳಿಸಿ, ಅವರನ್ನು ಸಮಾಧಾನ ಪಡಿಸಿದುದು. }

ಆಗ ಕುಂತಿಯು ' ಓ ಮಹಾಬಾಹೂ! ನೀನು ಹೇಳುವುದೆಲ್ಲ ನಿಜ ವೇ! ನಾನು ಹಿಂದೆ ಎಷ್ಟೋ ಕಷ್ಟದಶೆಯಲ್ಲಿ ನಿಮ್ಮನ್ನು ರಕ್ಷಿಸಿದೆನು. ದ್ಯೂತದಲ್ಲಿ ರಾಜ್ಯವನ್ನೂ, ಸುಖವನ್ನೂ ಕಳೆದುಕೊಂಡು, ಜ್ಞಾತಿಗಳಿಂದ ಅವಮಾನಿತರಾದ ನಿಮ್ಮನ್ನು ನಾನು ಕಾಪಾಡಿದೆನು. ಓ ಪುರುಷೋ ತ್ತಮಾ! ಪಾಂಡುವಿನ ಸಂತತಿಯು ನಷ್ಟವಾಗದಂತೆಯೂ, ನಿಮ್ಮ ಕೀರ್ತಿ ಯು ಕೆಡದಂತೆಯೂ ಇರಬೇಕೆಂದೇ ನಾನು ನಿಮ್ಮನ್ನು ಯುದ್ಧಕ್ಕಾಗಿ ಹುರಿಗೊಳಿಸಿದೆನು. ನೀವೆಲ್ಲರೂ ದೇವತೆಗಳಿಗೆ ಸಮಾನವಾದ ಪರಾಕ್ರಮ ವುಳ್ಳವರು ಇಂತಹ ನೀವು ಇತರರ ದಯೆಗಾಗಿ ನಿರೀಕ್ಷಿಸದಂತಿರಬೇ ಕೆಂದು ನಾನು ನಿಮ್ಮನ್ನು ಉತ್ಸಾಹಗೊಳಿಸಿದೆನು ಹತ್ತುಸಾವಿರ ಆನೆ ಗಳಿಗೆ ಸಮಾನವಾದ ಬಲವುಳ್ಳವನೂ, ಪ್ರಸಿದ್ಧಪರಾಕ್ರಮಿಯೂ, ಧೀರನೂ ಆದ ಈ ಭೀಮಸೇನನು ಮೃತ್ಯುವಶನಾಗಬಾರದೆಂದು ನಿಮ್ಮನ್ನು ನಾನು ಯುದ್ಧಕ್ಕೆ ಪ್ರೇರಿಸಿದೆನು ಹಾಗೆಯೇ ಭೀಮಸೇನನ ಸಹೋದರನೂ ಇಂದ್ರಸಮಾನನೂ ಆದ ಈ ಅರ್ಜುನನೂ, ಹಾನಿಗೀಡಾಗಬಾರದೆಂದು ಈತನನ್ನೂ ನಾನು ಪ್ರೋತ್ಸಾಹಿಸಿದೆನು. ಹಿರಿಯರಲ್ಲಿ ಭಕ್ತಿಯುಳ್ಳ ಈ ನಕುಲಸಹದೇವರು ತಿರುಗಿ ವನದಲ್ಲಿ ಹಸಿವಿನಿಂದ ಸಾಯಬಾರದೆಂದು ಇವರನ್ನೂ ಉತ್ಸಾಹಗೊಳಿಸಿದೆನು. ವಿಶಾಲನೇತ್ರೆಯಾದ ಈ ದ್ರೌಪದಿ ಯುಕೂಡ ತಿರುಗಿ ಸಭೆಯಲ್ಲಿ ವೃಥಾ ದುಃಖಕ್ಕೆ ಗುರಿಯಾಗಬಾರದೆಂದು ನಾನು ನಿಮ್ಮನ್ನು ಯುದ್ಧಕ್ಕಾಗಿ ಹುರಿಗೊಳಿಸಿದೆನು. ಓ ಭೀಮಸೇನಾ! ನೀವೆಲ್ಲರೂ ನೋಡುತ್ತಿರುವಾಗಲೇ ದ್ರೌಪದಿಯು, ದ್ಯೂತದಲ್ಲಿ ಪರಾಜಿತ ಳಾದಳೆಂಬ ನೆವದಿಂದ, ಋತುಮತಿಯಾಗಿದ್ದಾಗಲೇ ರಾಜಸಭೆಗೆ ಸೆಳೆಯ ಲ್ಪಟ್ಟಳು. ಬಾಳೆಯ ಗಿಡದಂತೆ ನಡುಗುತ್ತಿದ್ದ ಈಕೆಯನ್ನು ಪಾಪಿಯಾದ ದುಶ್ಶಾಸನನು, ತಲೆಕೂದಲಿನಲ್ಲಿ ಹಿಡಿದು ಸೆಳೆತಂದನು. ಇದಕ್ಕಿಂತಲೂ ಪಾಂಡುವಂಶಕ್ಕೆ ಅವಮಾನವೇನಿದೆ? ಆಗ ನನ್ನ ಮಾವನು ಮೊದಲಾಗಿ ಕೌರವರೆಲ್ಲರೂ ಕುಳಿತಿದ್ದರಲ್ಲವೆ? ಆಗ ಈಕೆಯು ದೈವವನ್ನೇ ಮರೆ

ಹೊಕ್ಕು ಕುರರಪಕ್ಷಿಯಂತೆ ವಿಲಪಿಸಿದಳು. ಆಗ ನಾನೂ ಮೂರ್ಛೆ ಬಿದ್ದೆನು. ಪ್ರಿಯಪುತ್ರರೇ! ಹೀಗಿದ್ದ ನಿಮ್ಮ ತೇಜಸ್ಸು ಹೊರಪಡಬೇಕೆಂದೇ ನಾನು ಆಗ ವಿದುಲೆಯ ಮಾತಿನಂತೆ ನಿಮ್ಮನ್ನು ಪ್ರೋತ್ಸಾಹಿಸಿದೆನಲ್ಲದೆ ಬೇರೆಯಲ್ಲ ಈ ರಾಜವಂಶವು ಪಾಂಡುವಿನ ಕಾಲಾನಂತರದಲ್ಲಿ ನನ್ನ ಪುತ್ರರಾದ ನಿಮ್ಮಲ್ಲಿ ನೆಲೆಗೊಂಡಿರಬೇಕೆಂದೇ ನಾನು ನಿಮ್ಮನ್ನು ಪ್ರೇರಿಸಿದೆನು. ಅಲ್ಲದೆ, ಓ ಪುತ್ರರೇ! ಯಾರಿಂದ ವಂಶಕ್ಷಯವಾಗುವುದೋ ಆತನ ಪುತ್ರ ಪೌತ್ರರಿಗೂ ಪುಣ್ಯಲೋಕಪ್ರಾಪ್ತಿಯಿಲ್ಲ. ನಾನು ಹಿಂದೆ ನನ್ನ ಪತಿಯಿದ್ದಾಗ ವಿಸ್ತಾರವಾದ ರಾಜ್ಯದ ಫಲವನ್ನನುಭವಿಸಿದೆನು. ಮಹಾದಾನಗಳನ್ನು ಕೊಟ್ಟೆನು ವಿಧ್ಯುಕ್ತರೀತಿಯಲ್ಲಿ ಸೋಮಪಾನವನ್ನೂ ಮಾಡಿದೆನು. ಆದುದರಿಂದ ನಾನು ಸ್ವಪ್ರಯೋಜನಕ್ಕಾಗಿ ವಾಸುದೇವನನ್ನು ಯುದ್ಧಕ್ಕೆ ಪ್ರೇರಿಸಿದವಳಲ್ಲ. ವಿದುಲೆಯ ಪ್ರೇರಣೆಯಂತೆ (ನಿಮ್ಮನ್ನು) ಉತ್ಸಾಹಗೊಳಿಸಬೇಕಾಗಿ ಆ ಕಾರ್ಯವನ್ನು ಮಾಡಿದೆನು. ನಾನು ನಿಮ್ಮಿಂದ ಜಯಿಸಲ್ಪಟ್ಟ ರಾಜ್ಯದ ಫಲವನ್ನು ಎಂದಿಗೂ ಅಪೇಕ್ಷಿಸುವಳಲ್ಲ ತಪೋಮಹಿಮೆಯಿಂದ ಪುಣ್ಯಕರವಾದ ಪತಿಯಲೋಕಗಳನ್ನೇ ನಾನು ಅಪೇಕ್ಷಿಸುವೆನು. ಓ ಯುಧಿಷ್ಠಿರಾ! ಈಗ ನಾನು ವನದಲ್ಲಿ ವಾಸಮಾಡುವ ಮಾವನಿಗೂ, ಅತ್ತೆಗೂ ಸೇವೆಮಾಡುತ್ತ ಈ ಶರೀರವನ್ನು ಕಂದಿಸುವೆನು. ಕುಲಶ್ರೇಷ್ಠಾ! ನೀನು ಭೀಮಾದಿಗಳೊಡನೆ ಹಿಂತಿರುಗು. ನಿನ್ನ ಬುದ್ಧಿಯನ್ನು ಧರ್ಮದಲ್ಲಿ ನೆಲೆಗೊಳಿಸು. ನಿನ್ನ ಮನಸ್ಸು ಉದಾರವಾಗಿರಲಿ' ಎಂದಳು.

ಇದು ಹದಿನೆಂಟನೆಯ ಅಧ್ಯಾಯವು.

ಪಾಂಡವಾದಿಗಳು ವ್ಯಾಕುಲದಿಂದ ಹಿಂತಿರುಗಿದುದು. ಧೃತರಾಷ್ಟ್ರನೇ ಮುಂತಾದವರು ಗಂಗಾತೀರದಲ್ಲಿ ಸಾಯಂಕಾಲದ ಆಹ್ನಿಕಗಳನ್ನು ತೀರಿಸಿಕೊಂಡು ಅಲ್ಲಿ ರಾತ್ರಿಯನ್ನು ಕಳೆದುದು.

ಓ ರಾಜಾ! ಕುಂತಿಯ ಮಾತುಗಳನ್ನು ಕೇಳಿ ಪಾಂಡವರು ಪಾಂಚಾಲಿಯೊಡನೆ ಹಿಂತಿರುಗಿದರು. ಆಮೇಲೆ ಕುಂತಿಯನ್ನು ಬಿಡಲಾರದೆ

ರೋದಿಸುತ್ತಿರುವ ಆ ಪುರಸ್ತ್ರೀಯರೆಲ್ಲರ ರೋದನಧ್ವನಿಯು ಪ್ರಬಲವಾಯಿತು. ಪಾಂಡವರೆಲ್ಲರೂ ಧೃತರಾಷ್ಟ್ರನಿಗೆ ಪ್ರದಕ್ಷಿಣಮಾಡಿ, ನಮಸ್ಕರಿಸಿ, ಕುಂತಿಯನ್ನು ಹಿಂದಕ್ಕೆ ಕರೆತರಲಾರದೆ ತಾವು ಹಿಂತಿರುಗಿಬಿಟ್ಟರು. ಆಗ ಧೃತರಾಷ್ಟ್ರನು ಗಾಂಧಾರಿಯನ್ನೂ, ವಿದುರನನ್ನೂ ಕೈ ಹಿಡಿದು ಸಮಾಧಾನದಿಂದ 'ಯುಧಿಷ್ಠಿರನ ತಾಯಿಯು ಹಿಂತಿರುಗಲಿ ಯುಧಿಷ್ಠಿರನು ಹೇಳುವುದೆಲ್ಲ ನಿಜವು. ಯಾವಳುತಾನೇ ತನ್ನ ಮಗನು ಸಂಪಾದಿಸಿದ ಇಂತಹ ಮಹಾಸಂಪತ್ತನ್ನೂ, ಲಾಭವನ್ನೂ, ಸತ್ಪುತ್ರರನ್ನೂ ತ್ಯಜಿಸಿ ಅಜ್ಞಳಂತೆ ದುರ್ಗಮವಾದ ಕಾನನಕ್ಕೆ ಹೋಗಲಿಷ್ಟಪಡುವಳು? ಈಕೆಯು ರಾಜ್ಯದಲ್ಲಿದ್ದುಕೊಂಡೇ ತಪಸ್ಸನ್ನೂ, ವ್ರತಗಳನ್ನೂ ನಡೆಸಬಹುದು. ದಾನಗಳನ್ನೂ ಕೊಡಬಹುದು. ಈಗ ನನ್ನ ಮಾತನ್ನು ಕೇಳಬೇಕು. ಪ್ರಿಯೇ! ಗಾಂಧಾರೀ! ನಾನು ಈ ಸೊಸೆಯ ಉಪಚಾರಗಳಿಂದ ಸಂತೋಷಪಟ್ಟೆನು. ಆದುದರಿಂದ ಎಲೆ ಧರ್ಮಜ್ಞೆ! ಇವಳಿಗೆ ನೀನು ಹಿಂತಿರುಗುವಂತೆ ಹೇಳಿ ಕಳುಹಿಸು' ಎಂದನು. ಆ ಮಾತನ್ನು ಕೇಳಿ ಗಾಂಧಾರಿಯು ಕುಂತಿಯನ್ನು ಕುರಿತು ರಾಜನು ಹೇಳಿದ ಎಲ್ಲಾ ಮಾತುಗಳನ್ನೂ, ಇನ್ನೂ ಕೆಲವು ಸಮಾಧಾನವಾಕ್ಯಗಳನ್ನೂ ಹೇಳಿದಳು ಆದರೇನು? ವನವಾಸಕ್ಕಾಗಿ ಸಂಕಲ್ಪಿಸಿದ ದೃಢವ್ರತನಿಷ್ಠೆಯಾದ ಆ ಕುಂತಿಯನ್ನು ಹಿಂತಿರುಗಿಸಲು ಆ ಗಾಂಧಾರಿಗೂ ಸಾಧ್ಯವಾಗಲಿಲ್ಲ, ಆಗ ಕೌರವಸ್ತ್ರೀಯರಲ್ಲರೂ ಕುಂತಿಯ ನಿಶ್ಚಯವನ್ನೂ, ಇತ್ತಲಾಗಿ ಕುರುಕುಲಶ್ರೇಷ್ಠರು ಹಿಂತಿರುಗುತ್ತಿರುವುದನ್ನೂ ನೋಡಿ ವಿಲಪಿಸಿದರು. ಕುಂತೀಪುತ್ರರೂ, ಸೊಸೆಯರೂ ಹಿಂತಿರುಗಿದಮೇಲೆ, ಧೃತರಾಷ್ಟ್ರನು ವನಾಭಿಮುಖನಾಗಿ ಹೊರಟನು. ಪಾಂಡವರಲ್ಲರೂ ಮಹಾದೈನ್ಯದಿಂದ ತಮ್ಮತಮ್ಮ ಅಂತಃಪುರಸ್ತ್ರೀಯರೊಡನೆ ತಮ್ಮತಮ್ಮ ವಾಹನಗಳನ್ನೇರಿ ಪುರಕ್ಕೆ ಹಿಂತಿರುಗಿದರು ಸ್ತ್ರೀ ಬಾಲವೃದ್ಧರೊಡಗೂಡಿದ ಹಸ್ತಿನಾಪುರವೇ ಸಂತೋಷಾನಂದಗಳಿಲ್ಲದೆ ನಿರುತ್ಸಾಹವಾಗಿ ಕಾಣಿಸಿತು. ಕುಂತಿಯನ್ನು ಬಿಟ್ಟುಬಂದ ಪಾಂಡವರೆಲ್ಲರೂ ತಾಯನ್ನಗಲಿದ ಕರುಗಳಂತೆ ಉತ್ಸಾಹಶೂನ್ಯರಾಗಿ ವ್ಯಸನಗ್ರಸ್ತರಾಗಿದ್ದರು. ಧೃತರಾಷ್ಟ್ರನು ಆದಿನ ಹಗಲು ಬಹುದೂರ ಪ್ರಯಾಣಮಾಡಿ ಗಂಗಾತೀರದಲ್ಲಿಳಿದನು. ಅಲ್ಲಿನ ತಪೋವನಗಳಲ್ಲಿ ವೇದಪಾರಂಗತರಾದ ಬ್ರಾಹ್ಮಣ

ಶ್ರೇಷ್ಠರಿಂದ ವಿಧ್ಯುಕ್ತವಾಗಿ ಹುತಮಾಡಲ್ಪಟ್ಟ ಅಗ್ನಿಗಳು ಅಲ್ಲಲ್ಲಿ ಪ್ರಕಾಶಿಸಿದುವು. ವೃದ್ಧನಾದ ರಾಜನೂ ಅಲ್ಲಿ ಅಗ್ನಿಯನ್ನು ಹತ್ತಿಸಿದನು. ಆ ಅಗ್ನಿಗಳನ್ನು ಪೂಜಿಸಿ ವಿಧ್ಯುಕ್ತರೀತಿಯಲ್ಲಿ ಹೋಮಮಾಡುತ್ತ, ಸಂಧ್ಯಾಕಾಲದಲ್ಲಿ ಸೂರ್ಯನನ್ನು ಉಪಾಸಿಸಿದನು. ವಿದುರನೂ, ಸಂಜಯನೂ ಕೌರವರಾಜನಿಗೂ, ಗಾಂಧಾರಿಗೂ ದರ್ಭೆಗಳಿಂದ ಸಮೀಪದಲ್ಲಿಯೇ ಹಾಸಿಗೆಗಳನ್ನೇರ್ಪಡಿಸಿದರು ಕುಂತಿಯು ಗಾಂಧಾರಿಯ ಸಮೀಪದಲ್ಲಿ ದರ್ಭೆಯಮೇಲೆ ಮಲಗಿದಳು. ಆಮೇಲೆ ರಾಜನ ಅನುಮತಿಯಮೇಲೆ, ವಿದುರಾದಿಗಳೂ, ಋತ್ವಿಕ್ಕುಗಳೂ, ಜತೆಯಲ್ಲಿ ಬಂದ ಬ್ರಾಹ್ಮಣರೂ ತಕ್ಕ ಸ್ಥಳಗಳಲ್ಲಿ ಮಲಗಿದರು ವೇದಾಧ್ಯಯನಮಾಡಿದ ಬ್ರಾಹ್ಮಣಶ್ರೇಷ್ಠರಿಂದಲೂ ಹುತಮಾಡಿ ಜ್ವಲಿಸುವ ಅಗ್ನಿಯಿಂದಲೂ ಕೂಡಿದ ಆ ರಾತ್ರಿಯು ಅವರಿಗೆ *ಬ್ರಹ್ಮಸಂಬಂಧವಾದ ರಾತ್ರಿಯಂತೆ ಸಂತೋಷಜನಕವಾಯಿತು. ರಾತ್ರಿಯು ಕಳೆದೊಡನೆಯೇ ಅವರೆಲ್ಲರೂ ಪ್ರಾತಃಕಾಲದ ಆಹ್ನಿಕಗಳನ್ನು ಮುಗಿಸಿಕೊಂಡು, ಅಗ್ನಿಕಾರ್ಯವನ್ನು ನಡೆಸಿ, ಉಪವಾಸವ್ರತವನ್ನು ಹಿಡಿದು ಉತ್ತರಾಭಿಮುಖವಾಗಿ ಮುಂದೆ ಹೊರಟರು. ಅದುವರೆಗೆ ಪುರಜನರೊಡನೆಯೂ, ಗ್ರಾಮಜನರೊಡನೆಯೂ ಮಾತನಾಡುತ್ತ ಆ ವ್ಯಸನದಲ್ಲಿದ್ದ ಅವರಿಗೆ, ಆ ಮೊದಲನೆಯ ದಿನವನ್ನು ಕಳೆಯುವುದು ಬಹಳ ದುಃಖಕರವಾಗಿದ್ದಿತು

ಇದು ಹತ್ತೊಂಭತ್ತನೆಯ ಅಧ್ಯಾಯವು.

{ ಧೃತರಾಷ್ಟ್ರನು ವಿದುರಾದಿಗಳೊಡನೆ ಕುರುಕ್ಷೇತ್ರಕ್ಕೆ ಹೋಗಿ ಶತಯೂಪಾಶ್ರಮದಲ್ಲಿ ವ್ಯಾಸನು ಉಪದೇಶಿಸದಂತೆ ಉಗ್ರತಪಸ್ಸನ್ನು ಮಾಡಿದುದು. }

ಆಮೇಲೆ ರಾಜನು, ವಿದುರನ ಅನುಮತಿಯಮೇರೆಗೆ ಪರಿಶುದ್ಧವೂ, ಪುಣ್ಯಲಭ್ಯವೂ ಆದ ಗಂಗಾತೀರದಲ್ಲ ತಂಗಿದನು ಆ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಲ್ಲರೂ ರಾಜನನ್ನು

---

*ವೇದಘೋಷವಿಶಿಷ್ಟವಾದ ರಾತ್ರಿಯೆಂದು ಕೆಲವುಕಡೆ ವ್ಯಾಖ್ಯಾನವಿದೆ.

ಬಹಳ ಆದರದಿಂದ ಪೂಜಿಸಿದರು. ಅವರೆಲ್ಲರೊಡನೆ ರಾಜನು ಸ್ವಲ್ಪಕಾಲ ವಿದ್ದು, ಅವರಿಗೆ ನಾನಾಕಥೆಗಳನ್ನು ಹೇಳಿ ಸಂತೋಷಪಡಿಸುತ್ತ, ವಿಧ್ಯುಕ್ತರೀತಿಯಲ್ಲಿ ಅವರಿಗೆ ತಾನೂ ಪ್ರತಿಸತ್ಕಾರಮಾಡಿ, ಅವರವರ ಪರಿವಾರಗಳೊಡನೆ ಅನುಮತಿಕೊಟ್ಟು ಕಳುಹಿಸಿಬಿಟ್ಟನು. ಆಮೇಲೆ ಸಾಯಂಕಾಲದಲ್ಲಿ ರಾಜನೂ, ಗಾಂಧಾರಿಯೂ, ಗಂಗೆಯಲ್ಲಿಳಿದು ಸ್ನಾನಮಾಡಿದರು. ವಿದುರಾದಿಗಳೂ ಹಾಗೆಯೇ ಸ್ನಾನಮಾಡಿ ಬೇರೆಬೇರೆಯಾಗಿ ಸಂಧ್ಯಾಕಾರ್ಯಗಳನ್ನು ಮಾಡಿದರು. ಓ ರಾಜಾ! ಆಮೇಲೆ ಕುಂತಿಯು ಮಾವನನ್ನೂ, ಗಾಂಧಾರಿಯನ್ನೂ ಗಂಗಾತೀರಕ್ಕೆ ಕರೆದುಕೊಂಡುಬಂದಳು. ಅಲ್ಲಿ ಋತ್ವಿಕ್ಕುಗಳು ರಾಜನಿಗೆ ವೇದಿಯಲ್ಲಿ ಪರಿಸ್ತರಣವನ್ನು ಮಾಡಿದರು. ರಾಜನು ಅಗ್ನಿಗೆ ದರ್ಭೆಗಳಿಂದ ಪರಿಸ್ತರಣವನ್ನು ಮಾಡಿ, ಹೋಮವನ್ನು ಮುಗಿಸಿದನು. ಆಮೇಲೆ ಆ ರಾಜನು ತನ್ನ ಎಲ್ಲಾ ಸಹಚರರೊಡನೆ ಗಂಗಾತೀರದಿಂದ ಕುರುಕ್ಷೇತ್ರಕ್ಕೆ ಹೊರಟನು. ಆತನು ಅಲ್ಲಿದ್ದ ಒಂದು ಆಶ್ರಮಪ್ರದೇಶವನ್ನು ಕಂಡು, ಶತಯೂಪನೆಂಬ ರಾಜರ್ಷಿಯು ತಪಸ್ಸುಮಾಡುತ್ತಿದ್ದ ಆ ಪುಣ್ಯಾಶ್ರಮಕ್ಕೆ ಬಂದನು. ಆ ಶತಯೂಪನು ಕೇಕಯದೇಶದ ಪ್ರಸಿದ್ಧರಾಜನು. ಮಹಾವೀರನು! ಆತನು ತನ್ನ ಪುತ್ರನನ್ನು ರಾಜ್ಯಕ್ಕೆ ನಿಯಮಿಸಿ ವನಕ್ಕೆ ಬಂದವನು. ಧೃತರಾಷ್ಟ್ರನು ಅಲ್ಲಿಂದ ಆ ಶತಯೂಪನೊಡನೆ ವ್ಯಾಸಾಶ್ರಮಕ್ಕೆ ಬಂದನು ಅಲ್ಲಿ ವ್ಯಾಸನು, ಆ ಕೌರವಶ್ರೇಷ್ಠನನ್ನು ವಿಧ್ಯುಕ್ತರೀತಿಯಲ್ಲಿ ಬರಮಾಡಿಕೊಂಡು ಆದರಿಸಿದನು. ಆಮೇಲೆ ಧೃತರಾಷ್ಟ್ರನು ಅಲ್ಲಿ ದೀಕ್ಷೆಯನ್ನು ವಹಿಸಿ ಹಿಂತಿರುಗಿಬಂದು ಶತಯೂಪಾಶ್ರಮದಲ್ಲಿ ನಿಂತನು ಮಹಾಪ್ರಾಜ್ಞನಾದ ಆ ಶತಯೂಪನು, ವ್ಯಾಸಾಜ್ಞೆಯಿಂದ ಧೃತರಾಷ್ಟ್ರರಾಜನಿಗೆ ಅರಣ್ಯದಲ್ಲಿ ನಡೆಯಬೇಕಾದ ವಿಧಿಗಳೆಲ್ಲವನ್ನೂ ತಿಳಿಸಿದನು. ಅದರಂತೆ ಅಲ್ಲಿ ಧೃತರಾಷ್ಟ್ರನು ತನ್ನನ್ನೂ, ತನ್ನ ಸಂಗಡಿಗರನ್ನೂ ತಪಸ್ಸಿಗೆ ಸಿದ್ಧರನ್ನಾಗಿ ಮಾಡಿದನು ಹಾಗೆಯೇ ಗಾಂಧಾರಿಯು ಮರದ ತೊಗಟೆಯನ್ನೂ, ಕೃಷ್ಣಾಜಿನವನ್ನೂ ಧರಿಸಿ, ಕುಂತಿಯೊಡನೆ ಸೇರಿ ವ್ರತವನ್ನು ಹಿಡಿದಳು. ಅವರಿಬ್ಬರೂ ಇಂದ್ರಿಯಗಳನ್ನು ನಿಗ್ರಹಿಸಿ, ತ್ರಿಕರಣಗಳಿಂದ ಉಗ್ರತಪಸ್ಸನ್ನು ಮಾಡಿದರು. ಕ್ರಮಕ್ರಮವಾಗಿ ಧೃತರಾಷ್ಟ್ರನ ದೇಹವು ಕೃಶವಾಗಿ, ಅಸ್ಥಿಚರ್ಮಾವಶಿಷ್ಟವಾದಂತೆ

ಕಾಣಿಸಿತು. ಆತನ ಮಾಂಸಗಳೆಲ್ಲವೂ ಒಣಗಿದಂತಿದ್ದುವು. ಜಟೆಯನ್ನು ಧರಿಸಿ, ಕೃಷ್ಣಾಜಿನವನ್ನುಟ್ಟು, ಮರದ ತೊಗಟೆಯನ್ನು ಹೊದೆದು, ಮೋಹವನ್ನು ಬಿಟ್ಟು ಮಹರ್ಷಿಯಂತೆ ಉಗ್ರತಪಸ್ಸನ್ನು ಹೂಡಿದನು. ಧರ್ಮಾರ್ಥಗಳನ್ನರಿತವನೂ, ಮಹಾಬುದ್ಧಿಯುಳ್ಳವನೂ ಆದ ವಿದುರನೂ ಸಂಜಯನೊಡನೆ ಉಗ್ರತಪಸ್ಸಿನಲ್ಲಿ ನೆಲೆಸಿ, ಅದರಿಂದ ಕೃಶದೇಹನಾಗಿದ್ದನು. ಅವರಿಬ್ಬರೂ ಜಟಾವಲ್ಕಲಧಾರಿಗಳಾಗಿ ರಾಜದಂಪತಿಗಳನ್ನು ಉಪಚರಿಸುತ್ತಿದ್ದರು

ಇದು ಇಪ್ಪತ್ತನೆಯ ಅಧ್ಯಾಯವು

ನಾರದಾದಿಗಳು ಧೃತರಾಷ್ಟ್ರನನ್ನು ಕಾಣುವುದಕ್ಕೆ ಬಂದುದು
ನಾರದನು ಆ ವನದ ಮಹಿಮೆಯನ್ನು ಧೃತರಾಷ್ಟ್ರನಿಗೆ ತಿಳಿಸಿದುದು

ಆಮೇಲೆ ಋಷಿಶ್ರೇಷ್ಠರಾದ ನಾರದ ಪರ್ವತರೂ, ಮಹಾತಪಸ್ವಿಯಾದ ದೇವಲನೂ, ಶಿಷ್ಯಸಮೇತನಾದ ವ್ಯಾಸನೂ. ಇತರ ಸಿದ್ಧರೂ, ವೃದ್ಧನೂ ಮಹಾಧಾರ್ಮಿಕನೂ ಆದ ಶತಯೂಪರಾಜರ್ಷಿಯೂ ಧೃತರಾಷ್ಟ್ರನನ್ನು ನೋಡುವುದಕ್ಕಾಗಿ ಅಲ್ಲಿಗೆ ಬಂದರು. ಓ ಮಹಾರಾಜಾ! ಆಗ ಕುಂತಿಯು ಅವರೆಲ್ಲರನ್ನೂ ವಿಧ್ಯುಕ್ತರೀತಿಯಲ್ಲಿ ಪೂಜಿಸಿದಳು. ಆ ತಾಪಸರೂ ಆಕೆಯ ಉಪಚಾರದಿಂದ ಸಂತುಷ್ಟರಾದರು. ಆ ಮಹರ್ಷಿಗಳು ಮಹಾತ್ಮನಾದ ಧೃತರಾಷ್ಟ್ರರಾಜನನ್ನು ಸಂತೋಷಪಡಿಸುತ್ತ, ಧರ್ಮರಹಸ್ಯಗಳನ್ನೊಳಕೊಂಡ ಕಥೆಗಳನ್ನು ಹೇಳುತ್ತಿದ್ದರು. ಸಕಲವನ್ನೂ ಧ್ಯಾನದಿಂದಲೇ ಸಾಕ್ಷಾತ್ಕರಿಸಬಲ್ಲ ದೇವರ್ಷಿಯಾದ ನಾರದನು ಕಥಾಮಧ್ಯದಲ್ಲಿ ಆ ತಪೋವನಕ್ಕೆ ಸಂಬಂಧಿಸಿದ ವೃತ್ತಾಂತವನ್ನು ಹೇಳಲಾರಂಭಿಸಿ 'ರಾಜಾ! ಹಿಂದೆ ಬ್ರಹ್ಮಸಮಾನನೂ, ಎಲ್ಲಿಯೂ ಭಯವಿಲ್ಲದವನೂ, ಶತಯೂಪನ ಪಿತಾಮಹನೂ ಆದ ಸಹಸ್ರಚಿತ್ಯನೆಂಬ ಒಬ್ಬರಾಜನಿದ್ದನು. ಧರ್ಮಾತ್ಮನಾದ ಆ ಸಹಸ್ರಚಿತ್ಯನು, ತನ್ನಂತೆಯೇ ಮಹಾಧಾರ್ಮಿಕನೆನಿಸಿದ್ದ ಹಿರಿಯ ಮಗನಿಗೆ ರಾಜ್ಯವನ್ನು ವಹಿಸಿ, ಈ ವನಕ್ಕೆ ಬಂದು,

ಇಲ್ಲಿ ತಪಸ್ಸನ್ನು ಪೂರೈಸಿ ಇಂದ್ರಗೃಹಕ್ಕೆ ಹೋದನು. ತಪಸ್ಸಿನಿಂದ ನಿಷ್ಕಲ್ಮಷನಾದ ಆ ರಾಜನನ್ನು ಹಿಂದೆ ನಾನು ಆಗಾಗ ಇಂದ್ರಸದನ ದಲ್ಲಿ ನೋಡಿರುವೆನು. ಭಗದತ್ತನ ಪಿತಾಮಹನಾದ ಶೈಲಾಲಯನೆಂಬ ರಾಜನೂ ಇಲ್ಲಿನ ತಪೋಬಲದಿಂದ ಇಂದ್ರಗೃಹಕ್ಕೆ ಹೋದನು. ದೇವೇಂದ್ರಸಮಾನನೆನಿಸಿದ ಪೃಷಧ್ರನೆಂಬ ಅರಸನೊಬ್ಬನಿದ್ದನು ಆತನೂ ಇಲ್ಲಿಯೇ ತಪಸ್ಸುಮಾಡಿ ದೇವಲೋಕಕ್ಕೆ ಹೋದನು ಓ ರಾಜಾ! ಇದೇ ಅರಣ್ಯದಲ್ಲಿ ಮಾಂಧಾತೃಪುತ್ರನಾದ ಪುರುಕುತ್ಸರಾಜನೂ ಸಿದ್ಧಿ ಯನ್ನು ಪಡೆದನು. ನದೀಶ್ರೇಷ್ಠಳಾದ ನರ್ಮದೆಯು ಯಾರಿಗೆ ಪತ್ನಿಯಾ ಗಿದ್ದಳೋ, ಇಕ್ಷ್ವಾಕುವಂಶದ ದುರ್ಯೋಧನನೆಂಬ ಆ ಅರಸನೂ ಈ ಅರ ಣ್ಯದಲ್ಲಿ ತಪಸ್ಸುಮಾಡಿ ಸ್ವರ್ಗಸ್ಥನಾದನು. ಮಹಾಧಾರ್ಮಿಕನಾದ ಶಶ ಲೋಮನೆಂಬ ಅರಸನೊಬ್ಬನಿದ್ದನು. ಆತನೂ ಈ ವನದಲ್ಲಿಯೇ ದೊಡ್ಡ ತಪಸ್ಸುಮಾಡಿ ಸ್ವರ್ಗಕ್ಕೆ ಹೋದನು. ಓ ರಾಜಾ! ನೀನೂ ವ್ಯಾಸನ ಅನುಗ್ರಹದಿಂದ ಈ ತಪೋವನವನ್ನು ಸೇರಿರುವೆ. ಇಲ್ಲಿ ಇತರರಿಂದ ಪಡೆ ಯಲಸಾಧ್ಯವಾದ ಉತ್ತಮಸಿದ್ಧಿಯನ್ನು ಪಡೆಯುವೆ. ಓ ರಾಜೋ ತ್ತಮಾ! ನೀನೂ ಇಲ್ಲಿ ತಪಸ್ಸನ್ನು ಮುಗಿಸಿದಮೇಲೆ ಗಾಂಧಾರಿಯೊಡನೆ ಆ ಮಹಾತ್ಮರ ಗತಿಯನ್ನೇ ಪಡೆಯುವೆ. ಇಂದ್ರನ ಸಮೀಪದಲ್ಲಿರುವ ಪಾಂಡುವು ಈಗಲೂ ನಿನ್ನನ್ನು ಸ್ಮರಿಸುತ್ತಲೇ ಇರುವನು. ಅಲ್ಲಿ ಆತನು ನಿನಗೆ ಶ್ರೇಯಸ್ಸನ್ನುಂಟುಮಾಡುವನು. ನಿನ್ನ ಅತ್ತಿಗೆಯೂ, ಯುಧಿಷ್ಠಿರನ ತಾಯಿಯೂ ಆದ ಈ ಕುಂತಿಯು, ನಿನಗೂ, ಗಾಂಧಾರಿ ಗೂ ಸೇವೆಮಾಡುತ್ತಿರುವುದರಿಂದ ಪತಿಲೋಕವನ್ನು ಸೇರುವಳು. ಯು ಧಿಷ್ಠಿರನು ಸನಾತನಧರ್ಮಮೂರ್ತಿಯೆಂದು ತಿಳಿ! ಓ ರಾಜಾ! ನಾವು ಇದನ್ನು ದಿವ್ಯದೃಷ್ಟಿಯಿಂದ ತಿಳಿದಿರುವೆವು. ವಿದುರನು, ಇಲ್ಲಿ ಮಹಾತ್ಮ ನಾದ ಯುಧಿಷ್ಠಿರನ ದೇಹದಲ್ಲಿ ಪ್ರವೇಶಿಸುವನು. ಸಂಜಯನೂ ಆತ ನನ್ನು ಧ್ಯಾನಿಸುತ್ತ ಇಲ್ಲಿಂದಲೇ ಸ್ವರ್ಗಸ್ಥನಾಗುವನು' ಎಂದನು. ತನ್ನ ಪತ್ನಿಯೊಡನೆ ಧೃತರಾಷ್ಟ್ರನು ಈ ಮಾತುಗಳನ್ನು ಕೇಳಿ ನಾರದನ ವಾಕ್ಯ ಗಳನ್ನು ಕೊಂಡಾಡುತ್ತ ಆತನನ್ನು ಪೂಜಿಸಿದನು. ಅಲ್ಲಿದ್ದ ಬ್ರಾಹ್ಮಣ

ರೆಲ್ಲರೂ ಧೃತರಾಷ್ಟ್ರನ ಸಂತೋಷವನ್ನು ಕಂಡು, ತಾವೂ ಸಂತುಷ್ಟರಾಗಿ ಅಡಿಗಡಿಗೆ ನಾರದನನ್ನು ಪೂಜಿಸಿದರು

ಇದು ಇಪ್ಪತ್ತೊಂದನೆಯ ಅಧ್ಯಾಯವು.

{ ಮೂರುವರ್ಷಗಳು ಕಳೆದಮೇಲೆ ಧೃತರಾಷ್ಟ್ರನು ಗಾಂಧಾರಿಯೊಡನೆ ಕುಬೇರಲೋಕವನ್ನು ಸೇರುವನೆಂದು ನಾರದನು ತಿಳಿಸಿದುದು. }

ಬ್ರಾಹ್ಮಣರೆಲ್ಲರೂ ನಾರದನ ವಾಕ್ಯಗಳನ್ನು ಕೊಂಡಾಡುತ್ತಿರಲು, ರಾಜರ್ಷಿಯಾದ ಶತಯೂಪನು ನಾರದನನ್ನು ಕುರಿತು 'ಮುನೀಂದ್ರಾ! ಮಹಾತ್ಮನಾದ ನೀನು ಕೌರವರಾಜನಿಗೂ, ಈ ಜನರೆಲ್ಲರಿಗೂ, ನನಗೂ ಈ ಕಥಾಶ್ರವಣದಲ್ಲಿ ಶ್ರದ್ಧೆಯನ್ನು ಹೆಚ್ಚಿಸಿದೆ ಧೃತರಾಷ್ಟ್ರನ ವಿಷಯವಾಗಿ ಒಂದು ಮಾತನ್ನು ಕೇಳಬೇಕೆಂದಿರುವೆನು. ನೀನು ಸಕಲವಿಷಯಗಳನ್ನೂ ತಿಳಿದವನು. ದಿವ್ಯದೃಷ್ಟಿಯುಳ್ಳವನು! ಮನುಷ್ಯರ ನಾನಾಗತಿಗಳನ್ನೂ ನೋಡಬಲ್ಲವನು. ಇಲ್ಲಿಂದ ಅನೇಕರಾಜರು ಮಹೇಂದ್ರಲೋಕಕ್ಕೆ ಸೇರಿದುದನ್ನು ನೀನು ತಿಳಿಸಿದೆಯಷ್ಟೆ! ಈ ರಾಜನಿಗೆ ಲಭಿಸುವ ಲೋಕಗಳನ್ನು ನೀನು ತಿಳಿಸಲಿಲ್ಲವೇಕೆ? ಈ ರಾಜನು ಯಾವಾಗ, ಎಂತಹ ಸ್ಥಾನವನ್ನು ಪಡೆಯುವನೆಂಬುದನ್ನೂ ನಿನ್ನಿಂದ ನಾನು ತಿಳಿಯಲಪೇಕ್ಷಿಸುವೆನು ಅದನ್ನು ಯಥಾವತ್ತಾಗಿ ತಿಳಿಸು' ಎಂದನು. ಆಗ ಮಹಾತಪಸ್ವಿಯೂ, ದಿವ್ಯಜ್ಞಾನವುಳ್ಳವನೂ ಆದ ನಾರದಋಷಿಯು, ಆ ಸಭಾಮಧ್ಯದಲ್ಲಿ ಹೀಗೆಂದು ಹೇಳುವನು. 'ಓ ರಾಜರ್ಷೀ! ನಾನು ಒಂದಾವರ್ತಿ ಆಕಸ್ಮಿಕವಾಗಿ ಇಂದ್ರಸಭೆಗೆ ಹೋದೆನು. ಅಲ್ಲಿ ಶಚೀಪತಿಯಾದ ಇಂದ್ರನನ್ನೂ, ಪಾಂಡುಮಹಾರಾಜನನ್ನೂ ಕಂಡೆನು. ಅಲ್ಲಿ, ಈ ಧೃತರಾಷ್ಟ್ರರಾಜನು ಈಗ ಮಾಡುತ್ತಿರುವ ಅಸಾಧ್ಯವಾದ ತಪಸ್ಸಿನ ವಿಷಯವಾಗಿ ಕೆಲವು ಪ್ರಸ್ತಾವವು ನಡೆಯಿತು. ಅಲ್ಲಿ ನಾನು ಇದೇ ವಿಷಯವಾಗಿ ಇಂದ್ರನ ಬಾಯಿಂದ ಹೊರಟ ಮಾತನ್ನೇ ಕೇಳಿ ಬಂದೆನು. 'ಧೃತರಾಷ್ಟ್ರನ ಆಯುಸ್ಸು ಮುಗಿಯಲು ಇನ್ನು ಮೂರುವರ್ಷಗಳುಮಾತ್ರವೇ ಉಳಿ

ದಿರುವುವು. ಆಮೇಲೆ ಮಹಾಭಾಗ್ಯಶಾಲಿಯಾದ ಧೃತರಾಷ್ಟ್ರನು ತಪಸ್ಸಿನಿಂದ ಪಾಪಗಳನ್ನೆಲ್ಲ ನೀಗಿ, ದಿವ್ಯಾಭರಣಗಳಿಂದಲಂಕೃತನಾಗಿ, ಗಾಂಧಾರಿಯೊಡನೆ ಕಾಮಗಮನವುಳ್ಳ ವಿಮಾನವನ್ನೇರಿ, ಕುಬೇರಲೋಕವನ್ನು ಸೇರಿ, ಅಲ್ಲಿ ಕುಬೇರನಿಂದ ಪೂಜಿತನಾಗುವನು ತನ್ನ ತಪೋಬಲದಿಂದ ದೇವ ಗಂಧರ್ವ ರಾಕ್ಷಸರ ಲೋಕಗಳಲ್ಲೆಲ್ಲ ತನ್ನ ಇಷ್ಟಾನುಸಾರವಾಗಿ ಸಂಚರಿಸುವನು' ಈ ದೇವರಹಸ್ಯವನ್ನು ನಿಮ್ಮಮೇಲಿನ ಪ್ರೀತಿಯಿಂದ ನಾನು ನಿಮಗೆ ತಿಳಿಸಿರುವೆನು. ನೀವಾದರೋ ವಿದ್ಯಾಧನವುಳ್ಳವರು. ತಪಸ್ಸಿನಿಂದ ಪಾಪವನ್ನು ಭಸ್ಮೀಕರಿಸಿದವರು' ಎಂದು ಇಂದ್ರನು ನನ್ನಿದಿರಾಗಿ ಹೇಳಿರುವನು' ಎಂದನು. ದೇವರ್ಷಿಯ ಈ ದಿವ್ಯವಾಕ್ಯಗಳನ್ನು ಕೇಳಿ ಅಲ್ಲಿ ನೆರೆದಿದ್ದವರೂ, ರಾಜನೂ ಬಹಳ ಸಂತೋಷಗೊಂಡರು. ವಿದ್ವಾಂಸರೂ, ಸಿದ್ಧಗತಿಯನ್ನು ಪಡೆದವರೂ ಆದ ಅವರೆಲ್ಲರೂ ಹೀಗೆ ಕಥೆಗಳನ್ನು ಹೇಳಿಕೊಳ್ಳುತ್ತ, ಧೃತರಾಷ್ಟ್ರನೊಡನೆ ಸ್ವಲ್ಪಹೊತ್ತನ್ನು ಕಳೆದು, ಆಮೇಲೆ ತಮ್ಮ ಇಷ್ಟಾನುಸಾರವಾಗಿ ಹೊರಟರು

ಇದು ಇಪ್ಪತ್ತೆರಡನೆಯ ಅಧ್ಯಾಯವು.

ಯುಧಿಷ್ಠಿರಾದಿಗಳು ಕುಂತಿ ಮೊದಲಾದವರ ಅಗಲಿಕೆಯಿಂದಲೂ, ಅಭಿಮನ್ಯು ಮುಂತಾದವರ ಮರಣದಿಂದಲೂ ಉಂಟಾದ ದುಃಖದಿಂದ, ತಮ್ಮ ತಮ್ಮ ಕಾರ್ಯಗಳನ್ನೇ ಗಮನಿಸದಿದ್ದುದು.

ಓ ರಾಜಾ! ಧೃತರಾಷ್ಟ್ರನು ವನಕ್ಕೆ ಹೋದುದುಮೊದಲು, ಪಾಂಡವರು ದುಃಖದಿಂದಲೂ, ತಾಯಿಯನ್ನಗಲಿದ ಶೋಕದಿಂದಲೂ ತಪಿಸುತ್ತಿದ್ದರು. ಹಾಗೆಯೇ ಆ ಪಟ್ಟಣದ ಜನರೆಲ್ಲರೂ ರಾಜನವಿಷಯವಾಗಿ ವ್ಯಸನಪಡುತ್ತಿದ್ದರು. ಬ್ರಾಹ್ಮಣರು ಅಲ್ಲಲ್ಲಿ ಇದೇ ಪ್ರಸ್ತಾವಗಳನ್ನು ಹೇಳುತ್ತ 'ವೃದ್ಧನಾದ ಆ ರಾಜನು ನಿರ್ಜನಪ್ರದೇಶವಾದ ಆ ವನದಲ್ಲಿ ಹೇಗೆ ಜೀವಿಸಬಲ್ಲನು? ಮಹಾಭಾಗ್ಯಶಾಲಿನಿಯರಾದ ಗಾಂಧಾರಿಯೂ, ಕುಂತಿಯೂ ಹೇಗೆ ಆ ವನದಲ್ಲಿರುವರು? ಯಾವಾಗಲೂ ಸುಖಗಳನ್ನೇ

ಅನುಭವಿಸುತ್ತಿದ್ದವನೂ, ಜ್ಞಾನನೇತ್ರಗಳುಳ್ಳವನೂ, ಉದಾರಸ್ವಭಾವವುಳ್ಳವನೂ ಆದ ಆ ರಾಜರ್ಷಿಯು, ಈಗಾಗಲೇ ಆ ಮಹಾರಣ್ಯದಲ್ಲಿ ಏನುಗತಿಯನ್ನು ಹೊಂದಿರುವನೋ ? ಕುಂತಿಯು ಮಾಡಿದುದು ಬಹಳ ಅಸಾಧ್ಯಕಾರ್ಯವು ಅಂತಹ ಸತ್ಪುತ್ರರನ್ನೂ, ರಾಜ್ಯಸುಖವನ್ನೂ ತೊರೆದು ಹೀಗೆ ವನಕ್ಕೆ ಹೋಗಿರಲು ಎಂದಿಗೂ ಅವಳು ಅರ್ಹಳಲ್ಲ ಭ್ರಾತೃಶುಶ್ರೂಷೆಮಾಡುತ್ತಿದ್ದ ಮಹಾಜ್ಞಾನಿಯಾದ ವಿದುರನೂ, ಮೇಧಾವಿಯೂ, ಕೃತಜ್ಞನೂ ಆದ ಸಂಜಯನೂ ಯಾವ ಗತಿಗೆ ಗುರಿಯಾದರೋ?' ಎಂಬೀ ರೀತಿಯಾಗಿ ಆ ರಾಜನವಿಷಯವಾದ ಕಥೆಗಳನ್ನೇ ಹೇಳುತ್ತಿದ್ದರು. ಸ್ತ್ರೀಬಾಲವೃದ್ಧರಾದಿಯಾಗಿ ಆ ಪಟ್ಟಣದ ಜನರೆಲ್ಲರೂ, ಚಿಂತಾಶೋಕಗಳಿಂದ ತಪಿಸುತ್ತ ಅಲ್ಲಲ್ಲಿ ಒಬ್ಬರೊಡನೊಬ್ಬರು ಆ ರಾಜನ ವಿಷಯವಾಗಿಯೇ ಮಾತನಾಡುತ್ತಿದ್ದರು ಪಾಂಡವರೂ ಮಹಾದುಃಖಾಕ್ರಾಂತರಾಗಿ, ವೃದ್ಧಳಾದ ತಾಯಿಯನ್ನೂ, ವೃದ್ಧನೂ, ಪುತ್ರಶೋಕಪೀಡಿತನೂ ಆದ ಆ ಧೃತರಾಷ್ಟ್ರರಾಜನನ್ನೂ, ಗಾಂಧಾರಿಯನ್ನೂ, ಮಹಾಜ್ಞಾನಿಯಾದ ವಿದುರನನ್ನೂ ನೆನೆಸಿಕೊಂಡು ದುಃಖದಿಂದ ಪಟ್ಟಣದಲ್ಲಿ ಕೆಲವುಕಾಲ ವಾಸಮಾಡುತ್ತಿದ್ದರು ಆಗ ಆ ಪಾಂಡವರಿಗೆ ರಾಜ್ಯದ ವಿಷಯದಲ್ಲಿಯೂ, ತಮ್ಮ ಸ್ತ್ರೀಯರಲ್ಲಿಯೂ, ವೇದಾಧ್ಯಯನದಲ್ಲಿಯೂ ಅಪೇಕ್ಷೆಯೇ ಇರಲಿಲ್ಲ ಅವರು ಸದಾ ರಾಜನವಿಷಯವಾಗಿಯೂ, ಜ್ಞಾತಿವಧೆಯ ವಿಷಯವಾಗಿಯೂ ಅಡಿಗಡಿಗೆ ಚಿಂತಿಸುತ್ತ, ಯಾವುದಕ್ಕೂ ಮನಸ್ಸುಕೊಡದಿದ್ದರು ಯುದ್ಧಭೂಮಿಯಲ್ಲಿ ಬಾಲಕನಾದ ಅಭಿಮನ್ಯುವಿಗೆ ಸಂಭವಿಸಿದ ಅನ್ಯಾಯಮರಣವನ್ನೂ, ಮಹಾಬಾಹುಬಲವುಳ್ಳ ಕರ್ಣನ ಮರಣವನ್ನೂ, ದ್ರೌಪದೀಕುಮಾರರಿಗೂ, ಇತರ ಸುಹೃತ್ತುಗಳಿಗೂ ಸಂಭವಿಸಿದ ಭಯಂಕರವಾದ ಕೊಲೆಯನ್ನೂ ನೆನೆಸಿ ದುಃಖಗೊಂಡರು ಯುದ್ಧದಲ್ಲಿ ಮಹಾವೀರರಲ್ಲ ಹತರಾಗಿ, ಧನಕನಕ ರತ್ನ ಶೂನ್ಯವಾದ ಭೂಮಿಯವಿಷಯವಾಗಿ ಎಷ್ಟೆಷ್ಟು ಚಿಂತಿಸಿದರೂ ಅವರಿಗೆ ಶಾಂತಿಯುಂಟಾಗಲಿಲ್ಲ ಪುತ್ರರನ್ನು ಕಳೆದುಕೊಂಡ ದ್ರೌಪದಿಯೂ, ಸುಭದ್ರೆಯೂ ಇವರಿಬ್ಬರೂ ಸಂತೋಷಹೀನರಾಗಿಯೇ ಇದ್ದರು. ಆದರೆ ಉತ್ತರೆಯ ಪುತ್ರನೂ, ನಿನ್ನ ತಂದೆಯೂ ಆದ ಪರೀ

ಕ್ಷಿತ್ತನ್ನು ನೋಡಿಕೊಂಡು ಅವರು ಹೇಗೋ ಪ್ರಾಣಧಾರಣೆ ಮಾಡಿಕೊಂಡಿದ್ದರು.

ಇದು ಇಪ್ಪತ್ತುಮೂರನೆಯ ಅಧ್ಯಾಯವು.

ಯುಧಿಷ್ಠಿರನು ದ್ರೌಪದಿ ಮೊದಲಾದವರೊಡನೆಯೂ, ತನ್ನ ತಮ್ಮಂದಿರೊಡನೆಯೂ, ಪುರವಾಸಿಗಳೊಡನೆಯೂ ಕುಂತಿ ಮೊದಲಾದವರನ್ನು ನೋಡಲು ತಿರುಗಿ ಕಾಡಿಗೆ ಬಂದುದು.

ಆ ಪಾಂಡವರು ಸರ್ವಕಾಲದಲ್ಲಿಯೂ ತಮ್ಮ ತಾಯಿಯನ್ನು ನೆನೆಸಿಕೊಂಡು ದುಃಖಿಸುತ್ತಲೇ ಇದ್ದರು ಮೊದಮೊದಲು ಯಾವಾಗಲೂ ರಾಜಕಾರ್ಯದಲ್ಲಿ ಅತ್ಯಾಸಕ್ತರಾಗಿದ್ದ ಆ ಪಾಂಡವರಿಗೆ, ಈಗ ಆ ರಾಜಕಾರ್ಯಗಳ ಗಮನವೇ ಬಿಟ್ಟುಹೋಯಿತು. ಅವರಿಗೆ ಯಾವುದೂ ತೃಪ್ತಿಕರವಾಗಿರಲಿಲ್ಲ. ಇತರರು ಮಾತನಾಡಿಸಿದರೂ ಮಾತನಾಡುತ್ತಿರಲಿಲ್ಲ ದುಃಖದಿಂದ ಪ್ರಜ್ಞಾಶೂನ್ಯರಂತಿದ್ದರು. ಆಗಾಗ ಅವರು ತಮ್ಮೊಳಗೆ ತಾವು 'ಅಯ್ಯೋ! ಮೊದಲೇ ಕೃಶದೇಹವುಳ್ಳ ಕುಂತಿಯು, ವೃದ್ಧರಾದ ಧೃತರಾಷ್ಟ್ರ ಗಾಂಧಾರಿಯರನ್ನು ಹೇಗೆ ಉಪಚರಿಸಬಲ್ಲಳು?' ಎಂದು ತಮ್ಮ ತಾಯಿಯ ವಿಷಯವಾಗಿ ಚಿಂತಿಸುತ್ತಿದ್ದರಲ್ಲದೆ 'ಆಹಾ! ಪುತ್ರರನ್ನೆಲ್ಲ ಕಳೆದುಕೊಂಡು, ಬೇರೆ ಆದರಿಸುವವರಾರೂ ಇಲ್ಲದ ಆ ಅರಸನು, ದುಷ್ಟಮೃಗಗಳು ವಾಸಿಸುವ ಆ ವನದಲ್ಲಿ ಒಬ್ಬಂಟಿಗನಾಗಿ ಪತ್ನಿಯೊಡನೆ ಹೇಗೆ ವಾಸಮಾಡುವನು? ಬಂಧುಗಳನ್ನು ಕಳೆದುಕೊಂಡ ಮಹಾಭಾಗ್ಯವತಿಯಾದ ಗಾಂಧಾರಿಯು, ನಿರ್ಜನಪ್ರದೇಶವಾದ ವನದಲ್ಲ ಅಂಧನೂ, ವೃದ್ಧನೂ ಆದ ಪತಿಯನ್ನು ಹೇಗೆ ಸೇವಿಸಬಲ್ಲಳು?' ಎಂದು ಚಿಂತಿಸಿ ಕೊರಗುತಿದ್ದರು. ಆಗ ಅವರಿಗೆ ತಿರುಗಿ ವನಕ್ಕೆ ಹೋಗಿ ಧೃತರಾಷ್ಟ್ರನನ್ನು ನೋಡಿ ಬರಬೇಕೆಂಬ ಆತುರವು ಹುಟ್ಟಿತು. ಸಹದೇವನು ಯುಧಿಷ್ಠಿರನಿಗೆ ನಮಸ್ಕರಿಸಿ 'ಓ ರಾಜೇಂದ್ರಾ! ನೀನು ವನಕ್ಕೆ ಹೋಗುವ ವಿಷಯದಲ್ಲಿ ಆತುರವುಳ್ಳವನಾಗಿರುವುದನ್ನು ತಿಳಿದೆನು ನಿಮ್ಮಲ್ಲಿರುವ ಗೌರವದಿಂದ ನಿಮ್ಮಲ್ಲಿ

ಇದಿರು ಮಾತನಾಡಲು ನನಗೆ ಸಾಧ್ಯವಿಲ್ಲ. ವನಕ್ಕೆ ಹೊರಡಲು ನಾನೂ ಸಿದ್ಧನಾಗಿರುವೆನು. ನಾನು ತಾಯಿಯಾದ ಕುಂತಿಯನ್ನು ಈಗಲೇ ನೋಡಬೇಕು. ವಯೋವೃದ್ಧಳಾಗಿ, ಜಟಾಧಾರಿಣಿಯಾಗಿ, ತಪಸ್ವಿನಿಯೂ ಆದ ಆಕೆಯು ಕಾಡಿನಲ್ಲಿ ದರ್ಭೆಗಳಿಂದಲೂ, ನೊದೆಯ ಹುಲ್ಲಿನಿಂದಲೂ ಕೀರಿದ ದೇಹವುಳ್ಳವಳಾಗಿ ಕಷ್ಟಪಡುತ್ತಿರುವಳು. ಆಕೆಯ ಸ್ಥಿತಿಯನ್ನು ನೋಡುವುದಕ್ಕೇ ಕಷ್ಟವಾಗುವುದು. ಆಕೆಯನ್ನು ನನ್ನ ಭಾಗ್ಯವಿಶೇಷ ದಿಂದ ಒಮ್ಮೆ ನೋಡುವಂತಾಗಲಿ ಅರಮನೆಗಳಲ್ಲಿಯೂ, ಉಪ್ಪರಿಗೆಗ ಳಲ್ಲಿಯೂ ಸುಖವಾಗಿ ಬೆಳೆದು, ಭೋಗಗಳನ್ನನುಭವಿಸಿದ ಆಕೆಯು ಈಗ ಅಪಾರದುಃಖವನ್ನನುಭವಿಸುತ್ತಿರುವಳಲ್ಲವೆ? ಆ ತಾಯಿಯನ್ನು ನಾನು ಯಾವಾಗ ಕಾಣುವೆನು? ಮನುಷ್ಯನ ಸ್ಥಿತಿಗತಿಗಳು ಸ್ಥಿರವಲ್ಲ ಮಹಾ ರಾಜಪುತ್ರಿಯಾದ ಕುಂತಿಯು ಈಗ ವನದಲ್ಲಿ ಕಷ್ಟದಿಂದ ವಾಸಮಾಡು ತ್ತಿರುವಳಲ್ಲವೆ?' ಎಂದನು. ಸಹದೇವನ ಮಾತನ್ನು ಕೇಳಿ ದ್ರೌಪದಿಯು ಯುಧಿಷ್ಠಿರನನ್ನು ಕುರಿತು "ನಾಥಾ! ಆ ದೇವಿಯನ್ನು ಇನ್ನು ನಾನು ನೋಡುವುದೆಲ್ಲಿ? ಆಕೆಯು ಜೀವಿಸಿರುವಳೇ? ಆಕೆಯು ಜೀವಂತಳಾಗಿರು ವಾಗ ನೋಡಿದರಲ್ಲವೇ ನನಗೆ ಸಂತೋಷವಾಗುವುದು? ನಮ್ಮ ಶ್ರೇಯ ಸ್ಸಾಧನೆಯಲ್ಲಿ ನಿನಗೆ ಯಾವಾಗಲೂ ಇದೇ ಬುದ್ಧಿಯಿರಬೇಕು. ನಿನ್ನ ಮನಸ್ಸು ಧರ್ಮದಲ್ಲಿಯೇ ಆಸಕ್ತವಾಗಿರಲಿ. ಈ ಸ್ತ್ರೀಯರೆಲ್ಲರೂ ಕುಂತಿ ಯನ್ನೂ, ಗಾಂಧಾರಿಯನ್ನೂ, ಮಾವಂದಿರನ್ನೂ ನೋಡಬೇಕೆಂದು ಮೊದ ಲೇ ನಿಂತಕಾಲಲ್ಲಿ ಕಾದಿರುವರು" ಎಂದಳು. ಆಗ ರಾಜನು ಸೇನಾಪತಿ ಗಳನ್ನು ಬರಮಾಡಿ, ಎಲ್ಲರೂ ಕೇಳುವಂತೆ ಅವರನ್ನು ಕುರಿತು 'ರಥ ಗಜ ಸಮೂಹಗಳೊಡನೆ ಸೈನ್ಯಗಳೆಲ್ಲವನ್ನೂ ಸಿದ್ಧಗೊಳಿಸಿರಿ. ವನದಲ್ಲಿರುವ ಧೃತರಾಷ್ಟ್ರರಾಜನನ್ನು ನೋಡಲು ಹೋಗುವೆವು' ಎಂದನು ಆಮೇಲೆ ಅಂತಃಪುರಾಧಿಕಾರಿಗಳನ್ನು ಕರೆಯಿಸಿ 'ನಾನಾಬಗೆಯ ವಾಹನಗಳೂ, ಸಾವಿರಾರು ಪಲ್ಲಕ್ಕಿಗಳೂ ಸಿದ್ಧವಾಗಲಿ. ನಮ್ಮ ನಗರದ ಬಂಡಿಗಳು, ಅಂಗಡಿಗಳು, ಬೊಕ್ಕಸಗಳು, ಶಿಲ್ಪಿಗಳು, ಕೋಶಾಧಿಕಾರಿಗಳು ಎಲ್ಲರೂ ಸೇರಿ ಕುರುಕ್ಷೇತ್ರದಲ್ಲಿರುವ ಆಶ್ರಮವನ್ನು ಕುರಿತು ಹೊರಡಬೇಕು. ನಮ್ಮ ಪಟ್ಟಣದಲ್ಲಿರುವ ಯಾವ ಮನುಷ್ಯನು ರಾಜನನ್ನು ನೋಡಲಪೇಕ್ಷಿಸಿದರೂ,

ಆತನಿಗೆ ತಡೆಯಿಲ್ಲದೆ ಅನುಮತಿಕೊಡಲ್ಪಡಲಿ. ಅವರೆಲ್ಲರೂ ತಕ್ಕ ಸನ್ನಾಹಗಳೊಡನೆ ಸುರಕ್ಷಿತರಾಗಿ ಹೋಗಿಬರಲಿ! ಅಡಿಗೆಯುವರು, ಅಡಿಗೆಯ ಮನೆಯ ಮೇಲ್ವಿಚಾರಕರು, ಎಲ್ಲರೂ ಎಲ್ಲಾ ಅಡಿಗೆಯ ಉಪಕರಣಗಳೊಡನೆ ಹಲವುಬಗೆಯ ಭಕ್ಷ್ಯಭೋಜ್ಯಗಳನ್ನೂ ಸಿದ್ಧಮಾಡಿ ಗಾಡಿಗಳಲ್ಲಿ ತೆಗೆದುಕೊಂಡು ಹೋಗಲಿ. ನಾಳೆಯೇ ಪ್ರಯಾಣವೆಂದು ಊರಿನಲ್ಲಿ ಡಂಗುರಹೊಡೆಯಿಸಿರಿ ವಿಳಂಬವಿಲ್ಲದೆ ಎಲ್ಲವೂ ನಡೆಯಲಿ. ದಾರಿಯಲ್ಲಿ ತಂಗುವುದಕ್ಕಾಗಿ ಅಲ್ಲಲ್ಲಿ ಹಲವು ಗೃಹಗಳು ಸಿದ್ಧವಾಗಲಿ' ಎಂದನು ಆ ರಾಜನು ಹೀಗೆ ಆಜ್ಞಾಪಿಸಿದಮೇಲೆ ಎಲ್ಲವೂ ಸಿದ್ಧವಾಯಿತು. ಮರುದಿನವೇ ಭ್ರಾತೃಗಳನ್ನೂ, ಸ್ತ್ರೀಯರನ್ನೂ, ವೃದ್ಧರನ್ನೂ ಮುಂದೆಬಿಟ್ಟುಕೊಂಡು ಹೊರಟನು ರಾಜನು ಆ ಜನಸಮೂಹವನ್ನೆಲ್ಲ ರಕ್ಷಿಸಿಕೊಂಡು, ಐದುದಿನಗಳವರೆಗೆ ಊರಹೊರಗಾಗಿಯೇ ಇದ್ದು, ಆಮೇಲೆ ಮುಂದೆ ಪ್ರಯಾಣಸನ್ನಾಹಮಾಡಿದನು

ಇದು ಇಪ್ಪತ್ತುನಾಲ್ಕನೆಯ ಅಧ್ಯಾಯವು.

## { ಯುಧಿಷ್ಠಿರನು ಸಹೋದರರೊಡನೆ ಶತಯೂಪಾಶ್ರಮಕ್ಕೆ ಹೋದುದು. }

ಯುಧಿಷ್ಠಿರನು ಲೋಕಪಾಲಕರಿಗೆ ಸಮಾನರಾದ ತನ್ನ ಸಹೋದರರಿಂದ ರಕ್ಷಿತವಾದ ಆ ದೊಡ್ಡ ಸೈನ್ಯಕ್ಕೆ, ಮುಂದಿನ ಪ್ರಯಾಣಕ್ಕಾಗಿ ಆಜ್ಞೆಮಾಡಿದನು. ಒಡನೆಯೇ ಆ ಸೈನ್ಯದಲ್ಲಿ “ಹೂಡಿರಿ! ಹೂಡಿರಿ!' ಎಂದೂ ‘ಹೊರಡಿರಿ! ಹೊರಡಿರಿ!' ಎಂದೂ ಕುದುರೆಯಾಳುಗಳ ಪ್ರಬಲವಾದ ಗದ್ದಲವೆದ್ದಿತು ನಿಮಿಷಮಾತ್ರದಲ್ಲಿ ಎಲ್ಲವೂ ಸಿದ್ಧವಾಯಿತು ಕೆಲವರು ಪಲ್ಲಕ್ಕಿಗಳನ್ನೇರಿದರು ಕೆಲವರು ವೇಗವುಳ್ಳ ಕುದುರೆಗಳನ್ನೂ, ಇನ್ನು ಕೆಲವರು ಅಗ್ನಿಸಮಾನವಾದ ಸುವರ್ಣರಥಗಳನ್ನೂ, ಮತ್ತೆ ಕೆಲವರು ಆನೆಗಳನ್ನೂ, ಕೆಲವರು ಒಂಟೆಗಳನ್ನೂ ಏರಿ ಹೊರಟರು. ಪ್ರಾಸಗಳು, ಹುಲಿಯುಗುರಿನಂತೆ ಬಗ್ಗಿದ ಈಟಿಗಳು, ಇವುಗಳನ್ನು ಹಿಡಿದ ಪದಾತಿಸೈನ್ಯಗಳು ಕಾಲ್ನಡೆಯಿಂದ ಹೊರಟುವು ಧೃತರಾಷ್ಟ್ರನನ್ನು ನೋಡಬೇ

ಕೆಂದು ಹಲವು ಮಂದಿ ಪುರಗ್ರಾಮವಾಸಿಗಳೂ ವಾಹನಗಳನ್ನೇರಿ ಯುಧಿ ಷ್ಠಿರನನ್ನು ಹಿಂಬಾಲಿಸಿ ಹೊರಟರು ಸೈನ್ಯಾಧಿಪತಿಯಾದ ಕೃಪಾಚಾ ರ್ಯನು ರಾಜಾಜ್ಞೆಯಂತೆ ಸೈನ್ಯವನ್ನು ನಡೆಸಿಕೊಂಡು ಬರುತಿದ್ದನು ಯುಧಿಷ್ಠಿರನು, ಅನೇಕ ಬ್ರಾಹ್ಮಣರಿಂದ ಪರಿವೃತನಾಗಿ, ಸೂತಮಾಗಧ ವಂದಿಗಳಿಂದ ಸೇವಿಸಲ್ಪಡುತ್ತ ದೊಡ್ಡ ರಥಸೈನ್ಯದೊಡನೆ ಹೊರಟನು ಭೀಮನು ಪರ್ವತಸಮಾನಗಳಾಗಿ, ಯಂತ್ರಗಳೊಡನೆಯೂ, ಆಯುಧಗ ಳೊಡನೆಯೂ ಕೂಡಿದ ಗಜಸೈನ್ಯದ ನಡುವೆ ಆನೆಯನ್ನೇರಿ ಹೊರಟನು. ಹಾಗೆಯೇ ಮಾದ್ರೀಪುತ್ರರಾದ ನಕುಲಸಹದೇವರೂ ಕವಚಗಳನ್ನು ಧರಿಸಿ, ಕುದುರೆಗಳಮೇಲೇರಿ ಅಶ್ವವೀರರಿಂದ ಪರಿವೃತರಾಗಿ ಹೊರಟರು ಮಹಾ ತೇಜಸ್ವಿಯಾದ ಅರ್ಜುನನು ಸೂರ್ಯಕಾಂತಿಗೆ ಸಮಾನವಾಗಿ ಬಿಳಿಯ ಕುದುರೆಗಳನ್ನು ಹೂಡಿದ ದಿವ್ಯರಥವನ್ನೇರಿ ರಾಜನನ್ನು ಹಿಂಬಾಲಿಸಿ ಹೊರಟನು ದ್ರೌಪದಿ ಮೊದಲಾದ ಸ್ತ್ರೀಯರೆಲ್ಲರೂ ಪಲ್ಲಕ್ಕಿಗಳನ್ನೇರಿ ಸುತ್ತಲೂ ಕಾವಲುಗಾರರಿಂದ ರಕ್ಷಿತರಾಗಿ ದಾರಿಯುದ್ದಕ್ಕೂ ಹೇರಳವಾದ ದ್ರವ್ಯವನ್ನು ದಾನಮಾಡುತ್ತ ಹೊರಟರು ಚತುರಂಗಸೈನ್ಯಗಳಿಂದಲೂ, ಕೊಳಲು, ವೀಣೆ, ಮುಂತಾದ ವಾದ್ಯಧ್ವನಿಗಳಿಂದಲೂ ಕೂಡಿದ ಪಾಂಡವ ಸೈನ್ಯವು ಆಗ ಅಪೂರ್ವವೈಭವದಿಂದ ಪ್ರಕಾಶಿಸುತಿದ್ದಿತು ಅವರೆಲ್ಲರೂ ಅಲ್ಲಲ್ಲಿ ರಮ್ಯವಾದ ನದೀತೀರಗಳಲ್ಲಿಯೂ, ತಟಾಕಗಳಲ್ಲಿಯೂ ತಂಗುತ್ತ ಪ್ರಯಾಣಬೆಳೆಸಿದರು ಯುಯುತ್ಸುವೂ, ಪುರೋಹಿತನಾದ ಧೌಮ್ಯನೂ ಯುಧಿಷ್ಠಿರನ ಮಾತಿನಂತೆ ಪಟ್ಟಣವನ್ನು ರಕ್ಷಿಸುತ್ತಿದ್ದರು. ಯುಧಿಷ್ಠಿ ರನು ಕ್ರಮವಾಗಿ ಪವಿತ್ರವಾದ ಯಮುನಾನದಿಯನ್ನು ದಾಟಿ, ಕುರುಕ್ಷೇತ್ರ ವನ್ನು ಸೇರಿ, ಅಲ್ಲಿ ಶತಯೂಪನೆಂಬ ರಾಜರ್ಷಿಯ ಆಶ್ರಮವನ್ನೂ, ಧೃತ ರಾಷ್ಟ್ರನ ಆಶ್ರಮವನ್ನೂ ದೂರದಿಂದಲೇ ಕಂಡನು. ಸಮಸ್ತ ಜನವೂ ಸಂತೋಷ ಕೋಲಾಹಲದಿಂದ ಅದನ್ನು ಪ್ರವೇಶಿಸಿದರು.

ಇದು ಇಪ್ಪತ್ತೈದನೆಯ ಅಧ್ಯಾಯವು.

ಯುಧಿಷ್ಠಿರಾದಿಗಳು ಧೃತರಾಷ್ಟ್ರನೇ ಮುಂತಾದವರನ್ನು ಕಂಡು, ತಮ್ಮತಮ್ಮ ಹೆಸರುಗಳನ್ನು ಹೇಳಿ ನಮಸ್ಕರಿಸಿದುದು ಧೃತರಾಷ್ಟ್ರನು ತನಗಾಗಿ ದುಃಖಿಸುತ್ತಿರುವ ಜನರನ್ನು ಸಮಾಧಾನಪಡಿಸಿದುದು.

ಆಮೇಲೆ ಪಾಂಡವರು ದೂರದಲ್ಲಿಯೇ ತಮ್ಮ ವಾಹನಗಳಿಂದಿಳಿದು, ಕಾಲುನಡೆಯಿಂದ ನಡೆದು, ಬಹಳ ನಮ್ರತೆಯಿಂದ ಧೃತರಾಷ್ಟ್ರನ ಆಶ್ರಮವನ್ನು ಸೇರಿದರು. ಎಲ್ಲಾ ಯುದ್ಧವೀರರೂ, ಪುರಜನರೂ, ಸ್ತ್ರೀಯರೂ ಕಾಲುನಡೆಯಿಂದಲೇ ಹೊರಟುಬಂದರು. ಕಡೆಗೆ ಪಾಂಡವರು ಜಿಂಕೆಯ ಸಮೂಹಗಳಿಂದಲೂ, ಬಾಳೆಯ ತೋಟಗಳಿಂದಲೂ ತುಂಬಿ, ಜನರಿಲ್ಲದೆ ವಿವಿಕ್ತವಾದ ಧೃತರಾಷ್ಟ್ರನ ಆಶ್ರಮವನ್ನು ಸೇರಿದರು. ಅಲ್ಲಿ ವ್ರತಾನುಷ್ಠಾನಮಾಡುತಿದ್ದ ತಾಪಸರೆಲ್ಲರೂ ಅಲ್ಲಿಗೆ ಬಂದ ಪಾಂಡವರನ್ನು ನೋಡುವುದಕ್ಕಾಗಿ ಸಂತೋಷದೊಡನೆ ಅಲ್ಲಿ ಬಂದು ನೆರೆದರು. ಯುಧಿಷ್ಠಿರನು ಅವರನ್ನು ನೋಡಿ ಕಣ್ಣೀರು ಬಿಡುತ್ತ 'ಓ ಮಹಾತ್ಮರೆ! ನಮ್ಮ ತಂದೆಯೆಲ್ಲಿರುವನು? ಕುರುವಂಶಕ್ಕೆಲ್ಲ ಪಾಲಕನಾದ ರಾಜನು ಎಲ್ಲಿಗೆ ಹೋದನು?' ಎಂದು ಕೇಳಿದನು. ಆಗ ಅವರು ಧರ್ಮರಾಜನನ್ನು ಕುರಿತು 'ಓ ಪ್ರಭೂ! ಆತನು ಸ್ನಾನಮಾಡಿ ಪುಷ್ಪಗಳನ್ನೂ, ಕಲಶತೀರ್ಥವನ್ನೂ ತರುವುದಕ್ಕಾಗಿ ಯಮುನೆಗೆ ಹೋಗಿರುವನು' ಎಂದರು ಒಡನೆ ಪಾಂಡವರು ಅವರು ನಿರ್ದೇಶಿಸಿದಮಾರ್ಗವಾಗಿ ವೇಗದಿಂದ ಹೊರಟು, ದೂರದಿಂದಲೇ ಧೃತರಾಷ್ಟ್ರಾದಿಗಳು ಅಲ್ಲಿರುವುದನ್ನು ಕಂಡು, ಮತ್ತಷ್ಟು ವೇಗದಿಂದ ಅವನನ್ನು ನೋಡುವುದಕ್ಕಾಗಿ ಕಾಲುನಡೆಯಿಂದ ಹೊರಟರು ಸಹದೇವನಾದರೋ ಕುಂತಿಯಿರುವ ಸ್ಥಳಕ್ಕೆ ವೇಗದಿಂದೋಡಿ, ಅವಳ ಪಾದಗಳನ್ನು ಹಿಡಿದು ಗಟ್ಟಿಯಾಗಿ ಅತ್ತನು. ಕುಂತಿಗೂ ಅವನನ್ನು ಕಂಡೊಡನೆ ಕಣ್ಣೀರು ತುಂಬಿ ಮುಖವು ಕಂದಿತು. ಆಗ ಅವಳು ಆ ಪ್ರಿಯಬಾಲಕನನ್ನು ಎರಡು ಕೈಗಳಿಂದಲೂ ಅಪ್ಪಿಕೊಂಡು, ಸಹದೇವನು ಬಂದಿರುವುದನ್ನು ಗಾಂಧಾರಿಗೆ ತಿಳಿಸಿದಳು. ಹಾಗೆಯೇ ಯುಧಿಷ್ಠಿರನನ್ನೂ, ಭೀಮಸೇನನನ್ನೂ, ಅರ್ಜುನನನ್ನೂ, ನಕುಲನನ್ನೂ ಕಂಡೊಡನೆ ವೇಗದಿಂದ ಸಮೀಪಕ್ಕೆ ಬಂದು, ಅವರನ್ನೂ ಧೃತರಾಷ್ಟ್ರ ಗಾಂಧಾರಿಯರ

ಮುಂದೆ ನಿಲ್ಲಿಸಿದಳು. ಪಾಂಡವರು ತಾಯನ್ನು ಕಂಡು ಮೂರ್ಛಿತರಾದರು. ಆಮೇಲೆ ಪುತ್ರಶೋಕದಿಂದ ತಪಿಸುತ್ತಿರುವ ಆ ವೃದ್ಧರ ಕಾಲಿಗೆ ಬಿದ್ದರು. ಧೃತರಾಷ್ಟ್ರರಾಜನು ಅವರ ಧ್ವನಿಯನ್ನು ಹಿಡಿದು, ಅವರನ್ನು ಮುಟ್ಟಿ, ಸಮಾಧಾನಪಡಿಸಿದನು. ಮಹಾತ್ಮರಾದ ಪಾಂಡವರು ಕಣ್ಣೀರುಸುರಿಸುತ್ತ, ಗಾಂಧಾರಿಯನ್ನೂ, ರಾಜನನ್ನೂ, ತಾಯಿಯನ್ನೂ, ವಿಧ್ಯುಕ್ತರೀತಿಯಲ್ಲಿ ಪೂಜಿಸಿದರು ಆಗ ಆ ಪಾಂಡವರು ತಾಯಿಯಿಂದ ಬಾರಿಬಾರಿಗೂ ಸಂತೈಸಲ್ಪಡುತ್ತ, ಅವರೆಲ್ಲರ ಕೈಯಲ್ಲಿದ್ದ ತೀರ್ಥಕಲಶಗಳನ್ನು ತಮ್ಮ ಕೈಗೆ ತೆಗೆದುಕೊಂಡರು. ಹಾಗೆಯೇ ಅಲ್ಲಿಗೆ ಬಂದಿದ್ದ ರಾಜಸ್ತ್ರೀಯರೂ, ಪುರಜನರೂ ಮುಂದೆ ಬಂದು ಧೃತರಾಷ್ಟ್ರನನ್ನು ನೋಡಿದರು. ಯುಧಿಷ್ಠಿರನು ಅವರೆಲ್ಲರ ಕುಲಗೋತ್ರಗಳನ್ನೂ ರಾಜನಿಗೆ ತಿಳಿಸುತಿದ್ದನು. ರಾಜನೂ, ಆತನೂ ಅವರನ್ನು ಆದರಿಸಿದರು ಆಗ ಅವರೆಲ್ಲರ ನಡುವೆ ಧೃತರಾಷ್ಟ್ರನು ತಾನು ಹಸ್ತಿನಾಪುರದಲ್ಲಿ ತನ್ನ ಮನೆಯಲ್ಲಿರುವಂತೆ ಭಾವಿಸಿ ಆನಂದಬಾಷ್ಪವನ್ನು ಸುರಿಸಿದನು ರಾಜನೂ, ಗಾಂಧಾರಿಯೂ, ಕುಂತಿಯೂ, ದ್ರೌಪದಿ ಮೊದಲಾದ ಸೊಸೆಯರಿಂದ ನಮಸ್ಕೃತರಾಗಿ ಅವರನ್ನು ಆಶೀರ್ವದಿಸಿದರು. ಆಮೇಲೆ ಧೃತರಾಷ್ಟ್ರನು, ಸಿದ್ಧಚಾರಣರಿಂದ ಸೇವಿತವಾಗಿಯೂ ತನ್ನನ್ನು ನೋಡಲು ಬಂದ ಪ್ರೇಕ್ಷಕರಿಂದ ತುಂಬಿ ನಕ್ಷತ್ರಗಳಿಂದ ವ್ಯಾಪ್ತವಾದ ಆಕಾಶದಂತೆಯೂ ಇರುವ ತನ್ನ ಆಶ್ರಮಕ್ಕೆ ಹಿಂತಿರುಗಿಬಂದನು

ಇದು ಇಪ್ಪತ್ತಾರನೆಯ ಅಧ್ಯಾಯವು

{ ಸಂಜಯನು ತಾಪಸರಿಗೆ ಪಾಂಡವರನ್ನು ತೋರಿಸಿ ಅವರ ಪರಿಚಯವನ್ನು ಮಾಡಿಸಿದುದು. }

ಆಮೇಲೆ ಧೃತರಾಷ್ಟ್ರನು, ಸಹೋದರರಾದ ಪಾಂಡವರೊಡನೆ ಆ ಆಶ್ರಮದಲ್ಲ ಕುಳಿತಿದ್ದಾಗ, ವಿಶಾಲವಾದ ಎದೆಯುಳ್ಳವರೂ, ಕುರುಕುಲಶ್ರೇಷ್ಠರೂ ಆದ ಆ ಪಾಂಡವರನ್ನು ನೋಡುವ ಕುತೂಹಲದಿಂದ ನಾನಾದೇಶಗಳಿಂದ ಬಂದಿದ್ದ ತಾಪಸೋತ್ತಮರು ಅವನ ಸುತ್ತಲೂ ಕುಳಿ

ತರು. ಆಗ ಆ ತಾಪಸರು ‘ ಇವರಲ್ಲಿ ಯುಧಿಷ್ಠಿರನು ಯಾರು ? ಭೀಮನು ಯಾರು ? ಅರ್ಜುನನು ಯಾರು ? ನಕುಲನು ಯಾರು ? ಸಹದೇವನು ಯಾರು ? ಪ್ರಸಿದ್ಧಳಾದ ದ್ರೌಪದಿಯೆಂಬವಳಾವಳು ? ಅದನ್ನು ತಿಳಿಯ ಲಪೇಕ್ಷಿಸುವೆವು ’ ಎನಲು, ಸಂಜಯನು ಅವರಿಗೆ ಪಾಂಡವರನ್ನೂ, ದ್ರೌಪ ದಿಯನ್ನೂ, ಬೇರೆ ಎಲ್ಲಾ ಕೌರವಸ್ತ್ರೀಯರನ್ನೂ ನಾಮನಿರ್ದೇಶಮಾಡಿ ತೋರಿಸುತ್ತ ‘ ಓ ತಾಪಸರೇ ! ಅದೋ ! ಅಲ್ಲಿ ಸುವರ್ಣದಂತೆ ಅಚ್ಚ ಹಳ ದಿಯ ವರ್ಣವುಳ್ಳವನಾಗಿ, ಕೃಶಾಂಗನಾಗಿ, ದೊಡ್ಡ ಸಿಂಹದಂತೆ ಬೆಳೆದಿರು ವವನೂ, ಉದ್ದವೂ, ಎತ್ತರವೂ ಆದ ಮೂಗುಳ್ಳವನೂ, ಅಗಲವಾಗಿಯೂ ಉದ್ದವಾಗಿಯೂ, ಕೆಂಪಾಗಿಯೂ ಇರುವ ಕಣ್ಣುಗಳುಳ್ಳವನೂ ಆದ ಆತ ನೇ ಧರ್ಮರಾಜನು ಮದದಾನೆಯಂತೆ ಗಂಭೀರವಾದ ನಡೆಯುಳ್ಳವ ನಾಗಿ, ಶುದ್ಧ ಸುವರ್ಣದಂತೆ ಹಳದಿಯಬಣ್ಣವುಳ್ಳವನೂ, ವಿಶಾಲವಾದ ತೋಳುಗಳುಳ್ಳವನೂ, ಉದ್ದವೂ, ದಪ್ಪವೂ ಆದ ತೋಳುಳ್ಳವನೂ ಆದ ಈತನೇ ಭೀಮಸೇನನು ಅದೋ ! ಅವನನ್ನು ನೋಡಿರಿ. ಭೀಮನ ಪಕ್ಕದಲ್ಲಿ ಮಹಾ ಧನುರ್ಧಾರಿಯೂ, ಕಪ್ಪುಬಣ್ಣವುಳ್ಳವನೂ, ತರುಣನೂ, ಗಜಯೂಥಪತಿಯಂತೆ ಪ್ರಕಾಶಿಸುವವನೂ, ಸಿಂಹದಂತೆ ದೀರ್ಘಬಾಹುಗ ಳುಳ್ಳವನೂ, ಆನೆಯಂತೆ ಉಲ್ಲಾಸವಿಶಿಷ್ಟನೂ, ತಾವರೆಯ ಹೂವಿನಂತೆ ವಿಶಾಲವಾದ ಕಣ್ಣುಗಳುಳ್ಳವನೂ ಆದ ಆ ವೀರನೇ ಅರ್ಜುನನು ಕುಂತಿ ಯ ಪಕ್ಕದಲ್ಲಿ ವಿಷ್ಣುವಿಗೂ, ಮಹೇಂದ್ರನಿಗೂ ಸಮಾನರಾಗಿ, ಸೌಂದರ್ಯ ದಲ್ಲಿಯೂ, ಸಾಹಸದಲ್ಲಿಯೂ, ಶೀಲದಲ್ಲಿಯೂ ಮನುಷ್ಯಲೋಕದಲ್ಲಿ ಅಸ ಮಾನರೆನಿಸಿದ ಇವರೇ ನಕುಲಸಹದೇವರೆಂಬ ಅವಳಿಮಕ್ಕಳು. ತಾವರೆಯ ದಳದಂತೆ ವಿಶಾಲವಾದ ನೇತ್ರಗಳುಳ್ಳವಳೂ, ನವಯೌವನಾಕಾರಳೂ, ನೀಲೋತ್ಪಲದಂತೆ ಕಾಂತಿಯುಳ್ಳವಳೂ, ನಗರದೇವತೆಗೆ ಸಮಾನಳೂ ಆಗಿ, ಪ್ರತ್ಯಕ್ಷಲಕ್ಷ್ಮಿಯಂತೆ ಕಾಣುತ್ತಿರುವ ಈಕೆಯೇ ದ್ರೌಪದಿಯು ಓ ಬ್ರಾ ಹ್ಮಣೋತ್ತಮರೇ ! ಈಕೆಯ ಪಕ್ಕದಲ್ಲಿ ನಿಂತು, ಸುವರ್ಣಕಾಂತಿಗೆ ಸಮಾ ನವಾದ ದೇಹವುಳ್ಳವಳೂ, ಪಾರ್ವತಿಯೇ ರೂಪವೆತ್ತಿ ಬಂದಂತೆ ಕಾಣು ವವಳೂ, ಸತ್ಯವನ್ನು ಮೀರದವಳೂ ಆದ ಈಕೆಯು ಕೃಷ್ಣನ ತಂಗಿ ಸು ಭದ್ರೆ ! ಸುವರ್ಣದಂತೆ ದೇಹವರ್ಣವುಳ್ಳ ಈಕೆಯು ನಾಗರಾಜನ ಪುತ್ರಿ

ಯೂ, ಅರ್ಜುನನ ಪತ್ನಿಯೂ ಆದ ಉಲೂಪಿ! ಹೊಸ ಮಧೂಕಪುಷ್ಪದಂತೆ ಮೈಬಣ್ಣವುಳ್ಳ ಈಕೆಯು ರಾಜಕುಮಾರಿಯಾದ ಚಿತ್ರಾಂಗದೆ! ನೀಲೋತ್ಪಲಮಾಲಿಗೆ ಸಮಾನವಾದ ಬಣ್ಣವುಳ್ಳ ಈಕೆಯು, ಪಾಂಡವ ಸೈನ್ಯಕ್ಕೆಲ್ಲ ಮುಖ್ಯಾಧಿಪತಿಯೆನಿಸಿ, ಅರ್ಜುನನನ್ನು ಧನುರ್ವಿದ್ಯೆಯಲ್ಲಿ ಮೀರಿಸಲು ಪ್ರಯತ್ನಿಸುತ್ತಿದ್ದ ಧೃಷ್ಟದ್ಯುಮ್ನನ ತಂಗಿ! ಆಕೆಯು ಭೀಮಸೇನನ ಪ್ರಥಮಪತ್ನಿ! ಚಂಪಕಮಾಲೆಯಂತೆ ಹಳದಿಯ ಬಣ್ಣವುಳ್ಳ ಈಕೆಯು ಜರಾಸಂಧನೆಂದು ಪ್ರಸಿದ್ಧನಾದ ಮಗಧದೇಶಾಧಿಪತಿಯ ಪುತ್ರಿ! ಇವಳು ಮಾದ್ರಿಯ ಅವಳಿಮಗನಾದ ಸಹದೇವನ ಪತ್ನಿ! ನೀಲೋತ್ಪಲದಂತೆ ಮೈ ಬಣ್ಣವುಳ್ಳವಳಾಗಿ, ತಾವರೆಯ ದಳದಂತೆ ವಿಶಾಲನೇತ್ರಳಾಗಿ, ಮರವನ್ನಾಶ್ರಯಿಸಿದ ಬಳ್ಳಿಯಂತೆ ಅಲ್ಲಿ ನಿಂತಿರುವ ಈಕೆಯು ಮಾದ್ರಿಯ ಮಗನಾದ ನಕುಲನ ಪತ್ನಿ! ಪುಟಹಾಕಿದ ಸುವರ್ಣದಂತೆ ಹಳದಿಯಬಣ್ಣವುಳ್ಳವಳಾಗಿ ಮಗುವನ್ನೆತ್ತಿಕೊಂಡು ನಿಂತಿರುವ ಈಕೆಯು ವಿರಾಟರಾಜನ ಪುತ್ರಿ. ಯುದ್ಧದಲ್ಲಿ ರಥಾರೂಢರಾದ ದ್ರೋಣನೇ ಮೊದಲಾದವರಿಂದ, ರಥವಿಹೀನನಾಗಿ ಸಂಹರಿಸಲ್ಪಟ್ಟ ಅಭಿಮನ್ಯುವಿನ ಪತ್ನಿ ಉತ್ತರೆಯೆಂಬವಳು ಇವಳೇ. ಅಲಂಕಾರವನ್ನು ತ್ಯಜಿಸಿ ತಲೆಕೂದಲುಗಳನ್ನು ಬಿಚ್ಚಿಕೊಂಡು, ಬಿಳಿಯ ಉತ್ತರೀಯಗಳನ್ನು ಧರಿಸಿರುವ ಈ ನೂರಾರುಮಂದಿ ಸ್ತ್ರೀಯರೆಲ್ಲ ಧೃತರಾಷ್ಟ್ರರಾಜನ ಸೊಸೆಯರು. ಇವರು ಮಹಾವೀರರಾದ ಪತಿಗಳನ್ನೂ, ಪುತ್ರರನ್ನೂ ಕಳೆದುಕೊಂಡು ವ್ಯಥೆಗೆ ಗುರಿಯಾದವರು. ಓ ಬ್ರಹ್ಮಜ್ಞಾನಿಗಳೇ! ಶುದ್ಧಸ್ವಭಾವವುಳ್ಳ ಪ್ರಮುಖರಾಜಪತ್ನಿಯರನ್ನೆಲ್ಲ ನಿಮಗೆ ತಿಳಿಸಿರುವೆನು. ನೀವೆಲ್ಲರೂ ಮಹಾ ತಪೋಬಲವುಳ್ಳವರು. ಶಾಂತಚಿತ್ತರು. ಇಂದ್ರಿಯಗಳನ್ನಡಗಿಸಿದವರು. ಸತ್ಕುಲಪ್ರಸೂತರು' ಎಂದನು. ಆ ತಪಸ್ವಿಗಳೆಲ್ಲರೂ ಹೊರಟಮೇಲೆ ವೃದ್ಧನಾದ ಧೃತರಾಷ್ಟ್ರನು, ಆ ಎಲ್ಲಾ ರಾಜಪುತ್ರರ ಆಶ್ರಮಪ್ರದೇಶವೆಂಬ ಗೌರವಭಾವದಿಂದ ತಮ್ಮ ವಾಹನಗಳನ್ನು ಬಿಟ್ಟುಬಂದಿದ್ದ ಯುದ್ಧವೀರರ, ಮತ್ತು ಎಲ್ಲಾ ಸ್ತ್ರೀ ಬಾಲವೃದ್ಧರ ಕ್ಷೇಮಲಾಭಗಳನ್ನು ವಿಚಾರಿಸಿದನು.

ಇದು ಇಪ್ಪತ್ತೇಳನೆಯ ಅಧ್ಯಾಯವು.

ಧೃತರಾಷ್ಟ್ರನೂ, ಯುಧಿಷ್ಠಿರನೂ ಪರಸ್ಪರ ಕ್ಷೇಮಲಾಭಗಳನ್ನು ವಿಚಾರಿಸಿದುದು ವಿದುರನು ಎಲ್ಲಿರುವನೆಂದು ಯುಧಿಷ್ಠಿರನು ಕೇಳುತಿದ್ದಾಗ, ವಿದುರನು ಜನಸಮೂಹವನ್ನು ಕಂಡು ಓಡುತ್ತಿದ್ದುದು. ಯುಧಿಷ್ಠಿರನು ವೇಗದಿಂದ ವಿದುರನನ್ನು ಬೆನ್ನಟ್ಟಿ ಹೋದುದು ಇಷ್ಟರಲ್ಲಿ ವಿದುರನು ಸ್ವಶರೀರತ್ಯಾಗಮಾಡಿ ತನ್ನ ದೇಹದಲ್ಲಿ ಪ್ರವೇಶಿಸಿದುದು ಯುಧಿಷ್ಠಿರನು ಆ ಅತಿಶಯವನ್ನು ಧೃತರಾಷ್ಟ್ರಾದಿಗಳಿಗೆ ತಿಳಿಸಿದುದು.

ಆಗ ಧೃತರಾಷ್ಟ್ರನು 'ಓ ಯುಧಿಷ್ಠಿರಾ! ನೀನು ನಿನ್ನ ಸಹೋದರರೆಲ್ಲರೊಡನೆಯೂ, ನಿನ್ನ ಎಲ್ಲಾ ಪ್ರಜೆಗಳೊಡನೆಯೂ ಕ್ಷೇಮದಿಂದಿರುವೆಯಷ್ಟೆ? ನಿನ್ನ ಆಶ್ರಿತರೂ, ಮಂತ್ರಿಗಳೂ, ಸೇವಕರೂ, ಆಚಾರ್ಯರೂ ಕ್ಷೇಮದಿಂದಿರುವರೇ? ಅವರೆಲ್ಲರೂ ನಿನ್ನ ದೇಶದಲ್ಲಿ ನಿಶ್ಚಿಂತರಾಗಿರುವರಷ್ಟೆ? ಪುರಾತನವೂ, ರಾಜರ್ಷಿಗಳಿಂದ ಅನುಷ್ಠಿಸಲ್ಪಟ್ಟುದೂ ಆದ ರಾಜನೀತಿಯನ್ನೇ ನೀನೂ ಅನುಸರಿಸುತ್ತಿರುವೆಯಾ? ನ್ಯಾಯಮಾರ್ಗದಿಂದ ಧನಸಂಗ್ರಹಮಾಡಿ ಬೊಕ್ಕಸವನ್ನು ವೃದ್ಧಿಗೊಳಿಸುತ್ತಿರುವೆಯಾ? ಶತ್ರುಗಳಲ್ಲಿಯೂ, ಮಧ್ಯಸ್ಥರಲ್ಲಿಯೂ, ಮಿತ್ರರಲ್ಲಿಯೂ ಅವರವರಿಗೆ ತಕ್ಕಂತೆ ನಡೆದುಕೊಳ್ಳುತ್ತಿರುವೆಯಾ? ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕೊಡುತ್ತ ಚೆನ್ನಾಗಿ ಪರಿಪಾಲಿಸುತ್ತಿರುವೆಯಾ? ಓ ಭರತಶ್ರೇಷ್ಠಾ! ನಿನ್ನ ಒಳ್ಳೆಯ ನಡತೆಯಿಂದ ಶತ್ರುಗಳೂ ಸಂತೋಷಪಡುತ್ತಿರುವಾಗ, ನಿನ್ನ ಪುರಜನರೂ, ಸೇವಕರೂ, ಬಂಧುಗಳೂ ಸಂತೋಷಿಸುವರೆಂಬುದನ್ನು ಕೇಳಬೇಕಾಗಿಯೇ ಇಲ್ಲ ನೀನು ಶ್ರದ್ಧೆಯಿಂದ ದೇವತೆಗಳನ್ನೂ, ಪಿತೃಗಳನ್ನೂ ಪೂಜಿಸುತ್ತಿರುವೆಯಾ? ಅತಿಥಿಗಳನ್ನು ಅನ್ನಪಾನಗಳಿಂದ ಆದರಿಸುತ್ತಿರುವೆಯಾ? ಕುಟುಂಬಿಗಳಾದ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ತಮ್ಮತಮ್ಮ ಕಾರ್ಯಗಳನ್ನು ನಡೆಸುತ್ತ ನಿನ್ನ ನೀತಿಮಾರ್ಗದಲ್ಲಿರುವರೇ? ಸ್ತ್ರೀಯರೂ, ಬಾಲರೂ, ವೃದ್ಧರೂ, ಕಷ್ಟಕ್ಕೀಡಾಗಿ ನಿನ್ನಲ್ಲಿ ಮೊರೆಯಿಡುವುದಿಲ್ಲವಷ್ಟೆ? ನಿನ್ನ ಮನೆಯಲ್ಲಿ ಸುಮಂಗಲಿಯರು ಪೂಜಿಸಲ್ಪಡುತ್ತಿರುವರೇ? ನಿನ್ನನ್ನು ರಾಜನಾಗಿ ಪಡೆದುದರಿಂದ ನಮ್ಮ

ರಾಜರ್ಷಿವಂಶದ ಕೀರ್ತಿಗೇನೂ ಕುಂದಕವಿಲ್ಲದಿರುವುದೆ?' ಎಂದು ಕೇಳಿದನು. ಆಗ ಆ ಧೃತರಾಷ್ಟ್ರನನ್ನು ಕುರಿತು ಯುಧಿಷ್ಠಿರನು 'ಓ ರಾಜೇಂದ್ರಾ! ನಿನ್ನ ತಪಸ್ಸು ವೃದ್ಧಿಯಾಗುತ್ತಿರುವುದೇ? ನಿನ್ನ ಆಯಾಸವು ತಗ್ಗಿರುವುದೇ? ನಮ್ಮ ತಾಯಿ ಕುಂತಿಯು ನಿನ್ನನ್ನು ಸರಿಯಾಗಿ ಸೇವೆಮಾಡುತ್ತಿರುವಳೇ? ಅದರಿಂದಲೇ ಆಕೆಯ ವನವಾಸವು ಸಫಲವಾಗಬೇಕು. ನಮ್ಮ ದೊಡ್ಡಮ್ಮನು ಚಳಿಗಾಳಿಗಳಿಂದಲೂ, ಮನೆಯನ್ನು ಬಿಟ್ಟು ಹೊರಗಿನ ಸಂಚಾರದಿಂದಲೂ, ಉಗ್ರತಪಸ್ಸಿನಿಂದಲೂ ವಿಶೇಷ ಕಷ್ಟಪಡದಿರುವಳೇ? ಆಕೆಯು ವ್ಯಸನಪಡದಿರುವಳೇ? ಮಹಾವೀರ್ಯವುಳ್ಳವರೂ, ಕ್ಷತ್ರಿಯಧರ್ಮಾವಲಂಬಿಗಳೂ ಆಗಿ, ಯುದ್ಧದಲ್ಲಿ ಹತರಾದ ತನ್ನ ಮಕ್ಕಳನ್ನೂ, ಅವರನ್ನು ಕೊಂದ ಮಹಾ ಪಾಪಿಗಳಾದ ನಮ್ಮನ್ನೂ ನೆನೆಸಿಕೊಂಡು ದುಃಖಪಡದಿರುವಳೆ? ರಾಜಾ! ವಿದುರನೆಲ್ಲಿ? ಆತನನ್ನು ಇಲ್ಲಿ ಕಾಣಲಿಲ್ಲವಲ್ಲಾ? ಸಂಜಯನು ತಪೋನಿರತನಾಗಿ ಕ್ಷೇಮದಿಂದಿರುವನೇ?' ಎಂದನು. ಆಗ ಧೃತರಾಷ್ಟ್ರನು ಯುಧಿಷ್ಠಿರನನ್ನು ಕುರಿತು 'ಪುತ್ರಾ! ವಿದುರನು ಕ್ಷೇಮದಿಂದಿರುವನು. ಅವನು ಘೋರತಪಸ್ಸನ್ನು ಹಿಡಿದಿರುವನು. ಕೇವಲ ವಾಯುಭಕ್ಷಕನಾಗಿ, ಬೇರೆ ಯಾವ ಆಹಾರವನ್ನೂ ಸೇವಿಸದೆ ಕೃಶನಾಗಿ, ಮೈಯಲ್ಲಿ ಬರೀ ನರಗಳಿಂದ ಮಾತ್ರ ಉಳಿದಿರುವನು ಆತನು ಒಂದೊಂದು ಸಮಯದಲ್ಲಿ ಮಾತ್ರ ಶೂನ್ಯವಾದ ಈ ವನದಲ್ಲಿ ಬ್ರಾಹ್ಮಣರ ದೃಷ್ಟಿಗೆ ಬೀಳುವನು' ಎಂದನು. ಆತನು ಹೀಗೆ ಹೇಳುತ್ತಿರುವಾಗಲೇ ದೂರದಲ್ಲಿ ವಿದುರನು ಜಟಾಧಾರಿಯಾಗಿ, ಬಾಯಿಯಲ್ಲಿ ಕಲ್ಲನ್ನಿಟ್ಟುಕೊಂಡು, ಅತ್ಯಂತಕೃಶಾಂಗನೂ, ದಿಗಂಬರನೂ, ನೆಲದ ಧೂಳಿನಿಂದ ತುಂಬಿದ ಕಶ್ಮಲದೇಹವುಳ್ಳವನೂ ಆಗಿ ಇವರ ದೃಷ್ಟಿಗೆ ಬಿದ್ದನು. 'ಅದೋ! ಧರ್ಮಾತ್ಮನಾದ ವಿದುರನು ಜನರನ್ನು ಕಂಡು ಹಿಂತಿರುಗಿ ಓಡುತ್ತಿರುವನು' ಎಂದು ಮನುಷ್ಯನೊಬ್ಬನು ಓಡಿಬಂದು ರಾಜನಿಗೆ ತಿಳಿಸಿದನು. ಆಶ್ರಮದಲ್ಲಿ ನೆರೆದ ಜನಸಮೂಹವನ್ನು ಕಂಡು ಥಟ್ಟನೆ ಹಿಂತಿರುಗಿ ಕಾನನದಲ್ಲಿ ಪ್ರವೇಶಿಸುತ್ತ, ಕೆಲವುಕಡೆ ಜನರ ಕಣ್ಣಿಗೆ ಬೀಳುತ್ತಲೂ, ಮತ್ತೊಂದುಕಡೆ ಅದೃಶ್ಯನಾಗಿಯೂ ಓಡುತ್ತಿದ್ದ ಆ ವಿದುರನನ್ನು ಕಂಡೊಡನೆ ಯುಧಿಷ್ಠಿರನು ಅವನನ್ನು ಹಿಂಬಾಲಿಸಿ ಓಡುತ್ತ

'ಓಹೋ! ಓಹೋ! ವಿದುರಾ! ನಾನು ನಿನ್ನ ಪ್ರಿಯನಾದ ಯುಧಿಷ್ಠಿರನು!' ಎಂದು ಬಹು ಪ್ರಯತ್ನಪಟ್ಟು ಆತನನ್ನಿದಿರುಗೊಂಡುಬಂದು ತಡೆದನು. ಆಗ ಆ ವಿದುರನು, ಆ ವನಮಧ್ಯದಲ್ಲಿ ಪರಿಶುದ್ಧವೂ, ಏಕಾಂತವೂ ಆದ ಸ್ಥಳದಲ್ಲಿದ್ದ ಒಂದು ಮರಕ್ಕೆ ಮೈಯೊರಗಿ ನಿಂತನು. ಅತ್ಯಂತ ಕೃಶಾಂಗನಾಗಿ, ಆಕೃತಿಮಾತ್ರದಿಂದ ಗುರುತುಹಿಡಿಯುವಂತಿದ್ದ ಧೀಮಂತನಾದ ಆತನನ್ನು ಸಮೀಪಿಸಿ ಧರ್ಮರಾಜನು 'ಆರ್ಯ! ನಾನು ಯುಧಿಷ್ಠಿರನು' ಎಂದು ಹೇಳಿ ಅವನ ಮುಂದೆ ಬಂದು ನಿಂತನು. ಆಗ ವಿದುರನು ಕೇವಲ ಸಂಜ್ಞೆಯಿಂದಲೇ ಪ್ರತ್ಯುತ್ತರವನ್ನು ಕೊಟ್ಟು ಮನಸ್ಸನ್ನು ದೃಢಪಡಿಸಿಕೊಂಡು ರೆಪ್ಪೆಗಳನ್ನು ಬಡಿಯದೆ, ತನ್ನ ನೋಟವು ಆತನ ನೋಟದೊಡನೆ ಸೇರುವಂತೆ ಆ ಆರಸನನ್ನು ದೃಷ್ಟಿಸಿ ನೋಡಿದನು ಆಗ ಸ್ವಲ್ಪಹೊತ್ತಿನವರೆಗೆ ವಿದುರನು ತನ್ನ ಅವಯವಗಳು ಆತನ ಅವಯವಗಳಲ್ಲಿಯೂ, ತನ್ನ ಪ್ರಾಣಗಳು ಆತನ ಪ್ರಾಣಗಳಲ್ಲಿಯೂ, ತನ್ನ ಇಂದ್ರಿಯಗಳು ಅವನ ಇಂದ್ರಿಯಗಳಲ್ಲಿಯೂ ಐಕ್ಯಹೊಂದುವಂತೆ ಯೋಗಬಲವನ್ನವಲಂಬಿಸಿ, ಧರ್ಮರಾಜನ ಶರೀರದಲ್ಲಿ ಪ್ರವೇಶಿಸಿಬಿಟ್ಟನು. ಒಡನೆಯೇ ಯುಧಿಷ್ಠಿರನು, ಆ ಮರವನ್ನೊರಗಿ ನಿಂತಿದ್ದ ವಿದುರನ ಶರೀರವು ನಿರ್ಜೀವವಾಗಿ, ನಟ್ಟ ಕಣ್ಣಾಲಿಗಳಿಂದ ನಿಶ್ಚಲವಾಗಿದ್ದುದನ್ನು ಕಂಡನು. ಆಗ ಧರ್ಮರಾಜನಿಗೆ ತನ್ನ ದೇಹದಲ್ಲಿ ಒಂದು ಅಪೂರ್ವವಾದ ಹೊಸ ಶಕ್ತಿಯೂ, ತೇಜಸ್ಸೂ ಉಂಟಾದಹಾಗೆಯೂ ತೋರಿತು. ಮತ್ತು ಆಗ ಅವನು, ತಾನೂ, ವಿದುರನೂ ಒಂದೇ ಧರ್ಮದ ಅಂಶದಿಂದ ಹುಟ್ಟಿದವರೆಂಬುದನ್ನು ತಿಳಿದನು. ಹಿಂದೆ ವ್ಯಾಸನು ತನಗೆ ಹೇಳಿದ್ದಂತೆ, ತನ್ನಲ್ಲಿ ಪುರಾತನವಾದ ಮತ್ತು ಮುಂದೆ ಬರಬಹುದಾದ ಯೋಗಧರ್ಮವನ್ನೆಲ್ಲ ನೆನೆಸಿಕೊಂಡನು. ಧರ್ಮರಾಜನು ಆಗ ವಿದುರನ ಮೃತದೇಹಕ್ಕೆ ಆ ಸ್ಥಳದಲ್ಲಿಯೇ ದಹನಾದಿ ಸಂಸ್ಕಾರಗಳನ್ನು ಮಾಡಲುದ್ದೇಶಿಸಿದನು. ಆಗ ಆಕಾಶವಾಣಿಯೊಂದು ಧರ್ಮರಾಜನನ್ನು ಕುರಿತು 'ರಾಜಾ! ನಿಲ್ಲು! ನಿಲ್ಲು! ಈ ವಿದುರನ ದೇಹಕ್ಕೆ ನೀನು ದಹನಸಂಸ್ಕಾರಗಳನ್ನು ಮಾಡಬೇಡ. ಯತಿಧರ್ಮವನ್ನವಲಂಬಿಸಿದ ಈತನಿಗೆ ದಹನಸಂಸ್ಕಾರವು ಕೂಡದು. ಈತನೇ ಸನಾತನ ಧರ್ಮಮೂರ್ತಿ. ಈತನಿಗಾಗಿ ನೀನು ದುಃಖಿ

ಸಲೂ ಬಾರದು' ಎಂದಿತು. ಆಗ ಧರ್ಮರಾಜನು ಅಲ್ಲಿಂದ ಹಿಂತಿರುಗಿ ಬಂದು ಧೃತರಾಷ್ಟ್ರನಿಗೆ ಅವೆಲ್ಲವನ್ನೂ ವಿವರಿಸಿ ತಿಳಿಸಿದನು. ಆಗ ಧೃತರಾಷ್ಟ್ರರಾಜನೂ, ಅಲ್ಲಿ ನೆರೆದಿದ್ದ ಇತರ ಜನರೂ, ಭೀಮಸೇನನೇ ಮೊದಲಾದವರೂ ಬಹಳ ಆಶ್ಚರ್ಯಪಟ್ಟರು. ಧೃತರಾಷ್ಟ್ರನು ಆಮೇಲೆ ಧರ್ಮರಾಜನನ್ನು ಕುರಿತು 'ಓ ರಾಜಾ! ಈ ತೀರ್ಥವನ್ನೂ, ಗೆಣಸನ್ನೂ, ಈ ಹಣ್ಣುಗಳನ್ನೂ ಸ್ವೀಕರಿಸು. ಮನುಷ್ಯನು ತಾನು ಯಾವುದನ್ನು ಸೇವಿಸುವನೋ, ಅದನ್ನೇ ಅತಿಥಿಗೂ ಕೊಡಬೇಕೆಂದು ಶಾಸ್ತ್ರವಿಧಿಯುಂಟು. ಎಂದನು. ಆಗ ಧರ್ಮರಾಜನು ರಾಜನನ್ನು ಕುರಿತು 'ಹಾಗೆಯೇ ಆಗಲಿ' ಎಂದು ಹೇಳಿ, ಧೃತರಾಷ್ಟ್ರನು ಕೊಟ್ಟ ಕಂದ ಮೂಲ ಫಲಗಳನ್ನು ತನ್ನ ತಮ್ಮಂದಿರೊಡನೆ ಭುಜಿಸಿದನು. ಆಮೇಲೆ ಅವರೆಲ್ಲರೂ ಮರದಡಿಗಳಲ್ಲಿ ತಮತಮಗೆ ಯೋಗ್ಯವಾದ ಸ್ಥಳವನ್ನು ಕಲ್ಪಿಸಿಕೊಂಡು ಆ ರಾತ್ರಿಯನ್ನು ಕಳೆದರು.

ಇದು ಇಪ್ಪತ್ತೆಂಟನೆಯ ಅಧ್ಯಾಯವು.

> ಯುಧಿಷ್ಠಿರನು ಧೃತರಾಷ್ಟ್ರನ ಅನುಮತಿಯನ್ನು ಪಡೆದು ತಮ್ಮಂದಿರೊಡನೆ ಮಹರ್ಷಿಗಳ ಆಶ್ರಮಗಳನ್ನು ನೋಡಿದುದು ಶತಯೂಪಾದಿಗಳೂ, ಶಿಷ್ಯರೊಡನೆ ವ್ಯಾಸನೂ ಧೃತರಾಷ್ಟ್ರಾಶ್ರಮಕ್ಕೆ ಬಂದುದು.

ಪುಣ್ಯಕರ್ಮಿಗಳಾದ ಇವರಿಗೆ ಆ ಆಶ್ರಮದಲ್ಲಿ ಶುಭವೂ, ನಕ್ಷತ್ರ ನಿಬಿಡವೂ ಆದ ಆ ರಾತ್ರಿಯು ಸುಖವಾಗಿ ಕಳೆಯಿತು. ಆ ರಾತ್ರಿ ಅಲ್ಲಿ ಧರ್ಮಾರ್ಥಬೋಧಕಗಳಾಗಿ, ವೇದಾರ್ಥಗಳಿಂದಕೂಡಿ, ಚಿತ್ರಪದಪ್ರಯೋಗಗಳುಳ್ಳ ವಿವಿಧಕಥೆಗಳು ನಡೆಯುತ್ತಿದ್ದುವು. ಆಗ ಪಾಂಡವರು ತಾಯಿಯ ಸುತ್ತಲೂ ಬರೀ ನೆಲದಮೇಲೆ ಮಲಗಿದರು. ಅಲ್ಲಿ ಧೃತರಾಷ್ಟ್ರನು ಸೇವಿಸಿದ ಆಹಾರವನ್ನೇ ತಾವೂ ಭುಜಿಸಿ ರಾತ್ರಿಯನ್ನು ಕಳೆದರು. ರಾತ್ರಿಯು ಕಳೆದೊಡನೆಯೇ ಯುಧಿಷ್ಠಿರನು ಪ್ರಾತಃಕಾಲದ ಕರ್ಮಗಳನ್ನು ಮುಗಿಸಿಕೊಂಡು, ಭ್ರಾತೃಗಳೊಡನೆಯೂ, ಪುರಜನರೊಡನೆಯೂ, ಪರಿವಾರಗಳೊ

ಡನೆಯೂ, ಸೇವಕರೊಡನೆಯೂ, ಪುರೋಹಿತರೊಡನೆಯೂ ಧೃತರಾಷ್ಟ್ರನ ಆಜ್ಞೆಯಂತೆ ಆ ಆಶ್ರಮಮಂಡಲದ ಒಂದೊಂದು ಭಾಗವನ್ನೂ ನೋಡುತ್ತ ಬಂದನು. ಆ ಆಶ್ರಮದ ವೈಭವವನ್ನು ಕೇಳಬೇಕೇ? ಅಲ್ಲಲ್ಲಿ ಉರಿಯುವ ಹೋಮಾಗ್ನಿಗಳು! ಸ್ನಾನಮಾಡಿ ಶುಚೀಭೂತರಾಗಿ ಬಂದು ಅಲ್ಲಲ್ಲಿ ಹೋಮಮಾಡುತ್ತಿರುವ ಮಹರ್ಷಿಗಳು! ಅಲ್ಲಲ್ಲಿ ಘಮಘಮಿಸುತ್ತಿರುವ ಕಾಡು ಹೂಗಳು! ಆಜ್ಯಾಹುತಿಯಿಂದ ಸುಗಂಧವಿಶಿಷ್ಟವಾದ ಹೋಮ ಧೂಮದ ಸಾಲುಗಳು! ವೇದವೇ ಮೂರ್ತೀಭವಿಸಿದಂತೆ ಅಲ್ಲಲ್ಲಿ ವೇದಿಯ ಸುತ್ತಲೂ ಮಂತ್ರಪಾರಮಾಡುತ್ತಿರುವ ಮಹರ್ಷಿಗಳು! ಅಲ್ಲಲ್ಲಿ ತಮ್ಮನ್ನು ಕಂಡು ಭಯದಿಂದ ನಿಂತಿರುವ ಜಿಂಕೆಗಳು! ನಿರ್ಭಯವಾಗಿ ಮತ್ತು ಗಾನ ಧ್ವನಿಯಿಂದ ಕೂಗುತ್ತಿರುವ ಪಕ್ಷಿಗಳು! ಒಂದುಕಡೆ ನವಿಲುಗಳ ಕೇಕಾ ಧ್ವನಿಗಳು! ಅಲ್ಲಲ್ಲಿ ದಾತ್ಯೂಹಗಳ ಶಬ್ದಗಳು! ಕಿವಿಗಿಂಪಾಗಿರುವ ಕೋ ಗಿಲೆಗಳ ನಿನಾದಗಳು! ಬ್ರಾಹ್ಮಣರ ವೇದಾಧ್ಯಯನ ಘೋಷಗಳು! ಇವು ಗಳಿಂದ ಕೂಡಿ, ಎಲ್ಲಾ ಸ್ಥಳಗಳಲ್ಲಿಯೂ ಅಲಂಕೃತವಾಗಿ, ಅಲ್ಲಲ್ಲಿ ಕಂದ ಮೂಲಫಲಗಳ ರಾಶಿಯಿಂದ ಶೋಭಿಸುತ್ತಿರುವುದು ಆಗ ಧರ್ಮರಾಜನು ಮೊದಲೇ ತಾನು ಅಲ್ಲಿನ ತಪಸ್ವಿಗಳಿಗಾಗಿ ಮಾಡಿಸಿ ತಂದಿದ್ದ ಸುವರ್ಣ ಕಲಶಗಳನ್ನೂ, ಅತ್ತಿಯ ಮರದಿಂದ ಮಾಡಿದ ಕಲಶಗಳನ್ನೂ, ಕೃಷ್ಣಾ ಜಿನಗಳನ್ನೂ, ಕಂಬಳಿಗಳನ್ನೂ, ಸ್ರುಕ್ಕನ್ನೂ, ಸ್ರುವವನ್ನೂ, ಕಮಂಡಲ ಗಳನ್ನೂ, ಸ್ಥಾಲಿಗಳನ್ನೂ, ಬಿಂದಿಗೆಗಳನ್ನೂ, ಕಬ್ಬಿಣದ ಪಾತ್ರೆಗಳನ್ನೂ, ಇನ್ನೂ ಹಲವುಬಗೆಯ ಪಾತ್ರೆಗಳನ್ನೂ, ಆಶ್ರಮಯೋಗ್ಯಗಳಾದ ಇತರ ವಸ್ತುಗಳನ್ನೂ, ಅವರವರು ಅಪೇಕ್ಷಿಸಿದಂತೆ ಕೊಡುತ್ತ ಬಂದನು. ತಾನು ತಂದ ಧನವೆಲ್ಲವನ್ನೂ ತಪಸ್ವಿಗಳಿಗೆ ಕೊಟ್ಟು ಹಿಂತಿರುಗಿದಮೇಲೆ, ತನ್ನ ಆಹ್ನಿಕಗಳನ್ನು ಮುಗಿಸಿಕೊಂಡು ಬಂದು, ಗಾಂಧಾರಿಯೊಡನೆ ಕುಳಿತಿರುವ ಧೃತರಾಷ್ಟ್ರನನ್ನೂ, ಅವರ ಪಕ್ಕದಲ್ಲಿ ಶಿಷ್ಯಳಂತೆ ವಿನೀತೆಯಾಗಿ ನಿಂತಿದ್ದ ತಮ್ಮ ತಾಯಿಯನ್ನೂ ಕಂಡನು. ಆಮೇಲೆ ಅವರಿಗೆ ತಮ್ಮ ಹೆಸರುಗಳನ್ನು ಹೇಳಿ ನಮಸ್ಕರಿಸಿ, ಆತನ ಅನುಮತಿಯಂತೆ ಬ್ರುಸಿಯೆಂಬ ಕುಶಾಸನದಲ್ಲಿ ಕುಳಿತನು. ಭೀಮಸೇನನೇ ಮೊದಲಾದ ಪಾಂಡವರೂ ಧೃತರಾಷ್ಟ್ರನಿಗೆ ನಮಸ್ಕರಿಸಿ ಅಭಿವಾದನಮಾಡಿ ಆತನ ಆಜ್ಞೆಯಂತೆ ಕುಳಿತರು. ಅವ

ರಿಂದ ಪರಿವೃತನಾದ ಧೃತರಾಷ್ಟ್ರನು ಬ್ರಹ್ಮತೇಜಸ್ಸುಳ್ಳವನಾಗಿ, ದೇವಗಣ ಗಳಿಂದ ಪರಿವೃತನಾದ ಬೃಹಸ್ಪತಿಯಂತೆ ಪ್ರಕಾಶಿಸಿದನು. ಅವರು ಹಾಗೆ ಕುಳಿತಿರುವಾಗ, ಕುರುಕ್ಷೇತ್ರನಿವಾಸಿಗಳಾದ ಶತಯೂಪಾದಿಗಳೂ, ಇತರ ಮಹರ್ಷಿಗಳೂ ಅಲ್ಲಿಗೆ ಬಂದರು. ಮಹಾತೇಜಸ್ವಿಯಾದ ವ್ಯಾಸನೂ ತನ್ನ ಶಿಷ್ಯರಿಂದ ಪರಿವೃತನಾಗಿ, ಅಲ್ಲಿಗೆ ಬಂದು ರಾಜನಿಗೆ ಕಾಣಿಸಿಕೊಂಡನು. ಧೃತರಾಷ್ಟ್ರನೂ, ಯುಧಿಷ್ಠಿರಭೀಮಸೇನಾದಿಗಳೂ ಆತನನ್ನಿದಿರುಗೊಂಡು ಅಭಿವಾದನಮಾಡಿದರು. ಶತಯೂಪಾದಿಗಳೂ, ವ್ಯಾಸನೂ ಧೃತರಾಷ್ಟ್ರ ರಾಜನಿಗೆ ಕುಳಿತುಕೊಳ್ಳುವಂತೆ ಹೇಳಿದರು. ಆಮೇಲೆ ವ್ಯಾಸನು, ಕೃಷ್ಣಾ ಜಿನದರ್ಭೆಗಳಿಂದ ತನಗಾಗಿ ಏರ್ಪಡಿಸಿದ್ದ ಆಸನದಲ್ಲಿ ಕುಳಿತನು. ಆಮೇಲೆ ಅಲ್ಲಿಗೆ ಬಂದಿದ್ದ ಮಹಾತೇಜಸ್ವಿಗಳಾದ ರಾಜಶ್ರೇಷ್ಠರೆಲ್ಲರೂ, ವ್ಯಾಸನಿಂದ ಅನುಮತಿಸಲ್ಪಟ್ಟವರಾಗಿ, ಅಲ್ಲಲ್ಲಿದ್ದ ಆಸನಗಳಲ್ಲಿ ಕುಳಿತರು.

ಇದು ಇಪ್ಪತ್ತೊಂಭತ್ತನೆಯ ಅಧ್ಯಾಯವು.

ವ್ಯಾಸನು ಧೃತರಾಷ್ಟ್ರನ ಕ್ಷೇಮಲಾಭಗಳನ್ನು ವಿಚಾರಿಸಿ, ವಿದುರನ ನಿಜರೂಪವನ್ನೂ, ಇತರ ವಿಷಯಗಳನ್ನೂ ಅವ ನಿಗೆ ತಿಳಿಸಿ, ಮಹಾಮುನಿಗಳಿಗೂ ದುರ್ಲಭವಾದ ಧೃ ತರಾಷ್ಟ್ರನ ಕೋರಿಕೆಯನ್ನು ನೆರವೇರಿಸುವಂತೆ ಪ್ರತಿಜ್ಞೆಮಾಡಿದುದು.

ಪಾಂಡವರು ಕುಳಿತೊಡನೆ ವ್ಯಾಸನು ಧೃತರಾಷ್ಟ್ರರಾಜನನ್ನು ಕರೆದು, ' ಓ ಧೃತರಾಷ್ಟ್ರಾ ! ನಿನ್ನ ತಪಸ್ಸು ನಿರ್ವಿಘ್ನವಾಗಿ ನಡೆಯುತ್ತಿರು ವುದೇ ? ನಿನ್ನ ಮನಸ್ಸಿಗೆ ವನವಾಸವು ಪ್ರಿಯವಾಗಿರುವುದೇ ? ಈಗ ನಿನ್ನ ಮನಸ್ಸಿನಲ್ಲಿ ಪುತ್ರಮರಣಶೋಕವಿಲ್ಲವಷ್ಟೆ ? ನಿನಗೆ ಜ್ಞಾನವಿಕಾಸವಾಗಿ ರುವುದೇ ? ಬುದ್ಧಿಪೂರ್ವಕವಾಗಿ ವನವಾಸವಿಧಿಗಳನ್ನು ಅನುಸರಿಸುತ್ತಿರು ವೆಯಾ ? ಗಾಂಧಾರಿಯು ಈಗಲೂ ದುಃಖವಶಳಾಗಿಲ್ಲವಷ್ಟೆ ? ಆಕೆಯು ಮಹಾಪ್ರಜ್ಞಾಶಾಲಿನಿ ! ಬುದ್ಧಿವಂತಳು ! ಧರ್ಮಾರ್ಥಗಳನ್ನು ಅರಿತವಳು! ಜನನಮರಣಗಳ ತತ್ವಗಳನ್ನು ಬಲ್ಲವಳು ! ಆಕೆಯು ದುಃಖಪಡದಿರು

ವಳೇ? ತನ್ನ ಮಕ್ಕಳನ್ನೆಲ್ಲ ಬಿಟ್ಟು, ಗುರುವಾದ ನಿನಗೆ ಶುಶ್ರೂಷೆಮಾಡಲು ನಿನ್ನೊಡನೆ ಬಂದ ಕುಂತಿಯು, ನಿನಗೆ ವಿಧೇಯಳಾಗಿ ಸೇವೆಮಾಡುತ್ತಿರುವಳಷ್ಟೆ? ಧರ್ಮರಾಜನನ್ನು ಕಂಡಾಗಲೆಲ್ಲ ನೀನು ಅವನನ್ನು ಆಶೀರ್ವದಿಸಿ ಸಮಾಧಾನಗೊಳಿಸುವೆಯಾ? ಭೀಮಾರ್ಜುನ ನಕುಲಸಹದೇವರೆಲ್ಲರೂ ನಿನ್ನಿಂದ ಸಮಾಧಾನಪಡಿಸಲ್ಪಟ್ಟರೇ? ನಿನ್ನ ಮನಸ್ಸು ಶುದ್ಧವಾಗಿರುವುದೇ? ನೀನು ಜ್ಞಾನವಂತನೂ, ಗುಣಶಾಲಿಯೂ ಎನಿಸಿಕೊಂಡಿರುವೆಯಾ? ಶತ್ರುತ್ವವಿಲ್ಲದಿರುವುದು, ಸತ್ಯ, ಅಕ್ರೋಧ, ಇವು ಮೂರೂ ಎಲ್ಲಾ ಪ್ರಾಣಿಗಳಿಗೂ ಶ್ರೇಷ್ಠವಾದ ಉತ್ತಮಗುಣಗಳು. ನಿನಗೆ ವನವಾಸದಿಂದ ಮೋಹವಿಲ್ಲದಿರುವುದೇ? ವನದಲ್ಲಿರುವ ಆಹಾರವೂ, ಉಪವಾಸವೂ ನಿನಗೆ ಪ್ರಿಯವಾಗಿರುವುವೇ? ಓ ರಾಜಾ! ಮಹಾತ್ಮನೂ, ಧರ್ಮಸ್ವರೂಪಿಯೂ ಆದ ವಿದುರನು ಹೇಗೆ ಗತಿಸಿದನೆಂಬುದೂ ತಿಳಿಯಿತು. ಧರ್ಮಪುರುಷನೇ ದೈವಶಾಪದಿಂದ ವಿದುರನಾಗಿ ಹುಟ್ಟಿದ್ದನು. ವಿದುರನು ಮಹಾಬುದ್ಧಿಶಾಲಿ! ಮಹಾ ಯೋಗಿ! ಮಹಾತ್ಮನು! ಉದಾರಮನಸ್ಸುಳ್ಳವನು! ದೇವತೆಗಳಿಗೆ ಗುರುವಾದ ಬೃಹಸ್ಪತಿಗೂ, ಅಸುರಗುರುವಾದ ಶುಕ್ರಾಚಾರ್ಯನಿಗೂ ಕೂಡ ಅವನಷ್ಟು ಬುದ್ಧಿಚಾತುರ್ಯವಿಲ್ಲವೆನಬಹುದು. ಹಿಂದೆ ಮಾಂಡವ್ಯನೆಂಬ ಋಷಿಯು ಕೋಪವಶನಾಗಿ ಬಹುಕಾಲದಿಂದ ಸಂಪಾದಿಸಿದ ತನ್ನ ತಪೋಬಲವನ್ನೆಲ್ಲ ಕಳೆದುಕೊಂಡು ಸನಾತನಧರ್ಮವನ್ನು ಶಪಿಸಿದನು. ಆ ಧರ್ಮದೇವನೇ ಹಿಂದೆ ಬ್ರಹ್ಮನ ಆಜ್ಞೆಯನ್ನನುಸರಿಸಿ, ತನ್ನ ಮತ್ತು, ದೈವದ ಶಕ್ತಿಯಿಂದ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಮಹಾಬುದ್ಧಿಶಾಲಿಯಾದ ನಿನ್ನ ಭ್ರಾತೃವಾಗಿ (ವಿದುರನಾಗಿ) ಹುಟ್ಟಿದ್ದನೆಂದು ತಿಳಿ. ಮನಸ್ಸಿನಲ್ಲಿ ನೆನೆಸುವುದರಿಂದಲೂ, ಧಾರಣಮಾಡುವುದರಿಂದಲೂ ಕವಿಗಳು ಯಾವುದನ್ನು ಧರ್ಮವೆಂದು ಹೇಳುವರೋ, ಸನಾತನವಾದ ಆ ಧರ್ಮವು, ಸತ್ಯ, ಇಂದ್ರಿಯನಿಗ್ರಹ, ಮನೋಜಯ, ಅಹಿಂಸೆ, ದಾನ, ತಪಸ್ಸು, ಇವುಗಳಿಂದ ವರ್ಧಿಸುವುದು. ಓ ರಾಜಾ! ಮಹಾಬುದ್ಧಿಶಾಲಿಯಾದ ಆ ಧರ್ಮದೇವನಿಂದಲೇ ಕೌರವರಾಜನಾದ ಈ ಯುಧಿಷ್ಠಿರನೂ ಯೋಗಬಲದಿಂದ ಹುಟ್ಟಿಸಲ್ಪಟ್ಟವನು (ಪೃಥಿವ್ಯಪ್ತೇಜೋವಾಯ್ವಾಕಾಶಗಳೆಂಬ) ಪಂಚಭೂತಗಳಂತೆಯೇ ಧರ್ಮವೂ ಇಹಪರಗಳೆರಡರಲ್ಲಿಯೂ ಸ್ಥಿರವಾಗಿ ನೆಲೆಗೊಂಡಿರು

ವುದು. ರಾಜೇಂದ್ರಾ! ಚರಾಚರಗಳೆನಿಸಿದ ಎಲ್ಲಾ ವಸ್ತುಗಳಲ್ಲಿಯೂ ವ್ಯಾಪಿಸಿ, ಎಲ್ಲರಲ್ಲಿಯೂ ಇರುವ ಆ ಧರ್ಮವು ದೇವಶ್ರೇಷ್ಠರಿಗೂ, ಪಾಪ ವಿಮುಕ್ತರಾದ ಸಿದ್ಧರಿಗೂ ಗೋಚರವಾದುದು. ಆ ಧರ್ಮವೇ ವಿದುರನು! ಆ ವಿದುರನೇ ಯುಧಿಷ್ಠಿರನು. ಓ ರಾಜಾ! ನಿನಗೆ ಸೇವಕನಂತೆ ನಿಂತಿರುವ ಈ ಪಾಂಡುಪುತ್ರನನ್ನು ನೀನು ನೋಡು. ನಿನ್ನ ಭ್ರಾತೃವೂ, ಮಹಾತ್ಮನೂ ಆದ ವಿದುರನು, ಈ ಯುಧಿಷ್ಠಿರನನ್ನು ಕಂಡೊಡನೆ ಯೋಗ ಬಲದಿಂದ ಆತನಲ್ಲಿ ಪ್ರವೇಶಿಸಿಬಿಟ್ಟನು ನಿನಗೂ ಹಾಗೆಯೇ ಶೀಘ್ರದಲ್ಲಿ ಕ್ಷೇಮವನ್ನುಂಟುಮಾಡುವೆನು. ಪ್ರಿಯಪುತ್ರಾ! ಈಗ ನಾನು ನಿನ್ನ ಸಂಶಯನಿವಾರಣೆಗಾಗಿಯೇ ಇಲ್ಲಿಗೆ ಬಂದವನೆಂದು ತಿಳಿ ಹಿಂದೆ ಎಂತಹ ಮಹರ್ಷಿಗಳಿಂದಲೂ, ಯಾವಾಗಲೂ ಸಾಧ್ಯವಲ್ಲದ ಅದ್ಭುತಕಾರ್ಯ ವನ್ನು ನಾನು ನನ್ನ ತಪೋಬಲದಿಂದ ನಿನಗೆ ಮಾಡುವೆನು ನಿನಗೆ ಬೇಕಾದುದನ್ನು ತಿಳಿಸು. ನೀನು ನೋಡುವುದಕ್ಕಾಗಲಿ, ಮುಟ್ಟುವುದಕ್ಕಾಗಲಿ, ಕೇಳುವುದಕ್ಕಾಗಲಿ ಆಸೆಪಟ್ಟುದನ್ನು ಈಗಲೇ ನಿನಗೆ ಒದಗಿಸಿಕೊಡುವೆನು. ನಿನ್ನ ಇಷ್ಟವೇನು ಹೇಳು' ಎಂದನು.

ಇದು ಮೂವತ್ತನೆಯ ಅಧ್ಯಾಯವು.

**ಇಲ್ಲಿಗೆ ಆಶ್ರಮವಾಸಪರ್ವವು ಮುಗಿದುದು.**

# ಪುತ್ರದರ್ಶನಪರ್ವವು.

ಪಾಂಡವರು ಧೃತರಾಷ್ಟ್ರಾಶ್ರಮದಲ್ಲಿ ಒಂದು ತಿಂಗಳಕಾಲ ವಾಸಮಾಡಿದುದು. ಗಾಂಧಾರಿಯು ಧೃತರಾಷ್ಟ್ರನಿಗೆ ಪುತ್ರರನ್ನು ಪ್ರತ್ಯಕ್ಷವಾಗಿ ಕಾಣುವ ಅಪೇಕ್ಷೆಯಿರುವುದನ್ನು ವ್ಯಾಸನಿಗೆ ತಿಳಿಸಿದುದು. ವ್ಯಾಸನು ಕುಂತಿಯ ಅಭಿಲಾಷೆಯೇನೆಂದು ಅವರನ್ನು ಕೇಳಿದುದು

ಜನಮೇಜಯನು 'ಓ ಬ್ರಾಹ್ಮಣೋತ್ತಮಾ! ಧೃತರಾಷ್ಟ್ರನು ತನ್ನ ಪತ್ನಿಯೊಡನೆಯೂ, ಸೊಸೆಯಾದ ಕುಂತಿಯೊಡನೆಯೂ ವನವಾಸ

ದಲ್ಲಿರುವಾಗ, ಧರ್ಮಜ್ಞನಾದ ವಿದುರನೂ ಧರ್ಮರಾಜನಲ್ಲಿ ಪ್ರವೇಶಿಸಿದ ಮೇಲೆ, ಪಾಂಡವರೆಲ್ಲರೂ ಆ ಆಶ್ರಮಮಂಡಲದಲ್ಲಿ ವಾಸಿಸುತ್ತಿದ್ದರಷ್ಟೆ? ಆಗ ತೇಜಸ್ವಿಯಾದ ವ್ಯಾಸಮುನಿಯು ಯಾವುದೋ ಒಂದು ಆಶ್ಚರ್ಯ ಕಾರ್ಯವನ್ನು ಮಾಡುವುದಾಗಿ ಅವರಿಗೆ ಹೇಳಿದನೆಂದು ತಿಳಿಸಿದೆಯಲ್ಲವೆ? ಆ ಆಶ್ಚರ್ಯವೇನು? ಯುಧಿಷ್ಠಿರನು ಅವರೊಡನೆ ಅರಣ್ಯದಲ್ಲಿ ಎಷ್ಟು ಕಾಲ ವಾಸಮಾಡಿದನು? ಸೈನ್ಯದೊಡನೆಯೂ, ಎಲ್ಲಾ ಪುರಜನರೊಡನೆ ಯೂ ಬಂದಿದ್ದ ಆ ಮಹಾತ್ಮರು ಕಾಡಿನಲ್ಲಿ ಯಾವುದನ್ನು ಭುಜಿಸುತ್ತಿ ದ್ದರು? ಅವೆಲ್ಲವನ್ನೂ ತಿಳಿಯಲಪೇಕ್ಷಿಸುವೆನು' ಎಂದನು

ಆಗ ವೈಶಂಪಾಯನನು 'ಓ ಮಹಾರಾಜಾ! ಯುಧಿಷ್ಠಿರನು ವನ ವಾಸಕಾಲದಲ್ಲಿ ಧೃತರಾಷ್ಟ್ರನನ್ನು ನೋಡುವುದಕ್ಕಾಗಿ ಭ್ರಾತೃಗಳೊಡನೆ ಯೂ, ಸೈನ್ಯದೊಡನೆಯೂ ಬಂದನಷ್ಟೆ? ಅಲ್ಲಿ ಅವರಿಗೆ ಮೊದಲನೆಯ ದಿನದಲ್ಲಿ ಗಡ್ಡೆಗೆಣಸುಗಳು, ಹಣ್ಣುಗಳು, ಇವುಮಾತ್ರವೇ ಆಹಾರವಾದುವು. ಭೂಮಿಯೇ ಹಾಸಿಗೆಯಾಯಿತು ಅಮೇಲೆ ಆ ಪಾಂಡವರು, ಧೃತರಾ ಷ್ಟ್ರನ ಅನುಮತಿಯನ್ನು ಪಡೆದು, ಮಾರನೆಯ ದಿನದಿಂದ ವನದಲ್ಲ ಅನ್ನ ಪಾನಗಳನ್ನೂ, ಹಾಸಿಗೆಗಳನ್ನೂ ಏರ್ಪಡಿಸಿಕೊಂಡರು ಅವರು ಸೈನ್ಯ ದೊಡನೆಯೂ, ಪುರಜನರೊಡನೆಯೂ ಒಂದು ತಿಂಗಳವರೆಗೆ ಆ ವನದಲ್ಲ ಯೇ ವಾಸಮಾಡದರು. ಆಗ ವ್ಯಾಸನೂ ಅಲ್ಲಿಗೆ ಬಂದನು ಅವರೆಲ್ಲರೂ ಧೃತರಾಷ್ಟ್ರರಾಜನ ಸಮೀಪದಲ್ಲ ಆ ವ್ಯಾಸನೊಡನೆ ಕುಳಿತು ಕಥೆಗಳನ್ನು ಹೇಳಿಕೊಳ್ಳುತ್ತಿರುವಾಗ, ನಾರದಪರ್ವತರೂ, ದೇವಲನೂ, ಇತರ ಮುನಿ ವರರೂ ವಿಶ್ವಾವಸು, ತುಂಬುರು, ಚಿತ್ರಸೇನನು, ಇವರೆಲ್ಲರೂ ಅಲ್ಲಿಗೆ ಬಂದರು. ಮಹಾ ತಪಸ್ವಿಯಾದ ಯುಧಿಷ್ಠಿರನು ಧೃತರಾಷ್ಟ್ರನ ಅನು ಮತಿಯಂತೆ ಅವರಿಗೆಲ್ಲ ವಿಧ್ಯುಕ್ತರೀತಿಯಲ್ಲಿ ಪೂಜೆಮಾಡಿದನು ಅವರೆ ಲ್ಲರೂ ಹೀಗೆ ಸತ್ಕೃತರಾಗಿ, ಪಕ್ಷಿಗಳ ಗರಿಗಳಿಂದ ಮಾಡಿದ ಪವಿತ್ರವಾದ ಆಸನಗಳಲ್ಲಿ ಕುಳಿತರು. ಧೃತರಾಷ್ಟ್ರನೂ ಪಾಂಡವರೊಡನೆ ಅವರ ನಡುವೆ ಕುಳಿತಿದ್ದನು. ಗಾಂಧಾರಿ, ಕುಂತಿ, ದ್ರೌಪದಿ, ಸುಭದ್ರೆ, ಮುಂತಾಗಿ ಎಲ್ಲಾ ಸ್ತ್ರೀಯರೂ ಬಂದು ಕುಳಿತರು. ಆಗ ಅವರಲ್ಲಿ ಧರ್ಮಯುಕ್ತವಾಗಿ

ಪುರಾತನ ರಾಜರ್ಷಿಗಳಿಗೂ, ದೇವಾಸುರರಿಗೂ ಸಂಬಂಧಪಟ್ಟ ಅನೇಕ ಕಥೆಗಳು ನಡೆದುವು. ಈ ಕಥೆಗಳೆಲ್ಲ ಮುಗಿದಮೇಲೆ, ವಾಗ್ಮಿಗಳಲ್ಲಿ ಚತುರನೂ, ತಮ್ಮಲ್ಲಿ ಪ್ರೀತಿಯುಳ್ಳವನೂ, ಮಹಾತೇಜಸ್ವಿಯೂ, ವೇದಜ್ಞರಲ್ಲಿ ಅಗ್ರಗಣ್ಯನೂ ಆದ ವ್ಯಾಸನು ಜ್ಞಾನನೇತ್ರವುಳ್ಳ ಧೃತರಾಷ್ಟ್ರನನ್ನು ಕುರಿತು ಹೀಗೆ ಹೇಳುವನು.

'ಓ ರಾಜೇಂದ್ರಾ! ಈಗ ನೀನು ನಿನ್ನ ಮನಸ್ಸಿನಲ್ಲಿ ನನ್ನೊಡನೆ ಹೇಳಬೇಕೆಂದಿರುವುದನ್ನು ಈಗಾಗಲೇ ನಾನು ತಿಳಿದುಕೊಂಡೆನು. ಮತ್ತು ಪುತ್ರಶೋಕಾಗ್ನಿಯಿಂದ ನಿನಗೂ, ಗಾಂಧಾರಿಗೂ ಉಂಟಾಗಿರುವ ಕಷ್ಟವನ್ನೂ ನಾನು ಬಲ್ಲೆನು. ಈ ಕುಂತಿ, ಈ ದ್ರೌಪದಿ, ಇವರ ಮನಸ್ಸಿನಲ್ಲಿರುವ ದುಃಖವನ್ನೂ, ಕೃಷ್ಣನ ಸಹೋದರಿಯಾದ ಸುಭದ್ರೆಗೆ ಪುತ್ರಮರಣದಿಂದುಂಟಾದ ಮಹಾವ್ಯಸನವನ್ನೂ ನಾನು ಬಲ್ಲೆನು. ಓ ಕೌರವರಾಜಾ! ನೀವೆಲ್ಲರೂ ಇಲ್ಲಿ ಒಂದಾಗಿ ಸೇರಿರುವುದನ್ನು ಕೇಳಿ, ನಿಮ್ಮ ಸಂದೇಹಗಳನ್ನು ನಿವೃತ್ತಿಮಾಡಲು ನಾನು ಬಂದೆನು. ದೇವಗಂಧರ್ವರೂ, ಮಹರ್ಷಿಗಳೂ ದೀರ್ಘಕಾಲದಿಂದ ಸಂಪಾದಿಸಿದ ನನ್ನ ತಪೋಬಲವನ್ನು ಈಗ ನೋಡಲಿ ನಾನು ನಿನಗೆ ಯಾವ ಇಷ್ಟಾರ್ಥಗಳನ್ನು ನೆರವೇರಿಸಲಿ? ತಿಳಿಸು. ನಾನು ವರವನ್ನು ಕೊಡಲು ಸಿದ್ಧನಾಗಿರುವೆನು ನನ್ನ ತಪೋಬಲವನ್ನಾದರೂ ನೋಡು' ಎಂದನು.

ವ್ಯಾಸನ ಮಾತುಗಳನ್ನು ಕೇಳಿ ರಾಜೇಂದ್ರನು ಒಂದು ಮುಹೂರ್ತ ಪರ್ಯಂತದವರೆಗೆ ಸುಮ್ಮನೆ ತನ್ನಲ್ಲಿತಾನೇ ಆಲೋಚಿಸಿ 'ಮಹಾತ್ಮಾ! ಸಾಧುಗಳಾದ ತಮ್ಮೆಲ್ಲರ ಈ ಸಂದರ್ಶನದಿಂದಲೇ ನಾನು ಧನ್ಯನಾದೆನು. ಅನುಗೃಹೀತನೂ ಆದೆನು. ನನ್ನ ಜೀವನವು ಸಫಲವಾಯಿತು. ಓ ತಪೋಧನಾ! ನಾನು ಬ್ರಹ್ಮದೇವನಿಗೆ ಸಮಾನನಾದ ನಿನ್ನೊಡನೆ ಸಂಬಂಧವನ್ನು ಬೆಳೆಸಿರುವುದರಿಂದಲೇ, ನನಗೆ ಇಷ್ಟಗತಿಗಳೂ ಲಭಿಸಿದಂತೆ ಎಣಿಸುವೆನು. ನಿಮ್ಮನ್ನು ನೋಡಿದಮಾತ್ರದಿಂದಲೇ ನಾನು ಪರಿಶುದ್ಧನಾದೆನು. ಇದರಲ್ಲಿ ಸಂದೇಹವಿಲ್ಲ. ಈಗ ನನಗೆ ಪರಲೋಕವಿಷಯವಾದ ಭಯವೇ ಇಲ್ಲ. ಆದರೆ ಮಹಾದುಷ್ಟನೂ, ಮೂಢನೂ ಆಗಿದ್ದ

ಆ ದುರ್ಯೋಧನನ ದುಷ್ಕಾರ್ಯಗಳನ್ನೆಲ್ಲ ನಾನು ತಿಳಿದಿದ್ದರೂ ಮೋಹ ದಿಂದ ನನ್ನ ಮನಸ್ಸು ಈಗಲೂ ಪರಿತಪಿಸುತ್ತಿರುವುದು. ಪಾಪಬುದ್ಧಿ ಯುಳ್ಳ ಆತನಿಂದ ನಿರ್ದೋಷಿಗಳಾದ ಪಾಂಡವರು ಪೀಡಿಸಲ್ಪಟ್ಟರು. ಗಜಾಶ್ವಮಾನವರಿಂದ ತುಂಬಿದ ಭೂಮಿಯು ಆತನಿಂದ ಶೂನ್ಯಪ್ರಾಯ ವಾಯಿತು. ಆ ನನ್ನ ಮಗನ ನಿಮಿತ್ತವಾಗಿ ಮಹಾತ್ಮರೂ, ನಾನಾದೇಶಾ ಧಿಪತಿಗಳೂ ಆದ ಹಲವು ಮಂದಿ ರಾಜರು ಮೃತ್ಯುವಶರಾದರು. ಆ ಶೂರರು ತಮಗೆ ಪ್ರಿಯರಾದ ಮಾತಾಪಿತೃಗಳನ್ನೂ, ಪತ್ನಿಯರನ್ನೂ, ಕೊನೆಗೆ ತಮ್ಮ ಪ್ರಾಣವನ್ನೂ ನೀಗಿ ಯಮಸದನವನ್ನು ಸೇರಿದರು. ಓ ಬ್ರಾಹ್ಮಣರೇ! ಮಿತ್ರಕಾರ್ಯಕ್ಕಾಗಿ ಬಂದು ಯುದ್ಧದಲ್ಲಿ ಕೊಲ್ಲಲ್ಪಟ್ಟ ಅವ ರಿಗೂ, ನನ್ನ ಪುತ್ರರಿಗೂ, ಪೌತ್ರರಿಗೂ ಗತಿಯೇನು? ಮಹಾಬಲಿಷ್ಠನೂ, ವೃದ್ಧನೂ, ಶಂತನುಪುತ್ರನೂ ಆದ ಭೀಷ್ಮನನ್ನೂ, ಬ್ರಾಹ್ಮಣಶ್ರೇಷ್ಠ ನಾದ ದ್ರೋಣನನ್ನೂ ಮರಣಕ್ಕೀಡಾಗುವಂತೆ ಮಾಡಿದ ನನ್ನ ಮನಸ್ಸು ಈಗ ಬಹಳವಾಗಿ ಪರಿತಪಿಸುತ್ತಿರುವುದು. ಮೂಢನೂ, ಪಾಪಿಯೂ, ಬುದ್ಧಿಹೀನನೂ, ಭೂಲೋಕವೆಲ್ಲ ತನಗೇ ಬೇಕೆಂಬ ದುರಾಶೆಯುಳ್ಳವನೂ ಆದ ಆ ನನ್ನ ಪುತ್ರನಿಂದ, ಲೋಕಪ್ರಖ್ಯಾತವಾಗಿದ್ದ ಕುರುಕುಲವೇ ಈಗ ನಾಶವಾಯಿತು. ಅನೇಕಶೂರರು ನಮ್ಮ ನಿಮಿತ್ತವಾಗಿ, ತಮ್ಮ ಪ್ರಿಯ ಪತ್ನಿಯರನ್ನೂ, ಮಕ್ಕಳನ್ನೂ, ನಾನಾಭೋಗಗಳನ್ನೂ, ಯಾಗಗಳನ್ನೂ, ತಟಾಕನಿರ್ಮಾಣಗಳನ್ನೂ ಕಳೆದುಕೊಂಡು ಯಮಸದನಕ್ಕೆ ಹೋದರು. ಇವುಗಳನ್ನೆಲ್ಲ ನೆನೆದು, ರಾತ್ರಿಯೂ, ಹಗಲೂ ನಾನು ಪರಿತಪಿಸುವೆನು. ನನ್ನ ಮನಸ್ಸಿಗೆ ಯಾವ ವಿಧದಿಂದಲೂ ಶಾಂತಿಯಿಲ್ಲದಂತಿದೆ' ಎಂದನು.

ಓ ಜನಮೇಜಯರಾಜಾ! ಧೃತರಾಷ್ಟ್ರನ ಈ ವಿವಿಧವಿಲಾಪಗ ಳನ್ನು ಕೇಳಿದಾಗ, ಗಾಂಧಾರಿ, ಕುಂತಿ, ದ್ರೌಪದಿ, ಸುಭದ್ರೆ, ದುರ್ಯೋಧನಾ ದಿಗಳ ಪತ್ನಿಯರು, ಇತರ ಸ್ತ್ರೀಯರು, ಇವರಿಗೆಲ್ಲ ತಿರುಗಿ ಹಿಂದಿನ ದುಃಖ ವನ್ನು ಉದ್ರೇಕಗೊಳಿಸಿದಂತಾಯಿತು. ಆಗ ಕಣ್ಣುಗಳನ್ನು ಕಟ್ಟಿಕೊಂಡಿದ್ದ ಗಾಂಧಾರಿಯು ಪುತ್ರಶೋಕದಿಂದ ಪರಿತಪಿಸುತ್ತ ಮೇಲೆದ್ದು, ವ್ಯಾಸನ ಮುಂದೆ ಬದ್ಧಾಂಜಲಿಯಾಗಿ ನಿಂತು 'ಮಹಾತ್ಮಾ! ಈಗ ಈ ನನ್ನ

ಪತಿಯು ಲೋಕಾಂತರಗತರಾದ ತನ್ನ ಪುತ್ರರನ್ನು ನೋಡಲಪೇಕ್ಷಿಸುವನು. ಆತನ ಮನಸ್ಸಿನಲ್ಲಿರುವ ಈ ಉದ್ದೇಶವು ನಿನಗೂ ತಿಳಿದಿರಬೇಕು. ಓ ಮುನಿಶ್ರೇಷ್ಠಾ! ಮೃತರಾದ ಪುತ್ರರ ವಿಷಯವಾಗಿ ದುಃಖಿಸುತ್ತಲೇ ಈ ಅರಸನು ಈ ಹದಿನಾರುವರ್ಷಗಳನ್ನು ಕಳೆದನು. ಆದರೂ ಆತನ ದುಃಖವು ಇನ್ನೂ ಶಮನವಾಗಲಿಲ್ಲ. ಓ ತಾಪಸೋತ್ತಮಾ! ಪುತ್ರಶೋಕದಿಂದ ತಪಿಸುತ್ತ ನಿಟ್ಟುಸಿರು ಬಿಡುತ್ತಿರುವ ಈ ಧೃತರಾಷ್ಟ್ರನು ನಿದ್ರಾಹಾರಗಳಿಲ್ಲದಂತಿರುವನು. ನೀನು ನಿನ್ನ ತಪೋಬಲದಿಂದ ಎಲ್ಲಾ ಲೋಕಗಳನ್ನೂ ಕಾಣಲು ಶಕ್ತನಾಗಿರುವೆ. ಹಾಗಿರುವಾಗ ಲೋಕಾಂತರಗತರಾದ ನಮ್ಮ ಪುತ್ರರನ್ನು ತೋರಿಸಬಲ್ಲೆಯೆಂಬ ವಿಷಯದಲ್ಲಿ ಸಂದೇಹವೇನಿದೆ? ನಿನ್ನ ಸೊಸೆಯರೊಳಗೆಲ್ಲ ಅತ್ಯಂತ ಪ್ರೀತಿಪಾತ್ರಳೂ, ಜ್ಞಾತಿಗಳನ್ನೂ, ಮಕ್ಕಳನ್ನೂ ಕಳೆದುಕೊಂಡವಳೂ, ದ್ರುಪದನ ಪುತ್ರಿಯೂ ಆದ ಈ ದ್ರೌಪದಿಯು ಮಹಾವ್ಯಸನಪಡುತ್ತಿರುವಳು. ಹಾಗೆಯೇ ಕೃಷ್ಣನ ಸಹೋದರಿಯೂ, ಮಧುರಭಾಷಿಣಿಯೂ ಆದ ಸುಭದ್ರೆಯೂ ತನ್ನ ಪುತ್ರನಾದ ಅಭಿಮನ್ಯುವಿನ ವಧೆಗಾಗಿ ವ್ಯಥೆಪಡುತ್ತ ದುಃಖಗೊಂಡಿರುವಳು. ಈ ಭೂರಿಶ್ರವಸ್ಸಿನ ಪತ್ನಿಯೂ ಪತಿಯ ಮರಣದಿಂದುಂಟಾದ ಶೋಕದಿಂದ ಪೀಡಿತಳಾಗಿ ಮಹಾವ್ಯಸನಪಡುತ್ತಿರುವಳು. ಈಕೆಯ ಮಾವನೂ, ಮೇಧಾವಿಯೂ, ಬಾಹ್ಲಿಕದೇಶದರಸನೂ, ಕೌರವಶ್ರೇಷ್ಠನೂ ಆದ ಸೋಮದತ್ತನೂ, ತನ್ನ ತಂದೆಯೊಡನೆ ಆ ಮಹಾಯುದ್ಧದಲ್ಲಿ ಕೊಲ್ಲಲ್ಪಟ್ಟನು. ಮುನೀಂದ್ರಾ! ಯುದ್ಧರಂಗದಲ್ಲಿ ಕೊಲ್ಲಲ್ಪಟ್ಟ ಇವನ ನೂರುಮಂದಿ ಪುತ್ರರ ಪತ್ನಿಯರೂ ದುಃಖಶೋಕಗ್ರಸ್ತರಾಗಿ, ಈ ರಾಜನಿಗೂ, ನನಗೂ ಅಡಿಗಡಿಗೆ ಶೋಕವನ್ನು ವೃದ್ಧಿಮಾಡುತ್ತ, ಆಹಾರವನ್ನೂ ಸೇವಿಸದೆ ನನ್ನನ್ನು ಉಪಾಸಿಸುತ್ತಿರುವರು. ಓ ಪ್ರಭೂ! ಶೂರರೂ, ಮಹಾತ್ಮರೂ, ನನ್ನ ಮಾವಂದಿರೂ ಮಹಾರಥರೂ ಆದ ಆ ಸೋಮದತ್ತನೇ ಮೊದಲಾದವರಿಗೆ ಯಾವ ಗತಿಯು ಪ್ರಾಪ್ತವಾಯಿತು? ಮುನೀಶ್ವರಾ! ನಿನ್ನ ಮಗನಾದ ಈ ರಾಜನೂ, ನಿನ್ನ ಸೊಸೆಯಾದ ನಾನೂ ಈ ಪುತ್ರಶೋಕವನ್ನು ನೀಗಿ, ನೆಮ್ಮದಿಯಿಂದ ನಮ್ಮ ಆಯುಃಕಾಲವನ್ನು ಕಳೆಯುವಂತೆ ನೀನು ನಮ್ಮಲ್ಲಿ ಕೃಪೆಯಿಟ್ಟು ಅದಕ್ಕೆ ದಾರಿ ತೋರಿಸು' ಎಂದಳು.

ಗಾಂಧಾರಿಯು ಹೀಗೆ ಹೇಳಿದೊಡನೆಯೇ ವ್ರತಗಳಿಂದ ಕಂದಿದ ಮುಖವುಳ್ಳ ಕುಂತಿಯು, ತನಗೆ ರಹಸ್ಯವಾಗಿ ಹುಟ್ಟಿದ ಸೂರ್ಯಸಮಾನನಾದ ತನ್ನ ಪುತ್ರನನ್ನು (ಕರ್ಣನನ್ನು) ನೆನೆದಳು. ಇದೇ ಸಮಯಕ್ಕೆ ಸರಿಯಾಗಿ, ವರಪ್ರದನೂ, ಕಂಡುಕೇಳದ ವಿಷಯಗಳನ್ನೂ ತಿಳಿಯಬಲ್ಲ ಜ್ಞಾನಶಕ್ತಿಯುಳ್ಳವನೂ ಆದ ವ್ಯಾಸನು, ಆ ಕುಂತಿಯನ್ನು ಒಮ್ಮೆ ದೃಷ್ಟಿಸಿನೋಡುತ್ತ ಆಕೆಯನ್ನು ಕುರಿತು 'ಓ ಭಾಗ್ಯಶಾಲಿನೀ! ನಿನ್ನ ಮನಸ್ಸಿನಲ್ಲಿರುವುದಾವುದೋ ಅದನ್ನು ಸ್ಪಷ್ಟವಾಗಿ ತಿಳಿಸು' ಎಂದನು ಆಗ ಕುಂತಿಯು ಮಾವನಿಗೆ ನಮಸ್ಕರಿಸಿ, ಲಜ್ಜೆಯಿಂದ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳತೊಡಗಿದಳು.

ಇದು ಮೂವತ್ತೊಂದನೆಯ ಅಧ್ಯಾಯವು

ಕುಂತಿಯು ತನ್ನಲ್ಲಿ ಕರ್ಣನ ಜನನರೀತಿಯನ್ನು ತಿಳಿಸಿ, ಆತನನ್ನು ತಾನು ನೋಡಬೇಕೆಂಬ ಅಪೇಕ್ಷೆಯನ್ನು ವ್ಯಾಸನಿಗೆ ತಿಳಿಸಿದುದು. ವ್ಯಾಸನು ಅದು ನಿರ್ದೋಷವಾದುದೆಂದು ಸಕಾರಣವಾಗಿ ಕುಂತಿಯ ಸಂದೇಹವನ್ನು ನೀಗಿದುದು.

ಆಗ ಕುಂತಿಯು 'ಮಹಾತ್ಮಾ! ನೀನು ನನಗೆ ಮಾವನು. ನನ್ನ ಭಾಗದ ದೈವಕ್ಕೂ ನೀನು ಪರದೈವವೆನಿಸಿರುವೆ. ಅಂತಹ ನಿನ್ನಲ್ಲಿ ಮರೆಮಾಚದೆ ಹೇಳುವೆನು ಕೇಳು. ತಪಸ್ವಿಯೂ, ಕೋಪಸ್ವಭಾವವುಳ್ಳವನೂ ಆದ ದೂರ್ವಾಸನೆಂಬ ಬ್ರಾಹ್ಮಣೋತ್ತಮನು, ಒಮ್ಮೆ ಭಿಕ್ಷೆಗಾಗಿ ನನ್ನ ತಂದೆಯ ಮನೆಗೆ ಬಂದನು ನಾನು ಆತನನ್ನು ಸತ್ಕರಿಸಿ ಸಂತೋಷಪಡಿಸಿದೆನು. ಆತನು ನನ್ನ ಶುಚಿತ್ವಕ್ಕೂ, ನಿಷ್ಕಲ್ಮಷವಾದ ನಡತೆಗೂ, ನನ್ನ ಶುದ್ಧ ಮನಸ್ಸಿಗೂ ಪ್ರಸನ್ನನಾಗಿ, ಪ್ರಬಲಕೋಪಕಾರಣಗಳಲ್ಲಿಯೂ ನನ್ನಲ್ಲಿ ಕೋಪಿಸಿಕೊಳ್ಳದಿದ್ದನು. ಕೃತಕೃತ್ಯನಾದ ಆ ಮುನಿವರನು ನನ್ನಲ್ಲಿ ಪ್ರೀತನಾಗಿ, ವರವನ್ನು ಕೊಡಲು ನನ್ನನ್ನು ಕುರಿತು 'ಬಾಲೇ! ನೀನು ಬೇಕಾದ ವರವನ್ನು ಅವಶ್ಯವಾಗಿ ನನ್ನಿಂದ ಕೇಳಬೇಕು' ಎಂದನು. ಆಗ ನಾನು

ಏನನ್ನೂ ಕೇಳದಿದ್ದರೆ ಆತನು ಶಪಿಸಿಬಿಡುವನೆಂಬ ಭಯದಿಂದ 'ಹಾಗೆಯೇ ಆಗಲಿ' ಎಂದೆನು.

ಆಗ ಆ ಬ್ರಾಹ್ಮಣನು ತಿರುಗಿ ನನ್ನನ್ನು ಕುರಿತು 'ಓ ಕಲ್ಯಾಣೀ! ಸುಂದರಾಂಗೀ! ನೀನು ಧರ್ಮಪುರುಷನಿಗೆ ತಾಯಾಗುವೆ. ನೀನು ಯಾವ ದೇವತೆಗಳನ್ನು ಆಹ್ವಾನಿಸುವೆಯೋ ಆ ದೇವತೆಗಳು ನಿನ್ನ ವಶರಾಗುವರು' ಎಂದು ಹೇಳಿ ಕಣ್ಮರೆಯಾದನು ನನಗೆ ಪರಮಾಶ್ಚರ್ಯವಾಯಿತು. ಆ ಮಹರ್ಷಿಯು ಹೇಳಿದ ಮಾತು ಎಂತಹ ಸ್ಥಿತಿಯಲ್ಲಿಯೂ ನನ್ನ ಸ್ಮರಣೆಯನ್ನು ಬಿಟ್ಟುಹೋಗಲಿಲ್ಲ. ಆಮೇಲೆ ನಾನು ಒಮ್ಮೆ ಉಪ್ಪರಿಗೆಯಲ್ಲಿರುವಾಗ, ಉದಿಸುತ್ತಿರುವ ಸೂರ್ಯನನ್ನು ಕಂಡೆನು. ಆಗ ನನಗೆ ಆ ಮಹರ್ಷಿಯ ವಾಕ್ಯವು ನೆನಪಿಗೆ ಬಂದಿತು ಆಗ ನಾನು ಬಾಲಸ್ವಭಾವದಿಂದ ಗುಣದೋಷವನ್ನೆಣಿಸದೆ ಸೂರ್ಯನಮೇಲೆ ಆಶೆಪಟ್ಟೆನು. ಒಡನೆ ಸೂರ್ಯದೇವನು ನನ್ನಿದಿರಾಗಿ ಬಂದನು ಆತನು ತನ್ನ ಶರೀರವನ್ನು ಎರಡುರೂಪವಾಗಿ ಮಾಡಿಕೊಂಡು, ಭೂಮಿಯಲ್ಲಿ ಒಂದನ್ನೂ, ಆಕಾಶದಲ್ಲಿ ಒಂದನ್ನೂ ಕಾಣಿಸುತ್ತ, ಆಕಾಶದಲ್ಲಿರುವ ಶರೀರದಿಂದ ಲೋಕಗಳನ್ನು ಬೆಳಗುತಿದ್ದನು ಇನ್ನೊಂದು ಶರೀರದಿಂದ ನನ್ನ ಬಳಿಗೆ ಬಂದು ನಡುಗುತ್ತಿರುವ ನನ್ನನ್ನು ಕುರಿತು 'ಓ ಬಾಲೇ! ನನ್ನಿಂದ ಬೇಕಾದ ವರವನ್ನು ಕೇಳು' ಎಂದನು. ಆಗ ನಾನು ಆತನಿಗೆ ತಲೆಬಾಗಿ, 'ಏನೂ ಇಲ್ಲ! ನೀನು ಹೋಗು' ಎಂದೆನು ಅದಕ್ಕಾತನು 'ಓ ಬಾಲೇ! ನನ್ನನ್ನು ವ್ಯರ್ಥವಾಗಿ ಹೀಗೆ ಕರೆದುದು ಸರಿಯಲ್ಲ ಈಗಲೇ ನಾನು ನಿನ್ನನ್ನೂ, ನಿನಗೆ ವರವನ್ನು ಕೊಟ್ಟ ಆ ಬ್ರಾಹ್ಮಣನನ್ನೂ ದಹಿಸಿಬಿಡುವೆನು' ಎಂದನು ಆಗ ನಾನು ಉಪಕಾರಮಾಡಿದ ಆ ಬ್ರಾಹ್ಮಣನನ್ನು ಶಾಪದಿಂದ ರಕ್ಷಿಸುವುದಕ್ಕಾಗಿ 'ದೇವಾ! ನಿನಗೆ ಸಮಾನನಾದ ಪುತ್ರನು ನನಗೆ ಉಂಟಾಗಲಿ' ಎಂದೆನು. ಸೂರ್ಯನು ತನ್ನ ತೇಜಸ್ಸಿನಿಂದ ನನ್ನನ್ನು ಮರುಳುಮಾಡಿ, ನನ್ನಲ್ಲಿ ಪ್ರವೇಶಿಸಿ 'ಬಾಲೇ! ನಿನಗೆ ಅಂತಹ ಪುತ್ರನುಂಟಾಗುವನು' ಎಂದು ಹೇಳಿ ಆಕಾಶದಕಡೆಗೆ ಹೊರಟುಹೋದನು. ಕೂಡಲೆ ನನ್ನಲ್ಲಿ ಒಂದು ಶಿಶು ಹುಟ್ಟಿತು. ನನ್ನ ತಂದೆಯ ಮನಸ್ಸನ್ನು ನೋಯಿಸಬಾರದೆಂಬುದಕ್ಕಾಗಿ, ರಹಸ್ಯವಾಗಿ

ಹುಟ್ಟಿದ ಆ ಕರ್ಣನೆಂಬ ಬಾಲನನ್ನು ನೀರಿನಲ್ಲಿ ತೇಲಿಸಿಬಿಟ್ಟೆನು. ಆ ಋಷಿಯು ನನ್ನಲ್ಲಿ ಹೇಳಿದಂತೆ ಸೂರ್ಯದೇವನ ಅನುಗ್ರಹದಿಂದ ತಿರುಗಿ ನಾನು ಕನ್ನಿಕೆಯಾದೆನು. ಓ ಮಹರ್ಷೀ! ಅಜ್ಞಾನದಿಂದ ನಾನು ಆ ಪುತ್ರನನ್ನು ಮನಃಪೂರ್ವಕವಾಗಿ ತೊರೆದುಬಿಟ್ಟ ಪಶ್ಚಾತ್ತಾಪವು ನನ್ನನ್ನು ದಹಿಸುತ್ತಿರುವುದು ಅದು ನಿನಗೂ ಚೆನ್ನಾಗಿ ತಿಳಿದಿರುವುದು. ನಾನು ಮಾಡಿದುದು ಪಾಪವಾಗಲಿ, ಅಥವಾ ಅಲ್ಲದಿರಲಿ, ಎಲ್ಲವನ್ನೂ ನಿನಗೆ ವಿವರಿಸಿ ಹೇಳಿರುವೆನು ಈಗ ನನಗೆ ಆ ಪುತ್ರನನ್ನು ನೋಡುವ ಅಭಿಲಾಷೆಯಿರುವುದು. ಅದನ್ನು ನೆರವೇರಿಸಬೇಕು ಓ ಋಷಿಶ್ರೇಷ್ಠಾ! ಈ ರಾಜನ ಮನಸ್ಸಿನಲ್ಲಿರುವುದೂ ನನಗೆ ತಿಳಿದಿದೆ ಆತನೂ ತನ್ನ ಕೋರಿಕೆಯನ್ನು ಈಗಲೇ ನೆರವೇರಿಸಿಕೊಳ್ಳಬೇಕು' ಎಂದಳು.

ಆಗ ವ್ಯಾಸನು 'ಅಮ್ಮ! ಕುಂತೀ! ನೀನು ತಿಳಿಸಿದುದೆಲ್ಲವೂ ಶುಭವಾದ ಸಂಗತಿಯೇ! ಅದು ಹಾಗೆಯೇ ನಡೆಯಬೇಕಾಗಿದ್ದಿತು. ಇದರಿಂದ ನಿನಗೇನೂ ದೋಷವಿಲ್ಲ ನೀನು ಕನ್ನಿಕೆಯಾಗಿದ್ದವಳಲ್ಲವೆ! ಸರ್ವಶಕ್ತಿಯುಳ್ಳ ದೇವತೆಗಳು (ಇತರ) ಶರೀರಗಳಲ್ಲಿ ಪ್ರವೇಶಿಸುವುದುಂಟು. ದೇವತೆಗಳೂ ಆಗಾಗ ಸಂಕಲ್ಪಮಾತ್ರದಿಂದಲೂ, (ರತಿಯಿಂದ) ಬರೀ ನೋಟದಿಂದಲೂ, ಸಂಭಾಷಣದಿಂದಲೂ, ಸ್ಪರ್ಶಮಾತ್ರದಿಂದಲೂ ಅಂಗಸಂಬಂಧದಿಂದಲೂ ಈ ಐದು ವಿಧಗಳಲ್ಲಿಯೂ ಪುತ್ರರನ್ನುಂಟುಮಾಡಬಲ್ಲರು. ಕುಂತೀ! ಮನುಷ್ಯಧರ್ಮವು ದೇವಧರ್ಮದಿಂದ ಉಪಹತಿಹೊಂದಿದಾಗ ದೋಷಕ್ಕೆ ಗುರಿಯಾಗುವುದಿಲ್ಲವೆಂದು ತಿಳಿ. ನಿನ್ನ ಮನಃಕಳಂಕವನ್ನು ಬಿಡು. ಬಲಾಢ್ಯರಿಗೆ ಎಲ್ಲವೂ ಪಥ್ಯವೇ! ಬಲಾಢ್ಯರಿಗೆ ಎಲ್ಲವೂ ಶುದ್ಧವೇ! ಬಲಾಢ್ಯರಿಗೆ ಎಲ್ಲವೂ ಧರ್ಮವೇ! ಬಲಾಢ್ಯರಿಗೆ ಎಲ್ಲವೂ ಸ್ವಂತವೆಂದು ತಿಳಿ' ಎಂದನು.

ಇದು ಮೂವತ್ತೆರಡನೆಯ ಅಧ್ಯಾಯವು.

ವ್ಯಾಸನು ಯುದ್ಧದಲ್ಲಿ ಸತ್ತವರನ್ನು ರಾತ್ರಿ ತೋರಿಸುವುದಾಗಿ ಗಾಂಧಾರಿಗೆ ತಿಳಿಸಿದುದು. ಧೃತರಾಷ್ಟ್ರಾದಿಗಳೆಲ್ಲ ಗಂಧರ್ವಾಂಶವೆಂಬುದನ್ನು ತಿಳಿಸಿ, ಎಲ್ಲರನ್ನೂ ಗಂಗಾತೀರಕ್ಕೆ ಹೋಗುವಂತೆ ಆಜ್ಞಾಪಿಸಿದುದು.

'ಓ ಕಲ್ಯಾಣೀ! ಗಾಂಧಾರೀ! ನಿನ್ನ ಪುತ್ರರನ್ನೂ, ಭ್ರಾತೃಗಳನ್ನೂ, ನಿನ್ನ ಇತರ ಪರಿವಾರಗಳನ್ನೂ, ಪತಿಗಳೊಡಗೂಡಿದ ನಿನ್ನ ಸೊಸೆಯರನ್ನೂ ಈ ರಾತ್ರಿ ನೀನು, ನಿದ್ರೆಯಿಂದ ಎದ್ದು ಬಂದವರನ್ನು ಹೇಗೋ ಹಾಗೆ ನೋಡುವೆ. ಕುಂತಿಯು ಕರ್ಣನನ್ನೂ, ಸುಭದ್ರೆಯು ಅಭಿಮನ್ಯುವನ್ನೂ, ದ್ರೌಪದಿಯು ತನ್ನ ಐದುಮಂದಿ ಪುತ್ರರನ್ನೂ, ತನ್ನ ಜನಕನನ್ನೂ, ಸಹೋದರರನ್ನೂ ನೋಡುವರು. ನೀನೂ, ನಿನ್ನ ಪತಿಯೂ ಕುಂತಿಯೂ ಇದೇ ವಿಷಯವಾಗಿ ನನ್ನನ್ನು ಕೇಳುವಮೊದಲೇ ನನಗೆ ಈ ನಿಶ್ಚಯವಿದ್ದಿತು. ಮಹಾತ್ಮರಾದ ಅವರಲ್ಲಿ ಯಾರಿಗಾಗಿಯೂ ನೀನು ದುಃಖಪಡಬೇಡ. ಅವರೆಲ್ಲರೂ ಕ್ಷತ್ರಿಯಧರ್ಮವನ್ನವಲಂಬಿಸಿ ಮೃತರಾದವರು. ಈ ದೇವಕಾರ್ಯವು ಅವಶ್ಯವಾಗಿ ನಡೆಯಬೇಕಾಗಿದ್ದಿತು. ಅದಕ್ಕಾಗಿಯೇ ದೇವತೆಗಳೆಲ್ಲರೂ ಬೇರೆಬೇರೆ ಅಂಶಗಳಿಂದ ಭೂಮಿಯಲ್ಲಿ ಅವತರಿಸಿರುವರು. ಗಂಧರ್ವರೂ, ಅಪ್ಸರಸ್ಸುಗಳೂ, ಪಿಶಾಚರೂ, ಗುಹ್ಯಕರೂ, ರಾಕ್ಷಸರೂ, ಪುಣ್ಯಜನರೂ, ಸಿದ್ಧರೂ, ದೇವದಾನವರೂ, ನಿರ್ಮಲಚಿತ್ತರಾದ ದೇವರ್ಷಿಗಳೂ ಭೂಮಿಯಲ್ಲಿ ಅವತರಿಸಿದ್ದು, ಈಗಿನ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಅನೇಕರು ಮೃತರಾದರು. ಧೃತರಾಷ್ಟ್ರನೆಂದು ಪ್ರಸಿದ್ಧನಾದ ಮತ್ತು ಬುದ್ಧಿಶಾಲಿಯಾದ ಗಂಧರ್ವರಾಜನೇ ಮನುಷ್ಯಲೋಕದಲ್ಲಿ ನಿನ್ನ ಪತಿಯಾದ ಧೃತರಾಷ್ಟ್ರನಾಗಿ ಹುಟ್ಟಿರುವನು. ಲೋಕಪ್ರಸಿದ್ಧನಾದ ಪಾಂಡುವು ಮರುದ್ಗಣದಿಂದ ಉಂಟಾದವನೆಂದು ತಿಳಿ. ಧರ್ಮಪುರುಷನೇ ವಿದುರನ ಮತ್ತು ಯುಧಿಷ್ಠಿರನ ರೂಪದಿಂದ ಹುಟ್ಟಿದ್ದನು. ದುರ್ಯೋಧನ ಶಕುನಿಗಳಿಬ್ಬರೂ ಕಲಿ ದ್ವಾಪರಗಳು. ನಿನ್ನ ಮಕ್ಕಳಾದ ದುಶ್ಶಾಸನನೇ ಮೊದಲಾದವರನ್ನು ರಾಕ್ಷಸರೆಂದು ತಿಳಿ. ಭೀಮಸೇನನು ಮರುದ್ಗಣದಿಂದ ಹುಟ್ಟಿದವನು. ಕುಂತೀಪುತ್ರನಾದ ಧನಂಜಯನೇ ನರನೆಂಬ ಋಷಿ. ಕೃಷ್ಣನೇ ನಾರಾಯಣನು. ನಕುಲಸಹದೇವರಿಬ್ಬರೂ

ಅಶ್ವಿನೀದೇವತೆಗಳು. ಲೋಕವನ್ನೆಲ್ಲ ತಪಿಸತಕ್ಕವನೂ, ತೇಜಸ್ವಿಗಳಲ್ಲಿ ಶ್ರೇಷ್ಠನೂ ಆದ ಸೂರ್ಯದೇವನೇ ತನ್ನ ಅಂಶವನ್ನು ಎರಡಾಗಿ ವಿಭಾಗಿಸಿಕೊಂಡು ಒಂದರಿಂದ ಕುಂತೀಪುತ್ರನಾದ ಕರ್ಣನಾಗಿ ಹುಟ್ಟಿದನು. ಪಾಂಡವ ಕೌರವರಲ್ಲಿ ವಿರೋಧಕ್ಕಾಗಿ ಜನಿಸಿ, ಕಲಹವನ್ನು ಉದ್ರೇಕಗೊಳಿಸಿದ ಕರ್ಣನೇ ಸೂರ್ಯನು ಆರುಮಂದಿ ಮಹಾರಥರಿಂದ ಕೊಲ್ಲಲ್ಪಟ್ಟ ಅರ್ಜುನಕುಮಾರನಾದ ಅಭಿಮನ್ಯುವು ಯೋಗಬಲದಿಂದ ಎರಡಂಶವಾಗಿ ಈ ಲೋಕದಲ್ಲಿ ಹುಟ್ಟಿದ ಚಂದ್ರನು. ದ್ರೌಪದಿಯೊಡನೆ ಅಗ್ನಿಯಲ್ಲಿ ಹುಟ್ಟಿದ ಧೃಷ್ಟದ್ಯುಮ್ನನು ಅಗ್ನಿಯ ಅಂಶವು. ಅಶ್ವತ್ಥಾಮನು ರುದ್ರಾಂಶವು. ಗಂಗಾಪುತ್ರನಾದ ಭೀಷ್ಮನೇ ಮನುಷ್ಯಶರೀರವನ್ನೆತ್ತಿದ ವಸುವೆಂದು ತಿಳಿ. ಹೀಗೆ ದೇವತೆಗಳು ಮನುಷ್ಯರೂಪವನ್ನೆತ್ತಿ ತಮ್ಮ ಕಾರ್ಯಗಳನ್ನು ಮುಗಿಸಿ, ಈಗ ಸ್ವರ್ಗಕ್ಕೆ ಹೋಗಿ ಸೇರಿರುವರು. ಆದುದರಿಂದ ನಿಮಗೆ ಬಹುಕಾಲದಿಂದ ಮನಸ್ಸಿನಲ್ಲಿರುವ ಪಾರಲೌಕಿಕವಾದ ಭಯಕ್ಕೇನೂ ಕಾರಣವಿಲ್ಲ ಈಗ ನೀವೆಲ್ಲರೂ ಗಂಗಾತೀರಕ್ಕೆ ಹೊರಡಿರಿ. ಅಲ್ಲಿ ಯುದ್ಧದಲ್ಲಿ ಕೊಲ್ಲಲ್ಪಟ್ಟವರೆಲ್ಲರನ್ನೂ ನೀವು ನೋಡಬಹುದು' ಎಂದನು. ವ್ಯಾಸನ ಈ ಮಾತನ್ನು ಕೇಳಿ ಎಲ್ಲಾ ಜನರೂ ದೊಡ್ಡ ಸಿಂಹನಾದ ಮಾಡುತ್ತ ಗಂಗೆಯ ಕಡೆಗೆ ಹೊರಟರು ಧೃತರಾಷ್ಟ್ರನು ತನ್ನ ಎಲ್ಲಾ ಮಂತ್ರಿಗಳೊಡನೆಯೂ, ಪಾಂಡವರೊಡನೆಯೂ, ಮುನಿಶ್ರೇಷ್ಠರೊಡನೆಯೂ, ಅಲ್ಲಿಗೆ ಬಂದಿದ್ದ ಗಂಧರ್ವರೊಡನೆಯೂ ಹೊರಟನು ಸಮುದ್ರದಂತೆ ಅಪಾರವಾದ ಆ ಜನಸಮೂಹವೆಲ್ಲ ಗಂಗಾತೀರವನ್ನು ಸೇರಿ, ಅಲ್ಲಿ ತಮತಮಗೆ ಅನುಕೂಲವಾದ ಸ್ಥಳವನ್ನು ಮಾಡಿಕೊಂಡು ಸುಖವಾಗಿ ಕುಳಿತರು. ಧೃತರಾಷ್ಟ್ರನು ಸ್ತ್ರೀಯರನ್ನೂ, ವೃದ್ಧರನ್ನೂ ಮುಂದೆಬಿಟ್ಟುಕೊಂಡು ಪಾಂಡವರೊಡನೆಯೂ, ಇತರ ಸಂಗಡಿಗರೊಡನೆಯೂ ಕುಳಿತಿದ್ದನು. ರಾತ್ರಿಯಾಗುವುದನ್ನೇ ಆತುರದಿಂದ ನಿರೀಕ್ಷಿಸುತ್ತಿದ್ದ ಅವರಿಗೆ ಆ ಒಂದು ಹಗಲು ನೂರು ವರ್ಷಗಳಿಗೆ ಸಮಾನವಾಗಿ ಕಳೆಯಿತು. ಇಷ್ಟರಲ್ಲಿ ಸೂರ್ಯನು ಪವಿತ್ರವಾದ ಅಸ್ತಗಿರಿಯನ್ನು ಸೇರಿದನು. ಅವರೆಲ್ಲರೂ ಸಂಧ್ಯಾಕಾರ್ಯಗಳನ್ನು ಮುಗಿಸಿದರು.

ಇದು ಮೂವತ್ತುಮೂರನೆಯ ಅಧ್ಯಾಯವು.

ವ್ಯಾಸನು ಆ ರಾತ್ರಿ ಗಂಗೆಯಲ್ಲಿಳಿದು, ಯುದ್ಧದಲ್ಲಿ ಸತ್ತವರನ್ನು ಆಹ್ವಾನಿಸಿದೊಡನೆ ಉಭಯಪಕ್ಷದಲ್ಲಿ ಮೃತರಾದವರೂ, ತಮ್ಮತಮ್ಮ ಮೊದಲಿನ ಉಡಿಗೆತೊಡಿಗೆಗಳೊಡನೆಯೂ, ಆಯುಧಗಳೊಡನೆಯೂ, ವಾಹನಗಳೊಡನೆಯೂ ಗಂಗೆಯಲ್ಲಿ ಕಾಣಿಸಿ ತೀರದಕಡೆಗೆ ಬಂದುದು ವ್ಯಾಸನು ಅನುಗ್ರಹಿಸಿದ ಜ್ಞಾನಚಕ್ಷುಸ್ಸಿನಿಂದ ಧೃತರಾಷ್ಟ್ರನು ಅವರೆಲ್ಲರನ್ನೂ ಕಂಡುದು

ಎಲ್ಲರೂ ಸಾಯಂಕಾಲದ ಆಹ್ನಿಕಗಳನ್ನು ತೀರಿಸಿಕೊಂಡು, ರಾತ್ರಿಯಾದೊಡನೆ ವ್ಯಾಸನಬಳಿಗೆ ಬಂದರು. ಧೃತರಾಷ್ಟ್ರನು ಶುದ್ಧಮನಸ್ಸಿನಿಂದ ಪಾಂಡವರೊಡನೆಯೂ, ಇತರ ಋಷಿಗಳೊಡನೆಯೂ ವ್ಯಾಸನ ಮುಂದೆ ಕುಳಿತನು. ಪುರಜನರೆಲ್ಲರೂ ವಯಸ್ಸಿಗನುಗುಣವಾಗಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತಮೇಲೆ, ವ್ಯಾಸಮುನಿಯು ಪುಣ್ಯಕರವಾದ ಗಂಗಾನದಿಯಲ್ಲಿ ಮುಳುಗಿ, ಮೃತರಾದವರು ಸೇರಿದ್ದ ಆಯಾ ಲೋಕಗಳನ್ನೂ, ಪಾಂಡವ ಕೌರವರ ಕಡೆಯ ಎಲ್ಲಾ ಯುದ್ಧವೀರರನ್ನೂ, ನಾನಾದೇಶದ ರಾಜರನ್ನೂ ಕೂಗಿ ಕರೆದನು ಅಲ್ಲಿ ನೆರೆದಿದ್ದ ಜನವೆಲ್ಲವೂ ಆತುರದಿಂದ ನೋಡುತಿದ್ದಾಗ ಹಿಂದೆ ಕೌರವ ಪಾಂಡವರ ಸೈನ್ಯಗಳೆರಡೂ ಸೇರಿದಂತೆ ಜಲಮಧ್ಯದಿಂದ ದೊಡ್ಡದೊಂದು ಶಬ್ದವಾಯಿತು. ಕೂಡಲೇ ಭೀಷ್ಮದ್ರೋಣರನ್ನು ಮುಂದಿಟ್ಟುಕೊಂಡು, ಅನೇಕರಾಜರು ತಮ್ಮತಮ್ಮ ಸೈನ್ಯಗಳೊಡನೆ ಆ ನೀರಿನಿಂದ ಸಾವಿರಲೆಕ್ಕದಲ್ಲಿ ಮೇಲೆದ್ದುಬಂದು ಕಾಣಿಸಿದರು ಪುತ್ರಮಿತ್ರ ಸೇನಾ ಸಮೂಹದೊಡನೆ ವಿರಾಟ ದ್ರುಪದರೂ, ದ್ರೌಪದಿಯ ಪುತ್ರರೂ, ಅಭಿಮನ್ಯುವೂ, ಘಟೋತ್ಕಚನೂ, ಕರ್ಣ ದುರ್ಯೋಧನರೂ, ಮಹಾರಥನಾದ ಶಕುನಿಯೂ, ದುಶ್ಶಾಸನನೇ ಮೊದಲಾಗಿ ಮಹಾಬಲಶಾಲಿಗಳಾದ ಧೃತರಾಷ್ಟ್ರಕುಮಾರರೂ, ಜರಾಸಂಧನ ಪುತ್ರನೂ, ಭಗದತ್ತನೂ, ಜಲಸಂಧನೂ, ಭೂರಿಶ್ರವಸ್ಸೂ, ಶಲ, ಶಲ್ಯ, ವೃಷಸೇನರೂ, ರಾಜಕುಮಾರನಾದ ಲಕ್ಷ್ಮಣನೂ, ಪುತ್ರನೊಡಗೂಡಿದ ಧೃಷ್ಟದ್ಯುಮ್ನನೂ, ಶಿಖಂಡಿಯೂ, ಅವನ ಮಕ್ಕಳೂ, ಧೃಷ್ಟಕೇತುವೂ, ಅಚಲನೂ, ವೃಷತನೂ, ಅಲಾಯುಧನೆಂಬ ರಾಕ್ಷಸನೂ, ಬಾಹ್ಲಿಕ, ಸೋಮದತ್ತ,

ಚೇಕಿತಾನರೆಂಬ ರಾಜರೂ, ಇವರಲ್ಲದೆ ಇನ್ನೂ ಅಸಂಖ್ಯಾತರಾಜರು ದಿವ್ಯ ತೇಜೋರೂಪದಿಂದ ಆ ಗಂಗಾಜಲದಿಂದ ಮೇಲೆದ್ದು ಕಾಣಿಸಿದರು. ಯಾವ ಯಾವ ವೀರರಿಗೆ, ಮೊದಲು ಯಾವಯಾವ ಅಲಂಕಾರವೂ, ಧ್ವಜವೂ, ವಾಹನವೂ, ಕವಚವೂ, ಆಯುಧವೂ ಇದ್ದುವೋ, ಅವರವರು ಅದೇ ಬಿರುದುಗಳೊಡನೆ ಗೋಚರಿಸಿದರು. ದಿವ್ಯ ವಸ್ತ್ರಗಳನ್ನೂ, ಜ್ವಲಿಸುವ ಕುಂಡಲಗಳನ್ನೂ, ದಿವ್ಯಹಾರಗಳನ್ನೂ, ಮಾಲಿಕೆಗಳನ್ನೂ, ಧರಿಸಿ ಅಪ್ಸರಸ್ಸುಗಳಿಂದ ಪರಿವೃತರಾಗಿ, ಮೊದಲಿನ ಮದ ಮಾತ್ಸರ್ಯ ದ್ವೇಷಾದಿಗಳೇನೂ ಇಲ್ಲದೆ ಕೇವಲ ಶಾಂತಸ್ವಭಾವದಿಂದ ತೋರಿದರು. ಅವರ ಸುತ್ತಲೂ ಗಂಧರ್ವಗಾನಗಳೂ, ವಂದಿಮಾಗಧರ ಸ್ತುತಿಪಾಠಗಳೂ ಕೇಳಿಸುತ್ತಿದ್ದುವು. ಆಗ ವ್ಯಾಸಮುನಿಯು ತನ್ನ ತಪೋಬಲದಿಂದ ಧೃತರಾಷ್ಟ್ರನಿಗೆ ದಿವ್ಯನೇತ್ರಗಳನ್ನು ಕೊಟ್ಟನು. ಗಾಂಧಾರಿಯೂ ದಿವ್ಯಜ್ಞಾನಬಲವನ್ನು ಪಡೆದು ತನ್ನ ಪುತ್ರರನ್ನೂ, ಯುದ್ಧದಲ್ಲಿ ಕೊಲ್ಲಲ್ಪಟ್ಟ ಇತರರನ್ನೂ ಕಂಡಳು. ಮಹಾಶ್ಚರ್ಯಕರವೂ, ಅಚಿಂತ್ಯವೂ, ರೋಮಾಂಚಜನಕವೂ ಆದ ಆ ದೃಶ್ಯವನ್ನು ಅಲ್ಲಿದ್ದವರೆಲ್ಲರೂ ಎವೆಮುಚ್ಚದೆ ವಿಸ್ಮಿತರಾಗಿ ನೋಡುತಿದ್ದರು. ಅಲ್ಲಿದ್ದ ಜನವೆಲ್ಲ ಚಿತ್ರಾರ್ಪಿತಪ್ರತಿಮೆಗಳಂತೆ ಸ್ತಬ್ಧವಾಗಿ ನಿಂತಿದ್ದಿತು. ಧೃತರಾಷ್ಟ್ರನು ವ್ಯಾಸನ ಅನುಗ್ರಹದಿಂದ ಲಭಿಸಿದ ದಿವ್ಯನೇತ್ರದಿಂದ ಅವರೆಲ್ಲರನ್ನೂ ನೋಡಿ ಸಂತೋಷಗೊಂಡನು.

ಇದು ಮೂವತ್ತುನಾಲ್ಕನೆಯ ಅಧ್ಯಾಯವು

{ ಧೃತರಾಷ್ಟ್ರ ಯುಧಿಷ್ಠಿರಾದಿಗಳೆಲ್ಲ ಆ ರಾತ್ರಿಯನ್ನು ಯುದ್ಧಹತರಾಗಿ ಅಲ್ಲಿ ಗೋಚರಿಸಿದವರೊಡನೆ ಸಂತೋಷದಿಂದ ಕಳೆದುದು. }

ಓ ರಾಜಾ! ಆಮೇಲೆ ಆ ಉಭಯಪಕ್ಷದವರೂ ಹಿಂದಿನ ಮನಃಕಾಲುಷ್ಯವೂ, ಕ್ರೋಧ ದ್ವೇಷಗಳೂ ಇಲ್ಲದೆ, ಒಬ್ಬರೊಡನೆ ಒಬ್ಬರು ಅನ್ಯೋನ್ಯವಾಗಿ ಕಲೆತು, ದೇವಲೋಕದಲ್ಲಿ ದೇವತೆಗಳಂತೆ ಸಂತುಷ್ಟರಾಗಿ, ವ್ಯಾಸಮುನಿಯ ನಿಯಮವನ್ನನುಸರಿಸಿ ಅನ್ಯೋನ್ಯವಾಗಿದ್ದರು.

ಪುತ್ರನು ತಂದೆತಾಯಿಯರೊಡನೆಯೂ, ಪತ್ನಿಯರು ಪತಿಗಳೊಡನೆಯೂ, ಸಹೋದರರು ಸಹೋದರರೊಡನೆಯೂ, ನಂಟರು ನಂಟರೊಡನೆಯೂ, ಹೀಗೆ ಒಬ್ಬರೊಡನೊಬ್ಬರು ಕೂಡಾಡಿದರು. ಪಾಂಡವರು ಮಹಾಸಂತೋಷದಿಂದ ಧನುರ್ಧಾರಿಯಾದ ಕರ್ಣನನ್ನೂ, ದ್ರೌಪದಿಯನ್ನೂ, ಅಭಿಮನ್ಯುವನ್ನೂ, ಎಲ್ಲಾ ದ್ರೌಪದೀಪುತ್ರರನ್ನೂ ಕಂಡು ಆದರಿಸಿದರು; ಕರ್ಣನೊಡನೆ ಅತ್ಯಂತ ಸ್ನೇಹವಾತ್ಸಲ್ಯದಿಂದ ಕೂಡಾಡಿದರು. ಹೀಗೆ ಆ ವೀರಕ್ಷತ್ರಿಯರೆಲ್ಲರೂ ಮುನಿವರನ ಅನುಗ್ರಹದಿಂದ ಕೋಪತಾಪಗಳನ್ನು ಬಿಟ್ಟು ಒಬ್ಬರೊಡನೊಬ್ಬರು ಸೇರಿ ಸಂತೋಷದಿಂದಿದ್ದರು ಕೌರವರೂ, ಇತರ ರಾಜರೂ, ಆಚಾರ್ಯರುಗಳೊಡನೆಯೂ, ಬಂಧುಗಳೊಡನೆಯೂ, ಪುತ್ರರೊಡನಯೂ ಕಲೆತು, ದುಃಖಲೇಶವನ್ನೂ ಅರಿಯದೆ, ಆ ರಾತ್ರಿಯನ್ನೆಲ್ಲ ಮಹಾಸಂತೋಷದಿಂದ ತಮ್ಮನ್ನು ಸ್ವರ್ಗವಾಸಿಗಳಂತೆ ತಿಳಿದು ವಿನೋದದಿಂದ ಕಳೆದರು. ಆಗ ಅಲ್ಲಿ ಅನ್ಯೋನ್ಯವಾಗಿ ಕಲೆತಿದ್ದ ಯುದ್ಧವೀರರಿಗೆ ಶೋಕ, ಭಯ, ಕಂಪ, ಅವಮಾನ, ಲಜ್ಜೆ, ಮುಂತಾದ ಮನೋವಿಕಾರಗಳೊಂದೂ ತೋರಲಿಲ್ಲ. ಅಲ್ಲಿ ಬಂದಿದ್ದ ಸ್ತ್ರೀಯರೆಲ್ಲರೂ ಹಿಂದೆ ಯುದ್ಧದಲ್ಲಿ ಮೃತರಾಗಿದ್ದ ತಮ್ಮ ಪತಿಗಳನ್ನೂ, ಪಿತೃಗಳನ್ನೂ, ಸಹೋದರರನ್ನೂ, ಪುತ್ರರನ್ನೂ ಸಂಧಿಸಿ ಪರಮಸಂತೋಷದಿಂದಿದ್ದರು. ತಮ್ಮತಮ್ಮ ಕರ್ಮಾನುಗುಣವಾಗಿ, ಇಂದ್ರಲೋಕ, ವರುಣಲೋಕ, ಗೋಲೋಕ, ಸೂರ್ಯಲೋಕ, ಬ್ರಹ್ಮಲೋಕ ಮೊದಲಾದ ಲೋಕಗಳಿಗೆ ಹೋಗಿ ಸೇರಿದ್ದವರೂ, ಯಕ್ಷ ರಾಕ್ಷಸ ಪಿಶಾಚಾದಿ ಜನ್ಮಗಳಲ್ಲಿದ್ದವರೂ ಉತ್ತರಕುರುಕ್ಷೇತ್ರಗಳನ್ನೂ, ವಿಚಿತ್ರವಾದ ಇತರ ಗತಿಗಳನ್ನೂ ಪಡೆದವರೂ, ಇವರೆಲ್ಲರೂ ತಮಗೆ ಹಿಂದಿದ್ದ ವಯಸ್ಸು, ರೂಪ, ವೇಷ, ಭೂಷಣಗಳೊಡನೆಯೇ ಅಲ್ಲಿ ಕಾಣಿಸಿದರು. ಹೀಗೆ ಆ ವೀರರೂ, ವೀರಸ್ತ್ರೀಯರೂ, ಆ ಒಂದುದಿನದ ರಾತ್ರಿಯು ಮುಟ್ಟಿಗೆ ಅನ್ಯೋನ್ಯಾಲಿಂಗನಾದಿಗಳಿಂದ ವಿನೋದಿಸುತಿದ್ದು, ಆಮೇಲೆ ಒಬ್ಬರಿಗೊಬ್ಬರು ಅನುಮತಿಯನ್ನು ಕೇಳಿಕೊಂಡು, ಮುನಿಶ್ರೇಷ್ಠನಾದ ವ್ಯಾಸನಿಂದಲೂ ಅನುಮತಿಸಲ್ಪಟ್ಟವರಾಗಿ, ಎಲ್ಲರೂ ನೋಡುತ್ತಿರುವಂತೆಯೇ ರಥ, ಧ್ವಜ, ವಾಹನ, ಪರಿವಾರಗಳೊಡನೆ ಪುಣ್ಯಕರವಾದ ಗಂಗಾನದಿಯಲ್ಲಿ ಮುಳುಗಿ ಕಣ್ಮರೆಯಾಗಿ, ತಮ್ಮತಮ್ಮ ಸ್ಥಾನಗಳನ್ನು ಸೇರಿದರು.

ಕೆಲವರು ದೇವಲೋಕವನ್ನೂ, ಕೆಲವರು ಬ್ರಹ್ಮಲೋಕವನ್ನೂ, ಕೆಲವರು ವರುಣಲೋಕವನ್ನೂ, ಕೆಲವರು ಕುಬೇರಲೋಕವನ್ನೂ, ಕೆಲವರು ಸೂರ್ಯ ಲೋಕವನ್ನೂ, ಇನ್ನು ಕೆಲವರು ರಾಕ್ಷಸ ಪಿಶಾಚ ಲೋಕಗಳನ್ನೂ, ಕೆಲ ವರು ಉತ್ತರಕುರುಗಳನ್ನೂ ಸೇರಿದರು ಕಾಮಗಮನಶಕ್ತಿಯುಳ್ಳ ಆ ಮಹಾತ್ಮರೆಲ್ಲರೂ ಯಾವಯಾವ ಲೋಕಗಳಿಂದ ಯಾವಯಾವ ವಾಹನ ಗಳೊಡನೆ ಮತ್ತು ಪರಿವಾರಗಳೊಡನೆ ಬಂದಿದ್ದರೋ, ಅವುಗಳೊಡನೆ ಆಯಾ ಲೋಕಗಳನ್ನು ಸೇರಿದರು. ಅವರೆಲ್ಲರೂ ಹೊರಟುಹೋದಮೇಲೆ, ಇತ್ತಲಾಗಿ ನೀರಿನಲ್ಲಿದ್ದ ವ್ಯಾಸಮಹಾಮುನಿಯು ಅಲ್ಲಿ ಪತಿಗಳನ್ನು ಕಳೆದು ಕೊಂಡಿದ್ದ ಕ್ಷತ್ರಿಯ ಸ್ತ್ರೀಯರೆಲ್ಲರನ್ನೂ ಕುರಿತು 'ಯಾವಯಾವ ಸ್ತ್ರೀ ಯರು ಈಗ ತಮ್ಮತಮ್ಮ ಪತಿಗಳು ಪಡೆದಿರುವ ಲೋಕಗಳಲ್ಲಿ ಹೋಗಿಸೇರ ಲು ಅಪೇಕ್ಷಿಸುವರೋ, ಅವರವರು ಶೀಘ್ರದಲ್ಲಿಯೇ ಈ ಗಂಗಾಜಲದಲ್ಲಿ ಪ್ರವೇಶಿಸಬಹುದು' ಎಂದನು ಆ ಮಹರ್ಷಿಯ ವಾಕ್ಯಗಲ್ಲಿ ದೃಢವಿಶ್ವಾ ಸವುಳ್ಳ ಕೆಲವು ಸ್ತ್ರೀಯರು, ತಮ್ಮ ಮಾವನಾದ ಧೃತರಾಷ್ಟ್ರನ ಅನುಮತಿ ಯನ್ನು ಪಡೆದು, ನಿರ್ಭಯವಾಗಿ ಗಂಗಾಜಲದಲ್ಲ ಪ್ರವೇಶಿಸಿ, ಮಾನುಷ ಶರೀರಗಳನ್ನು ನೀಗಿ ಪತಿಲೋಕಗಳನ್ನು ಸೇರಿದರು ಹೀಗೆ ಸದ್ಗುಣವತಿ ಯರೂ, ಸುಶೀಲೆಯರೂ ಆದ ಆ ಉತ್ತಮಸ್ತ್ರೀಯರು, ತಮ್ಮತಮ್ಮ ಪತಿ ಗಳಂತೆಯೇ ದಿವ್ಯ ವೇಷಭೂಷಣಗಳುಳ್ಳವರಾಗಿ, ದಿವ್ಯಾಕೃತಿಗಳನ್ನು ತಾಳಿ, ದಿವ್ಯ ವಿಮಾನಗಳನ್ನೇರಿ, ಆಯಾ ಸ್ಥಳಗಳಿಗೆ ಹೋದರು ಆಗ ವರಪ್ರದ ನಾದ ವ್ಯಾಸನು, ಆ ಸಮಯದಲ್ಲಿ ಯಾವಯಾವನಿಗೆ ಯಾವಯಾವುದು ಇಷ್ಟವೋ ಅವನ್ನೆಲ್ಲ ಅನುಗ್ರಹಿಸಿದನು ಯುದ್ಧದಲ್ಲಿ ಸತ್ತ ರಾಜರೆಲ್ಲರೂ ತಿರುಗಿ ಗೋಚರಿಸಿದುದನ್ನು ಕೇಳಿ ನಾನಾದೇಶವಾಸಿಗಳೂ ಅತ್ಯಾನಂದ ಭರಿತರಾದರು. ಪುರವಾಸಿಗಳೆಲ್ಲರೂ ಪರಮಾಶ್ಚರ್ಯಭರಿತರಾಗಿ ನೋಡಿ ದರು. ಈ ಪ್ರಿಯಸಮಾಗಮವೃತ್ತಾಂತವನ್ನು ಕಿವಿಯಿಂದ ಕೇಳಿದವರು ಕೂಡ, ಇಹಪರಗಳೆರಡರಲ್ಲಿಯೂ ತಮಗೆ ಇಷ್ಟವಾದುವುಗಳನ್ನು ಪಡೆ ಯುವರು. ಇಷ್ಟಬಂಧುಸಮಾಗಮವನ್ನೂ ಕ್ಷೇಮವನ್ನೂ ಪಡೆಯುವರು. ಯಾವನು ಇದನ್ನು ಇತರರಿಗೆ ಹೇಳುವನೋ ಆತನೂ ಈ ಲೋಕದಲ್ಲಿ ಪ್ರಸಿದ್ಧಿಯನ್ನೂ, ಪರಲೋಕದಲ್ಲಿ ಶುಭಗತಿಯನ್ನೂ ಪಡೆಯುವನು.

ತಪಸ್ಸು, ವೇದಾಧ್ಯಯನ, ಸದಾಚಾರ, ಇಂದ್ರಿಯ ನಿಗ್ರಹ, ದಾನ, ನಿಷ್ಕಾಪಟ್ಯ, ಶೌಚ, ಶಾಂತಿ, ಅಹಿಂಸೆ, ಸತ್ಯ, ಆಸ್ತಿಕ್ಯ, ಶ್ರದ್ಧೆ, ಧೈರ್ಯ, ಮುಂತಾದ ಗುಣಗಳುಳ್ಳವರಾಗಿ, ಆಶ್ಚರ್ಯಕರವಾದ ಈ ಪರ್ವದ ವೃತ್ತಾಂತವನ್ನು ಕೇಳಿದವರೆಲ್ಲ ಉತ್ತಮ ಗತಿಯನ್ನು ಪಡೆಯುವರು. ಯುದ್ಧದಲ್ಲಿ ದೇಹತ್ಯಾಗಮಾಡಿದಮೇಲೆಯೂ ವ್ಯಾಸಾನುಗ್ರಹದಿಂದ ಜನಗಳಿಗೆ ಕಾಣಿಸಿಕೊಳ್ಳುವಂತೆ ಮಹಾಭಾಗ್ಯವನ್ನು ಪಡೆದ ಆ ದಿವ್ಯ ಪುರುಷರೇ ಇದನ್ನು ಶ್ರವಣಮಾಡಿದವರಿಗೆ ಅಭಯವನ್ನು ಕೊಡುವರು' ಎಂದನು

ಇದು ಮೂವತ್ತೈದನೆಯ ಅಧ್ಯಾಯವು.

ಸತ್ತವರು ಹಿಂತಿರುಗಿ ಬಂದುದು ಹೇಗೆಂದು ಜನಮೇಜಯನು ಕೇಳಲು ವೈಶಂಪಾಯನನು ಸಕಾರಣವಾಗಿ ಅದನ್ನು ನಿರೂಪಿಸಿದುದು

ಜನಮೇಜಯನು ಮೃತರಾದ ತನ್ನ ಪಿತಾಮಹರೆಲ್ಲರೂ ಹಿಂತಿರುಗಿ ಬಂದುದನ್ನು ಕೇಳಿ ಸಂತುಷ್ಟನಾಗಿ, 'ಮುನೀಂದ್ರಾ! ಶರೀರವನ್ನು ಬಿಟ್ಟವರು ತಿರುಗಿ ತಮ್ಮ ಸ್ವರೂಪವನ್ನು ತೋರಿಸುವುದು ಹೇಗೆ?' ಎಂದು ಕೇಳಿದನು. ಆಗ ವ್ಯಾಸಶಿಷ್ಯನೂ, ವಾಗ್ಮಿಗಳಲ್ಲಿ ಚತುರನೂ ಆದ ವೈಶಂಪಾಯನನು ಜನಮೇಜಯನನ್ನು ಕುರಿತು 'ಓ ರಾಜಾ! ಎಂತವರಿಗಾದರೂ ಫಲಾನುಭವದಿಂದಲ್ಲದೆ ಕರ್ಮಗಳು ನಶಿಸುವುದಿಲ್ಲವೆಂಬುದು ನಿಜವು. ಶರೀರಗಳೂ, ಆಕೃತಿಗಳೂ ಆ ಕರ್ಮಗಳಿಂದುಂಟಾಗುವುವು. ಅವು ಅನಿತ್ಯಗಳು. ಮಹಾಭೂತಗಳು (ಪಿತ್ರಾದಿ ಶರೀರಗಳು) ಪ್ರಾಣಿಗಳಿಗೆ ಅಧಿಪತಿಯಾದ ಈಶ್ವರನನ್ನು ಆಶ್ರಯಿಸಿ (ಹೃದಯಾಕಾಶದಲ್ಲಿ) ರುವುದರಿಂದ ನಿತ್ಯವೆನಿಸಿವೆ. ಅನಿತ್ಯವಾದ ಕರ್ಮಶರೀರಗಳೂ ನಿತ್ಯವಾದ ಪಿತ್ರಾದಿಶರೀರಗಳೊಡನೆ ಸೇರಿರುವುವು. ಕರ್ಮಶರೀರಗಳು ನಾಶವಾದಾಗಲೂ ನಿತ್ಯಶರೀರಗಳು ನಶಿಸುವುದಿಲ್ಲ. 'ಅಪೇಕ್ಷೆಯಿಲ್ಲದೆ ಮಾಡಿದ ಕರ್ಮಕ್ಕೂ ಫಲವು ಲಭಿಸದಿರದು' ಎಂಬುದೇ ಹಿರಿಯರ ಅಭಿಪ್ರಾಯವು. ಜೀವನು ಕರ್ಮ

ಬದ್ಧನಾಗಿ ಸುಖದುಃಖಗಳನ್ನು ಅನುಭವಿಸುವನು. ಆತ್ಮನಿಗೆ ಯಾವಾಗಲೂ ನಾಶವಿಲ್ಲ. ಆತ್ಮನು ಯಾರಿಂದಲೂ ವಧಿಸಲ್ಪಡಲಾರನೆಂಬುದು ನಿಶ್ಚಯವು. ಭೂತಗಳ ಆತ್ಮಸ್ವರೂಪವನ್ನು ವಿಮರ್ಶಿಸಿ ನೋಡಬಲ್ಲವರಿಗೆ ಆ ಆತ್ಮವು ನಿತ್ಯವೆಂಬುದು ಚೆನ್ನಾಗಿ ತಿಳಿಯುವುದು. ಕರ್ಮಕ್ಷಯವಾಗುವವರೆಗೆಮಾತ್ರವೇ ಈ ಪಾರ್ಥಿವಶರೀರವು ಕಾಣಿಸುವುದು. ಕರ್ಮವು ನಶಿಸಿದಕೂಡಲೆ ಜೀವನು ಬೇರೆ ಶರೀರವನ್ನು ಪಡೆಯುವನು. ಬೇರೆಬೇರೆಯಾಗಿರುವ ಭೂತೇಂದ್ರಿಯಾದಿಗಳು ಒಂದಾಗಿ ಸೇರಿ ಶರೀರಾಕಾರವನ್ನು ಪಡೆಯುವುವು. ಶರೀರಕ್ಕಿಂತಲೂ ಜೀವನು ಬೇರೆಯಾದವನೆಂದು ತಿಳಿಯಬಲ್ಲವರಿಗೆ ಅವೂ ಅನಿತ್ಯಗಳಾಗುವುವು. ಎಂದರೆ ಅಜ್ಞಾನಿಗಳು ಯಾವುದನ್ನು ಅನಿತ್ಯವೆಂದು ಭ್ರಮಿಸುವರೋ, ಅವು ಜ್ಞಾನಿಗಳಿಗೆ ನಿತ್ಯವಾಗಿರುವುವು. ಅಶ್ವಮೇಧಯಾಗದಲ್ಲಿ ಅಶ್ವವನ್ನು ಕೊಲ್ಲುವಾಗ ಪಠಿಸುವ ವೇದಮಂತ್ರವೂ ಇದೇ ಅರ್ಥವನ್ನು ಸೂಚಿಸುತ್ತಿರುವುದು ಆ ಕುದುರೆಯನ್ನು ಕೊಂದರೂ ಅದರ ಪ್ರಾಣೇಂದ್ರಿಯಗಳು ಲೋಕಾಂತರದಲ್ಲಿ ನಿತ್ಯವಾಗಿರುವುವು. ನಿನಗೆ ಪ್ರಿಯವಾಗಿದ್ದರೆ, ನಾನು ಹಿತವಾದ ವೃತ್ತಾಂತವನ್ನು ತಿಳಿಸುವೆನು ಕೇಳು. ಯಾಗವನ್ನು ಮಾಡಿದರೆ ದೇವಯಾನಮಾರ್ಗಗಳುಂಟೆಂದು ನೀನು ಕೇಳಿರುವೆಯಲ್ಲವೆ? ನೀನು ಯಜ್ಞವನ್ನು ಮಾಡಿದಾಗಲೇ ನಿನಗೆ ದೇವತೆಗಳೆಲ್ಲರೂ ಅನುಕೂಲರಾದರು ಪ್ರಾಣಿಗಳನ್ನು ಆಯಾ ಲೋಕಗಳನ್ನು ಹೊಂದಿಸಲು ಸಮರ್ಥರಾದ ದೇವತೆಗಳು ಆಗಲೇ ಯಜ್ಞಕರ್ತರೊಡನೆ ಒಂದಾಗುವರು. ಆದುದರಿಂದ ನಿತ್ಯವೆನಿಸಿದ ಜೀವಗಳು ದೇವತೆಗಳನ್ನು ಕುರಿತು ಯಾಗಮಾಡಿ, ಆಯಾ ಸದ್ಗತಿಯನ್ನು ಪಡೆಯುವುವು. ಯಾಗಮಾಡದವರು ನಿರ್ಗತಿಕರಾಗುವರು. ಪಂಚಭೂತಗಳ ನೇರುವಿಕೆಯಿಂದಾದ ಶರೀರವೂ, ಆತ್ಮವೂ ನಿತ್ಯಗಳೇ! ಆದುದರಿಂದ ಯಾವ ಪುರುಷನು ಈ ಶರೀರಕ್ಕೆ ಆತ್ಮದೊಡನೆ ಉಂಟಾಗುವ ಸಂಯೋಗವಿಯೋಗಗಳನ್ನು ತಿಳಿದಿದ್ದರೂ, ಇದರ ರೂಪಭೇದಗಳನ್ನೇ ಮುಖ್ಯವಾಗಿ ಭಾವಿಸಿ, ಶರೀರವಿಯೋಗದಲ್ಲಿ ವ್ಯಸನಪಡುವನೋ ಅವನು ಮೂಢನೆಂಬುದು ನನ್ನ ಅಭಿಪ್ರಾಯವು. ಅಂತವನ ವಿದ್ಯೆಯೂ ವ್ಯರ್ಥವೇ. ವಿಯೋಗದಲ್ಲಿ ದೋಷವನ್ನು ಭಾವಿಸಿ ದುಃಖಿಸತಕ್ಕವನು, ಸಂಯೋಗವನ್ನೇ ಬಿಟ್ಟು

ವಿರಕ್ತನಾಗಿರಬೇಕು. ಬಂಜೆಗೆ ಪುತ್ರಶೋಕದ ಸಂಭವವೇ ಇಲ್ಲದಂತೆ, ಅವನಿಗೆ ಸಂಯೋಗಸುಖವೂ ಇಲ್ಲ! ವಿಯೋಗದುಃಖವೂ ಇಲ್ಲ! ನಿತ್ಯಾನಿತ್ಯಸ್ವರೂಪಗಳನ್ನರಿತು, ದೇಹಾಭಿಮಾನವನ್ನು ತೊರೆದು, ಬ್ರಹ್ಮಜ್ಞಾನವುಳ್ಳವನಾವನೋ, ಅವನು ಅಜ್ಞಾನದಿಂದ ವಿಮೋಚನೆಯನ್ನು ಪಡೆಯುವನು ಚೇತನನು ಎಲ್ಲಿಂದಲೋ ಅದೃಶ್ಯವಾದುದರಿಂದ ಬಂದವನು. ತಿರುಗಿ ತಿಳಿಯಲಾರದ ವಸ್ತುವನ್ನು ಸೇರುವನು. ನಾನೂ ಆತನನ್ನು ತಿಳಿಯಲಾರೆನು ಆತನೂ ನನ್ನನ್ನು ತಿಳಿಯನು. ರಾಜಾ! ನನಗಾದರೂ ಇನ್ನೂ ವೈರಾಗ್ಯವುಂಟಾಗಲಿಲ್ಲ ಈಶ್ವರನಲ್ಲದ ಈ ಜೀವನು, ಯಾವ ಶರೀರದಿಂದ ಯಾವಯಾವುದನ್ನು ಮಾಡುವನೋ, ಆಯಾ ಶರೀರದಿಂದ ಆಯಾ ಫಲವನ್ನು ಅನುಭವಿಸುವನು. ಮನಸ್ಸಿನಿಂದ ಮಾಡಿದುದನ್ನು ಮನಸ್ಸಿನಿಂದಲೂ, ಶರೀರದಿಂದ ಮಾಡಿದುದನ್ನು ಶರೀರದಿಂದಲೂ ಪಡೆಯುವನು'

ಇದು ಮೂವತ್ತಾರನೆಯ ಅಧ್ಯಾಯವು.

ಜನಮೇಜಯನು ತನ್ನ ತಂದೆಯಾದ ಪರೀಕ್ಷಿತ್ತನ್ನು ತಾನು ಕಾಣಬೇಕೆಂದು ಕೇಳಲು, ವ್ಯಾಸನು ಪರೀಕ್ಷಿತ್ತನ್ನೂ, ಶಮೀಕನನ್ನೂ, ಶೃಂಗಿ ಮೊದಲಾದವರನ್ನೂ ತೋರಿಸಿದುದು. ಜನಮೇಜಯನು ಅವಭೃಥಸ್ನಾನಮಾಡಿ ಆಸ್ತಿಕನನ್ನು ಪೂಜಿಸಿದುದು.

'ಓ ಕೌರವಶ್ರೇಷ್ಠಾ! ವ್ಯಾಸಾನುಗ್ರಹದಿಂದ, ಧೃತರಾಷ್ಟ್ರನು ತಮ್ಮ ತಮ್ಮ ನಿಜರೂಪಗಳೊಡನೆ ಕಾಣಿಸಿದ ಪುತ್ರರನ್ನೆಲ್ಲ ನೋಡಿದನು. ಅವರೆಲ್ಲರೂ ಅದೃಶ್ಯರಾದೊಡನೆ ಅವನು ವ್ಯಾಸನಿಂದ ರಾಜಧರ್ಮಗಳನ್ನೂ, ಬ್ರಹ್ಮವಿಷಯಕವಾದ ಉಪನಿಷತ್ತುಗಳನ್ನೂ, ತತ್ವಜ್ಞಾನವನ್ನೂ ಕೇಳಿ ತಿಳಿದನು. ವಿದುರನು ತನ್ನ ತಪೋಬಲದಿಂದ ಸಿದ್ಧಿಯನ್ನು ಪಡೆದಮೇಲೆ ಧೃತರಾಷ್ಟ್ರನೂ ತಪಸ್ವಿಯಾದ ಆ ವ್ಯಾಸನನ್ನು ಆಶ್ರಯಿಸಿ, ಸಿದ್ಧಿಯನ್ನು ಹೊಂದಿದನು' ಎಂದನು.

ಆಗ ಜನಮೇಜಯನು 'ಮುನೀಂದ್ರಾ! ಇಷ್ಟಾದರೂ ವ್ಯಾಸಮುನಿಯು ನಡೆಸಿದ ಕಾರ್ಯದಲ್ಲಿ ನನಗೆ ಪೂರ್ಣವಾದ ನಂಬಿಕೆ ಹುಟ್ಟಿಲ್ಲ. ಹಾಗಿದ್ದರೆ ಈಗ ಅವನು ನನ್ನಲ್ಲಿ ಅನುಗ್ರಹಿಸಿ, ನನಗೂ ವರಪ್ರದನಾಗಿ ನನ್ನ ತಂದೆಯಾದ ಪರೀಕ್ಷಿತ್ತನ್ನು ನನಗೆ ಕಾಣಿಸಿದರೆ ಆಗ ನಿನ್ನ ಮಾತಿನಲ್ಲಿ ನನಗೆ ನಂಬಿಕೆಹುಟ್ಟುವುದು. ಆದುದರಿಂದ ಈ ವ್ಯಾಸಮುನಿಯು ನನ್ನ ಕೋರಿಕೆಯನ್ನೂ ನೆರವೇರಿಸಲಿ' ಎಂದನು. ಒಡನೆಯೇ ವ್ಯಾಸಾನುಗ್ರಹದಿಂದ ಪರೀಕ್ಷಿದ್ರಾಜನು ಜನಮೇಜಯನ ಮುಂದೆ ಕಾಣಿಸಿದನು. ಆಗ ಆ ರಾಜನು, ತನ್ನ ನಿಜರೂಪವೇಷಗಳಿಂದಲೂ, ಅದೇ ವಯಸ್ಸಿನಿಂದಲೂ ಸ್ವರ್ಗದಿಂದ ಬಂದು ತನ್ನ ಮುಂದೆ ಕಾಣಿಸಿದ ಪರೀಕ್ಷಿತ್ತನ್ನೂ, ಮಹಾತ್ಮನಾದ ಶಮೀಕನನ್ನೂ, ಆತನ ಪುತ್ರನಾದ ಶೃಂಗಿಯನ್ನೂ, ಮೃತರಾಗಿದ್ದ ಮಂತ್ರಿಗಳನ್ನೂ ನೋಡಿದನು. ಇದರಿಂದ ಜನಮೇಜಯರಾಜನು ಪರಮಹರ್ಷಿತನಾಗಿ ಸಂತೋಷಗೊಂಡು, ಅವಭೃಥದಲ್ಲಿ ತನ್ನ ತಂದೆಗೂ ಸ್ನಾನಮಾಡಿಸಿ, ತಾನೂ ಸ್ನಾನಮಾಡಿದನು. ಒಡನೆ ಪರೀಕ್ಷಿದ್ರಾಜನು ಆ ಸ್ಥಳದಲ್ಲಿಯೇ ಕಣ್ಮರೆಯಾದನು

ಜನಮೇಜಯನು ಸ್ನಾನಮಾಡಿಬಂದಮೇಲೆ, ಯಾಯಾವರಕುಲದಲ್ಲಿ ಜರತ್ಕಾರುವಿನ ಪುತ್ರನಾದ ಆಸ್ತೀಕನನ್ನು ಕುರಿತು 'ಓ ವಿಪ್ರೋತ್ತಮಾ! ಈಗ ನಾನು ಲೋಕಾಂತರಗತನಾದ ನನ್ನ ತಂದೆಯನ್ನು ಇಲ್ಲಿ ಸಾಕ್ಷಾತ್ತಾಗಿ ನೋಡಿದೆನು ನನಗಿದ್ದ ಅಪಾರದುಃಖವೂ ನೀಗಿತು ಇದರಿಂದ ಈಗಿನ ನಮ್ಮ ಯಾಗವು ನನಗೆ ಅತ್ಯಾಶ್ಚರ್ಯಕರವಾಗಿ ತೋರಿದೆ' ಎಂದನು ಆಗ ಆಸ್ತೀಕನು 'ಓ ಕುರುಕುಲೋತ್ತಮಾ! ಪುರಾತನನೂ, ತಪೋನಿಧಿಯೂ, ಋಷಿಶ್ರೇಷ್ಠನೂ ಆದ ವ್ಯಾಸನು, ಯಾರ ಯಾಗದಲ್ಲಿರುವನೋ, ಅಂತವನು ಇಹಪರಗಳೆರಡನ್ನೂ ಜಯಿಸಿದಂತೆಯೇ! ಪಾಂಡುಕುಮಾರಾ! ನೀನು ವಿಚಿತ್ರಕಥೆಗಳನ್ನೆಲ್ಲ ಕೇಳಿದೆ. ನಿನ್ನ ಈ ಯಾಗದಿಂದ ಸರ್ಪಗಳೆಲ್ಲ ದಗ್ಧವಾಗಿ, ನಿನ್ನ ತಂದೆಯು ಗತಿಯನ್ನು ಪಡೆದುವು. ಓ ರಾಜಾ! ನೀನು ಸತ್ಯಸಂಧನಾದುದರಿಂದ, ತಕ್ಷಕನು ಆ ಅಪಾಯದಿಂದ ತಪ್ಪಿಸಿಕೊಂಡನು. ಎಲ್ಲಾ ಋಷಿಗಳೂ ಪೂಜಿತರಾದರು. ಮಹಾ

ತ್ಮನಾದ ನಿನ್ನ ತಂದೆಯಿರುವ ಸ್ಥಿತಿಯನ್ನೂ ನೀನು ನೋಡಿದೆ. ಪಾಪನಿವಾರಕವಾದ ಇತಿಹಾಸವನ್ನು ಕೇಳಿ ಅಧಿಕ ಧರ್ಮವನ್ನು ಪಡೆದಿರುವೆ. ಮಹಾತ್ಮರ ದರ್ಶನದಿಂದ ನಿನ್ನ ಮನಸ್ಸಿನಲ್ಲಿ ಬೇರೂರಿದ್ದ ಅಜ್ಞಾನವೂ ನೀಗಿತು. ರಾಜಾ! ಯಾರು ಧರ್ಮಾಸಕ್ತರೋ, ಯಾರು ಸದಾಚಾರಪ್ರಿಯರೋ, ಯಾರನ್ನು ಕಂಡರೆ ಪಾಪವೂ ಭಯಪಟ್ಟು ತೊಲಗುವುದೋ ಅಂತವರನ್ನು ಸದಾ ಸೇವಿಸಬೇಕು' ಎಂದನು. ಆಮೇಲೆ ಜನಮೇಜಯನು, ವೈಶಂಪಾಯನನನ್ನು ಅಡಿಗಡಿಗೆ ಸ್ತುತಿಸಿ ಪೂಜಿಸುತ್ತ, ವನವಾಸವಿಷಯಕವಾದ ಉಳಿದ ಕಥಾಭಾಗಗಳನ್ನು ಕೇಳತೊಡಗಿದನು.

ಇದು ಮೂವತ್ತೇಳನೆಯ ಅಧ್ಯಾಯವು.

ಧೃತರಾಷ್ಟ್ರನು ತನ್ನ ಮಕ್ಕಳನ್ನು ಕಂಡಮೇಲೆ ಗಂಗಾತೀರದಿಂದ ಹಿಂತಿರುಗಿ ಆಶ್ರಮಕ್ಕೆ ಬಂದುದು. ವ್ಯಾಸನು ಯುಧಿಷ್ಠಿರಾದಿಗಳನ್ನು ಪಟ್ಟಣಕ್ಕೆ ಹಿಂತಿರುಗಿಸುವಂತೆ ದೃತರಾಷ್ಟ್ರನಿಗೆ ಹೇಳಿದುದು. ಇಷ್ಟವಿಲ್ಲದಿದ್ದರೂ, ಧರ್ಮರಾಜನು, ತಾಯ್ತಂದೆಗಳ ನಿರ್ಬಂಧಕ್ಕಾಗಿ ತನ್ನ ಪರಿವಾರಗಳೊಡನೆ ಹಿಂತಿರುಗಿದುದು

ಆಗ ವೈಶಂಪಾಯನನನ್ನು ಕುರಿತು ಜನಮೇಜಯನು 'ಮುನೀಂದ್ರಾ! ಧೃತರಾಷ್ಟ್ರನು ಯುದ್ಧದಲ್ಲಿ ಮೃತರಾದ ತನ್ನ ಬಳಗದವರನ್ನೆಲ್ಲ ಕಂಡಮೇಲೆ ಮಾಡಿದುದೇನು? ಆಮೇಲೆ ಯುಧಿಷ್ಠಿರನು ಏನು ಮಾಡಿದನು?' ಎಂದು ಕೇಳಲು, ವೈಶಂಪಾಯನನು 'ರಾಜೇಂದ್ರಾ! ಮೃತರಾದ ಪುತ್ರರೆಲ್ಲ ತಿರುಗಿ ತನ್ನ ಕಣ್ಣಿಗೆ ಕಾಣಿಸಿದ ಮಹಾಶ್ಚರ್ಯಕ್ಕೆ ಬೆರಗಾಗಿ, ಧೃತರಾಷ್ಟ್ರನು ತನ್ನ ಮನಸ್ಸಿನಲ್ಲಿ ಬಹುಕಾಲದಿಂದಿದ್ದ ಅವರ ವಿಷಯವಾದ ವ್ಯಸನವನ್ನು ಬಿಟ್ಟು, ಶಾಂತಮನಸ್ಕನಾಗಿ ಆಶ್ರಮಕ್ಕೆ ಹಿಂತಿರುಗಿಬಿಟ್ಟನು. ಅಲ್ಲಿ ಬಂದಿದ್ದ ಇತರ ಜನಸಮೂಹವೂ, ಮಹರ್ಷಿಗಳೂ ಧೃತರಾಷ್ಟ್ರನ ಅನುಜ್ಞೆಯನ್ನು ಪಡೆದು ಹಿಂತಿರುಗಿದರು. ಮಹಾತ್ಮರಾದ

ಪಾಂಡವರಾದರೋ, ಮಿತವಾದ ಸೈನಿಕರನ್ನು ಸಂಗಡ ಕರೆದುಕೊಂಡು, ತಮ್ಮ ಅಂತಃಪುರಸ್ತ್ರೀಯರೊಡನೆ ಧೃತರಾಷ್ಟ್ರನನ್ನೇ ಹಿಂಬಾಲಿಸಿಹೋದರು. ಆಗ ಆಶ್ರಮಕ್ಕೆ ಬಂದು ಸೇರಿದ ಧೃತರಾಷ್ಟ್ರನಲ್ಲಿಗೆ ವ್ಯಾಸಮುನಿಯು ಬಂದು 'ಓ ಮಹಾಬಾಹೂ! ಧೃತರಾಷ್ಟ್ರಾ! ನಾನು ಹೇಳುವುದನ್ನು ಕೇಳು. ಜ್ಞಾನವೃದ್ಧರೂ, ಪುಣ್ಯಶಾಲಿಗಳೂ ಆದ ಅನೇಕಮಹರ್ಷಿಗಳಿಂದ ನೀನು ಎಷ್ಟೋವಿಷಯಗಳನ್ನು ಕೇಳಿರುವೆ ಸತ್ಕುಲಪ್ರಸೂತರೂ, ವಯೋವೃದ್ಧರೂ, ವೇದವೇದಾಂಗಗಳನ್ನೂ, ಧರ್ಮರಹಸ್ಯಗಳನ್ನೂ ತಿಳಿದವರೂ ಆದ ಎಷ್ಟೋ ಮಂದಿ ಪೂರ್ವಿಕರ ನಾನಾಕಥೆಗಳನ್ನೂ ನೀನು ಕೇಳಿರುವೆ. ಇನ್ನು ನೀನು ದುಃಖಕ್ಕೆ ಎಡೆಗುಡಬಾರದು. ದೈವಕೃತವಾದುದಕ್ಕೆ ವಿದ್ವಾಂಸರು ಎಂದಿಗೂ ವ್ಯಥೆಪಡಲಾರರು. ದಿವ್ಯಜ್ಞಾನವುಳ್ಳ ನಾರದನಿಂದ ನೀನು ದೇವರಹಸ್ಯವನ್ನೂ ಕೇಳಿ ತಿಳಿದಿರುವೆ. ನಿನ್ನ ಮಕ್ಕಳೆಲ್ಲರೂ ಕ್ಷತ್ರಧರ್ಮಕ್ಕನುಸಾರವಾಗಿ ಶಸ್ತ್ರಪೂತವಾದ ಗತಿಯನ್ನು ಹೊಂದಿದರು. ಈಗ ನೀನು ಅವರನ್ನು ಯಾವ ರೀತಿಯಿಂದ ನೋಡಿದೆಯೋ, ಅದೇ ರೀತಿಯಲ್ಲಿ ಅವರು ಸ್ವೇಚ್ಛೆಯಿಂದ ವಿಹರಿಸುತ್ತ ಸ್ವರ್ಗದಲ್ಲಿ ಸಂತೋಷದಿಂದಿರುವರು. ಅದೋ! ನೋಡು. ಸ್ವತಃ ಎಲ್ಲವನ್ನೂ ತಿಳಿದು ಧೀಮಂತನೆನಿಸಿದ ಯುಧಿಷ್ಠಿರನು, ತನ್ನ ಪತ್ನೀಪರಿವಾರಾದಿಗಳೊಡನೆ ನಿನ್ನನ್ನು ಹಿಂಬಾಲಿಸುತ್ತಿರುವನು. ಅವನ ತಮ್ಮಂದಿರೂ ಅವನೊಡನೆ ನಿನ್ನನ್ನು ಹಿಂಬಾಲಿಸುತ್ತಿರುವರು. ಆದುದರಿಂದ ನೀನು ಆ ಯುಧಿಷ್ಠಿರನನ್ನು ನಿರ್ಬಂಧಿಸಿ ಹಿಂತಿರುಗಿಸು. ಅವನು ಹೋಗಿ ತನ್ನ ರಾಜ್ಯವನ್ನು ಕಾಪಾಡುತ್ತಿರಲಿ! ಆ ಪಾಂಡವರು ಇಲ್ಲಿಗೆ ಬಂದು ಹೆಚ್ಚುದಿನಗಳಾದುವು. ಈ ಕಾಡಿನಲ್ಲಿಯೇ ಅವರು ನೆಲೆಯಾಗಿ ನಿಂತುಬಿಟ್ಟರು. ರಾಜ್ಯವೆಂಬುದು ಯಾವಾಗಲೂ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾದ ಅಧಿಕಾರಸ್ಥಾನವು ಅನೇಕ ಶತ್ರುಗಳು ಅದಕ್ಕಾಗಿ ಕಣ್ಣಿಟ್ಟು ಕಾದಿರುವರು' ಎಂದನು. ಅಪಾರಬುದ್ಧಿಯುಳ್ಳ ವ್ಯಾಸನಿಂದ ಹೀಗೆ ಪ್ರೇರಿಸಲ್ಪಟ್ಟ ಧೃತರಾಷ್ಟ್ರನು ಯುಧಿಷ್ಠಿರನನ್ನು ಸಮೀಪಕ್ಕೆ ಕರೆದು ಹೀಗೆಂದು ಹೇಳುವನು. 'ಅಜಾತಶತ್ರೂ! ನಿನಗೆ ಶುಭವಾಗಲಿ! ನಿನ್ನ ಸಹೋದರರೊಡನೆ ನನ್ನ ಮಾತನ್ನು ಲಾಲಿಸು. ಕುಮಾರಾ! ನಿನ್ನ ಆದರದಿಂದ

ನಮಗೆ ನಮ್ಮ ಪುತ್ರಮರಣಶೋಕವೇ ತೋರುವುದಿಲ್ಲ. ನಾನು ಪೂರ್ವ ದಲ್ಲಿ ಹಸ್ತಿನಾವತಿಯಲ್ಲಿದ್ದ ಹಾಗೆಯೇ ನಿನ್ನೊಡನೆ ಸಂತೋಷದಿಂದಿರುವೆನು. ನೀನು ನಮಗೆ ದಿಕ್ಕಾಗಿ, ನಮಗೆ ಇಷ್ಟವಾದವುಗಳನ್ನೆಲ್ಲ ಒದಗಿಸಿ, ನಮ್ಮನ್ನು ಆದರಿಸುತ್ತಿರುವೆ ನಿನ್ನಿಂದ ನನಗೆ ಪುತ್ರನಿಂದಾಗಬೇಕಾದ ಪ್ರಯೋ ಜನವೆಲ್ಲ ಕೈಗೂಡಿತು ನಿನ್ನಲ್ಲಿ ನನಗೆ ಅತ್ಯಧಿಕ ಪ್ರೀತಿಯುಂಟಾಗಿದೆ. ನಿನ್ನಲ್ಲಿ ನನಗೆ ಯಾವ ವಿಧವಾದ ಅಪ್ರಿಯವೂ ಇಲ್ಲ ಇನ್ನು ನೀನು ಬೇಗನೆ ನಿನ್ನ ರಾಜ್ಯಕ್ಕೆ ಹೊರಡು. ವಿಳಂಬಮಾಡಬೇಡ. ಅಲ್ಲದೆ ಇಲ್ಲಿ ನೀನಿರುವವರೆಗೆ ನಮ್ಮ ತಪಸ್ಸೂ ಕೆಟ್ಟುಹೋಗುವುದು. ಧರ್ಮಸಾಧನ ವೆನಿಸಿದ ಈ ಶರೀರವು ನಿನ್ನಿಂದಲೇ ಈಗ ಬದುಕುವಂತಾಗಿದೆ. ನಿನ್ನ ಇಬ್ಬರು ತಾಯಿಯರೂ ಕೂಡ ತರಗೆಲೆಗಳನ್ನೇ ಆಹಾರವಾಗಿ ತೆಗೆದುಕೊ ಳ್ಳುತ್ತ, ನನ್ನೊಡನೆ ಸಮಾನವ್ರತಗಳನ್ನು ಹಿಡಿದು ಇಲ್ಲಿರುತ್ತಿರುವರು ದುರ್ಯೋಧನನೇ ಮೊದಲಾಗಿ ಲೋಕಾಂತರಗತರಾದ ನನ್ನ ಮಕ್ಕಳನ್ನೆಲ್ಲ ವ್ಯಾಸಮಹರ್ಷಿಯ ತಪೋಬಲದಿಂದಲೂ, ನಿನ್ನ ಸಹವಾಸದಿಂದಲೂ ತಿರುಗಿ ನಾನು ನೋಡುವಂತಾಯಿತು. ಬಹುಕಾಲದಿಂದ ನಾನು ನನ್ನ ಜೀವಿತದ ಪ್ರಯೋಜನವನ್ನೆಲ್ಲ ಪಡೆದುದಾಯಿತು. ಇನ್ನುಮೇಲೆ ನಾನು ಉಗ್ರತಪ ಸ್ಸಿನಲ್ಲಿ ನೆಲೆಗೊಳ್ಳುವೆನು. ನೀನು ನನಗೆ ಅನುಮತಿಕೊಡಬೇಕು. ನಮ್ಮ ಪಿಂಡವೂ, ನಮ್ಮ ಕೀರ್ತಿಯೂ, ನಮ್ಮ ಕುಲವೂ ಈಗ ನಿನ್ನನ್ನಾಶ್ರಯಿಸಿ ನಿಂತಿವೆ ಈಗಲೋ, ಅಥವಾ ನಾಳೆಯೋ ನೀನು ಇಲ್ಲಿಂದ ಹೊರಟು ಬಿಡು. ಇನ್ನುಮೇಲೆ ನೀನು ಇಲ್ಲಿ ವಿಳಂಬಮಾಡಬಾರದು. ನೀನು ಅನೇ ಕಾವರ್ತಿ ರಾಜನೀತಿಗಳನ್ನೆಲ್ಲ ಕೇಳಿಬಲ್ಲವನಾದುದರಿಂದ ನಾನು ನಿನಗೆ ಹೇಳಿ ತಿಳಿಸಬೇಕಾದುದೇನೂ ಇಲ್ಲ. ಇಷ್ಟು ಸಾಕು. ನೀನು ಹೊರಡು' ಎಂದನು. ಅದಕ್ಕಾ ಯುಧಿಷ್ಠಿರನು 'ಓ ಧರ್ಮಜ್ಞಾ! ನಿನ್ನಲ್ಲಿ ನಿರ್ದೋ ಷಿಯಾಗಿ ನಡೆಯುತ್ತಿರುವ ನನ್ನನ್ನು ಮಾತ್ರ ನೀನು ಹೀಗೆ ದೂರಮಾಡ ಬೇಡ. ನನ್ನ ಸಹೋದರರೂ, ಇತರ ಅನುಚರರೂ ತಮ್ಮ ಇಷ್ಟದಂತೆ ಹೋಗಲಿ. ನಾನೊಬ್ಬನುಮಾತ್ರ ನಿನ್ನನ್ನೂ, ನನ್ನ ತಾಯಿಯರಿಬ್ಬ ರನ್ನೂ ಅನುವರ್ತಿಸುವೆನು' ಎಂದನು. ಆಗ ಗಾಂಧಾರಿಯು 'ಕುಮಾರಾ! ಹಾಗೆನ್ನಬೇಡ! ನನ್ನ ಮಾತನ್ನು ಕೇಳು! ನನ್ನ ಮಾವನ ಪಿಂಡವೂ,

ಕುಲವೂ ಈಗ ನಿನ್ನನ್ನು ಆಶ್ರಯಿಸಿದೆ. ಆದುದರಿಂದ ನೀನು ಹೊರಡು. ನಿನ್ನಿಂದ ನಾವು ಪೂಜಿತರಾದೆವು. ಇನ್ನು ಸಾಕು ಹೊರಡು! ತಂದೆಯ ಆಜ್ಞೆಯನ್ನು ಅನುಸರಿಸಬೇಕಾದುದು ನಿನ್ನ ಕರ್ತವ್ಯವು' ಎಂದಳು. ಗಾಂಧಾರಿಯ ಮಾತನ್ನು ಕೇಳಿದಮೇಲೆ ಯುಧಿಷ್ಠಿರನು ತನ್ನ ತಾಯಿಯಾದ ಕುಂತಿಯನ್ನು ನೋಡಿ, ಸ್ನೇಹಬಾಷ್ಪಗಳಿಂದ ಕಲಗಿದ ಕಣ್ಣುಗಳನ್ನೊರೆಸಿಕೊಳ್ಳುತ್ತ, ವಿನಯದಿಂದ 'ಅಮ್ಮಾ! ರಾಜನೂ, ಗಾಂಧಾರಿಯೂ ನನ್ನನ್ನು ಇಲ್ಲಿಂದ ಹೊರಡುವಂತೆ ನಿರ್ಬಂಧಿಸುತ್ತಿರುವರು. ನಿನ್ನಲ್ಲಿಯೇ ನಟ್ಟಮನಸ್ಸುಳ್ಳ ನಾನು ನಿನ್ನನ್ನು ಬಿಟ್ಟು ಹೇಗೆ ಹೋಗಲಿ? ಆದರೆ 'ಓ ಧರ್ಮಚಾರಿಣಿ! ನಿಮ್ಮ ತಪಸ್ಸಿಗೆ ಅಡ್ಡಿಮಾಡುವುದೂ ನನಗೆ ಸಮ್ಮತವಿಲ್ಲ ತಪಸ್ಸಿಗಿಂತಲೂ ಮೇಲಾದುದಿಲ್ಲ. ತಪಸ್ಸಿನಿಂದಲೇ ಬ್ರಹ್ಮಪ್ರಾಪ್ತಿಯಾಗುವುದು. ಆದುದರಿಂದ ನನ್ನ ಮನಸ್ಸೂ ಈಗ ತಪಸ್ಸಿನಲ್ಲಿಯೇ ಅಧಿಕಾಸಕ್ತವಾಗಿರುವುದು. ನಾನು ಇಲ್ಲಿಂದ ಹಿಂತಿರುಗಿ ಹೋದರೂ, ಮೊದಲಿನಂತೆ ನನಗೆ ರಾಜಕಾರ್ಯಗಳಲ್ಲಿ ಬುದ್ಧಿಯು ಸರಿಯಾಗಿ ಪ್ರವರ್ತಿಸದು. ಅಲ್ಲದೆ ಈಗ ಸಮಸ್ತ ಭೂಮಿಯೂ ಕೇವಲ ಶೂನ್ಯಪ್ರಾಯವಾಗಿದೆ. ಅದು ನನಗೆ ಅಷ್ಟಾಗಿ ಆಸೆಹುಟ್ಟಿಸುವಹಾಗೂ ಇಲ್ಲ. ನಮ್ಮ ಬಂಧುಗಳೆಲ್ಲರೂ ಹೋದರು ಮೊದಲಿದ್ದ ಸೇನಾಬಲವೂ ಈಗ ನಮಗಿಲ್ಲ ನಮ್ಮ ಬಂಧುಗಳಾದ ಪಾಂಚಾಲರೆಲ್ಲರೂ ಸತ್ತು, ಆ ವಂಶದಲ್ಲಿ ಕೆಲವು ಕನ್ನಿಕೆಯರುಮಾತ್ರ ಉಳಿದಿರುವರು. ಅವರ ವಂಶೋದ್ಧಾರಕ್ಕಾದರೂ ಒಬ್ಬ ಪುರುಷನಿರುವಹಾಗೆ ತೋರಲಿಲ್ಲ. ಅವರೆಲ್ಲರೂ ಪ್ರಾಯಕವಾಗಿ ದ್ರೋಣಾಸ್ತ್ರದಿಂದಲೇ ಯುದ್ಧದಲ್ಲಿ ಭಸ್ಮೀಭೂತರಾದರು. ಆಗ ಸತ್ತುಳಿದ ಅಲ್ಪಸ್ವಲ್ಪ ಮಂದಿಯೂ ಸೌಪ್ತಿಕವಧೆಯಲ್ಲಿ ದ್ರೋಣಪುತ್ರನಿಂದ ಸಂಹರಿಸಲ್ಪಟ್ಟರು. ಹಾಗೆಯೇ ಆ ರಾತ್ರಿಯ ಕೊಲೆಯಲ್ಲಿ, ಚೇದಿಗಳೂ, ಮತ್ಸ್ಯರೂ, ಶ್ರೀಕೃಷ್ಣನನ್ನು ಹಿಂಬಾಲಿಸಿ ಬಂದಿದ್ದ ಯಾದವಕುಲವೂ ನಿಶ್ಶೇಷವಾಗಿ ಹತವಾಯಿತು. ಇದನ್ನೆಲ್ಲ ನೋಡಿದ ನಾನು ಇನ್ನುಮೇಲೆ ಧರ್ಮಕ್ಕಾಗಿ ಆಸೆಪಡುವೆನೇ ಹೊರತು, ಸಂಪತ್ತಿಗಾಗಿ ಆಸೆಪಡುವಹಾಗಿಲ್ಲ. ನಮ್ಮೆಲ್ಲರನ್ನೂ ನೀನು ಅನುಗ್ರಹದೃಷ್ಟಿಯಿಂದ ನೋಡು. ಇನ್ನುಮೇಲೆ ನಿನ್ನ ದರ್ಶನವೇ ನಮಗೆ ದುರ್ಲಭವಾಗುವುದು. ಈ ರಾಜನೂ ಈಗ ಅತಿಕಠಿನ

ತಪಸ್ಸನ್ನಾರಂಭಿಸುವುದಾಗಿರುವನು' ಎಂದನು ಆಗ ಸಹದೇವನು ಯುಧಿಷ್ಠಿರನನ್ನು ನೋಡುತ್ತ ಕಣ್ಣೀರು ತುಂಬಿಕೊಂಡು 'ಅಣ್ಣಾ! ನಾನು ಈ ನಮ್ಮ ತಾಯಿಯನ್ನು ಅಗಲಿರಲಾರೆನು. ನೀನು ಹೋಗಿ ರಾಜ್ಯವನ್ನು ಪಾಲಿಸು. ನಾನು ಇಲ್ಲಿಯೇ ಇವರೊಡನೆ ತಪಸ್ಸನ್ನು ನಡೆಸುವೆನು. ಆ ತಪಸ್ಸಿನಿಂದಲೇ ನನ್ನ ಶರೀರವನ್ನು ಶೋಷಿಸಿಬಿಡುವೆನು. ಈ ತಂದೆ ತಾಯಿಗಳ ಪಾದಶುಶ್ರೂಷೆಯಿಂದಲೇ ಈ ನನ್ನ ದೇಹವನ್ನು ನೀಗಿಬಿಡುವೆನು' ಎಂದನು. ಇದನ್ನು ಕೇಳಿ ಕುಂತಿಯು ಸಹದೇವನನ್ನು ಮೈದಡವಿ 'ಕುಮಾರಾ! ಬೇಡ! ನೀನು ಹೀಗೆ ಹೇಳಬಾರದು ನನ್ನ ಮಾತನ್ನು ಕೇಳು! ನೀನೂ ಹಿಂತಿರುಗಿ ರಾಜ್ಯಕ್ಕೆ ಹೋಗು. ನಿಮಗೆ ಮುಂದಿನದೆಲ್ಲ ಶುಭಕರಗಳಾಗಲಿ! ಶಾಂತಚಿತ್ತರಾಗಿರಿ ನೀವು ಇಲ್ಲಿದ್ದರೆ ನಮ್ಮ ತಪಸ್ಸಿಗೆ ಅಡ್ಡಿಯಾಗುವುದು ನಿಮ್ಮಲ್ಲಿ ನನಗಿರುವ ಪುತ್ರಸ್ನೇಹವು ನನ್ನನ್ನು ತಪಸ್ಸಿನಲ್ಲಿ ಸ್ಥಿರವಾಗಿ ನಿಲ್ಲಗೊಡದು. ಆದುದರಿಂದ ಕುಮಾರಾ! ನೀನು ಹೊರಡು. ನಮಗೆ ಆಯುಃಕಾಲವೂ ಇನ್ನು ಸ್ವಲ್ಪವೇ ಉಳಿದಿರುವುದು ಇನ್ನು ಹೊರಡಿರಿ' ಎಂದಳು ಆಗ ಯುಧಿಷ್ಠಿರ ಸಹದೇವರಿಬ್ಬರೂ ತಾಯಿಯ ನಾನಾವಿಧ ಸಮಾಧಾನ ವಾಕ್ಯಗಳಿಂದಲೂ, ಅವಳ ನಿರ್ಬಂಧದಿಂದಲೂ ಮರುಮಾತಾಡಲಾರದೆ, ಅಲ್ಲಿಂದ ಹಿಂತಿರುಗಲು ಅವಳ ಅನುಮತಿಯನ್ನು ಪಡೆದು, ಅಲ್ಲಿಂದ ಧೃತರಾಷ್ಟ್ರನ ಬಳಿಗೆ ಬಂದು ನಮಸ್ಕರಿಸಿ, ಅವನ ಅನುಜ್ಞೆಯನ್ನು ಕೇಳಿದರು ಆಗ ಯುಧಿಷ್ಠಿರನು 'ಜನಕಾ! ಇನ್ನು ನಾವು ರಾಜ್ಯಕ್ಕೆ ಹೊರಡುವೆವು. ನಿನ್ನ ಮಂಗಳಾಶೀರ್ವಾದಗಳನ್ನು ಪಡೆದುಹೋಗಲು ಬಂದೆವು ನಾವು ಇನ್ನು ದುಃಖವನ್ನು ಬಿಟ್ಟೆವು' ಎಂದನು. ಧೃತರಾಷ್ಟ್ರನು ಯುಧಿಷ್ಠಿರನನ್ನು ಕೊಂಡಾಡಿ, ಜಯಾಶೀರ್ವಾದವಮಾಡಿ, ಪ್ರಯಾಣಕ್ಕೆ ಅನುಮತಿಸಿದನು. ಭೀಮನಿಗೂ ಸಮಾಧಾನಗಳನ್ನು ಹೇಳಿದನು. ಭೀಮನು ವಿಧೇಯತೆಯಿಂದ ಅಂಗೀಕರಿಸಿದನು. ಆಮೇಲೆ ಧೃತರಾಷ್ಟ್ರನು ಅರ್ಜುನನನ್ನೂ, ನಕುಲಸಹದೇವರನ್ನೂ ಆಲಿಂಗಿಸಿ, ಹೋಗಿಬರುವಂತೆ ಹೇಳಿದನು. ಎಲ್ಲರೂ ಗಾಂಧಾರಿಯ ಕಾಲಿಗೆ ವಂದಿಸಿ ಅವಳ ಅನುಮತಿಯನ್ನು ಕೇಳಿದರು. ಅವಳು ಆ ಮಕ್ಕಳ ಶಿರಸ್ಸನ್ನಾಘ್ರಾಣಿಸಿ, ಅವರ ಮೈದಡವಿ ಹೋಗಿಬರುವಂತೆ ಹೇಳಿ

ದಳು. ಅವರೆಲ್ಲರೂ ಅವಳಿಗೆ ಪ್ರದಕ್ಷಿಣ ಮಾಡಿದರು. ತಾಯಿಯ ಕೆಚ್ಚಲಿನಿಂದ ತಪ್ಪಿಸಿದ ಸಣ್ಣ ಕರುಗಳಂತೆ ಅವರು, ಅವಳನ್ನು ಬಿಟ್ಟುಹೋಗಲಾರದೆ, ಬಾರಿಬಾರಿಗೂ ಅವಳನ್ನೇ ನೋಡುತ್ತಿದ್ದರು. ದ್ರೌಪದಿ ಮೊದಲಾದ ಸ್ತ್ರೀಯರೂ ಅತ್ತೆ ಮಾವಂದಿರನ್ನು ಉಚಿತ ಗೌರವದಿಂದ ಆದರಿಸಿ, ಅತ್ತೆಯರಿಂದ ಆಶೀರ್ವಾದಗಳನ್ನೂ, ಮುಂದೆ ನಡೆದುಕೊಳ್ಳುವ ವಿಷಯದಲ್ಲಿ ಉಚಿತ ಬುದ್ಧಿವಾದಗಳನ್ನೂ ಪಡೆದು ಅಲ್ಲಿಂದ ಹೊರಟರು. ಈ ಪ್ರಯಾಣ ಸನ್ನಾಹದಲ್ಲಿ 'ಹೂಡಿರಿ! ಹೂಡಿರಿ!' ಎಂಬ ಸಾರಥಿಗಳ ಕೂಗಾಟವೂ, ಆನೆ, ಕುದುರೆ, ಒಂಟೆಗಳ ಧ್ವನಿಯೂ ಪ್ರಬಲವಾಯಿತು. ಯುಧಿಷ್ಠಿರನು ತನ್ನ ಪತ್ನೀಪರಿವಾರಾದಿಗಳೊಡನೆ ಹಸ್ತಿನಾಪುರಕ್ಕೆ ಹೊರಟನು.

ಇದು ಮೂವತ್ತೆಂಟನೆಯ ಅಧ್ಯಾಯವು.

# ನಾರದಾಗಮನಪರ್ವವು.

{ನಾರದನು ಹಸ್ತಿನಾಪುರಕ್ಕೆ ಬಂದು, ಧೃತರಾಷ್ಟ್ರನೇ ಮೊದಲಾದವರು ಸ್ವರ್ಗಸ್ಥರಾದುದನ್ನೂ, ಧೃತರಾಷ್ಟ್ರನ ಆಜ್ಞೆಯಂತೆ ಸಂಜಯನು ಹಿಮಾಲಯಪರ್ವತಕ್ಕೆ ಹೋದುದನ್ನೂ ಯುಧಿಷ್ಠಿರನಿಗೆ ತಿಳಿಸಿದುದು.}

ಓ ರಾಜಾ! ಪಾಂಡವರು ಹಿಂತಿರುಗಿ ಎರಡುವರ್ಷಗಳಾದಮೇಲೆ, ದೇವರ್ಷಿಯಾದ ನಾರದನು ಆಕಸ್ಮಿಕವಾಗಿ ಯುಧಿಷ್ಠಿರನ ಬಳಿಗೆ ಬಂದನು. ಕೌರವರಾಜನಾದ ಯುಧಿಷ್ಠಿರನು ಆತನನ್ನು ಪೂಜಿಸಿ, ಆಸನವನ್ನು ಕೊಟ್ಟು ಕುಳ್ಳಿರಿಸಿ, ವಿಶ್ರಾಂತಿಯನ್ನು ಕೊಟ್ಟಮೇಲೆ ಆತನನ್ನು ಕುರಿತು 'ಮಹಾತ್ಮಾ! ನೀನು ಇಲ್ಲಿಗೆ ಬಂದು ನಮಗೆ ದರ್ಶನವನ್ನು ಕೊಟ್ಟು ಬಹಳಕಾಲವಾಯಿತು. ನಿನಗೆ ಕುಶಲವಷ್ಟೆ? ನಿನಗೆ ಸುಖಾಗಮನವು. ನೀನು ಎಲ್ಲಿಂದ ಬರುತ್ತಿರುವೆ? ಯಾವ ದೇಶಗಳನ್ನು ನೋಡಿಬಂದೆ? ನಿನಗೆ ನನ್ನಿಂದಾಗಬೇಕಾದುದೇನು? ತಿಳಿಸು. ನೀನು ಬ್ರಾಹ್ಮಣಶ್ರೇ

ಷ್ಠನು. ಅದರಮೇಲೆ ಈಗ ನಮ್ಮಲ್ಲಿಗೆ ಪ್ರಿಯನಾದ ಅತಿಥಿಯಾಗಿ ಬಂದಿರುವೆ' ಎಂದನು. ಅದಕ್ಕಾ ನಾರದನು 'ಓ ರಾಜಾ! ನಿನ್ನನ್ನು ನೋಡಿ ಬಹಳಕಾಲವಾಯಿತೆಂದೇ ಈಗ ತಪೋವನದಿಂದ ಬಂದೆನು. ನಾನು ಈಗ ಅನೇಕ ಪುಣ್ಯತೀರ್ಥಗಳನ್ನೂ, ಗಂಗೆಯನ್ನೂ ನೋಡಿಬಂದೆನು' ಎಂದನು. ಆಗ ಯುಧಿಷ್ಠಿರನು 'ಓ ಭಗವಂತಾ! ಗಂಗಾತೀರದಿಂದ ಬಂದವರು ಅಲ್ಲಿ ಮಹಾತ್ಮನಾದ ಧೃತರಾಷ್ಟ್ರನು ಉಗ್ರತಪಸ್ಸನ್ನು ಮಾಡುತ್ತಿರುವುದಾಗಿ ಹೇಳುವರು. ಆತನನ್ನು ನೀನೂ ಅಲ್ಲಿ ನೋಡಿಬಂದಿರಬೇಕಲ್ಲವೇ? ಕೌರವಶ್ರೇಷ್ಠನಾದ ಆತನೂ, ಗಾಂಧಾರಿಯೂ, ಸೂತಪುತ್ರನಾದ ಸಂಜಯನೂ ಕ್ಷೇಮದಿಂದಿರುವರೇ? ಆ ನನ್ನ ತಂದೆಯು ಈಗ ಹೇಗಿರುವನು? ನೀನು ಆ ಅರಸನನ್ನು ನೋಡಿದ್ದರೆ, ಅವನ ಸಂಗತಿಯನ್ನು ನಾನು ಕೇಳಲಪೇಕ್ಷಿಸುವೆನು' ಎಂದನು.

ಆಗ ನಾರದನು 'ಓ ಮಹಾರಾಜಾ! ಆ ತಪೋವನದಲ್ಲಿ ನಾನು ನೋಡಿಬಂದ, ಮತ್ತು ಕೇಳಿದ ಕೆಲವು ವಿಷಯಗಳನ್ನು ಯಥಾವತ್ತಾಗಿ ತಿಳಿಸುವೆನು ಕೇಳು. ನೀವು ಆ ವನದಿಂದ ಹಿಂತಿರುಗಿದಮೇಲೆ, ನಿನ್ನ ತಂದೆಯು ಗಾಂಧಾರಿ, ಕುಂತಿ, ಸಂಜಯನು, ಪುರೋಹಿತನು, ಇವರೆಲ್ಲರೊಡನೆ, ಅಗ್ನಿಹೋತ್ರವನ್ನೂ ಸಾಗಿಸಿಕೊಂಡು ಕುರುಕ್ಷೇತ್ರದಿಂದ ಗಂಗಾದ್ವಾರಕ್ಕೆ ಹೋದನು. ನಿನ್ನ ತಂದೆಯಾದ ಆ ರಾಜರ್ಷಿಯು ಕೇವಲ ವಾಯುಭಕ್ಷಕನಾಗಿ, ಮುಂದೆ ಅಗ್ನಿಯನ್ನಿಟ್ಟುಕೊಂಡು, ಉಗ್ರತಪಸ್ಸನ್ನು ಹೂಡಿದನು. ಮಹಾತಪಸ್ವಿಯಾದ ರಾಜನು ಆ ವನದಲ್ಲಿರುವ ಎಲ್ಲಾ ಮುನಿವರರಿಂದಲೂ ಪೂಜಿಸಲ್ಪಟ್ಟು, ದೇಹದಲ್ಲಿ ಅಸ್ಥಿ ಚರ್ಮಮಾತ್ರಾವಶಿಷ್ಟನಾಗಿ ಆರುತಿಂಗಳ ಕಾಲವಿದ್ದನು. ಗಾಂಧಾರಿಯು ಕೇವಲ ಜಲಾಹಾರದಿಂದಲೂ, ಕುಂತಿಯು ಮಾಸೋಪವಾಸವ್ರತದಿಂದಲೂ, ಸಂಜಯನು ಆರುಹೊತ್ತಿಗೊಮ್ಮೆಮಾತ್ರ ಭುಜಿಸುತ್ತಲೂ ತಪಸ್ಸುಮಾಡುತಿದ್ದರು. ಆಗ ಆ ವನದಲ್ಲಿ ರಾಜನು ನೋಡುತ್ತಿದ್ದರೂ, ನೋಡದಿದ್ದರೂ ಪುರೋಹಿತರು ವಿಧ್ಯುಕ್ತರೀತಿಗಳಲ್ಲಿ ಅಗ್ನಿಕಾರ್ಯಗಳನ್ನು ನಡೆಸುತಿದ್ದರು. ಆಮೇಲೆ ಆ ಅರಸನು ತನ್ನ ನಿವಾಸಸ್ಥಳವನ್ನು ಬಿಟ್ಟು ವನಮಾರ್ಗದಲ್ಲಿ ಹೊರಟನು.

ನಿನ್ನ ಇಬ್ಬರು ಮಾತೆಯರೂ ಒಂದಾಗಿ ಲವನನ್ನು ಹಿಂಬಾಲಿಸಿ ಹೋ
ಟರು. ಸಂಜಯನೂ ಆತನನ್ನು ಹಿಂಬಾಲಿಸಿದನು ಸಮವಿಷಮಸ್ಥ
ಗಳೊಗೆಲ್ಲ ಸಂಜಯನು ಅರಸನಿಗೆ ದಾರಿ ತೋರಿಸುತ್ತ ಕರೆದುಕೊಂಡು
ಹೋಗುತ್ತಿದ್ದನು. ಕುಂತಿಯು ಗಾಂಧಾರಿಗೆ ಕಣ್ಣಾಗಿದ್ದಳು. ಗಂಗಾ
ತೀರದಲ್ಲಿ ಹೀಗೆ ಹೋಗುತ್ತಿರುವಾಗ, ಒಮ್ಮೆ ಧೃತರಾಷ್ಟ್ರನು ಒಂದುಕಡೆ
ಗಂಗೆಯಲ್ಲಿಳಿದು ಸ್ನಾನಮಾಡಿ, ತೀರದಲ್ಲಿರುವ ಒಂದಾಶ್ರಮಕ್ಕಿದಿರಾಗಿ
ಹೊರಟನು. ಇಷ್ಟರಲ್ಲಿಯೇ ದೊಡ್ಡ ಗಾಳಿಯೆದ್ದಿತು. ದೊಡ್ಡ ಕಾಡು
ಗಿಚ್ಚು ಹತ್ತಿಕೊಂಡು, ಆ ವನದಲ್ಲಿ ನಾಲ್ಕು ಕಡೆಗಳಲ್ಲಿಯೂ ಹರಡಿ ವನ
ವೆಲ್ಲವನ್ನೂ ಸುಟ್ಟಿತು. ಅಲ್ಲಿದ್ದ ಜಿಂಕೆ, ಹಾವು, ಮುಂತಾದ ಜಂತುಗಳೆಲ್ಲ
ದಗ್ಧವಾಗುತಿದ್ದುವು ಹಂದಿಗಳು ಗುಂಪುಗುಂಪಾಗಿ ಅಲ್ಲಿದ್ದ ತಟಾಕಗ
ಳನ್ನು ಸೇರಿದುವು. ಹೀಗೆ ಆ ವನವು ಬೆಂಕಿಹಿಡಿದು ಉರಿಯುತ್ತಿರುವಾಗ,
ಬಹುದಿನಗಳಿಂದ ಆಹಾರವಿಲ್ಲದೆ ಶಕ್ತಿಗುಂದಿದ್ದ ರಾಜನೂ, ನಿನ್ನ ಮಾತೆ
ಯರಿಬ್ಬರೂ ಆ ಅಗ್ನಿಯನ್ನು ತಪ್ಪಿಸಿಕೊಂಡುಹೋಗಲು ಅಶಕ್ತರಾದರು
ಆಗ ರಾಜನು ಸಂಜಯನನ್ನು ಕುರಿತು 'ಓ ಸಂಜಯಾ! ನೀನಾದರೂ
ಈ ಅಗ್ನಿಯಿಂದ ತಪ್ಪಿಸಿಕೊಂಡು ಬೇರೆಕಡೆಗೆ ಹೋಗು. ನಾವು ಇದೇ
ಅಗ್ನಿಯಲ್ಲಿ ದಗ್ಧರಾಗಿ ಉತ್ತಮಗತಿಯನ್ನು ಪಡೆಯುವೆವು' ಎಂದನು
ಆಗ ಸಂಜಯನು 'ಓ ರಾಜಾ! ಈ ಅಗ್ನಿಯಿಂದ ನಿನಗೆ ದುರ್ಮರಣವು
ಸಂಭವಿಸಬಾರದು. ಇದರಿಂದ ತಪ್ಪಿಸುವ ಉಪಾಯವೂ ನನಗೆ ತೋರ
ಲಿಲ್ಲ. ನಾನೇನು ಮಾಡಲಿ? ನೀನೇ ಈಗ ಮುಂದೆ ಮಾಡಬೇಕಾದು
ದನ್ನು ತಿಳಿಸಬೇಕು' ಎಂದನು. ಆಗ ಆ ರಾಜನು ಸಂಜಯನನ್ನು ಕುರಿ
ತು 'ಓ ಸಂಜಯಾ! ದೇಹತ್ಯಾಗಕ್ಕಾಗಿಯೇ ಉದ್ದೇಶಿಸಿ ಮನೆಯಿಂದ
ಹೊರಟುಬಂದ ನಮಗೆ, ಈ ಮರಣವು ಅನಿಷ್ಟವಲ್ಲ. ಬೆಂಕಿ, ನೀರು, ಗಾಳಿ
ಅನಶನವ್ರತ, ಇವೆಲ್ಲ ತಪಸ್ವಿಗಳ ದೇಹತ್ಯಾಗಕ್ಕೆ ಪ್ರಶಸ್ತಗಳೇ! ಆದುದ
ರಿಂದ ನೀನು ಹೊರಡು. ತಾಮಸವು ಬೇಡ' ಎಂದನು.

ಆಮೇಲೆ ರಾಜನು ಮನಸ್ಸನ್ನು ಸ್ಥಿರಪಡಿಸಿಕೊಂಡು, ಗಾಂಧಾರಿ
ಮತ್ತು ಕುಂತಿ ಇವರೊಡನೆ ಅಲ್ಲಿ ಪೂರ್ವಾಭಿಮುಖವಾಗಿ ಕುಳಿತುಬಿಟ್ಟನು

ಸಂಜಯನು ಆ ಸ್ಥಿತಿಯಲ್ಲಿದ್ದ ರಾಜನನ್ನು ಕಂಡು, ಆತನಿಗೆ ಪ್ರದಕ್ಷಿಣ ಮಾಡಿ 'ಓ ಪ್ರಭೂ! ಆತ್ಮಯೋಗವನ್ನು ಹಿಡಿ' ಎಂದನು. ವ್ಯಾಸಪುತ್ರನೂ, ವಿದ್ವಾಂಸನೂ ಆದ ಆ ರಾಜನು ಸಂಜಯನ ಮಾತಿನಂತೆ ಇಂದ್ರಿಯಗಳನ್ನು ತಡೆದು ಕಟ್ಟಿಗೆಯಂತೆ ಕುಳಿತಿದ್ದನು. ಕೂಡಲೆ ಮಹಾಭಾಗ್ಯಶಾಲಿನಿಯಾದ ಗಾಂಧಾರಿಯೂ, ನಿನ್ನ ತಾಯಿಯಾದ ಕುಂತಿಯೂ, ನಿನ್ನ ಪಿತನಾದ ಆ ರಾಜನೂ ಕಾಡುಗಿಚ್ಚಿನಲ್ಲಿ ಒಂದಾದರು. ಸಂಜಯನುಮಾತ್ರ ಆ ಅಗ್ನಿಯಿಂದ ಹೇಗೋ ತಪ್ಪಿಸಿಕೊಂಡು ಗಂಗಾತೀರದಲ್ಲಿ ಈಗ ತಾಪಸರೊಡನೆ ಕುಳಿತಿದ್ದುದನ್ನು ಕಂಡೆನು. ಸಂಜಯನು ಅಲ್ಲಿದ್ದ ತಾಪಸರಿಗೆಲ್ಲ ಇದೆಲ್ಲವನ್ನೂ ತಿಳಿಸಿದಮೇಲೆ, ಅವರ ಅನುಮತಿಪಡೆದು, ತಾನೂ ಹಿಮಾಲಯಪರ್ವತವನ್ನು ಕುರಿತು ಹೊರಟನು. ಆ ಕೌರವರಾಜನೂ, ನಿನ್ನ ತಾಯಿಯರಾದ ಗಾಂಧಾರೀ ಕುಂತಿಯರೂ ಈ ವಿಧವಾಗಿ ದೇಹತ್ಯಾಗಮಾಡಿದರು ಅಲ್ಲಿಗೆ ಆಕಸ್ಮಿಕವಾಗಿ ಹೋದ ನಾನು, ಆ ರಾಜನ ಶರೀರವನ್ನೂ, ಇಬ್ಬರು ದೇವಿಯರ ಶರೀರವನ್ನೂ ನೋಡಿದೆನು ಆಮೇಲೆ ಅಲ್ಲಲ್ಲಿದ್ದ ತಪೋಧನರು ಆ ತಪೋವನಕ್ಕೆ ಬಂದು, ಆ ಅರಸನ ನಿಷ್ಠೆಯನ್ನೂ, ಅವನ ಗತಿಯನ್ನೂ ಕೇಳಿದಾಗಲೂ ಅವರು ಅದಕ್ಕಾಗಿ ದುಃಖಿಸಲಿಲ್ಲ. ರಾಜನೂ, ಇಬ್ಬರು ದೇವಿಯರೂ ಅಲ್ಲಿ ದಗ್ಧರಾದುದನ್ನು ಆ ತಾಪಸರಿಂದಲೇ ನಾನೂ ಕೇಳಿದೆನು. ರಾಜೋತ್ತಮಾ! ವ್ಯಸನಪಡಬೇಡ! ರಾಜನೂ, ಗಾಂಧಾರಿಯೂ, ನಿನ್ನ ತಾಯಿಯೂ ಅಗ್ನಿಯ ಸಂಬಂಧದಿಂದ ಈಗಾಗಲೇ ಸ್ವರ್ಗದಲ್ಲಿರುವರು' ಎಂದನು.

ಮಹಾರಾಜಾ! ಧೃತರಾಷ್ಟ್ರನ ಮರಣವೃತ್ತಾಂತವನ್ನು ಕೇಳಿ ಮಹಾತ್ಮರಾದ ಪಾಂಡವರೆಲ್ಲರಿಗೂ ಮಹಾಶೋಕವುಂಟಾಯಿತು. ಪುರವಾಸಿಗಳಾದ ಸ್ತ್ರೀ ಪುರುಷರೆಲ್ಲರೂ ದೀನಸ್ವರದಿಂದ ರೋದಿಸಿದರು. ಯುಧಿಷ್ಠಿರನು ತಾಯಿಯನ್ನು ನೆನೆಸಿಕೊಂಡು ಮಹಾವ್ಯಸನಪಟ್ಟು ಕೈಗಳನ್ನು ಮೇಲಕ್ಕೆತ್ತಿ 'ಹಾ! ಹಾ! ಕಷ್ಟವೇ!' ಎಂದು ರೋದಿಸಿದನು. ಭೀಮಸೇನನೇ ಮೊದಲಾದ ಅವನ ಭ್ರಾತೃಗಳೆಲ್ಲರೂ ಶೋಕದಿಂದ ತಪಿಸುತ್ತ, ಕುಂತಿಯ ಗುಣಗಳನ್ನು ಹೇಳಿ ಹೇಳಿ ಅಳುವುದಕ್ಕಾರಂಭಿಸಿದರು. ದೇವಿ

ಯಾದ ಕುಂತಿಯು ಈ ಸ್ಥಿತಿಗೆ ಗುರಿಯಾದುದನ್ನು ಕೇಳಿ ಆ ಪುರದಲ್ಲೆಲ್ಲ ದೊಡ್ಡ ರೋದನಧ್ವನಿಯೆದ್ದಿತು. ವೃದ್ಧರಾಗಿ, ಪುತ್ರರನ್ನೂ ಕಳೆದು ಕೊಂಡು, ಕೊನೆಗೆ ಅಲ್ಲಿ ದಗ್ಧರಾದ ರಾಜನನ್ನೂ, ಗಾಂಧಾರಿಯನ್ನೂ ಕುರಿತು ಅವರೆಲ್ಲರೂ ಮಹಾವ್ಯಸನಪಟ್ಟರು. ಒಂದು ಮುಹೂರ್ತಕಾಲದ ಮೇಲೆ ಆ ರೋದನಧ್ವನಿಯು ಸ್ವಲ್ಪ ನಿಂತಿತು. ಆಮೇಲೆ ಧರ್ಮರಾಜನು ಧೈರ್ಯದಿಂದ ಕಣ್ಣೀರನ್ನೊರೆಸಿಕೊಂಡು ಹೀಗೆ ಹೇಳುವನು.

ಇದು ಮೂವತ್ತೊಂಭತ್ತನೆಯ ಅಧ್ಯಾಯವು.

{ ಪಾಂಡವರು ಧೃತರಾಷ್ಟ್ರನೇ ಮುಂತಾದವರ ಮರಣ ವೃತ್ತಾಂತವನ್ನು ಕೇಳಿ ವ್ಯಸನಪಟ್ಟುದು. }

ಆಗ ಯುಧಿಷ್ಠಿರನು “ ಆಹಾ! ಮಹಾತ್ಮರೂ, ಉಗ್ರತಪಸ್ವಿಗಳೂ ಆದ ಆ ನಮ್ಮ ತಾಯ್ತಂದೆಗಳಿಗೆ ನಾವು ಇನ್ನೂ ಬದುಕಿರುವಾಗಲೇ ಇಂತಹ ಮರಣವು ಸಂಭವಿಸಿತಲ್ಲವೆ? ಓ ಬ್ರಾಹ್ಮಣಾ! ವಿಚಿತ್ರವೀರ್ಯಪುತ್ರನಾದ ಆ ಧೃತರಾಷ್ಟ್ರನೇ ಹೀಗೆ ಕಾಡುಗಿಚ್ಚಿನಲ್ಲಿ ಸಿಕ್ಕಿ ಬೆಂದನೆಂದರೆ ಮನುಷ್ಯಗತಿಯು ಯಾರಿಗೂ ಹೀಗೆಂದು ತಿಳಿಯಲಸಾಧ್ಯವೆಂದು ತೋರುವುದು. ಯಾವಾತನಿಗೆ ಶ್ರೀಮಂತರೂ, ಮಹಾಬಾಹುಬಲವುಳ್ಳವರೂ ಆದ ನೂರುಮಂದಿ ಪುತ್ರರಿದ್ದರೋ, ಹತ್ತುಸಾವಿರ ಆನೆಯ ಬಲವುಳ್ಳ ಆ ರಾಜನು ಕಾಡುಗಿಚ್ಚಿಗೆ ಸಿಕ್ಕಿ ದಗ್ಧನಾದನಲ್ಲಾ? ಯಾವಾತನನ್ನು ಹಿಂದೆ ಉತ್ತಮಸ್ತ್ರೀಯರು ಬೀಸಣಿಗೆಗಳಿಂದ ಬೀಸುತ್ತಿದ್ದರೋ, ಅವನ ದೇಹವು ಈಗ ಕಾಡುಗಿಚ್ಚಿನಲ್ಲಿ ಬೆಂದು, ಹದ್ದುಗಳಿಂದ ಎಳೆದಾಡಲ್ಪಡುವಂತಾಯಿತೆ? ಹಿಂದೆ ಶಯನಿಸುತಿದ್ದ ಯಾವಾತನನ್ನು ಸೂತಮಾಗಧರ ಸಮೂಹಗಳು ಸ್ತೋತ್ರಮಾಡಿ ಎಚ್ಚರಗೊಳಿಸುತ್ತಿದ್ದುವೋ, ಆ ರಾಜನು ಈಗ ಹದ್ದುಗಳಿಂದಲೂ, ಕಾಗೆಗಳಿಂದಲೂ ಎಳೆಯಲ್ಪಡುವಹಾಗೆ ಭೂಮಿಯಲ್ಲಿ ಮಲಗಿರುವನೇ? ಯಾವಾಕೆಯು ಪುತ್ರರನ್ನು ಕಳೆದುಕೊಂಡರೂ, ಪತಿಯನ್ನು ಹಿಂಬಾಲಿಸಿ, ಪತಿಶುಶ್ರೂಷೆಮಾಡಿ, ಪತಿಲೋಕವನ್ನು ಸೇರಿದಳೋ, ಆ ಗಾಂಧಾರಿಯ ವಿಷಯವಾಗಿ ನಾನು ದುಃಖಿಸಬೇಕಾಗಿಲ್ಲ. ಮಹಾಸಂಪತ್ತಿ

ನಿಂದ ಪ್ರಕಾಶಿಸುತ್ತಿದ್ದ ತನ್ನ ಪುತ್ರರ ಐಶ್ವರ್ಯವೆಲ್ಲವನ್ನೂ ತ್ಯಜಿಸಿ, ವನವಾಸದಲ್ಲಿ ಪ್ರೀತಿಗೊಂಡ ಕುಂತಿಯ ವಿಷಯವಾಗಿ ನಾನು ದುಃಖಿಸುವೆನು. ಅವಳನ್ನಗಲಿ ಮೃತಪ್ರಾಯರಾದ ನಾವು ಇನ್ನೂ ಜೀವಿಸಿರುವೆವು. ಆದುದರಿಂದ ನಮ್ಮ ರಾಜ್ಯವೂ, ನಮ್ಮ ಬಲವೂ, ನಮ್ಮ ಪರಾಕ್ರಮವೂ ಇವುಗಳೆಲ್ಲವೂ ನಿಂದನೀಯಗಳೇ! ಕ್ಷತ್ರಿಯಧರ್ಮವೇ ಹೇಯವಾದುದು. ಓ ಋಷಿಸತ್ತಮಾ! ಅಂತಹ ಕುಂತಿಯು ರಾಜ್ಯವನ್ನು ತ್ಯಜಿಸಿ, ವನವಾಸದಲ್ಲಿ ಆಸಕ್ತಳಾದುದರಿಂದ, ಪ್ರಪಂಚದ ಗತಿಯು ಬಹು ವಿಚಿತ್ರವಾದುದು ಯುಧಿಷ್ಠಿರನಿಗೂ, ಭೀಮನಿಗೂ, ಅರ್ಜುನನಿಗೂ ತಾಯಿಯೆನಿಸಿದ ಅವಳು ಅನಾಥೆಯಂತೆ ದಗ್ಧಳಾದಳಲ್ಲಾ? ಎಂದು ನನ್ನ ಬುದ್ಧಿಯು ಭ್ರಮೆಗೊಳ್ಳುತ್ತಿರುವುದು. 'ಹಿಂದೆ ಸವ್ಯಸಾಚಿಯು ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಿಪಡಿಸಿದುದೂ ಈಗ ವ್ಯರ್ಥವಾಯಿತು. ಆ ಅಗ್ನಿಯು ಉಪಕಾರಸ್ಮರಣೆಯಿಲ್ಲದ ಕೃತಘ್ನನೆಂದೇ ಈಗ ನನಗೆ ತೋರಿದೆ. ಯಾವಾತನು ಹಿಂದೆ ಬ್ರಾಹ್ಮಣವೇಷವನ್ನು ಧರಿಸಿ ಅರ್ಜುನನಿಂದ ಭಿಕ್ಷೆಬೇಡುತ್ತಬಂದನೋ, ಆ ಅಗ್ನಿಪುರುಷನು ಈಗ ಆ ಅರ್ಜುನನ ತಾಯಿಯನ್ನೇ ಕೊಂದನಲ್ಲಾ? ಆದುದರಿಂದ ಆ ಅಗ್ನಿಗೂ ಆ ಅರ್ಜುನನ ಸತ್ಯಪ್ರತಿಜ್ಞೆಗೂ ಧಿಕ್ಕಾರವಿರಲಿ! ಇಂತಹ ಕೃತಘ್ನನಾದ ಅಗ್ನಿಯೊಡನೆ ಮಹಾತಪಸ್ವಿಯಾದ ರಾಜನಿಗೆ ಸಂಬಂಧವುಂಟಾಯಿತೆಂಬ ವಿಷಯವೇ ನನಗೆ ಈಗ ಮಹಾಕಷ್ಟಕರವಾಗಿ ತೋರುವುದು. ಈ ಭೂಮಿಯನ್ನೆಲ್ಲ ಪಾಲಿಸಿ, ಉಗ್ರತಪಸ್ಸನ್ನು ಹೂಡಿದ ಆ ಕೌರವರಾಜರ್ಷಿಗೆ, ಇಂತಹ ಮರಣವು ಹೇಗೆ ಸಂಭವಿಸಿತೋ? ಆ ನನ್ನ ಪಿತನ ಸಂಗಡಲೇ ಮಂತ್ರಪೂತಗಳಾದ ಅಗ್ನಿಗಳಿರುವಾಗ, ಆತನು ಆ ಮಹಾವನದಲ್ಲಿ ಅಪವಿತ್ರವಾದ ಅಗ್ನಿಯಲ್ಲಿ ಮೃತಿಯನ್ನು ಪಡೆದನೆ? ಮೊದಲೇ ಕೃಶಳಾಗಿ, ಕೇವಲ ಅಸ್ಥಿ ಚರ್ಮರೂಪದಲ್ಲಿದ್ದ ನನ್ನ ತಾಯಿ ಕುಂತಿಯು, ಆ ಮಹಾಭಯವು ಸಂಭವಿಸಿದಾಗ ನಡುಗುತ್ತ, 'ಅಪ್ಪಾ! ಧರ್ಮರಾಜಾ!' ಎಂದು ನನ್ನನ್ನು ಕರೆದು 'ಹಾ! ಭೀಮಾ! ನನ್ನನ್ನು ಈ ಭಯದಿಂದ ಕಾಪಾಡು!' ಎಂದು ಕೂಗಿಡುತ್ತಿರುವಾಗ, ಕಾಡುಗಿಚ್ಚಿನಿಂದ ಸುತ್ತಲೂ ಆವರಿಸಲ್ಪಟ್ಟು ಪ್ರಾಣವನ್ನು ಬಿಟ್ಟಿರಬೇಕೆಂದು ಭಾವಿಸುವೆನು. ಆಕೆಗೆ ತನ್ನ ಎಲ್ಲಾ ಪುತ್ರರಿಗಿಂತಲೂ ಸಹದೇವ

ನಲ್ಲಿ ಪ್ರೀತಿಯು ಹೆಚ್ಚು. ವೀರನೂ, ಮಾದ್ರೀಪುತ್ರನೂ ಆದ ಆತನಾದರೂ ಆಕೆಯನ್ನು ಬಿಟ್ಟು ಅಗಲಿದುದೇ ಇಲ್ಲ'ವೆಂದನು. ಅದನ್ನು ಕೇಳಿ ಇತರ ಪಾಂಡವರೂ ಯುಗಾಂತ್ಯದಲ್ಲಿ ಪ್ರಾಣಿಗಳು ಹೇಗೋ ಹಾಗೆ, ದುಃಖದಿಂದ ಪೀಡಿತರಾಗಿ, ಒಬ್ಬರನ್ನೊಬ್ಬರು ಅಪ್ಪಿಕೊಂಡು ವಿಲಪಿಸಿದರು. ಹಾಗೆ ಅಳುತ್ತಿರುವ ಅವರ ರೋದನಧ್ವನಿಯು, ಅರಮನೆಯ ಎಲ್ಲಾ ಮೇಲಂತಸ್ತುಗಳನ್ನೂ ಭೇದಿಸಿಕೊಂಡು, ಭೂಮ್ಯಾಕಾಶಗಳೊಳಗೆಲ್ಲ ಪ್ರತಿಧ್ವನಿಕೊಡುವಂತೆ ಮೊಳಗಿತು.

ಇದು ನಾಲ್ವತ್ತನೆಯ ಅಧ್ಯಾಯವು.

ಧೃತರಾಷ್ಟ್ರಾದಿಗಳು ದಗ್ಧರಾದುದು ಆತನ ಮಂತ್ರಾಗ್ನಿಯಿಂದಲೇ ಎಂದು ನಾರದನು ತಿಳಿಸಿದುದು. ಯುಧಿಷ್ಠಿರನು ಯುಯುತ್ಸುವಿನಿಂದ ಗಾಂಧಾರೀ ಧೃತರಾಷ್ಟ್ರರಿಗೆ ತರ್ಪಣ ಶ್ರಾದ್ಧಾದಿಗಳನ್ನು ಮಾಡಿಸಿ, ಕುಂತಿಗೆ ತಾನು ಅಪರಕ್ರಿಯೆಗಳನ್ನು ಮಾಡಿದುದು. ಯುಧಿಷ್ಠಿರನ ರಾಜ್ಯಭಾರವು.

ಆಗ ನಾರದನು 'ರಾಜಾ! ವಿಚಿತ್ರವೀರ್ಯಪುತ್ರನಾದ ಆ ಧೃತರಾಷ್ಟ್ರನು, ಸಾಮಾನ್ಯವಾದ ಕಾಡುಗಿಚ್ಚಿನಿಂದ ದಹಿಸಲ್ಪಡಲಿಲ್ಲವೆಂದು ನಾನು ಕೇಳಿದೆನು. ಆದುದರಿಂದ ಆ ವಿಷಯವಾಗಿಯೂ ನೀನು ದುಃಖಪಡಬೇಕಾದುದಿಲ್ಲ ಕೇವಲ ವಾಯುವನ್ನೇ ಆಹಾರವಾಗಿ ತೆಗೆದುಕೊಂಡಿದ್ದ ಆತನು ವನದ ಪ್ರವೇಶಿಸುವವೊದಲು, ಇಷ್ಟಿಯನ್ನು ಮಾಡಿಸಿ, ಅಗ್ನಿಗಳನ್ನು ಅಲ್ಲಿ ಬಿಟ್ಟುಹೋದುದಾಗಿ ಕೇಳಿದೆನು. ಆಮೇಲೆ ಆತನ ಪುರೋಹಿತರು ಆ ಅಗ್ನಿಗಳನ್ನು ನಿರ್ಜನಪ್ರದೇಶವಾದ ವನದಲ್ಲಿ ಹಾಗೆಯೇ ಬಿಟ್ಟು, ಇಷ್ಟಾನುಸಾರವಾಗಿ ಹೊರಟುಹೋದಮೇಲೆ, ಆ ಅಗ್ನಿಯು ಆ ವನದಲ್ಲಿ ಪ್ರಬಲವಾಗಿ ವೃದ್ಧಿಹೊಂದಿತೆಂದೂ ಕೇಳಿದೆನು. ಅದರಿಂದಲೇ ಆ ವನವು ನಾಲ್ಕು ಕಡೆಗಳಲ್ಲಿಯೂ ಹತ್ತಿಕೊಂಡಿತೆಂದೂ ಆ ತಾಪಸರು ಹೇಳಿದರು. ಓ ಭರತಕುಲೋತ್ತಮಾ! ನಾನು ನಿನಗೆ ಹಿಂದೆ ಹೇಳಿದಂತೆ, ಆ ಅರಸನು

ಗಂಗಾತೀರದಲ್ಲಿ ತನ್ನ ಸ್ವಂತವಾದ ಅಗ್ನಿಯಿಂದಲೇ ದಗ್ಧನಾದನು. ಗಂಗಾತೀರದಲ್ಲಿ ನಾನು ಕಂಡ ಮುನಿವರರೆಲ್ಲ ಇದೇ ರೀತಿಯಲ್ಲಿ ನನ್ನೊಡನೆ ಹೇಳಿದರು. ಹೀಗೆ ಆ ರಾಜನು ಮಂತ್ರಾಗ್ನಿಯಲ್ಲಿಯೇ ಸೇರಿ ಉತ್ತಮಗತಿಯನ್ನು ಪಡೆದನು ನೀನು ಆ ರಾಜನ ವಿಷಯವಾಗಿ ದುಃಖಿಸಬೇಡ. ನಿನ್ನ ತಾಯಿಯೂ ಆ ಕುರುರಾಜನ ಸೇವೆಮಾಡಿದುದರಿಂದ ಮಹಾಸಿದ್ಧಿಯನ್ನು ಪಡೆದಿರುವಳು. ಇದರಲ್ಲಿ ಸಂದೇಹವೇ ಇಲ್ಲ. ಇನ್ನು ನೀನು ನಿನ್ನ ಭ್ರಾತೃಗಳೆಲ್ಲರೊಡನೆ ಅವರಿಗೆಲ್ಲ ಉತ್ತರಕ್ರಿಯೆಗಳನ್ನು ಮಾಡಬೇಕು. ಈಗಲೇ ಅದನ್ನು ನಡೆಸು ' ಎಂದನು.

ಆಮೇಲೆ ಪಾಂಡವಜ್ಯೇಷ್ಠನಾದ ಯುಧಿಷ್ಠಿರನು, ತನ್ನ ಸಹೋದರರೊಡನೆಯೂ, ಪತ್ನಿಯರೊಡನೆಯೂ ಪಟ್ಟಣದಿಂದ ಹೊರಟನು. ಪುರಜನರೂ, ದೇಶಜನರೂ ರಾಜಭಕ್ತಿಪುರಸ್ಸರವಾಗಿ, ಒಂದೇ ಬಟ್ಟೆಯನ್ನುಟ್ಟು ಆ ರಾಜಪುತ್ರರನ್ನು ಹಿಂಬಾಲಿಸಿ ಗಂಗೆಗೆ ಹೊರಟರು. ಅವರೆಲ್ಲರೂ ಗಂಗಾತೀರ್ಥದಲ್ಲಿ ಸ್ನಾನಮಾಡಿ, ಯುಯುತ್ಸುವಿನೊಡನೆ ಮಹಾತ್ಮನಾದ ಧೃತರಾಷ್ಟ್ರನಿಗೂ, ಗಾಂಧಾರಿಗೂ, ಕುಂತಿಗೂ ಅವರವರ ಕುಲಗೋತ್ರ ನಾಮಗಳನ್ನು ಹೇಳಿ, ಜಲತರ್ಪಣವನ್ನು ಮಾಡಿದರು. ಅವರೆಲ್ಲರೂ ಸೂತಕನಿವೃತ್ತಿಯಾಗುವವರೆಗೆ ಪಟ್ಟಣದಹೊರಗೇ ವಾಸಮಾಡಿದರು. ಆಗ ಯುಧಿಷ್ಠಿರನು ಶಾಸ್ತ್ರವಿಧಿಯನ್ನರಿತವರೂ, ಆಪ್ತರೂ ಆದ ಮನುಷ್ಯರನ್ನು ಕರೆದು, ಧೃತರಾಷ್ಟ್ರನು ದಗ್ಧವಾದ ಸ್ಥಳಕ್ಕೆ (ಗಂಗಾದ್ವಾರಕ್ಕೆ) ಕಳುಹಿಸಿದನು. ಆ ಗಂಗಾದ್ವಾರದಲ್ಲಿಯೇ ಅವರಿಗೆ ಕ್ರಿಯೆಗಳನ್ನು ಮಾಡಬೇಕೆಂದು ನಿಯಮಿಸಿ, ಆ ಮನುಷ್ಯರಿಗೆ ಬೇಕಾದುದನ್ನೆಲ್ಲ ಕೊಟ್ಟು ಕಳುಹಿಸಿದನು. ಆಮೇಲೆ ಪಾಂಡವರು ಹನ್ನೆರಡನೆಯ ದಿನದಲ್ಲಿ ಶುದ್ಧಿಮಾಡಿಕೊಂಡು, ವಿಧ್ಯುಕ್ತರೀತಿಯಲ್ಲಿ ದಕ್ಷಿಣಾಸಹಿತವಾದ ಶ್ರಾದ್ಧಗಳನ್ನೆಲ್ಲ ಮಾಡಿದರು. ಧೃತರಾಷ್ಟ್ರನನ್ನುದ್ದೇಶಿಸಿ, ಸುವರ್ಣವನ್ನೂ, ಬೆಳ್ಳಿಯನ್ನೂ ಹಸುಗಳನ್ನೂ, ಹೆಚ್ಚು ಬೆಲೆಯುಳ್ಳ ಹಾಸಿಗೆಗಳನ್ನೂ ದಾನಮಾಡಿದನು. ಗಾಂಧಾರಿಯ ಹೆಸರನ್ನೂ, ಕುಂತಿಯ ಹೆಸರನ್ನೂ ಬೇರೆಬೇರೆಯಾಗಿ ಹೇಳಿ ಅನೇಕ ದಾನಗಳನ್ನು ಕೊಟ್ಟನು. ಹಾಸಿಗೆಗಳು, ಭೋಜನಗಳು, ವಾಹನ

ಗಳು, ಮಣಿರತ್ನಗಳು, ಇವುಗಳಲ್ಲಿ ಯಾವುದನ್ನು ಯಾವ ಬ್ರಾಹ್ಮಣನು ಎಷ್ಟೆಷ್ಟು ಅಪೇಕ್ಷಿಸಿದನೋ, ಅವನಿಗೆ ಅಷ್ಟನ್ನೂ ಕೊಟ್ಟನು. ಹಾಗೆಯೇ ತನ್ನ ತಾಯಿಯರಿಬ್ಬರನ್ನೂ ಉದ್ದೇಶಿಸಿ, ವಾಹನವನ್ನೂ, ಹೊದ್ದಿಕೆಯನ್ನೂ, ಭೋಗಗಳನ್ನೂ, ಅಲಂಕೃತರಾದ ದಾಸ ದಾಸೀಜನರನ್ನೂ ದಾನ ಮಾಡಿದನು. ಹೀಗೆ ಮಹಾದಾನಗಳೊಡನೆ ಶ್ರಾದ್ಧಗಳನ್ನು ಮುಗಿಸಿ, ಅಲ್ಲಿಂದ ತಿರುಗಿ ಹಸ್ತಿನಾಪುರಕ್ಕೆ ಹೋದನು. ಇಷ್ಟರಲ್ಲಿ ರಾಜನ ಆಜ್ಞೆಯ ಮೇಲೆ ಹೊರಟಿದ್ದ ಪುರುಷರು, ಮೃತರಾದವರ ಎಲುಬುಗಳನ್ನು ಆರಿಸಿಕೊಂಡು ಅಲ್ಲಿಂದ ಹಿಂತಿರುಗಿ ಬಂದರು ಅವರು ಆ ಎಲುಬುಗಳನ್ನು ಹಲವು ಬಗೆಯ ಮಾಲೆಗಳಿಂದಲೂ, ಚಂದನಗಳಿಂದಲೂ ವಿಧ್ಯುಕ್ತರೀತಿಯಲ್ಲಿ ಪೂಜಿಸಿ, ಗಂಗೆಯಲ್ಲಿ ಬಿಟ್ಟು ಈ ವಿಚಾರವನ್ನು ರಾಜನಿಗೆ ತಿಳಿಸಿದರು. ಆಮೇಲೆ ನಾರದಮಹರ್ಷಿಯು ಧರ್ಮಾತ್ಮನಾದ ಯುಧಿಷ್ಠಿರನನ್ನು ಸಮಾಧಾನಪಡಿಸಿ, ಸಂತೋಷದಿಂದ ಹಿಂತಿರುಗಿದನು. ಯುದ್ಧದಲ್ಲಿ ತನ್ನ ಮಕ್ಕಳನ್ನೆಲ್ಲ ಕಳೆದುಕೊಂಡ ಧೃತರಾಷ್ಟ್ರನು, ತನ್ನ ಜ್ಞಾತಿಗಳಿಗಾಗಿಯೂ, ಸಂಬಂಧಿಗಳಿಗಾಗಿಯೂ, ಮಿತ್ರರಿಗಾಗಿಯೂ, ಭ್ರಾತೃಗಳಿಗಾಗಿಯೂ, ಬಂಧುಗಳಿಗಾಗಿಯೂ ಸದಾ ದಾನಗಳನ್ನು ಕೊಡುತ್ತ, ಮೊದಲು ನಗರದಲ್ಲಿ ಪಾಂಡವರೊಡನೆ ಹದಿನೈದು ವರ್ಷಗಳನ್ನೂ, ವನವಾಸದಲ್ಲಿ ಮೂರುವರ್ಷಗಳನ್ನೂ ಕಳದು, ಕೊನೆಗೆ ದೇಹತ್ಯಾಗಮಾಡಿದನು. ಇತ್ತಲಾಗಿ ಬಂಧುಗಳನ್ನೆಲ್ಲ ಕಳೆದುಕೊಂಡ ಯುಧಿಷ್ಠಿರನೂಕೂಡ, ಮನಸ್ಸಿನಲ್ಲಿ ವಿಶೇಷ ಸಂತೋಷವಿಲ್ಲದಿದ್ದರೂ, ತನ್ನ ರಾಜ್ಯವನ್ನು ಧರ್ಮದಿಂದ ನಡೆಸುತ್ತ ಪ್ರಜೆಗಳನ್ನು ಸುಖದಿಂದ ಪರಿಪಾಲಿಸುತಿದ್ದನು' ಎಂದನು.

ಇದು ನಾಲ್ವತ್ತೊಂದನೆಯ ಅಧ್ಯಾಯವು.

**ಇಲ್ಲಿಗೆ ನಾರದಾಗಮನಪರ್ವವು ಮುಗಿದುದು.**

## ಆಶ್ರಮವಾಸಿಕಪರ್ವವು ಸಂಪೂರ್ಣವು

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀ. ಶ್ರೀ. ಶ್ರೀ.

People's Printing & Publishing House Ltd. Triplicane Madras.

ಶ್ರೀ

ವ್ಯಾಸಮಹರ್ಷಿಪ್ರಣೀತ

# ಶ್ರೀಮಹಾಭಾರತವು

ಕರ್ಣಾಟಕ ವಚನ

## ಮೌಸಲಪರ್ವವು.

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರ್ರು ವಿರಚಿತವು.

ಪ್ರಕಾಶಕರು:

ಕರ್ಣಾಟಕ ಡಿಪ್ಪೋ,

೧/೫೯, ಸನ್ನಿಧಿ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

1935

## All Rights Reserved.

ಕಾಪಿರೈಟ್, ೧೯೩೨–ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಇದರ ಗ್ರಂಥಕರ್ತರಿಗೆ ಸೇರಿದೆ ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಭಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

# ವಿಷಯಾನುಕ್ರಮಣಿಕೆ.


ಅಧ್ಯಾಯ ಪುಟ.

೧. ಯುಧಿಷ್ಠಿರನು ತಮ್ಮಂದಿರೊಡನೆ ರಾಜ್ಯಭಾರಮಾಡುತ್ತ ಸುಖದಿಂದಿರುವಾಗ, ಒಮ್ಮೆ ಇದ್ದಕ್ಕಿದ್ದಹಾಗೆ ಅಶುಭಸೂಚಕಗಳಾದ ಉತ್ಪಾತಗಳು ತಲೆದೋರಿದುದು ಆಮೇಲೆ ಬಲರಾಮಕೃಷ್ಣರೊಡನೆ ಯಾದವರೆಲ್ಲರೂ ಒಬ್ಬರಿಗೊಬ್ಬರು ಹೊಡೆದಾಡಿ ಸತ್ತ ವೃತ್ತಾಂತವು ಪಾಂಡವರ ಕಿವಿಗೆ ಬಿದ್ದುದು . . ೧

೨. ಮುಸಲೋತ್ಪತ್ತಿವೃತ್ತಾಂತವು. ವಿಶ್ವಾಮಿತ್ರಾದಿ ಮುನಿಗಳು ಮೂವರು ದ್ವಾರಕೆಗೆ ಬಂದಿದ್ದಾಗ, ಕೆಲವು ಯಾದವರು ಸಾಂಬನೆಂಬವನಿಗೆ ಗರ್ಭಿಣೀವೇಷವನ್ನು ಹಾಕಿ, ಅವನಿಗೆ ಹುಟ್ಟುವ ಶಿಶುವು ಎಂತದೆಂದು ಆ ಋಷಿಗಳನ್ನು ಕೇಳಿದುದು ಅದಕ್ಕಾ ಮುನಿಗಳು ಕೋಪಗೊಂಡು, ಯಾದವಕುಲವನ್ನೇ ನಿರ್ಮೂಲಮಾಡುವ ಒನಕೆಯೊಂದು ಹುಟ್ಟುವುದೆಂದು ಹೇಳಿದುದು. ಅದರಂತೆಯೇ ಒಂದು ಒನಕೆಯು ಹುಟ್ಟಿದುದು. ಯಾದವರು ಅದನ್ನು ಪುಡಿಮಾಡಿ ಸಮುದ್ರದಲ್ಲಿ ಬಿಸುಟುದು . . . ೩

೩. ದ್ವಾರಕೆಯಲ್ಲಿ ವಿಧವಿಧಗಳಾದ ಮಹೋತ್ಪಾತಗಳು ತಲೆದೋರಿದುದು. ಅದನ್ನು ನೋಡಿ ಶ್ರೀಕೃಷ್ಣನು, ಗಾಂಧಾರಿಯು ತನಗೆ ಕೊಟ್ಟ ಶಾಪವನ್ನು ನೆನೆಸಿಕೊಂಡು, ಅದನ್ನು ಸುಳ್ಳಾಗಿಸಬಾರದೆಂದುದ್ದೇಶಿಸಿ, ಯಾದವರೆಲ್ಲರನ್ನೂ ತೀರ್ಥಯಾತ್ರೆಗೆ ಹೊರಡುವಂತೆ ಭಟರ ಮೂಲಕವಾಗಿ ಸಾರಿಸಿದುದು . . . . ೬

೪. ರಾತ್ರಿ ಯಾದವರಿಗೆ ದುಸ್ಸ್ವಪ್ನಗಳು ಕಾಣಿಸಿದುದು ಯಾದವರು ಕೃಷ್ಣಾಜ್ಞೆಯಿಂದ ಪ್ರಭಾಸತೀರ್ಥಕ್ಕೆ ಹೋಗಿ ಅಲ್ಲಿ ಮದ್ಯಪಾನಮಾಡಿದುದು. ಈ ನಡುವೆ ಸಾತ್ಯಕಿಯು ಸ್ಯಮಂತಕಮಣಿಯ ವೃತ್ತಾಂತವನ್ನು ತೆಗೆದು ಕೃತವರ್ಮನನ್ನು ಬೈದು ಕತ್ತಿಯನ್ನೆತ್ತಿ ಅವನ ತಲೆಯನ್ನು ಕಡಿದುದು. ಯಾದವರಲ್ಲಿ ಅನ್ಯೋನ್ಯಕಲಹವುಂಟಾಗಿ, ಸಮುದ್ರತೀರದಲ್ಲಿದ್ದ ಜೊಂಡುಹುಲ್ಲನ್ನು ಕಿತ್ತುಕೊಂಡು ಹೊಡೆದಾಡಿ ಸತ್ತುದು . . . . ೯

೫. ಬಲಭದ್ರನು ಸರ್ಪಾಕಾರವನ್ನು ತಾಳಿ ಸಮುದ್ರದಲ್ಲಿ ಪ್ರವೇಶಿಸಿಬಿಟ್ಟುದು. ಕೃಷ್ಣನು ತಾನು ಮನುಷ್ಯಶರೀರವನ್ನು ನೀಗುವುದಾಗಿ ಉದ್ದೇಶಿಸಿ ಯೋಗಶಯನದಲ್ಲಿ ಮಲಗಿದ್ದಾಗ, ಒಬ್ಬ ವ್ಯಾಧನು ಹೊಡೆದ ಬಾಣವು ಕೃಷ್ಣನ ಕಾಲಿಗೆ ತಗುಲಿದುದು. ಆ ವ್ಯಾಧನು ಪಶ್ಚಾತ್ತಾಪಪಟ್ಟು ಕೃಷ್ಣನ ಪಾದಗಳಿಗೆ ನಮಸ್ಕರಿಸಿದುದು. ದೇವತೆಗಳು ಆ ವ್ಯಾಧನನ್ನು ಸ್ವರ್ಗಕ್ಕೆ ಕರೆದುಕೊಂಡುಹೋದುದು. ಕೃಷ್ಣನು ದಿವ್ಯರೂಪದಿಂದ ಸ್ವರ್ಗಕ್ಕೆ ಹೊರಟಾಗ ದೇವತೆಗಳು ಪುಷ್ಪವರ್ಷಗಳಿಂದ ಬರಮಾಡಿಕೊಂಡುದು . . ೧

೬. ದಾರುಕನು ಹಸ್ತಿನಾಪುರಕ್ಕೆ ಹೋಗಿ ಯಾದವರ ನಾಶವನ್ನು ಪಾಂಡವರಿಗೆ ತಿಳಿಸಿದುದು. ಅರ್ಜುನನು ದ್ವಾರಕೆಗೆ ಬಂದು ರುಕ್ಮಿಣಿ ಮೊದಲಾದವರನ್ನು ಸಮಾಧಾನಗೊಳಿಸಿ, ವಸುದೇವನ ಬಳಿಗೆ ಬಂದುದು . ೨

೭. ವಸುದೇವನು ತನ್ನ ಮನೆಗೆ ಬಂದ ಅರ್ಜುನನಿಗೆ ಯಾದವರ ನಾಶಕ್ಕೆ ಕಾರಣವನ್ನು ತಿಳಿಸಿದುದು. ಮತ್ತು ಕೃಷ್ಣನು ಹೇಳಿಹೋದ ಮಾತನ್ನು ಅರ್ಜುನನಿಗೆ ತಿಳಿಸಿ, ರಾಜ್ಯ, ಸ್ತ್ರೀ, ಧನಾದಿಗಳನ್ನೆಲ್ಲ ಒಪ್ಪಿಸಿ ತಾನು ಪ್ರಾಣತ್ಯಾಗಮಾಡುವುದಾಗಿ ಹೇಳಿದುದು . . ೨

೮. ಅರ್ಜುನನು ವಸುದೇವನನ್ನು ಸಮಾಧಾನಗೊಳಿಸಿ ದ್ವಾರಕೆಯು ಮುಳುಗಿಹೋಗುವುದಾಗಿ ಅಲ್ಲಿನ ಜನರಿಗೆ ತಿಳಿಸಿ, ಇಂದ್ರಪ್ರಸ್ಥಕ್ಕೆ ಹೋಗಲು ಪ್ರೇರಿಸಿದುದು. ವಸುದೇವನ ದೇಹತ್ಯಾಗವು. ಪುರಜನರು ಅಪರಕ್ರಿಯೆಗಳನ್ನು ಮಾಡಿ, ದ್ವಾರಕೆಯನ್ನು ಬಿಟ್ಟಮೇಲೆ ಸಮುದ್ರದಲ್ಲಿ ದ್ವಾರಕೆಯು ಮುಳುಗಿದುದು ಅರ್ಜುನನು ವಜ್ರಾದಿಗಳನ್ನು ಅವರವರ ರಾಜ್ಯದಲ್ಲಿ ಅಭಿಷೇಕಮಾಡಿದುದು ರುಕ್ಮಿಣಿ ಮೊದಲಾದವರ ಅಗ್ನಿಪ್ರವೇಶವು. ಬೇರೆ ಕೆಲವರು ತಪಸ್ಸಿಗೆ ಹೋದುದು . ೨

೯. ಆಶ್ರಮದಲ್ಲಿದ್ದ ವ್ಯಾಸನಿಗೆ ಅರ್ಜುನನು ಹೋಗಿ ದ್ವಾರಕೆಯ ವೃತ್ತಾಂತವನ್ನು ತಿಳಿಸಿದುದು. ವ್ಯಾಸನು ಯುಧಿಷ್ಠಿರನೇ ಮೊದಲಾದವರೂ ಶೀಘ್ರದಲ್ಲಿ ಸ್ವರ್ಗವನ್ನೇರುವುದಾಗಿ ತಿಳಿಸಿದುದು. ಆಮೇಲೆ ಅರ್ಜುನನು ಹಸ್ತಿನಾವತಿಯಲ್ಲಿ ಯುಧಿಷ್ಠಿರನ ಬಳಿಗೆ ಬಂದು ದ್ವಾರಕಾವೃತ್ತಾಂತವನ್ನು ತಿಳಿಸಿದುದು . . . ೩



# ಶ್ರೀಮಹಾಭಾರತವು

## ಮೌಸಲಪರ್ವವು.

**ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ ।**
**ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್**

ಯುಧಿಷ್ಠಿರನು ತಮ್ಮಂದಿರೊಡನೆ ರಾಜ್ಯಭಾರಮಾಡುತ್ತ ಸುಖದಿಂದಿರುವಾಗ, ಒಮ್ಮೆ ಇದ್ದಕ್ಕಿದ್ದ ಹಾಗೆ ಅಶುಭಸೂಚಕಗಳಾದ ಉತ್ಪಾತಗಳು ತಲೆದೋರಿದುದು. ಆಮೇಲೆ ಬಲರಾಮ ಕೃಷ್ಣರೊಡನೆ ಯಾದವರೆಲ್ಲರೂ ಒಬ್ಬರಿಗೊಬ್ಬರು ಹೊಡೆದಾಡಿ ಸತ್ತ ವೃತ್ತಾಂತವು ಪಾಂಡವರ ಕಿವಿಗೆ ಬಿದ್ದುದು.

ಜನಮೇಜಯನನ್ನು ಕುರಿತು ವೈಶಂಪಾಯನನು “ರಾಜೇಂದ್ರಾ! ನಿನ್ನ ಮುತ್ತಾತಂದಿರು ರಾಜ್ಯಭಾರವನ್ನು ಕೈಕೊಂಡು ಮೂವತ್ತೈದು ವರ್ಷಗಳು ಕಳೆದು, ಮೂವತ್ತಾರನೆಯ ವರ್ಷವು ಆರಂಭಿಸಿದಾಗ, ಯುಧಿಷ್ಠಿರನಿಗೆ ಅಕಸ್ಮಾತ್ತಾಗಿ ಅಲ್ಲಲ್ಲಿ ಅಶುಭಸೂಚಕಗಳಾದ ಉತ್ಪಾತಗಳು ಕಾಣಿಸಿದುವು. ಇದ್ದಕ್ಕಿದ್ದ ಹಾಗೆ ಬಿರುಗಾಳಿಯೆದ್ದು, ಬರಸಿಡಿಲುಗಳು ಬಡಿದುವು. ಶಿಲಾವರ್ಷಗಳನ್ನೆರಚುತ್ತ ಭಯಂಕರವಾದ ಗಾಳಿಯು ನಾನಾ ಪಕ್ಕಗಳಿಂದ ಬೀಸುತಿದ್ದಿತು. ಪಕ್ಷಿಗಳು ಅಪಸವ್ಯವಾಗಿ ಸುತ್ತಿಸುತ್ತಿ ಬರುತಿದ್ದುವು. ಪೂರ್ವಾಭಿಮುಖವಾಗಿ ಹರಿಯುತಿದ್ದ ಮಹಾನದಿಗಳೆಲ್ಲ ಪಶ್ಚಿಮದಕಡೆಗೆ ಪ್ರವಹಿಸಲಾರಂಭಿಸಿದುವು. ದಿಕ್ಕುಗಳನ್ನೆಲ್ಲ ಮಂಜು ಮುಚ್ಚಿ

ಕೊಂಡಿತು! ಕೆಂಡದ ಮಳೆಯನ್ನು ಸುರಿಸುತ್ತ ಆಕಾಶದಿಂದ ಉಲ್ಕೆಗಳು ನೆಲಕ್ಕೆ ಬೀಳುತಿದ್ದುವು. ಧೂಳಿನಿಂದ ಸೂರ್ಯಮಂಡಲವೇ ಮರೆಸಿಹೋದಂತಾಯಿತು. ಉದಯಕಾಲದಲ್ಲಿ ಸೂರ್ಯನು ಕಾಂತಿಹೀನನಾಗಿ, ತಲೆಯಿಲ್ಲದ ಮುಂಡಗಳಿಂದ ಆವೃತನಾದಂತೆ ಕಾಣಿಸಿದನು. ಚಂದ್ರ ಸೂರ್ಯರ ಸುತ್ತಲೂ ಭಯಂಕರಗಳಾದ ಪರಿವೇಷಗಳು ಕಾಣಿಸಿದುವು. ಆ ಪರಿವೇಷಗಳು, ಅಂಚಿನಲ್ಲಿ ದಟ್ಟವಾದ ರಕ್ತವರ್ಣದಿಂದಲೂ, ನಡುವೆ ಬೂದಿಯ ಬಣ್ಣದಿಂದಲೂ, ಅದರ ಪಕ್ಕದಲ್ಲಿ ಕೆಂಪುಬಣ್ಣದಿಂದಲೂಕೂಡಿ, ಈ ಮೂರು ಬಣ್ಣಗಳಿಂದ ಕಾಣಿಸಿದುವು. ಹೀಗೆಯೇ ಇನ್ನೂ ಹಲವು ಬಗೆಯ ಮಹೋತ್ಪಾತಗಳು ಲೋಕಕ್ಕೆಲ್ಲ ಭಯಜನಕವಾಗಿ ಕಾಣಿಸಿದುವು. ಯಾವನ ಅನುಗ್ರಹದಿಂದ ಕೃತಯುಗದಲ್ಲಿದ್ದಹಾಗೆ ಕಲಿಯುಗದಲ್ಲಿಯೂ ಧರ್ಮವು ಲೋಕದಲ್ಲಿ ನೆಲೆಗೊಂಡಿದ್ದಿತೋ, ಯಾವ ಮಹಾತ್ಮನಿಂದಲೇ ಪಾಂಡವರು ಉತ್ತಮಕೀರ್ತಿಗೆ ಭಾಗಿಗಳಾದರೋ, ಅಂತಹ ವಾಸುದೇವನು, ಈ ಲೋಕದಲ್ಲಿ ತನ್ನ ಅವತಾರಪ್ರಯೋಜನವನ್ನು ಮುಗಿಸಿ, ತನ್ನ ಸ್ವೇಚ್ಛೆಯಿಂದ ನಿಜಸ್ಥಾನವಾದ ವೈಕುಂಠಕ್ಕೆ ಹೋಗಲು ಉದ್ದೇಶಿಸಿದೊಡನೆ, ಇತ್ತಲಾಗಿ ಈ ಭಯೋತ್ಪಾತಗಳೆಲ್ಲ ತಲೆದೋರಲಾರಂಭಿಸಿದುವು. ಈ ದುರ್ನಿಮಿತ್ತಗಳನ್ನು ಕಂಡು ಯುಧಿಷ್ಠಿರನು ಭಯಗ್ರಸ್ತನಾಗಿರುವಾಗ, ಸ್ವಲ್ಪದಿನಗಳಿಗೆಲ್ಲ ವೃಷ್ಣಿಗಳೆಲ್ಲರೂ ಒಂದು ಒನಕೆಯಿಂದ ಸಂಹರಿಸಲ್ಪಟ್ಟರೆಂದೂ, ಬಲರಾಮ ಕೃಷ್ಣರಿಬ್ಬರುಮಾತ್ರ ತಪ್ಪಿಸಿಕೊಂಡಿರುವರೆಂದೂ ತಿಳಿದುಬಂದಿತು. ಇದನ್ನು ಕೇಳಿದೊಡನೆ ಯುಧಿಷ್ಠಿರನು ತನ್ನ ತಮ್ಮಂದಿರನ್ನೆಲ್ಲ ಕರೆಸಿಕೊಂಡು, "ಸಹೋದರರೆ! ಈ ಅನರ್ಥವನ್ನು ಕೇಳಿದಿರಲ್ಲವೆ? ಈಗ ನಾವು ಮಾಡಬೇಕಾದುದೇನು?" ಎಂದು ಕೇಳಿದನು. ಬ್ರಾಹ್ಮಣಶಾಪದಿಂದ ವೃಷ್ಣಿಗಳೆಲ್ಲರೂ ಅನ್ಯೋನ್ಯವಾಗಿ ಹೊಡೆದಾಡಿ, ಈ ಅನರ್ಥಕ್ಕೆ ಗುರಿಯಾದುದನ್ನು ಕೇಳಿ ಪಾಂಡವರೆಲ್ಲರೂ ಬಹಳವಾಗಿ ಸಂಕಟಪಟ್ಟರು. ಕೊನೆಗೆ ವಾಸುದೇವನೂ ಈ ಲೋಕವನ್ನು ಬಿಟ್ಟುಹೋದನೆಂಬ ಸಂಗತಿಯೂ ಅವರ ಕಿವಿಗೆ ಬಿದ್ದಿತು. ಸಮುದ್ರವು ಬತ್ತಿಹೋಯಿತೆಂದು ಹೇಳಿದರೆ ಹೇಗೆ ಯಾರೂ ನಂಬಲಾರರೋ, ಹಾಗೆ ಕೃಷ್ಣನು ಮೃತನಾದನೆಂಬ ವಾರ್ತೆಯಲ್ಲಿ ಯಾರಿಗೂ

ನಂಬಿಕೆ ಹುಟ್ಟಲಿಲ್ಲ ಆಗ ಪಾಂಡವರು ವೃಷ್ಣಿಗಳಿಗೆಲ್ಲ ಒಂದು ಒನಕೆಯಿಂದ ಮರಣವುಂಟಾಯಿತೆಂಬ ವಾರ್ತೆಗೆ ಆಶ್ಚರ್ಯಪಟ್ಟು, ಮಹಾ ವ್ಯಸನದಿಂದ ಏನೊಂದೂ ತೋರದೆ ಮಂಕುಹಿಡಿದಂತೆ ಕುಳಿತುಬಿಟ್ಟರು" ಎಂದನು.

ಇದು ಮೊದಲನೆಯ ಅಧ್ಯಾಯವು.

ಮುಸಲೋತ್ಪತ್ತಿವೃತ್ತಾಂತವು. ವಿಶ್ವಾಮಿತ್ರಾದಿ ಮುನಿಗಳು ಮೂವರು ದ್ವಾರಕೆಗೆ ಬಂದಿದ್ದಾಗ, ಕೆಲವು ಯಾದವರು ಸಾಂಬನೆಂಬವನಿಗೆ ಗರ್ಭಿಣೀವೇಷವನ್ನು ಹಾಕಿ, ಅವನಿಗೆ ಹುಟ್ಟುವ ಶಿಶುವು ಎಂತಹದೆಂದು ಆ ಋಷಿಗಳನ್ನು ಕೇಳಿದುದು. ಅದಕ್ಕಾ ಮುನಿಗಳು ಕೋಪಗೊಂಡು, ಯಾದವಕುಲವನ್ನೇ ನಿರ್ಮೂಲಮಾಡುವ ಒನಕೆಯೊಂದು ಹುಟ್ಟುವುದೆಂದು ಹೇಳಿದುದು. ಅದರಂತೆಯೇ ಒಂದು ಒನಕೆಯು ಹುಟ್ಟಿದುದು. ಯಾದವರು ಅದನ್ನು ಪುಡಿಮಾಡಿ ಸಮುದ್ರದಲ್ಲಿ ಬಿಸುಟುದು.

ಆಗ ಜನಮೇಜಯನು "ಓ ಮುನೀಂದ್ರಾ! ಶ್ರೀಕೃಷ್ಣಪರಮಾತ್ಮನ ಕಣ್ಣಿದಿರಾಗಿಯೇ ಅವನ ಕಡೆಯವರಾದ ವೃಷ್ಣಿಗಳು, ಅಂಧಕರು, ಭೋಜರು, ಇವರಿಗೆಲ್ಲ ಇಂತಹ ಮರಣವುಂಟಾದುದು ಹೇಗೆ?" ಎಂದು ಕೇಳಿದನು. ಅದಕ್ಕಾ ವೈಶಂಪಾಯನನು "ರಾಜೇಂದ್ರಾ! ಕೇಳು! ಪಾಂಡವರು ರಾಜ್ಯಕ್ಕೆ ಬಂದಮೇಲೆ ಮೂವತ್ತಾರನೆಯ ವರ್ಷದಲ್ಲಿ ವೃಷ್ಣಿಗಳು ಒಂದು ಮಹಾಪರಾಧವನ್ನು ನಡೆಸಿದರು. ಅದಕ್ಕೆ ಫಲವಾಗಿ ಅವರು ಮೃತ್ಯುಚೋದಿತರಾಗಿ ಒಂದು ಒನಕೆಯ ಸಂಬಂಧದಿಂದ ಒಬ್ಬರಿಗೊಬ್ಬರು ಹೊಡೆದಾಡಿ ಎಲ್ಲರೂ ಸತ್ತರು" ಎಂದನು. ಆಗ ತಿರುಗಿ ಜನಮೇಜಯನು "ಮುನೀಂದ್ರಾ! ಯಾರ ಶಾಪದಿಂದ ವೃಷ್ಣಿಗಳೂ, ಅಂಧ

ಕರೂ, ಭೋಜರೂ ಈ ಅನರ್ಥಕ್ಕೆ ಗುರಿಯಾದರೋ ಆ ಕಥಾವಿಸ್ತರ ವನ್ನೆಲ್ಲ ನೀನು ನನಗೆ ವಿವರಿಸಿ ತಿಳಿಸಬೇಕು" ಎಂದನು.

ಆಗ ವೈಶಂಪಾಯನನು "ಜನಮೇಜಯರಾಜಾ! ಕೇಳು! ಒಮ್ಮೆ ವಿಶ್ವಾಮಿತ್ರನು, ಕಣ್ವನು, ನಾರದನು, ಈ ಮೂವರು ಮಹರ್ಷಿಗಳೂ ದ್ವಾರಕೆಗೆ ಬಂದರು. ಸಾರಣನೇ ಮೊದಲಾದ ಕೆಲವು ಯಾದವರು ಅವರನ್ನು ಕಂಡು, ಕುಚೇಷ್ಟೆಗಾಗಿ, ತಮ್ಮಲ್ಲಿ ಸಾಂಬನೆಂಬ ಯಾದವನಿಗೆ (ಗರ್ಭಿಣಿಯಾದ) ಹೆಂಗಸಿನಂತೆ ವೇಷವನ್ನು ಹಾಕಿದರು. ದೈವಶಾಪಕ್ಕೀಡಾದ ಆ ಯಾದವರು ಸ್ತ್ರೀವೇಷದಲ್ಲಿದ್ದ ಆ ಸಾಂಬನನ್ನು ಕರೆತಂದು, ಆ ಮಹರ್ಷಿಗಳ ಮುಂದೆ ನಿಲ್ಲಿಸಿ 'ಓ ಮಹಾತ್ಮರೆ! ನೀವು ತ್ರಿಕಾಲಜ್ಞರು! ಮಹಾಮಹಿಮೆಯುಳ್ಳವರು! ಇದೋ! ಈಕೆಯು ಮಹಾತೇಜಸ್ವಿಯೆನಿಸಿದ ಬಭ್ರುವೆಂಬ ಯಾದವರಾಜನ ಹೆಂಡತಿ! ಆ ಬಭ್ರುವು ತನಗೆ ಪುತ್ರಸಂತಾನವಾಗಬೇಕೆಂದು ಬಹಳವಾಗಿ ಹಂಬಲಿಸುತ್ತಿರುವನು. ಆದುದರಿಂದ ಇವಳ ಹೊಟ್ಟೆಯಲ್ಲಿ ಹುಟ್ಟುವ ಶಿಶುವೆಂತದು? ಗಂಡೇ? ಅಥವಾ ಹೆಣ್ಣೇ? ಇದನ್ನು ಜ್ಞಾನದೃಷ್ಟಿಯಿಂದ ನೀವು ಚೆನ್ನಾಗಿ ಬಲ್ಲಿರಿ! ಅದನ್ನು ನಮಗೆ ತಿಳಿಸಬೇಕು" ಎಂದು ಕೇಳಿದರು. ನಿಜವಾಗಿಯೂ ತ್ರಿಕಾಲಜ್ಞರಾದ ಆ ಮಹರ್ಷಿಗಳಿಗೆ, ಆಗಲೇ ಅದರ ನಿಜಾಂಶವು ತಿಳಿದುಹೋಯಿತು ತಮ್ಮನ್ನು ಹಾಸ್ಯಮಾಡುವುದಕ್ಕಾಗಿ ಅವರು ಕುಟಿಲಬುದ್ಧಿಯಿಂದ ಬಂದುದಕ್ಕಾಗಿ ಬಹಳ ಕೋಪಗೊಂಡು "ಎಲೈ ಯಾದವರೇ! ಹೌದು! ನಾವು ಇದನ್ನು ಚೆನ್ನಾಗಿ ಬಲ್ಲೆವು! ವೃಷ್ಣ್ಯಂಧಕರು ಮೊದಲಾಗಿ ಯಾದವಕುಲದವರಾದ ನಿಮ್ಮೆಲ್ಲರನ್ನೂ ಕೊಲ್ಲತಕ್ಕ ಉಕ್ಕಿನ ಒನಕೆಯೊಂದು, ಶ್ರೀಕೃಷ್ಣನಿಗೆ ಬಂಧುವಾದ ಮತ್ತು ವೇಷಧಾರಿಯಾದ ಈ ಸಾಂಬನ ಹೊಟ್ಟೆಯಿಂದ ಜನಿಸುವುದು. ದುಶ್ಶೀಲರೂ, ಘಾತುಕರೂ ಆದ ನೀವು, ಒಬ್ಬರಮೇಲೊಬ್ಬರು ಕೋಪಗೊಂಡು, ಆ ಒನಕೆಯಿಂದಲೇ ನಿಮ್ಮ ಕುಲವನ್ನೆಲ್ಲ ನಾಶಮಾಡುವಿರಿ. ಬಲರಾಮ ಕೃಷ್ಣರಿಬ್ಬರನ್ನು ಬಿಟ್ಟು ಉಳಿದ ಯಾದವಕುಲವೆಲ್ಲ ಅದರಿಂದಲೇ ನಷ್ಟವಾಗುವುದು. ಆಮೇಲೆ ಬಲರಾಮನು ತಾನಾಗಿ ತನ್ನ ದೇಹವನ್ನು ಇಲ್ಲಿಯೇ ಬಿಟ್ಟು ಸಮುದ್ರವನ್ನು ಹುಗುವನು. ಮಹಾತ್ಮ

ನಾದ ಕೃಷ್ಣನು ಭೂಮಿಯಲ್ಲಿ ಮಲಗಿರುವಾಗ ಜರನೆಂಬವನು ಅವನನ್ನು ಬಾಣದಿಂದ ಹೊಡೆಯುವನು '' ಎಂದರು.

ಜನಮೇಜಯರಾಜಾ! ದುರ್ಬುದ್ಧಿಯುಳ್ಳ ಯಾದವರು ತಮ್ಮನ್ನು ಹಾಗೆ ಮೋಸಗೊಳಿಸಿದರೆಂದು, ಆ ಮುನಿಗಳು ಕೋಪದಿಂದ ಕೆಂಪೇರಿದ ಕಣ್ಣುಗಳೊಡನೆ, ಒಬ್ಬರನ್ನೊಬ್ಬರು ನೋಡುತ್ತ, ಧಟ್ಟನೆ ಅಲ್ಲಿಂದ ಹಿಂತಿರುಗಿಬಿಟ್ಟರು. ಆಮೇಲೆ ಈ ಸಂಗತಿಯು ಕೃಷ್ಣನ ಕಿವಿಗೆ ಬಿದ್ದಿತು. ಮೊದಲೇ ಇದರ ಪರಿಣಾಮವನ್ನು ಬಲ್ಲವನೂ, ಧೀಮಂತನೂ ಆದ ಶ್ರೀಕೃಷ್ಣನು ವೃಷ್ಣಿಗಳನ್ನು ಕರೆದು 'ಎಲೈ ಯಾದವರೆ! ಇನ್ನು ನೀವು ಇದಕ್ಕಾಗಿ ಚಿಂತಿಸಿ ಫಲವಿಲ್ಲ ಇದು ಹೀಗೆಯೇ ಆಗಬೇಕಾಗಿದ್ದಿತು. ಹಾಗೆಯೇ ನಡೆಯಿತು' ಎಂದು ಹೇಳಿ, ತಾನೂ ತನ್ನ ಪುರಕ್ಕೆ ಹೋದನು. ಲೋಕಪ್ರಭುವಾದ ಕೃಷ್ಣನು ಸರ್ವಸಮರ್ಥನಾಗಿದ್ದರೂ, ಕಾಲಗತಿಯನ್ನು ತಪ್ಪಿಸಲು ಉದ್ದೇಶಿಸಲಿಲ್ಲ ಆ ದಿನವು ಕಳೆದು ಬೆಳಗಾದೊಡನೆಯೇ, ಸಾಂಬನ ಹೊಟ್ಟೆಯಿಂದ ಒಂದು ಒನಕೆಯು ಹುಟ್ಟಿತು. ಆ ಒನಕೆಯಿಂದಲೇ ವೃಷ್ಣಿಗಳು ಅಂಧಕರು ಮೊದಲಾಗಿ ಸಮಸ್ತ ಯಾದವರೂ ಭಸ್ಮೀಭೂತರಾದರು ಯಾದವಕುಲವಿನಾಶಕ್ಕಾಗಿ ಬ್ರಾಹ್ಮಣಶಾಪದಿಂದ ಹುಟ್ಟಿದ ಯಮಕಿಂಕರನಂತೆ, ಭಯಂಕರವಾದ ದೊಡ್ಡ ಉಕ್ಕಿನ ಒನಕೆಯು, ಸಾಂಬನ ಹೊಟ್ಟೆಯಿಂದ ಬಂದುದನ್ನು ನೋಡಿ ಯಾದವರು ಭಯದಿಂದ ನಡುಗುತ್ತ, ರಾಜನಿಗೆ ಈ ಆಶ್ಚರ್ಯವೃತ್ತಾಂತವನ್ನು ತಿಳಿಸಿದರು. ರಾಜನು ಇದನ್ನು ಕೇಳಿ ಬಹಳ ಚಿಂತಾಕುಲನಾಗಿ ಆ ಒನಕೆಯನ್ನೆಲ್ಲ ಸಣ್ಣಸಣ್ಣ ಪುಡಿಮಾಡಿ, ಸಮುದ್ರದಲ್ಲಿ ಬಿಸುಡುವಂತೆ ಆಜ್ಞೆಮಾಡಿದನು ಅದರಂತೆ ಸೇವಕರು ಅದನ್ನು ಪುಡಿಪುಡಿಯಾಗಿ ಮಾಡಿ ಸಮುದ್ರದಲ್ಲಿ ಬಿಸುಟರು. ಆಮೇಲೆ ಆಹುಕನು, ಬಲರಾಮನು, ಕೃಷ್ಣನು, ಬಭ್ರು, ಮುಂತಾದ ಪ್ರಮುಖರೆಲ್ಲರೂ ಪಟ್ಟಣದಲ್ಲಿ ಡಂಗುರವನ್ನು ಹೊಡೆಯಿಸಿ, 'ಇದು ಮೊದಲು ಈ ನಗರವಾಸಿಗಳಾದ ವೃಷ್ಣಿಗಳು, ಅಂಧಕರು, ಮೊದಲಾಗಿ ಯಾದವಕುಲದವರಲ್ಲಿ ಯಾವನೊಬ್ಬನೂ ಮದ್ಯಪಾನವನ್ನು ಮಾಡಬಾರದು! ಈ ನನ್ನ ಆಜ್ಞೆಯನ್ನು ಮೀರಿ, ನಮಗೂ ತಿಳಿಯದಂತೆ ಯಾವ

ನಾದರೊಬ್ಬನು, ಎಲ್ಲಿಯಾದರೂ ಒಂದು ಸ್ಥಳದಲ್ಲಿ, ಮದ್ಯಪಾನಮಾಡಿದ ಹಾಗೆ ತಿಳಿದುಬಂದರೆ, ಅವನು ಅವನ ಸಮಸ್ತ ಬಂಧುವರ್ಗದೊಡನೆ ಜೀವ ಸಹಿತವಾಗಿ ಶೂಲಕ್ಕೇರಬೇಕಾಗುವುದು' ಎಂದು ಎಲ್ಲಾ ಕಡೆಯೂ ಸಾರಿಸಿದರು. ಈ ರಾಜಾಜ್ಞೆಯನ್ನು ಕೇಳಿ ಎಲ್ಲರೂ ಪ್ರಾಣಭಯದಿಂದ 'ಇನ್ನು ಮೇಲೆ ತಮ್ಮಲ್ಲಿ ಯಾರೂ ಮದ್ಯಪಾನಮಾಡಬಾರ'ದೆಂದು ನಿಯಮವನ್ನು ಮಾಡಿಕೊಂಡರು.

ಇದು ಎರಡನೆಯ ಅಧ್ಯಾಯವು.

ದ್ವಾರಕೆಯಲ್ಲಿ ವಿಧವಿಧಗಳಾದ ಮಹೋತ್ಪಾತಗಳು ತಲೆದೋರಿದುದು. ಅದನ್ನು ನೋಡಿ ಶ್ರೀಕೃಷ್ಣನು, ಗಾಂಧಾರಿಯು ತನಗೆ ಕೊಟ್ಟ ಶಾಪವನ್ನು ನೆನಸಿಕೊಂಡು, ಅದನ್ನು ಸುಳ್ಳಾಗಿಸಬಾರದೆಂದುದ್ದೇಶಿಸಿ, ಯಾದವರೆಲ್ಲರನ್ನೂ ತೀರ್ಥಯಾತ್ರೆಗೆ ಹೊರಡುವಂತೆ ಭಟರ ಮೂಲಕವಾಗಿ ಸಾರಿಸಿದುದು.

'ಜನಮೇಜಯರಾಜಾ! ಹೀಗೆ ವೃಷ್ಣಿಗಳೂ, ಅಂಧಕರೂ ಬಹಳ ಪ್ರಯತ್ನದಿಂದ ತಮ್ಮೊಳಗೆ ಒಬ್ಬರನ್ನೊಬ್ಬರು ಎಚ್ಚರಿಸುತ್ತಿದ್ದಾಗಲೇ, ಮೃತ್ಯುವು ಗೂಗೆ, ಪಾರಿವಾಳ, ಮೊದಲಾದ ಹಕ್ಕಿಗಳ ರೂಪದಿಂದ ದ್ವಾರಕೆಯಲ್ಲಿ ಒಬ್ಬೊಬ್ಬ ಯಾದವನ ಗೃಹಗಳಲ್ಲಿಯೂ ಸಂಚಾರಮಾಡತೊಡಗಿತು. ಅಲ್ಲದೆ, ಆಗಾಗ ವೃಷ್ಣಿಗಳ ಗೃಹದಲ್ಲಿ ಭಯಂಕರವಾದ ವಿಕಾರರೂಪದಿಂದಲೂ, ಬೋಳುತಲೆಯಿಂದಲೂಕೂಡಿ, ಕಪ್ಪು ಮತ್ತು ಹಳದಿಬಣ್ಣದ ಮೈಯುಳ್ಳ ಪುರುಷಾಕೃತಿಯೊಂದು, ಅಲ್ಲಲ್ಲಿ ಜನರ ಕಣ್ಣಿಗೆ ಬೀಳುತ್ತ, ಒಡನೆಯೇ ಅದೃಶ್ಯವಾಗುತ್ತಿದ್ದಿತು. ಮಹಾಧನುರ್ಧಾರಿಗಳಾದ ಕೆಲವು ಯಾದವರು ನೂರುಸಾವಿರ ಲೆಕ್ಕದ ಬಾಣಗಳಿಂದ ಅವನನ್ನು ಬೆನ್ನಟ್ಟಿ ಹೊಡೆಯಲಾರಂಭಿಸಿದರು ಆದರೇನು? ಸಮಸ್ತಪ್ರಾಣಿಗಳನ್ನೂ ಕೊಲ್ಲತಕ್ಕ ಆ ಪುರುಷನನ್ನು ಹೊಡೆಯಲು ಯಾರಿಗೂ ಸಾಧ್ಯವಾಗಲಿಲ್ಲ. ಯಾದವರೆಲ್ಲರ ನಾಶಸೂಚಕವಾಗಿ ನೋಡುವವರ ಮೈಯಲ್ಲಿ ರೋಮಾಂಚವೆಬ್ಬಿಸುವಂತೆ

ದಿನದಿನವೂ ಭಯಂಕರವಾದ ಬಿರುಗಾಳಿಯೇಳುತಿದ್ದಿತು. ದೊಡ್ಡದೊಡ್ಡ ರಾಜವೀಧಿಗಳೊಳಗೆಲ್ಲ ಇಲಿಗಳು ಬಹಳವಾಗಿ ಹೆಚ್ಚಿಹೋದುವು. ಬೀದಿ ಬೀದಿಗಳಲ್ಲಿ ಒಡೆದ ಮಡಕೆಗಳು ಬಿಸಾಡಿದ್ದುವು. ರಾತ್ರಿಯಲ್ಲಿ ಮಲಗಿದ್ದ ಯಾದವರ ತಲೆಕೂದಲುಗಳನ್ನೂ, ಉಗುರುಗಳನ್ನೂ ಇಲಿಗಳು ಕಡಿದು ತಿನ್ನುತಿದ್ದುವು. ವೃಷ್ಣಿಗಳ ಮನೆಗಳಲ್ಲಿ ಮೊದಲು ಇಂಪಾಗಿ ಮಾತಾಡು ತಿದ್ದ ಶಾರಿಕೆಗಳೆಲ್ಲವೂ "ಚೀಚೀ! ಕೂಚೀ" ಎಂಬ ಅಮಂಗಳಕರವಾದ ಶಬ್ದಗಳನ್ನು ನುಡಿಯುತಿದ್ದುವು. ಈ ಕೂಗಾಟವು ರಾತ್ರಿ ಹಗಲು ಎಡೆಬಿ ಡದೆ ಕೇಳಿಸುತ್ತಿದ್ದಿತು ಸಾರಸಪಕ್ಷಿಗಳು ಗೂಗೆಗಳಂತೆ ಕೂಗಲಾರಂಭಿ ಸಿದುವು. ಆಡುಗಳೆಲ್ಲವೂ ನರಿಗಳಂತೆ ಊಳಿಡುತಿದ್ದುವು. ಮೈ ಬಿಳುಪಾ ಗಿಯೂ, ಕಾಲುಗಳು ಕೆಂಪಾಗಿಯೂ ಇರತಕ್ಕ ಪಾರಿವಾಳದ ಹಕ್ಕಿಗಳು, ಕಾಲಪ್ರೇರಿತಗಳಾಗಿ, ವೃಷ್ಣಿಗಳ ಮತ್ತು ಅಂಧಕರ ಮನೆಗಳಲ್ಲಿ ಸಂಚರಿಸ ತೊಡಗಿದುವು. ಹಸುಗಳಲ್ಲಿಯೂ, ಒಂಟೆಗಳಲ್ಲಿಯೂ, ಹೇಸರಗತ್ತೆಗಳ ಲ್ಲಿಯೂ ಕತ್ತೆಯ ಮರಿಗಳು ಹುಟ್ಟುತಿದ್ದುವು. ಹಾಗೆಯೇ ನಾಯಿಗಳಿಂದ ಬೆಕ್ಕಿನ ಮರಿಗಳೂ, ಮುಂಗುಸಿಗಳಿಂದ ಇಲಿಗಳೂ ಜನಿಸುತಿದ್ದುವು. ಕ್ರಮಕ್ರಮವಾಗಿ ವೃಷ್ಣಿಗಳಿಗೆ ಪಾಪಕಾರ್ಯಗಳಲ್ಲಿ ಭಯವೂ, ಲಜ್ಜೆ ಯೂ ಬಿಟ್ಟುಹೋಯಿತು. ಅವರಿಗೆ ಬ್ರಾಹ್ಮಣರಲ್ಲಿಯೂ, ಪಿತೃಗಳಲ್ಲಿಯೂ, ದೇವತೆಗಳಲ್ಲಿಯೂ ದ್ವೇಷವು ಹೆಚ್ಚುತ್ತಬಂದಿತು. ಗುರುಗಳನ್ನು ಅವ ಮಾನಪಡಿಸತೊಡಗಿದರು. ಕೃಷ್ಣಬಲರಾಮರಿಬ್ಬರುಹೊರತು ಉಳಿದ ಯಾದವರೆಲ್ಲರೂ ಅಕೃತ್ಯಗಳಿಗೆ ನಾಚದೆ ಯಥೇಚ್ಛಪ್ರವರ್ತನೆಗೆ ತೊಡಗಿ ದರು. ಪತ್ನಿಯರು ಪತಿಗಳನ್ನೂ, ಪತಿಗಳು ಪತ್ನಿಯರನ್ನೂ ವಂಚಿಸ ತೊಡಗಿದರು. ಬೆಂಕಿಯನ್ನುರಿಸುವಾಗ ಕಪ್ಪು, ಹಳದಿ, ಕೆಂಪು ಈ ಮೂರು ಬಣ್ಣಗಳಿಂದ ಕೂಡಿದ ಅದರ ಬೇರೆಬೇರೆ ಜ್ವಾಲೆಗಳು, ಯಾವಾ ಗಲೂ ಅಪ್ರದಕ್ಷಿಣವಾಗಿಯೇ ಸುತ್ತುತ್ತಿದ್ದುವು. ಪ್ರತಿದಿನವೂ ಉದ ಯಾಸ್ತಮಯ ಕಾಲಗಳೆರಡರಲ್ಲಿಯೂ, ಆ ಯಾದವನಗರಿಯಲ್ಲಿ ಸೂ ರ್ಯನ ಸುತ್ತಲೂ ತಲೆಯಿಲ್ಲದ ಮುಂಡಗಳು ಆವರಿಸಿರುವಂತೆ ಕಾಣಿಸು ತ್ತಿದ್ದುವು. ರಾಜೇಂದ್ರಾ! ಅಡಿಗೆಯ ಮನೆಗಳಲ್ಲಿ ಆಗಲೇ ರುಚಿರುಚಿ ಯಾಗಿ ಪಕ್ವಮಾಡಿದ ಪದಾರ್ಥಗಳನ್ನು ತಂದು ಊಟಕ್ಕಾಗಿ ಬಡಿಸು

ವಾಗ, ಅದರಲ್ಲಿ ಸಾವಿರಾರು ಕ್ರಿಮಿಗಳು ಗೋಚರಿಸುತಿದ್ದುವು. ಮಹಾತ್ಮರಾದ ಬ್ರಾಹ್ಮಣರು ಪುಣ್ಯಾಹಮಂತ್ರಗಳನ್ನು ಜಪಿಸುತ್ತಿರುವಾಗ ನಡುನಡುವೆ ಜನಗಳು ಓಡಿಬರುವ ಶಬ್ದವು ಕೇಳಿಸುತಿದ್ದಿತು ಆದರೆ ಕಣ್ಣಿಗೆ ಮಾತ್ರ ಯಾರೂ ಕಾಣಿಸುತ್ತಿರಲಿಲ್ಲ ಆಗಾಗ ಗ್ರಹಗಳಿಂದ ನಕ್ಷತ್ರಗಳು ಪೀಡಿಸಲ್ಪಟ್ಟಂತೆ ಕಾಣಿಸುತಿದ್ದುವು. ಆದರೆ, ಒಬ್ಬರಿಗೆ ಮತ್ತೊಬ್ಬರ ನಕ್ಷತ್ರಕ್ಕೊದಗಿದ ಗ್ರಹಬಾಧೆಯು ಕಾಣಿಸುತಿದ್ದಿತೇಹೊರತು, ಅವರವರ ನಕ್ಷತ್ರವು ಅವರವರ ಕಣ್ಣಿಗೇ ಬೀಳುತ್ತಿರಲಿಲ್ಲ ವೃಷ್ಣಿಗಳ ಗೃಹದಲ್ಲಿ ಪಾಂಚಜನ್ಯಶಬ್ದವು ಕೇಳುವಾಗ, ನಾನಾಕಡೆಗಳಿಂದ ಕತ್ತೆಗಳು ಭಯಂಕರವಾಗಿ ಅರಚುವ ಧ್ವನಿಯೂ ಕೇಳಿಸಲಾರಂಭಿಸಿತು. ಹೀಗೆ ದ್ವಾರಕೆಯಲ್ಲಿ ಭಯಂಕರವಾದ ಉತ್ಪಾತಗಳಿಂದ ಕಂಡುಬಂದ ಕಾಲವೈಪರೀತ್ಯವನ್ನೂ, ಹದಿಮೂರನೆಯ ತಿಥಿಯಾದ ತ್ರಯೋದಶಿಯ ದಿನದಲ್ಲಿಯೇ ಅಮಾವಾಸ್ಯೆಯು ಬಂದುದನ್ನೂ, ನೋಡಿ ಶ್ರೀಕೃಷ್ಣನು ಯಾದವರನ್ನೆಲ್ಲ ಕರೆಸಿ ಹೀಗೆಂದು ಹೇಳುವನು. “ಓ ಯಾದವರೆ! ನೋಡಿದಿರಾ! ಹಿಂದಿನಂತೆ ಈಗಲೂ ರಾಹುಗ್ರಹದಿಂದ ಹದಿಮೂರನೆಯ ತಿಥಿಯೇ ಹದಿನೈದನೆಯ ತಿಥಿಯಾಗಿ ಮಾರ್ಪಡಿಸಲ್ಪಟ್ಟಿದೆ. ಹಿಂದೆ ಭಾರತಯುದ್ಧಕಾಲದಲ್ಲಿ ನಡೆದ ಈ ಸಂಭವವೇ ಈಗಲೂ ನಮ್ಮ ಯಾದವಕುಲನಾಶಕ್ಕೆ ಸೂಚಕವಾಗಿ ಏರ್ಪಟ್ಟಂತಿದೆ’ ಎಂದನು. ಸರ್ವಜ್ಞನೂ, ಜನಾರ್ದನನೂ ಆದ ಶ್ರೀಕೃಷ್ಣನು ಯಾದವರಿಗೆ ಒದಗಿಬಂದ ಆ ಕಾಲಗತಿಯನ್ನು ಚೆನ್ನಾಗಿ ನಿರ್ಧರಿಸಿ, ಆ ಯಾದವಕುಲಕ್ಕೆ ಕ್ಷಯಕಾರಣವಾದ ಮೂವತ್ತಾರನೆಯ ವರ್ಷವು ಆರಂಭಿಸಿದುದನ್ನೂ ತನ್ನಲ್ಲಿ ತಿಳಿದುಕೊಂಡನು. ಆಗ ಕೃಷ್ಣನು ‘ಆಹಾ! ಹಿಂದೆ ಪುತ್ರಮರಣದಿಂದಲೂ, ಬಂಧುವಿಯೋಗದಿಂದಲೂ ಪರಿತಪಿಸುತ್ತ, ಗಾಂಧಾರಿಯು ತನ್ನನ್ನುಕುರಿತು ಯಾವ ಶಾಪೋಕ್ತಿಯನ್ನು ನುಡಿದಳೋ, ಅದರ ಫಲಕಾಲವು ಇದೋ ಬಂದುಬಿಟ್ಟಿತು! ಹಿಂದೆ ಯುದ್ಧಸನ್ನಾಹಕಾಲದಲ್ಲಿ ತಲೆದೋರಿದ ಮಹೋತ್ಪಾತಗಳನ್ನು ಕಂಡು ಯುಧಿಷ್ಠಿರನು ಯಾವ ಮಾತನ್ನಾಡಿದ್ದನೋ, ಅದಕ್ಕೂ ಈಗ ಫಲಕಾಲವು ಬಂದುಬಿಟ್ಟಿತು’ ಎಂದು ಹೇಳಿದನು. ಹೀಗೆ ನಿರ್ಧರಿಸಿಕೊಂಡು ಕೃಷ್ಣನು, ಆ ಮಾತುಗಳನ್ನೆಲ್ಲ ಸತ್ಯವಾಗಿಸಬೇಕೆಂಬ ಮನಸ್ಸಂಕಲ್ಪದಿಂದ, ಯಾದವ

ರನ್ನು ತೀರ್ಥಯಾತ್ರೆಗೆ ಹೊರಡಬೇಕೆಂದು ಆಜ್ಞೆಮಾಡಿದನು. ಕೃಷ್ಣಾಜ್ಞೆಯಂತೆ ಸೇವಕರು, ಯಾದವನಗರದಲ್ಲಿ ಎಲ್ಲರೂ ತೀರ್ಥಯಾತ್ರೆಗಾಗಿ ಸಮುದ್ರಕ್ಕೆ ಹೊರಡಬೇಕೆಂದು ಡಂಗುರಹೊಡೆಯಿಸಿ ಸಾರಿದರು.

ಇದು ಮೂರನೆಯ ಅಧ್ಯಾಯವು.

ರಾತ್ರಿ ಯಾದವರಿಗೆ ದುಸ್ವಪ್ನಗಳು ಕಾಣಿಸಿದುದು ಯಾದವರು ಕೃಷ್ಣಾಜ್ಞೆಯಿಂದ ಪ್ರಭಾಸತೀರ್ಥಕ್ಕೆ ಹೋಗಿ ಅಲ್ಲಿ ಮದ್ಯಪಾನಮಾಡಿದುದು. ಈ ನಡುವೆ ಸಾತ್ಯಕಿಯು ಸ್ಯಮಂತಕಮಣಿಯ ವೃತ್ತಾಂತವನ್ನು ತೆಗೆದು ಕೃತವರ್ಮನನ್ನು ಬೈದು ಕತ್ತಿಯನ್ನೆತ್ತಿ ಅವನ ತಲೆಯನ್ನು ಕಡಿದುದು. ಯಾದವರಲ್ಲಿ ಅನ್ಯೋನ್ಯಕಲಹವುಂಟಾಗಿ, ಸಮುದ್ರತೀರದಲ್ಲಿದ್ದ ಜೊಂಡುಹುಲ್ಲನ್ನು ಕಿತ್ತುಕೊಂಡು ಹೊಡೆದಾಡಿ ಸತ್ತುದು.

'ಓ ಜನಮೇಜಯರಾಜಾ! ಆ ದಿನರಾತ್ರಿಯೇ ದ್ವಾರಕೆಯಲ್ಲಿ ದುಸ್ವಪ್ನಗಳು ಕಾಣತೊಡಗಿದುವು. ಆ ರಾತ್ರಿ ಬಿಳೀಹಲ್ಲುಗಳುಳ್ಳ ಕಪ್ಪಾದ ಹೆಂಗಸೊಬ್ಬಳು, ಅಟ್ಟಹಾಸದಿಂದ ನಗುತ್ತ, ದ್ವಾರಕೆಯಲ್ಲಿರುವ ಸ್ತ್ರೀಯರ ಮಂಗಳಸೂತ್ರಗಳನ್ನೆಲ್ಲ ಕೀಳುತ್ತ ಅತ್ತಿತ್ತ ಓಡಾಡುವಂತೆ ಕಾಣಿಸಿತು. ಅಗ್ನಿಶಾಲೆಗಳಲ್ಲಿಯೂ, ಹೊಸಮನೆಯನ್ನು ಕಟ್ಟುವುದಕ್ಕಾಗಿ ಅಳೆದಿಟ್ಟ ನಿವೇಶನಗಳ ಮಧ್ಯದಲ್ಲಿಯೂ, ಭಯಂಕರಗಳಾದ ರಣಹದ್ದುಗಳು ವೃಷ್ಣಿಗಳನ್ನೂ, ಅಂಧಕರನ್ನೂ ಕುಕ್ಕಿ ತಿನ್ನುವಂತೆ ಸ್ವಪ್ನವು ಕಾಣಿಸಿತು. ಮತ್ತು ಯಾದವರಿಗೆ ಆ ರಾತ್ರಿ ಸ್ವಪ್ನದಲ್ಲಿ ಭಯಂಕರರೂಪವುಳ್ಳ ರಾಕ್ಷಸರು ಗುಂಪಾಗಿ ಬಂದು, ತಮ್ಮ ಛತ್ರ ಚಾಮರ ಧ್ವಜ ಕವಚಗಳೇ ಮೊದಲಾದ ಬಿರುದುಗಳನ್ನೂ, ಅಲಂಕಾರಗಳನ್ನೂ ಕಿತ್ತುಕೊಂಡುಹೋಗುವಂತೆ ಕಾಣಿಸಿತು. ವಜ್ರಮಯವಾದ ನಾಭಿಯಿಂದ ಕೂಡಿ, ಉಕ್ಕಿನಿಂದ ನಿರ್ಮಿತವಾಗಿ, ಶ್ರೀಕೃಷ್ಣನಿಗೆ ಅಗ್ನಿಯಿಂದ

ಕೊಡಲ್ಪಟ್ಟಿದ್ದ ಪ್ರಸಿದ್ಧವಾದ ಚಕ್ರಾಯುಧವು, ವೃಷ್ಣಿಗಳೆಲ್ಲರೂ ನೋಡು ತ್ತಿರುವಹಾಗೆಯೇ ಅಂತರಿಕ್ಷದಕಡೆಗೆ ಹಾರಿಹೋಗುವಂತೆಯೂ ಕಾಣಿಸಿತು. ಸೂರ್ಯಕಾಂತಿಯಿಂದ ಬೆಳಗುತ್ತ ಸನ್ನದ್ಧವಾಗಿದ್ದ ಶ್ರೀಕೃಷ್ಣನ ದಿವ್ಯ ರಥವನ್ನು, ಅದಕ್ಕೆ ಹೂಡಿದ್ದ ಮನೋವೇಗವುಳ್ಳ ನಾಲ್ಕು ದಿವ್ಯಾಶ್ವಗಳು, ಸಾರಥಿಯಾದ ದಾರುಕನು ನೋಡುತಿದ್ದಹಾಗೆಯೇ ತಮ್ಮಷ್ಟಕ್ಕೆ ತಾವು ಸಮುದ್ರದಮೇಲೆ ಆಕಾಶಮಾರ್ಗವಾಗಿ ಎಳೆದುಕೊಂಡುಹೋಗುವಂತೆ ಕಾಣಿಸಿತು. ಬಲರಾಮಕೃಷ್ಣರಿಂದ ಕ್ರಮವಾಗಿ ಪೂಜಿಸಲ್ಪಟ್ಟಿದ್ದ ಅವರ ವರ ಧ್ವಜಚಿಹ್ನೆಗಳಾದ ತಾಳವೃಕ್ಷವೂ, ಗರುತ್ಮಂತನೂ, ದೇವಲೋಕ ವಾಸಿಗಳಾದ ಅಪ್ಸರಸ್ತ್ರೀಯರುಗಳೊಡನೆ ಸೇರಿ, ಆ ಎರಡು ರಥಗಳನ್ನೂ ಅಂತರಿಕ್ಷದಕಡೆಗೆ ಎಳೆದುಕೊಂಡುಹೋಗುವಂತೆ ಕಾಣಿಸಿತು ಆಕಾಶದಲ್ಲಿ ದೇವತೆಗಳು ಯಾದವರನ್ನು ಕುರಿತು, ‘ ಇನ್ನು ಹೊರಡಿರಿ! ತೀರ್ಥಯಾತ್ರೆಗಾಗಿ ಬೇಗನೆ ಹೊರಡಿರಿ ’ ಎಂದು ಆತುರಗೊಳಿಸುವಂತೆ ಕೇಳಿಸಿತು. ಯಾದವರೂಪದಿಂದ ಭೂಮಿಯಲ್ಲಿ ಹುಟ್ಟಿ, ಭಗವಂತನಾದ ಶ್ರೀಕೃಷ್ಣ ಪರಮಾತ್ಮನ ಸಾಕ್ಷಾದ್ದರ್ಶನ, ಸ್ಪರ್ಶನ, ಧ್ಯಾನಾದಿಗಳಿಂದ, ಆನಂದಿಸು ತಿದ್ದ ದೇವತೆಗಳೆಲ್ಲರೂ, ತಮ್ಮ ನಿಜಲೋಕಕ್ಕೆ (ಸ್ವರ್ಗಕ್ಕೆ) ಹೋಗುವುದ ಕ್ಕಾಗಿ ವಿಮಾನಗಳೊಡನೆ ಆಕಾಶದಲ್ಲಿ ಸಿದ್ಧರಾಗಿದ್ದರು. ಆಮೇಲೆ ಇತ್ತ ಲಾಗಿ ವೃಷ್ಣಿಗಳು, ಅಂಧಕರು, ಮೊದಲಾದ ಮಹಾರಥರೆಲ್ಲರೂ ತೀರ್ಥ ಯಾತ್ರೆಗೆ ಹೊರಡುವ ಆತುರದಿಂದ, ತಮ್ಮ ಅಂತಃಪುರಪರಿವಾರಗಳೊಡನೆ ಪ್ರಯಾಣಸನ್ನದ್ಧರಾದರು. ಎಲ್ಲರೂ ಕಾಲಚೋದಿತರಾಗಿ, ಮುಂದಿನ ಮೃತ್ಯುವನ್ನು ತಿಳಿಯದೆ, ಸಂತೋಷದಿಂದ ಮನೋಹರಗಳಾದ ಅಲಂ ಕಾರಗಳನ್ನು ಮಾಡಿಕೊಂಡು, ವಿಧವಿಧಗಳಾದ ಪಾನದ್ರವ್ಯಗಳನ್ನೂ, ಮಾಂಸಗಳನ್ನೂ, ಮದ್ಯರಸಗಳನ್ನೂ ಅಪಾರವಾಗಿ ಸಂಗ್ರಹಿಸಿಟ್ಟುಕೊಂ ಡರು. ಬಹಳ ಶ್ರೀಮಂತರಾದ ಆ ಯಾದವರೆಲ್ಲರೂ ಮದ್ಯಪಾನದ ಆತು ರದಿಂದ, ಆನೆ, ಕುದುರೆ, ಪಲ್ಲಕ್ಕಿ, ಮುಂತಾದ ವಾಹನಗನ್ನೇರಿ ಪಟ್ಟಣ ದಿಂದ ಹೊರಟುಬಿಟ್ಟರು. ಎಲ್ಲರೂ ಸಮೃದ್ಧವಾದ ಭಕ್ಷ್ಯ, ಭೋಜ್ಯ, ಪಾನೀಯಗಳನ್ನು ಸಾಗಿಸಿಕೊಂಡು, ತಮ್ಮತಮ್ಮ ಪ್ರಿಯೆಯರನ್ನೂ ಸಂಗಡ ಕರೆದುಕೊಂಡು, ಪ್ರಭಾಸತೀರ್ಥದಲ್ಲಿ ತಮತಮಗೆ ಇಷ್ಟವಾದ ಸ್ಥಳಗಳಲ್ಲಿ

ಮನೆಗಳನ್ನು ಮಾಡಿಕೊಂಡು ಅಲ್ಲಿ ತಂಗಿದರು. ಯಾದವರೆಲ್ಲರೂ ಹೀಗೆ ಸಮುದ್ರತೀರಕ್ಕೆ ಬಂದಿಳಿದುದನ್ನು ಕೇಳಿ, ಯೋಗಗಳನ್ನೂ, ಮೋಕ್ಷ ಜ್ಞಾನವನ್ನೂ ತಿಳಿದ ಮಹಾತ್ಮನಾದ ಉದ್ಧವನು, ಆ ಯಾದವರ ಅನುಮತಿಯನ್ನು ಪಡೆದು ಆ ಸ್ಥಳವನ್ನು ಬಿಟ್ಟು ಹೊರಟನು. ತನಗೆ ಕೈಮುಗಿದು ನಮಸ್ಕರಿಸಿ ಅಲ್ಲಿಂದ ಬಿಟ್ಟು ಹೊರಡುತಿದ್ದ ಮಹಾತ್ಮನಾದ ಉದ್ಧವನನ್ನು ನೋಡಿಯೂ, ಯೋಗಜ್ಞನಾದ ಶ್ರೀಕೃಷ್ಣನು, ಮುಂದೆ ಯಾದವರಿಗುಂಟಾಗುವ ನಾಶವನ್ನು ಬಲ್ಲವನಾದುದರಿಂದ, ಆ ಉದ್ಧವನನ್ನು ನಿವಾರಿಸದೆ ಸುಮ್ಮನಿದ್ದನು ತನ್ನ ತೇಜಸ್ಸಿನಿಂದ ಬೂವ್ಯಾಕಾಶಗಳನ್ನು ಬೆಳಗುತ್ತ, ತಮ್ಮನ್ನೆಲ್ಲ ಬಿಟ್ಟುಹೋಗುತಿದ್ದ ಉದ್ಧವನನ್ನು ಯಾದವರೂ ನೋಡಿದರು. ಮಹಾಬಲಾಢ್ಯರಾದ ಆ ಯಾದವರೆಲ್ಲರೂ ಅಲ್ಲಿ ಬ್ರಾಹ್ಮಣರಿಗಾಗಿ ಮದ್ಯಗಂಧವಿಶಿಷ್ಟವಾಗಿ ಸಿದ್ಧಪಡಿಸಿತಂದಿದ್ದ ಅನ್ನಾದಿಗಳನ್ನೆಲ್ಲ ಕಪಿಗಳಿಗೆ ತಿನ್ನಿಸಿಬಿಟ್ಟರು ಆಮೇಲೆ ಯಾದವರೆಲ್ಲರೂ ದೊಡ್ಡ ಪಾನಗೋಷ್ಠಿಯಲ್ಲಿ ಗುಂಪಾಗಿ ಸೇರಿ ಮದ್ಯಪಾನವನ್ನಾರಂಭಿಸಿದರು. ಅಲ್ಲಲ್ಲಿ ವಾದ್ಯಗಳೊಡನೆಯೂ, ಗಾನ ನರ್ತನಗಳೊಡನೆಯೂ ಆ ಪ್ರಭಾಸತೀರದಲ್ಲಿ ಮದ್ಯಪಾನದ ಸಂಭ್ರಮವು ಬಹಳ ಪ್ರಬಲವಾಯಿತು ಬಲರಾಮನೂ, ಕೃತವರ್ಮನೂ, ಸಾತ್ಯಕಿಯೂ, ಗದನೂ, ಬಭ್ರುವೂ, ಇವರಿಷ್ಟುಮಂದಿಯೂ ಕೃಷ್ಣನನ್ನು ಸುತ್ತಿ ಕುಳಿತು, ಸಮೃದ್ಧವಾಗಿ ಮದ್ಯವನ್ನು ಕುಡಿಯುತಿದ್ದರು. ಈ ದೊಡ್ಡ ಗೋಷ್ಠಿಯಲ್ಲಿ ಮೊದಲು ಸಾತ್ಯಕಿಗೆ ಮೈತಿಳಿಯದಂತೆ ಮತ್ತೇರಿತು. ಆಗ ಅವನು ಇದ್ದಕ್ಕಿದ್ದಹಾಗೆ ತನ್ನ ಸಮೀಪದಲ್ಲಿದ್ದ ಕೃತವರ್ಮನನ್ನು ನೋಡಿ ಅಪಹಾಸ್ಯಮಾಡುತ್ತ, ಬಹಳ ಅವಮಾನಪೂರ್ವಕವಾಗಿ ಅವನನ್ನು ಬಯ್ಯಲಾರಂಭಿಸಿ ‘ಎಲಾ ಹಾರ್ದಿಕ್ಯಾ! ಶತ್ರುಗಳಿಂದ ಹೊಡೆಯಲ್ಪಟ್ಟರೂ, ಕ್ಷತ್ರಿಯನಾದ ಯಾವನುತಾನೇ ನಿನ್ನಂತೆ ಮೃತಪ್ರಾಯರಾಗಿ ರಾತ್ರಿಯಲ್ಲಿ ಮೈಮರೆತು ಮಲಗಿದ್ದವರನ್ನು ಕೊಲ್ಲುವನು? ನೀನು ಮಾಡಿದ ಆ ಘೋರಕೃತ್ಯವನ್ನು ಯಾದವರು ಯಾರೂ ಸಹಿಸಲಾರರು! ಛೀ! ಹೋಗು! ನೀನು ಯಾದವರ ಗುಂಪಿಗೇ ಅರ್ಹನಲ್ಲ’ ಎಂದನು. ಸಾತ್ಯಕಿಯು ಹೇಳಿದ ಈ ಮಾತನ್ನು ಅನುಮೋದಿಸುತ್ತ ಪ್ರದ್ಯುಮ್ನನೂ, ಕೃತವರ್ಮನನ್ನು ಅವಮಾನಗೊಳಿಸಿ ಮಾತಾಡಿದನು. ಇವರಿಬ್ಬರ ಮಾ

ತನ್ನು ಕೇಳಿ ಕೃತವರ್ಮನಿಗೆ ಮಹಾಕ್ರೋಶವು ಉಕ್ಕಿಬಂದಿತು. ಆ ಕೋಪದಿಂದ ಅವನು ಅವಮಾನಪೂರ್ವಕವಾಗಿ ಸಾತ್ಯಕಿಯನ್ನು ಎಡಗೈಯಿಂದ ನಿರ್ದೇಶಿಸುತ್ತ 'ಸಾಕು ಸುಮ್ಮನಿರು! ನಿಮ್ಮ ಯೋಗ್ಯತೆಯನ್ನು ಬಲ್ಲೆನು. ಯುದ್ಧದಲ್ಲಿ ತೋಳುಗಳೆರಡೂ ಕತ್ತರಿಸಿ ಬಿದ್ದು, ಪ್ರಾಯೋಪವೇಶದಿಂದ ಮೃತಪ್ರಾಯನಾಗಿ ಬಿದ್ದಿದ್ದ ಭೂರಿಶ್ರವಸ್ಸನ್ನು ಪರಮಘಾತುಕನಾದ ನೀನು ಕೊಂದೆಯಲ್ಲವೆ? ಇದು ವೀರರ ಲಕ್ಷಣವೇನು?' ಎಂದನು. ಈ ಮಾತನ್ನು ಕೇಳಿದಾಗ, ತನ್ನ ಮೈದುನನನ್ನು ಬೈದುದಕ್ಕಾಗಿ ಶ್ರೀಕೃಷ್ಣನಿಗೆ ಮನಸ್ಸಿನಲ್ಲಿ ಕೋಪವು ಹುಟ್ಟಿತು. ಆ ಕೋಪದಿಂದ ಕೃತವರ್ಮನನ್ನು ಓರೆಗಣ್ಣಿನಿಂದ ದುರದುರನೆ ನೋಡಿದನು. ಇದೇ ಸಮಯದಲ್ಲಿ ಸಾತ್ಯಕಿಯು ಹಿಂದೆ ಸತ್ರಾಜಿತ್ತಿನ ವಶದಲ್ಲಿದ್ದ ಸ್ಯಮಂತಕಮಣಿಯ ವಿಚಾರವಾಗಿ ಆಗ ನಡೆದ ಕಲಹಗಳನ್ನೆಲ್ಲ ಎತ್ತಿ ಹೇಳುತ್ತ, ಆ ಪೂರ್ವವೃತ್ತಾಂತವನ್ನು ಕೃಷ್ಣನ ಜ್ಞಾಪಕಕ್ಕೆ ತಂದನು. ಆ ಮಾತನ್ನು ಕೇಳಿ, ಸಮೀಪದಲ್ಲಿದ್ದ ಸತ್ಯಭಾಮೆಯು ಕೃಷ್ಣನಿಗೆ ಕೋಪವನ್ನು ಹೆಚ್ಚಿಸುವಂತೆ ರೋದಿಸುತ್ತ ಬಂದು ಆತನ ತೊಡೆಯಮೇಲೆ ಬಿದ್ದಳು ಸತ್ಯಭಾಮೆಯು ಅಳುವುದನ್ನು ನೋಡಿ ಸಹಿಸಲಾರದೆ ಸಾತ್ಯಕಿಯು ಮಹಾಕ್ರೋಧದಿಂದ ಮೇಲೆದ್ದು ನಿಂತು 'ಇದೋ! ಈಗ ನಾನು ಆ ರಾತ್ರಿ ಸೌಪ್ತಿಕವಧದಲ್ಲಿ ಈ ನೀಚನಿಂದ ಹತರಾದ ಆ ಐದುಮಂದಿ ದ್ರೌಪದೀಪುತ್ರರು, ಧೃಷ್ಟದ್ಯುಮ್ನನು, ಶಿಖಂಡಿ, ಇವರಿಗೆ ಪ್ರತಿಯಾಗಿ ಯುದ್ಧಮಾಡಿ ಅವರ ಸ್ಥಾನವನ್ನೇ ಹೊಂದುವೆನು. ಇದೋ! ಸತ್ಯದಮೇಲೆ ಆಣೆಯಿಟ್ಟು ಹೇಳುವೆನು. ದ್ರೋಣಪುತ್ರನ ಸಹಾಯದಿಂದ ಈ ಪಾಪಿಯು ಮಾಡಿದ ಆ ಕೊಲೆಗೆ ತಕ್ಕ ಪ್ರಾಯಶ್ಚಿತ್ತವನ್ನು ನಾನು ಈಗಲೇ ಇವನಿಗೆ ಮಾಡುವೆನು. ಇವನ ಆಯುಸ್ಸೂ, ಇವನ ಕೀರ್ತಿಯೂ ಈಗ ತೀರಿತು! ತಂಗೀ! ಇದೋ ನೋಡು!' ಎಂದು ಹೇಳಿ, ಕೃಷ್ಣನು ಸಮೀಪದಲ್ಲಿ ನಿಂತು ನೋಡುತ್ತಿರುವಾಗಲೇ ಕೃತವರ್ಮನ ತಲೆಯನ್ನು ಕತ್ತಿಯಿಂದ ಕಡಿದು ಕೆಡಹಿದನು. ಮತ್ತು ಅಲ್ಲಿ ಸುತ್ತಿಮುತ್ತಿ ನಿಂತಿದ್ದ ಇನ್ನೂ ಅನೇಕರನ್ನು ಹಿಂದುಮುಂದು ನೋಡದೆ ಕತ್ತಿಯಿಂದ ಕಡಿದು ಕೊಲ್ಲುತ್ತಬಂದನು. ಸಿಕ್ಕಿದವರನ್ನು ಕೊಲ್ಲುತ್ತ ಹೀಗೆ ಮಿತಿಮೀರಿ ಹೋಗುತ್ತಿರುವ ಸಾತ್ಯಕಿ

ಯನ್ನು ತಡೆಯುವುದಕ್ಕಾಗಿ ಶ್ರೀಕೃಷ್ಣನು ಅವನನ್ನು ಹಿಂಬಾಲಿಸಿ ಓಡಿದನು. ಇದನ್ನು ನೋಡಿ ಕಾಲಚೋದಿತರಾದ ಭೋಜರೂ, ಅಂಧಕರೂ ಸಾತ್ಯಕಿಯನ್ನು ಸುತ್ತುಮುತ್ತಿ ನಿಂತರು. ಇವರೆಲ್ಲರೂ ಕೋಪದಿಂದ ಬಂದಾಗಲೂ, ಸರ್ವಜ್ಞನಾದ ಕೃಷ್ಣನುಮಾತ್ರ ಆಗಿನ ಕಾಲವೈಪರೀತ್ಯವನ್ನು ಬಲ್ಲವನಾದುದರಿಂದ, ತಾನು ಕೋಪಿಸಿಕೊಳ್ಳದೆ ಶಾಂತನಾಗಿಯೇ ಇದ್ದನು. ಮೊದಲೇ ಮೃತ್ಯುಪ್ರೇರಿತರಾಗಿ, ಪಾನಮದದಿಂದ ಮೈಮರೆತಿದ್ದ ಆ ಯಾದವರಲ್ಲಿ ಕೆಲವರು, ತಮ್ಮ ಕೈಯಲ್ಲಿದ್ದ ಎಂಜಲುಪಾತ್ರೆಗಳನ್ನೇ ಸಾತ್ಯಕಿಯ ಮುಖದಮೇಲೆ ನಾನಾಕಡೆಗಳಿಂದ ಬೀಸಿ ಬಡಿದರು. ಹೀಗೆ ಎಲ್ಲರೂ ಸೇರಿ ನಾನಾಕಡೆಗಳಿಂದ ಸಾತ್ಯಕಿಯನ್ನು ಹೊಡೆಯುತ್ತ, ಅವನಮೇಲೆ ಬಿಳುವುದನ್ನು ನೋಡಿ ಸಹಿಸಲಾರದೆ, ರುಕ್ಮಿಣೀಪುತ್ರನಾದ ಪ್ರದ್ಯುಮ್ನನು ಆ ಸಾತ್ಯಕಿಯನ್ನು ಅಪಾಯದಿಂದ ತಪ್ಪಿಸುವುದಕ್ಕಾಗಿ ನಡುವೆ ಬಂದು ನಿಂತನು. ಭೋಜರೆಲ್ಲರೂ ಆ ಪ್ರದ್ಯುಮ್ನನನ್ನು ಸುತ್ತುಮುತ್ತಿ ಹೊಡೆಯಲಾರಂಭಿಸಿದರು. ಅಂಧಕರು ಸಾತ್ಯಕಿಯನ್ನು ಸುತ್ತಿ ಹೊಡೆದರು. ಮಹಾಬಾಹುಬಲಶಾಲಿಗಳಾದ ಆ ಸಾತ್ಯಕಿಪ್ರದ್ಯುಮ್ನರಿಬ್ಬರೂ ಬಹಳಹೊತ್ತಿನವರೆಗೆ ಹೆಣಗಾಡುತಿದ್ದು, ಕೊನೆಗೆ ತಮ್ಮ ವೈರಿಗಳ ಸಂಖ್ಯೆಯು ಹೆಚ್ಚಾಗಿದ್ದುದರಿಂದ, ಕೃಷ್ಣನಿದಿರಾಗಿಯೇ ಆ ಗುಂಪಿನಲ್ಲಿ ಇಬ್ಬರೂ ಕೊಲೆಗೀಡಾದರು. ಆಗ ಯಾದವನಂದನನಾದ ಶ್ರೀಕೃಷ್ಣನಿಗೆ ತನ್ನ ಮಗನೂ, ಮೈದುನನೂ ಏಕಕಾಲದಲ್ಲಿ ವಧಿಸಲ್ಪಟ್ಟುದನ್ನು ಕಂಡು ತಡೆಯಲಾರದ ಕೋಪವುಂಟಾಯಿತು. ಆ ಕೋಪದಿಂದ ಅವನು ಆ ಸಮುದ್ರತೀರದಲ್ಲಿ ತನಗೆ ಸಮೀಪದಲ್ಲಿ ಬೆಳೆದಿದ್ದ ಹೊಡಕೆಗಳನ್ನು ನೋಡಿ, ಅದರಲ್ಲಿ ಒಂದು ಹಿಡಿಯಷ್ಟನ್ನು ಕಿತ್ತುಕೊಂಡನು. ಅವನ ಕೈಗೆ ಬಂದೊಡನೆ ಆ ಹೊಡಕೆಯಹುಲ್ಲು ವಜ್ರಾಯುಧಕ್ಕೆ ಸಮಾನವಾದ ಉಕ್ಕಿನ ಒನಕೆಯಂತಾಯಿತು. ಕೃಷ್ಣನು ಅದರಿಂದಲೇ ತನ್ನಿದಿರಾಗಿ ಬಂದವರನ್ನೆಲ್ಲ ಬಡಿದು ಕೆಡಹುತಿದ್ದನು. ಮೇಲೆಮೇಲೆ ಈ ದೊಂಬಿಯ ಜಗಳವು ಪ್ರಬಲವಾಯಿತು. ಅಂಧಕರೂ, ಭೋಜರೂ, ವೃಷ್ಣಿಗಳೂ, ಸಾತ್ಯಕರೂ ಕಾಲಚೋದಿತರಾಗಿ, ಅಲ್ಲಿ ಬೆಳೆದ ಹೊಡಕೆಯನ್ನೇ ಕಿತ್ತುಕೊಂಡು ಒಬ್ಬರನ್ನೊಬ್ಬರು ಹೊಡೆಯಲಾರಂಭಿಸಿದರು. ಓ ರಾಜೇಂದ್ರಾ!

ಆಗಿನ ಆಶ್ಚರ್ಯವನ್ನು ಕೇಳಬೇಕೆ? ಆ ಯಾದವರ ದೊಂಬಿಯುದ್ಧದಲ್ಲಿ, ಯಾವನೊಬ್ಬನು ಯಾವುದೊಂದು ಹೊಡಕೆಯು ಕಡ್ಡಿಯನ್ನು ಕಿತ್ತು ಕೊಂಡರೂ, ಅದು ಅವನ ಕೈಗೆ ಬಂದೊಡನೆ ಉಕ್ಕಿನ ಒನಕೆಯಾಗಿ ಕಾಣಿ ಸುತ್ತಿದ್ದಿತು. ಮಹಾರಾಜಾ! ಇವೆಲ್ಲ ಬ್ರಾಹ್ಮಣಶಾಪದ ಪ್ರಭಾವವೆಂದು ತಿಳಿ! ಅವರು ಆ ತೃಣದಿಂದಲೇ ಒಬ್ಬರನ್ನೊಬ್ಬರು ಬೀಸಿಬೀಸಿ ಬಡಿ ಯುತಿದ್ದರು. ಒಂದೊಂದು ಹುಲ್ಲೂ ವಜ್ರದ ಒನಕೆಯಂತಾಗಿ ಸ್ಪರ್ಶಮಾ ತ್ರದಿಂದ ಯಾದವರನ್ನು ಕೊಲ್ಲುತಿದ್ದಿತು. ಆಗಿನ ಹೊಡೆದಾಟದಲ್ಲಿ ಒಬ್ಬ ರಿಗೊಬ್ಬರು ಮುಖವನ್ನೇ ನೋಡದೆ, ಸಿಕ್ಕಿದವರು ಸಿಕ್ಕಿದವರನ್ನು ಕೊಲ್ಲು ತಿದ್ದರು. ತಂದೆಯು ಮಗನೆಂದು ನೋಡಲಿಲ್ಲ. ಮಗನು ತಂದೆಯೆಂದು ನೋಡಲಿಲ್ಲ ಮೈಮೇಲೆ ಪ್ರಜ್ಞೆಯೇ ಇಲ್ಲದೆ ಒಬ್ಬರನ್ನೊಬ್ಬರು ಬಡಿದು ಕೊಂದರು. ಬೆಂಕಿಯಲ್ಲಿ ಬಿದ್ದ ಮಿಡಿತೆಗಳಂತೆ ಕುಕುರರು, ಅಂಧಕರು, ಮೊದಲಾದ ಯಾದವರೆಲ್ಲರೂ ಕೊಲೆಗೀಡಾದರು. ಇಂತಹ ಭಯಂಕರ ವಾದ ಕೊಲೆಯಲ್ಲಿಯೂ ಅಲ್ಲಿಂದ ಓಡಿಹೋಗಬೇಕೆಂಬ ಬುದ್ಧಿಯು ಒಬ್ಬ ನಿಗಾದರೂ ಹುಟ್ಟಲಿಲ್ಲ. ಈ ಕಾಲವೈಪರೀತ್ಯವನ್ನು ಮೊದಲೇ ಬಲ್ಲವ ನಾದ ಶ್ರೀಕೃಷ್ಣನು, ತಾನೂ ಕೈಯಲ್ಲಿ ಒಂದು ಒನಕೆ (ಹೊಡಕೆ) ಯ ನ್ನೂರಿ ನಿಂತು, ಇವನ್ನೆಲ್ಲ ಸುಮ್ಮನೆ ನೋಡುತಿದ್ದನು. ಚಕ್ರವನ್ನೂ, ಗದೆ ಯನ್ನೂ, ಶಾರ್ಙ್ಗವನ್ನೂ ಧರಿಸತಕ್ಕ ಆ ವಾಸುದೇವನು, ಸಾಂಬನೂ, ಚಾರುಧೇಷ್ಣನೂ, ಪ್ರದ್ಯುಮ್ನನೂ, ಅನಿರುದ್ಧನೂ, ಅಲ್ಲಿ ಸತ್ತುಬಿದ್ದಿರು ವುದನ್ನು ಕಂಡಮೇಲೆ, ಅವನಿಗೂ ಕೋಪವು ಅಂಕುರಿಸುತ್ತ ಬಂದಿತು. ಮತ್ತೊಂದುಕಡೆ ಗದನು ಸತ್ತು ಮಲಗಿರುವುದನ್ನು ನೋಡಿದಾಗ ಆ ಕೋಪವು ಮತ್ತಷ್ಟು ಹೆಚ್ಚಿತು. ತಾನೂ ಅಲ್ಲಲ್ಲಿ ಸಿಕ್ಕಿದವರನ್ನು ಹೊಡೆ ಯಲಾರಂಭಿಸಿ, ಯಾದವರಲ್ಲಿ ಯಾರೂ ಉಳಿಯದಂತೆ ಮಾಡಿದನು. ಆಗ ಕೃಷ್ಣನನ್ನು ನೋಡಿ, ಬಭ್ರುವೂ, ಮತ್ತು ದಾರುಕನೂ ಮುಂದೆ ಬಂದು ಅವನನ್ನು ತಡೆದು 'ಹೇ ಭಗವನ್! ನೀನು ಪ್ರಾಯಕವಾಗಿ ಎಲ್ಲ ರನ್ನೂ ಕೊಂದುದಾಯಿತು. ನಿಲ್ಲಿಸು! ನಿನ್ನ ಅಣ್ಣನಾದ ಬಲರಾಮನೆಲ್ಲಿರು ವನೋ ಮೊದಲು ಅವನನ್ನು ಕಂಡುಹಿಡಿ! ನಡೆ ಹೋಗುವೆವು' ಎಂದರು.

ಇದು ನಾಲ್ಕನೆಯ ಅಧ್ಯಾಯವು.

ಬಲಭದ್ರನು ಸರ್ಪಾಕಾರವನ್ನು ತಾಳಿ ಸಮುದ್ರದಲ್ಲಿ ಪ್ರವೇ
ಶಿಸಿಬಿಟ್ಟದು. ಕೃಷ್ಣನು ತಾನು ಮನುಷ್ಯಶರೀರವನ್ನು
ನೀಗುವದಾಗಿ ಉದ್ದೇಶಿಸಿ ಯೋಗಶಯನದಲ್ಲಿ ಮಲಗಿ
ದ್ದಾಗ, ಒಬ್ಬ ವ್ಯಾಧನು ಹೊಡೆದ ಬಾಣವು ಕೃಷ್ಣ
ನ ಕಾಲಿಗೆ ತಗುಲಿದುದು. ಆ ವ್ಯಾಧನು ಪಶ್ಚಾ
ತ್ತಾಪಪಟ್ಟು ಕೃಷ್ಣನ ಪಾದಗಳಿಗೆ ನಮಸ್ಕ
ರಿಸಿದುದು. ದೇವತಗಳು ಆ ವ್ಯಾಧನನ್ನು
ಸ್ವರ್ಗಕ್ಕೆ ಕರೆದುಕೊಂಡುಹೋದು
ದು' ಕೃಷ್ಣನು ದಿವ್ಯರೂಪದಿಂದ
ಸ್ವರ್ಗಕ್ಕೆ ಹೊರಟಾಗ ದೇವತೆ
ಗಳು ಪುಷ್ಪವರ್ಷಗಳಿಂದ
ಬರಮಾಡಿಕೊಂಡುದು.

ಓ ಜನಮೇಜಯರಾಜಾ! ಆಮೇಲೆ ಬಭ್ರು ದಾರುಕರೊಡನೆ ಕೃಷ್ಣನು ಬಲರಾಮನು ಹೋದ ದಾರಿಯನ್ನು ಹುಡುಕುತ್ತ ಹೊರಟನು. ಇಷ್ಟರಲ್ಲಿ ಅವರಿಗೆ ಒಂದಾನೊಂದು ಕಾಡಿನನಡುವೆ ಒಂದು ಮರವನ್ನೊರಗಿಕೊಂಡು, ಏಕಾಂತವಾಗಿ ಬಲರಾಮನು ಏನನ್ನೋ ಧ್ಯಾನಿಸುತ್ತಿರುವಹಾಗೆ ಕಾಣಿಸಿತು. ಆ ಸ್ಥಿತಿಯನ್ನು ಕಂಡೊಡನೆ ಮಹಾತ್ಮನಾದ ಕೃಷ್ಣನು ದಾರುಕನನ್ನು ಕುರಿತು 'ಮಿತ್ರ ದಾರುಕಾ! ನೀನು ಈಗಲೇ ಕೌರವರಾಜಧಾನಿಗೆ ಹೋಗಿ, ಅಲ್ಲಿ ಪಾರ್ಥನಿಗೆ ಯಾದವರೆಲ್ಲರೂ ಕೊಲೆಗೀಡಾದ ವೃತ್ತಾಂತವನ್ನು ತಿಳಿಸಿಬಿಡು. ಬ್ರಾಹ್ಮಣಶಾಪದಿಂದ ಯಾದವರಿಗುಂಟಾದ ಈ ಮರಣವನ್ನು ಕೇಳಿದೊಡನೆ ಅರ್ಜುನನು ಇಲ್ಲಿಗೆ ಬರಲಿ. ಇನ್ನು ನೀನು ಬೇಗನೆ ಹೊರಡು' ಎಂದನು.

ಈ ಕೃಷ್ಣಾಜ್ಞೆಯನ್ನು ಕೇಳಿದೊಡನೆ, ದಾರುಕನು ಮೈಮೇಲೆ ಪ್ರಜ್ಞೆಯೇ ಇಲ್ಲದವನಂತೆ ಹಿಂದುಮುಂದುತೋರದೆ, ರಥವನ್ನೇರಿ ಕುರುರಾಜಧಾನಿಗೆ ಹೊರಟನು. ದಾರುಕನನ್ನು ಅತ್ತಲಾಗಿ ಕಳುಹಿಸಿಬಿಟ್ಟ ಮೇಲೆ ಕೃಷ್ಣನು ಸಮೀಪದಲ್ಲಿದ್ದ ಬಭ್ರುವನ್ನು ನೋಡಿ, 'ಬಭ್ರೂ! ನೀನು ಯಾದವರಾಜಧಾನಿಗೆ ಈಗಲೇ ಹೊರಡಬೇಕು. ಅಲ್ಲಿ ನಮ್ಮ

ಯಾದವಸ್ತ್ರೀಯರೆಲ್ಲರೂ ಅನಾಥೆಯರಾಗಿರುವರು. ನೀನು ಹೋಗಿ ಅವ
ಕ್ಷೇಮವನ್ನು ನೋಡು ! ಊರಿನಲ್ಲಿ ಗಂಡಸರಿಲ್ಲದ ಸಮಯವನ್ನು ನೋಡಿ
ಹಣದಾಸೆಯಿಂದ ಕಳ್ಳರಾಗಲಿ, ಶತ್ರುಗಳಾಗಲಿ ಆ ಸ್ತ್ರೀಯರನ್ನು ಹಿಂಸಿಸ
ಬಹುದು. ಅದಕ್ಕವಕಾಶವಿಲ್ಲದಂತೆ ನೀನು ಅವರ ರಕ್ಷಣೆಯಲ್ಲಿರು. ಬೇಗನೆ
ಹೊರಡು' ಎಂದನು. ಮದ್ಯಪಾನಮದದಿಂದಲೂ, ಯಾದವರ ನಾಶ
ದಿಂದಲೂ ಮನಸ್ಸು ಸ್ವಾಧೀನವಿಲ್ಲದಿದ್ದ ಆ ಬಭ್ರುವು, ಶ್ರೀಕೃಷ್ಣನ ಆಜ್ಞೆ
ಯನ್ನು ಕೇಳಿದೊಡನೆ ಅಲ್ಲಿಂದ ಹೊರಟುಬಿಟ್ಟನು. ಮೊದಲು ನಾರದಾದಿ
ಗಳ ಶಾಪಕ್ಕೆ ಪ್ರತ್ಯಕ್ಷವಾಗಿಯೇ ಪಾತ್ರನಾಗಿದ್ದ ಆ ಬಭ್ರುವು ಆತುರದಿಂದ
ಮೇಲೆದ್ದು ಹೊರಟಕೂಡಲೆ, ಅಲ್ಲಿಯೇ ಶ್ರೀಕೃಷ್ಣನಿದ್ದ ಸ್ಥಳಕ್ಕೆ ಸಮೀಪ
ವಾಗಿ, ಬೇಡನೊಬ್ಬನು ಮೃಗಗಳನ್ನು ಕೊಲ್ಲುವುದಕ್ಕಾಗಿ ಯಂತ್ರದಲ್ಲಿ
ಕಟ್ಟಿದ್ದ ಒಂದು ಒನಕೆಯು ಆ ಬಭ್ರುವಿನ ತಲೆಗೆ ಬಡಿದು, ಅದರಿಂದ
ಆ ಕ್ಷಣವೇ ಅವನು ಮೃತನಾಗಿ ಬಿದ್ದನು. ಬಭ್ರುವೂ ಸತ್ತುಬಿದ್ದುದನ್ನು
ನೋಡಿ ಸರ್ವಜ್ಞನೂ, ಮಹಾತೇಜಸ್ವಿಯೂ ಆದ ಶ್ರೀ ವಾಸುದೇವನು
ತನ್ನಣ್ಣನಾದ ಬಲರಾಮನ ಬಳಿಗೆ ಬಂದು, 'ಅಣ್ಣಾ! ನೀನು ಇಲ್ಲಿಯೇ
ಇರು! ನಾನು ಹೋಗಿಬರುವೆನು. ನಾನು ಬರುವುದನ್ನು ನೀನು ಇಲ್ಲಿಯೇ
ನಿರೀಕ್ಷಿಸುತ್ತಿರಬೇಕು. ನಮ್ಮ ಸ್ತ್ರೀಯರೆಲ್ಲರೂ ಈಗ ದಿಕ್ಕಿಲ್ಲದೆ ಅನಾಥೆ
ಯರಾಗಿರುವುದರಿಂದ ಅವರನ್ನು ನಮ್ಮ ಬಂಧುಗಳ ರಕ್ಷಣೆಯಲ್ಲಿಟ್ಟು ಬರು
ವೆನು' ಎಂದು ಹೇಳಿ ಅಲ್ಲಿಂದ ಹೊರಟು ದ್ವಾರಕೆಗೆ ಬಂದನು ಅಲ್ಲಿಗೆ
ಬಂದು ತನ್ನ ತಂದೆಯನ್ನು ನೋಡಿ 'ಜನಕಾ! ಅರ್ಜುನನು ಈಗಲೇ
ಇಲ್ಲಿಗೆ ಬರುವನು. ಅವನ ಆಗಮನವನ್ನು ನಿರೀಕ್ಷಿಸುತ್ತ ನೀನು ನಮ್ಮ
ಸ್ತ್ರೀಯರನ್ನೂ, ಇತರ ವಸ್ತುಗಳನ್ನೂ ಕಾಪಾಡುತ್ತಿರು. ಅಣ್ಣನಾದ
ಬಲರಾಮನು ನನಗಾಗಿ ನಿರೀಕ್ಷಿಸುತ್ತ ಅಡವಿಯಲ್ಲಿರುವನು. ನಾನು
ಬೇಗನೆ ಅಲ್ಲಿಗೆ ಹೋಗಬೇಕು ಇದುಮಾತ್ರವಲ್ಲ! ಅಪ್ಪಾ! ನಾನು ನೋಡ
ಬೇಕಾದ ಅನರ್ಥಗಳನ್ನೆಲ್ಲ ನೋಡಿದುದಾಯಿತು. ಹಿಂದೆ ಕುರುಕ್ಷೇತ್ರ
ಯುದ್ಧದಲ್ಲಿ ಕೌರವರೆಲ್ಲರ ನಾಶವನ್ನೂ ಕಣ್ಣಾರೆ ನೋಡಿದೆನು. ಈಗ
ಎಲ್ಲಾ ಯಾದವರ ನಾಶವನ್ನೂ ನೋಡಿದೆನು. ಇನ್ನುಮೇಲೆ ನಾನು
ಯಾದವಶೂನ್ಯವಾದ ಯಾದವಪುರಿಯನ್ನು ಕಣ್ಣಿಂದ ನೋಡುತ್ತಿರಲು

ರೆನು. ಆದುದರಿಂದ ನಾನೂ ಅಣ್ಣನಾದ ಬಲರಾಮನೊಡನೆಯೇ ಕಾಡಿನಲ್ಲಿದ್ದು ತಪಸ್ಸನ್ನು ಮಾಡಬೇಕೆಂದೆಳಸುವೆನು' ಎಂದನು. ಶ್ರೀಕೃಷ್ಣನು ತಂದೆಯಾದ ವಸುದೇವನ ಮುಂದೆ ಹೀಗೆಂದು ಹೇಳಿ, ಅವನ ಪಾದಗಳನ್ನು ಹಿಡಿದು ತಲೆಬಗ್ಗಿ ನಮಸ್ಕರಿಸಿ, ಥಟ್ಟನೆ ಅಲ್ಲಿಂದ ಹಿಂತಿರುಗಿ ಹೊರಟುಬಿಟ್ಟನು ಅವನು ನಾಲ್ಕಾರು ಹೆಜ್ಜೆಗಳನ್ನಿಡುವಷ್ಟರಲ್ಲಿ, ಆ ಯಾದವನಗರಿಯೇ ಮೊತ್ತಕ್ಕೆ ಗೋಳಿಡುವಂತೆ, ಅಲ್ಲಿದ್ದ ಹೆಂಗಸರುಮಕ್ಕಳೆಲ್ಲ ಉಚ್ಚಧ್ವನಿಯಿಂದ ರೋದಿಸತೊಡಗಿದರು. ಆ ಆಕ್ರಂದನವನ್ನು ಕೇಳಿ ಕೃಷ್ಣನು ಹಿಂತಿರುಗಿ, ಅಳುತ್ತಿದ್ದ ಆ ಯಾದವಸ್ತ್ರೀಯರನ್ನು ನೋಡಿ 'ರೋದಿಸುವುದೇಕೆ? ಸವ್ಯಸಾಚಿಯು (ಅರ್ಜುನನು) ಶೀಘ್ರದಲ್ಲಿಯೇ ಈ ನಿಮ್ಮ ಪಟ್ಟಣಕ್ಕೆ ಬರುವನು ಅವನು ನಿಮ್ಮೆಲ್ಲರ ದುಃಖವನ್ನೂ ಶಾಂತಗೊಳಿಸಿ ನಿಮ್ಮನ್ನು ಕಾಪಾಡುವನು' ಎಂದು ಸಮಾಧಾನವನ್ನು ಹೇಳಿ ಅಲ್ಲಿಂದ ಹೊರಟುಬಿಟ್ಟನು. ಬಲರಾಮನಿದ್ದ ಅಡವಿಗೆ ಬಂದು, ಅಲ್ಲ ಏಕಾಕಿಯಾಗಿ ಯೋಗವನ್ನು ಹಿಡಿದು ಕುಳಿತಿದ್ದ ತನ್ನ ಅಣ್ಣನನ್ನು ಕಂಡನು ಶ್ರೀಕೃಷ್ಣನ ದೃಷ್ಟಿಯು ಅವನಮೇಲೆ ಬಿದ್ದೊಡನೆ, ಆ ಬಲರಾಮನ ಮುಖದಿಂದ ದೊಡ್ಡ ಸರ್ಪವೊಂದು ಹೊರಡುವಹಾಗೆ ಕಾಣಿಸಿತು. ಆ ಸರ್ಪವಾದರೋ ಬಿಳುಪಾಗಿ, ಪರ್ವತದಂತೆ ಮಹತ್ತಾದ ಆಕಾರದಿಂದಿರುವುದು! ಅದಕ್ಕೆ ಸಾವಿರಹೆಡೆಗಳು! ಕೆಂಪಾದ ಬಾಯಿ! ಇಂತಹ ಅದ್ಭುತಾಕಾರದಿಂದ ಕಾಣಿಸಿದ ಆ ಸರ್ಪವು, ಶ್ರೀಕೃಷ್ಣನನ್ನೇ ದೃಷ್ಟಿಯಿಟ್ಟು ನೋಡುತ್ತ, ಬಲರಾಮನ ಮೊದಲಿದ್ದ ಮಾನವಶರೀರವನ್ನು ಅಲ್ಲಿಯೇ ಬಿಟ್ಟು, ಮಹಾಸಮುದ್ರದಲ್ಲಿ ಪ್ರವೇಶಿಸಿಬಿಟ್ಟಿತು. ಈ ಮಹಾಸರ್ಪವು ತನ್ನಲ್ಲಿ ಬರುವುದನ್ನು ಕಂಡೊಡನೆ, ಸಮುದ್ರನೂ, ಅಲ್ಲಿದ್ದ ನಾಗಗಳೂ, ಪುಣ್ಯನದಿಗಳೂ, ಕರ್ಕೋಟಕ, ವಾಸುಕಿ, ತಕ್ಷಕನೇ ಮೊದಲಾದ ನಾಗಪ್ರಮುಖರೂ, ಆತ್ಯಾತುರದಿಂದ ಇದಿರುಗೊಂಡು ಬಂದು, ಆ ಮಹಾಶೇಷನನ್ನು ಬರಮಾಡಿಕೊಂಡರು. ಪೃಥುಶ್ರವಸ್ಸು, ಅರುಣನು, ಕುಂಜರನು, ಮಿಶ್ರಿ, ಶಂಖನು, ಕುಮುದನು, ಪುಂಡರೀಕನು, ಮಹಾತ್ಮನಾದ ಧೃತರಾಷ್ಟ್ರನೆಂಬ ಪ್ರಸಿದ್ಧನಾಗನು, ಹ್ರಾದನು, ಕ್ರಾಥನು, ಶಿತಿಪೃಷ್ಠನು, ನಿಕೇತು, ಚಕ್ರಮಂದ ಅತಿಷಂಡರೆಂಬ ಇಬ್ಬರು ನಾಗರು, ದುರ್ಮುಖ

ನೆಂದೂ, ಅಂಬರೀಷನೆಂದೂ ಪ್ರಖ್ಯಾತಿಗೊಂಡ ಇಬ್ಬರು ನಾಗಶ್ರೇಷ್ಠರು, ಇವರೆಲ್ಲರೂ ಆದಿಶೇಷರೂಪಿಯಾದ ಆ ಬಲರಾಮನನ್ನು ಇದಿರುಗೊಂಡು ಬಂದರು. ಜಲಾಧಿಪತಿಯಾದ ವರುಣರಾಜನೂ, ತಾನಾಗಿಯೇ ಬಂದು ಆ ಮಹಾಶೇಷನಿಗೆ ಸ್ವಾಗತವನ್ನು ಹೇಳಿ ಆದರಿಸಿದನು. ಭೂಮಿಗೆ ಆಧಾರಭೂತನಾದ ಆ ಸಂಕರ್ಷಣನನ್ನು ಅವರೆಲ್ಲರೂ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದರು.

ಓ ಜನಮೇಜಯರಾಜಾ! ತನ್ನಣ್ಣನಾದ ಬಲರಾಮನು, ನಿಜರೂಪವಾದ ಆದಿಶೇಷಾಕೃತಿಯನ್ನು ತಳೆದು ಸಮುದ್ರಪ್ರವೇಶಮಾಡಿ ಅದೃಶ್ಯನಾದುದನ್ನು ನೋಡಿದಮೇಲೆ, ಪ್ರಪಂಚದ ಹಿಂದುಮುಂದಿನ ಗತಿಗಳನ್ನೆಲ್ಲ ತಿಳಿಯಬಲ್ಲ ದಿವ್ಯದೃಷ್ಟಿಯುಳ್ಳವನೂ, ಸರ್ವಜ್ಞನೂ ಆದ ಶ್ರೀಕೃಷ್ಣನು, ಜನಶೂನ್ಯವಾಗಿದ್ದ ಅದೇವನದಲ್ಲ ಮುಂದೆ ತಾನು ಮಾಡಬೇಕಾದುದೇನೆಂಬುದನ್ನು ಚಿಂತಿಸುತ್ತ ಸ್ವಲ್ಪಹೊತ್ತು ಅಲ್ಲಲ್ಲಿ ಸಂಚರಿಸುತಿದ್ದನು ಆಮೇಲೆ ಅದೇ ವನದಲ್ಲಿ ಒಂದುಕಡೆ ಏಕಾಕಿಯಾಗಿ ನೆಲದಮೇಲೆ ಕುಳಿತನು. ಆಗ ಅವನಿಗೆ ಹಿಂದುಮುಂದಿನ ವಿಚಾರಗಳೆಲ್ಲ ಮನಸ್ಸಿಗೆ ಹೊಳೆದುವು. ಹಿಂದೆ ತಾನು ನಡೆಸಿದ ಕಾರ್ಯಕ್ಕಾಗಿ ಗಾಂಧಾರಿಯು ತನಗೆ ಹೇಳಿದ (ಶಾಪ) ವಾಕ್ಯವನ್ನು ಸ್ಮರಣೆಗೆ ತಂದುಕೊಂಡನು. ಎಂಜಲು ಪಾಯಸವನ್ನು ಮೈಗೆ ಲೇಪಿಸಿಕೊಂಡಾಗ ದೂರ್ವಾಸರು ತನಗೆ ಹೇಳಿದ ವಾಕ್ಯಗಳನ್ನೂ ಅವನು ತನ್ನ ನೆನಪಿಗೆ ತಂದುಕೊಂಡನು. ದೇವತೆಗಳಿಗೂ ಉತ್ಪತ್ತಿಕಾರಣನೂ, ಎಲ್ಲರಿಗೂ ವರಪ್ರದನೂ, ಚತುರ್ಮುಖ ಬ್ರಹ್ಮನಿಗೂ ನಿಯಾಮಕನಾದ ಪ್ರಭುವೂ, ಗೋವಿಂದ ವಾಸುದೇವಾದಿ ದಿವ್ಯ ನಾಮಗಳಿಂದ ಕೀರ್ತಿಸಲ್ಪಡತಕ್ಕವನೂ, ಆದಿಮಧ್ಯಾಂತಗಳಿಲ್ಲದ ನಿತ್ಯನೂ ಆದ ಆ ಶ್ರೀಕೃಷ್ಣನು, ಆಗ ಲೋಕದಲ್ಲಿ, ತಮ್ಮ ಶೀಲದಲ್ಲಿ ನೆಲೆಗೊಂಡ ಕುಲಸ್ತ್ರೀಯರಿಗೂ, ಗೋಬ್ರಾಹ್ಮಣರಿಗೂ ಧರ್ಮದಲ್ಲಿ ಬಲವನ್ನು ನೆಲೆಗೊಳಿಸಿದನು. ಆಮೇಲೆ ಮಹಾಮಹಿಮೆಯುಳ್ಳ ಆ ವಾಸುದೇವನು, ಅಂಧಕರು, ವೃಷ್ಣಿಗಳು ಮೊದಲಾದ ಎಲ್ಲಾ ಯಾದವರೂ ನಾಶಹೊಂದಿದುದನ್ನೂ, ಕೌರವಕುಲಕ್ಷಯವನ್ನೂ ಯೋಚಿಸಿ, ಇನ್ನುಮೇಲೆ ತಾನೂ

ತನ್ನ ಮಾನವಶರೀರವನ್ನು ತ್ಯಜಿಸಿ, ನಿಜಸ್ಥಾನಕ್ಕೆ ಹೊರಡಲು ಉಚಿತ ಕಾಲವೆಂದು ನಿಶ್ಚಯಿಸಿಕೊಂಡನು. ಈ ನಿಶ್ಚಯದಿಂದ ಅವನು ಮೊದಲು ತನ್ನ ಇಂದ್ರಿಯಗಳನ್ನು ಅಡಗಿಸಿಟ್ಟನು. ಎಲ್ಲಾ ವಸ್ತುಗಳ ತತ್ವವನ್ನೂ ಬಲ್ಲವನಾಗಿದ್ದ ಆ ವಾಸುದೇವನು, ತಾನು ದೇವದೇವನಾಗಿದ್ದರೂ ತ್ರೈಲೋಕ್ಯರಕ್ಷಣಾರ್ಥವಾಗಿಯೂ, ದೂರ್ವಾಸರು ತನಗೆ ಕೊಟ್ಟ ಶಾಪವನ್ನು ನಿಜವಾಗಿಸುವುದಕ್ಕಾಗಿಯೂ ತಾನು ಕೈಕೊಂಡಿದ್ದ ಆ ಮನುಷ್ಯದೇಹವನ್ನು ಬಿಟ್ಟು ಇಲ್ಲಿಂದ ನಿಜಸ್ಥಾನಕ್ಕೆ ಹೋಗಲು, ಏನಾದರೂ ಒಂದು ನಿಮಿತ್ತವನ್ನು ಲೋಕಕ್ಕೆ ಕಾಣಿಸಬೇಕೆಂದು ತನ್ನಲ್ಲಿತಾನು ಸಂಕಲ್ಪಿಸಿಕೊಂಡನು. ಒಡನೆಯೇ ನಿತ್ಯಾತ್ಮಕನಾದ ಆ ಭಗವಂತನು, ತನ್ನ ಇಂದ್ರಿಯಗಳನ್ನೂ, ವಾಕ್ಕನ್ನೂ, ಮನಸ್ಸನ್ನೂ ಅಡಗಿಸಿಟ್ಟುಕೊಂಡು, ಮಹಾಯೋಗವನ್ನವಲಂಬಿಸಿ ನೆಲದಮೇಲೆ ಮಲಗಿದನು. ಈ ಸಮಯಕ್ಕೆ ಸರಿಯಾಗಿ (ಆ ಕೃಷ್ಣನ ಸಂಕಲ್ಪದಂತೆ) ಜರನೆಂಬ ಬೇಡನೊಬ್ಬನು, ಮೃಗಗಳನ್ನು ಬೇಟೆಯಾಡುವ ಉದ್ದೇಶದಿಂದ ಆ ಸ್ಥಳಕ್ಕೆ ಬಂದುಸೇರಿದನು. ಮೃಗವನ್ನು ಹಿಡಿಯುವ ಆತುರದಿಂದ ಆ ಬೇಡನು ಶ್ರೀಕೃಷ್ಣನು ಅಲ್ಲಿ ಮಲಗಿದ್ದುದನ್ನು ನೋಡಿ (ಮೃಗವೆಂಬ ಭ್ರಾಂತಿಯಿಂದ) ಹಿಂದುಮುಂದು ಯೋಚಿಸದೆ ಆತುರಪಟ್ಟು ಆ ಕಡೆಗೆ ಬಾಣವನ್ನು ಬಿಟ್ಟನು ಆ ಬಾಣವು ಶ್ರೀಕೃಷ್ಣನ ಅಂಗಾಲಿನಲ್ಲಿ ನಾಟಿತು. ಒಡನೆಯೇ ಬೇಡನು ತಾನು ಮೃಗವನ್ನು ಹೊಡೆದೆನೆಂಬ ಭಾವದಿಂದ, ಅದನ್ನು ಎತ್ತಿಕೊಂಡುಹೋಗುವುದಕ್ಕಾಗಿ ಸಮೀಪಕ್ಕೆ ಓಡಿಬಂದನು. ಮುಂದೆ ಬಂದು ನೋಡಿದಮೇಲೆ ಆ ಬೇಡನ ಭಯಾಶ್ಚರ್ಯಗಳನ್ನು ಕೇಳಬೇಕೆ? ತನ್ನ ಬಾಣವು ಕಾಲಿನಲ್ಲಿ ನಾಟಿದ ವ್ಯಕ್ತಿಯಾದರೋ, ಪೀತಾಂಬರವನ್ನುಟ್ಟು, ಅನೇಕ ಬಾಹುಗಳುಳ್ಳವನಾಗಿ, ಯೋಗಶಯ್ಯೆಯಲ್ಲಿ ಮಲಗಿದ್ದ ದಿವ್ಯಪುರುಷನು! ಆ ದಿವ್ಯಾಕೃತಿಯನ್ನು ಕಂಡೊಡನೆ ಆ ಬೇಡನು ಬೆಜ್ಜರಬಿದ್ದು, ತಾನು ಮಾಡಿದ ಮಹಾಪರಾಧವನ್ನು ತಿಳಿದುಕೊಂಡು, ಒಡನೆ ಆ ಭಗವಂತನ ಪಾದಗಳೆರಡನ್ನೂ ಗಟ್ಟಿಯಾಗಿ ಹಿಡಿದು ನಮಸ್ಕರಿಸಿದನು. ಆಗ ಆ ಬೇಡನು ತಾನು ಮಾಡಿದ ದುಷ್ಕಾರ್ಯಕ್ಕಾಗಿಯೂ, ತನ್ನ ಹೀನಜಾತಿಗಾಗಿಯೂ ಪಶ್ಚಾತ್ತಾಪಗೊಂಡು, ಆಮೇಲೆ ತನಗುಂಟಾದ ಪುಣ್ಯಫಲದಿಂದಲೂ, ಭಕ್ತಿ

ಯಿಂದಲೂ ತನಗೆತಾನೇ ಸಮಾಧಾನಹೊಂದಿದವನಾಗಿ, ಅನಂತವೀರ್ಯ ವುಳ್ಳ ಆ ಶ್ರೀಕೃಷ್ಣನನ್ನು ನಟ್ಟಕಣ್ಣಿನಿಂದ ನೋಡಿದನು. ಈ ದರ್ಶನ ಫಲದಿಂದಲೇ ಅವನಿಗೆ ಪಾಪವೆಲ್ಲ ನೀಗಲು, ಅಲ್ಲಿಯೇ ಶರೀರವನ್ನು ಬಿಟ್ಟು ದೇವತೆಗಳಿಂದ ಸ್ವರ್ಗಕ್ಕೆ ಸಾಗಿಸಲ್ಪಟ್ಟನು ಆಮೇಲೆ ಶ್ರೀಕೃಷ್ಣನೂ ಕೂಡ ಮುನಿಗಣಗಳಿಂದ ಪೂಜಿಸಲ್ಪಡುತ್ತ, ತನ್ನ ದಿವ್ಯತೇಜಸ್ಸಿನಿಂದ ಸಮಸ್ತ ದಿಕ್ಕುಗಳನ್ನೂ ಬೆಳಗುತ್ತ, ಊರ್ಧ್ವಮುಖವಾಗಿ ಹೊರಟನು. ಹೀಗೆ ದಿವ್ಯತೇಜೋರೂಪದಿಂದ ಆ ಪರಮಾತ್ಮನು ಮೇಲೆಬರುವಾಗ ಅಶ್ವಿನೀದೇವತೆಗಳು, ಆದಿತ್ಯರು, ವಸುಗಳು, ರುದ್ರರು, ವಿಶ್ವೇದೇವತೆಗಳು, ಮಹರ್ಷಿಗಳು, ಸಿದ್ಧರು, ಗಂಧರ್ವಪ್ರಮುಖರು, ಅಪ್ಸರಸ್ಸುಗಳು, ಇವರೆಲ್ಲರೂ ದೇವೇಂದ್ರನನ್ನು ಮುಂದಿಟ್ಟುಕೊಂಡು ಇದಿರುಗೊಂಡು ಬಂದರು. ಓ ರಾಜೇಂದ್ರಾ! ಆಮೇಲೆ ಉಗ್ರತೇಜಸ್ಸುಳ್ಳವನೂ, ಸರ್ವಲೋಕಗಳಿಗೂ ಉತ್ಪತ್ತಿಕಾರಣನೂ, ನಾಶರಹಿತನೂ, ಯೋಗಾಚಾರ್ಯನೂ ಆದ ಆ ಶ್ರೀಮನ್ನಾರಾಯಣನು, ತನ್ನ ಕಾಂತಿವಿಶೇಷದಿಂದ ಭೂಮ್ಯಾಕಾಶಗಳನ್ನೆಲ್ಲ ಬೆಳಗುತ್ತ, ಅಪ್ರಮೇಯಪ್ರಭಾವವುಳ್ಳ ತನ್ನ ನಿಜಸ್ಥಾನವನ್ನು ಕುರಿತು ಹೊರಟನು. ದೇವತೆಗಳೂ, ಋಷಿಗಳೂ, ಚಾರಣರೂ, ಗಂಧರ್ವರೂ, ಅಪ್ಸರಸ್ಸುಗಳೂ, ಸಿದ್ಧರೂ, ಸಾಧ್ಯರೂ ಸುತ್ತಿಮುತ್ತಿ ಅವನನ್ನು ನಮಸ್ಕರಿಸಿ ಪೂಜಿಸಿದರು. ದೇವತೆಗಳೆಲ್ಲರೂ ಅವನನ್ನು ಸೇವಿಸಿದರು. ಮಹರ್ಷಿಗಳು ಋಕ್ಕುಗಳಿಂದ ಸ್ತುತಿಸಿ ಅರ್ಚಿಸಿದರು. ಗಂಧರ್ವರು ಗಾನದಿಂದ ಅವನ ಗುಣಗಳನ್ನು ಕೀರ್ತಿಸಿದರು. ದೇವೇಂದ್ರನು ಅತಿಪ್ರೀತಿಯಿಂದ ಸತ್ಕರಿಸಿದನು

ಆಗ ಅಲ್ಲಿ ನೆರೆದ ದೇವತೆಗಳೂ, ಋಷಿಗಳೂ, ಆ ಭಗವಂತನ ಮುಂದೆ ಬದ್ಧಾಂಜಲಿಗಳಾಗಿ, 'ಹೇ ಭಗವನ್ ನಮೋನಮಃ! ಶಾರ್ಙ್ಗಪಾಣೀ! ನಿನಗೆ ಬಾರಿಬಾರಿಗೂ ವಂದನವು! ದೇವಾ! ನೀನು ಧರ್ಮಸಂಸ್ಥಾಪನೆಗಾಗಿ ಭೂಮಿಯಲ್ಲಿ ಅವತರಿಸಿದೆ. ಕಂಸನೇ ಮೊದಲಾದ ದೇವಶತ್ರುಗಳನ್ನೆಲ್ಲ ಕೊಂದು, ಭೂಭಾರವನ್ನು ನೀಗಿಸಿ, ಭೂಮಿಯ ಕಷ್ಟವನ್ನು ಪರಿಹರಿಸಿದೆ. ಇನ್ನು ನೀನು ಜರೆಯಿಲ್ಲದುದೂ, ಹೀಗೆಂದು ಊ

ಹಿಸಲಿಕ್ಕೂ ಆಗದ ಮಹಾಮಹಿಮೆಯುಳ್ಳುದೂ, ಸಾಮಾನ್ಯಜ್ಞಾನಕ್ಕೆ ತಿಳಿಯದೆ ವೇದಮಾತ್ರಗಮ್ಯವೂ ಆದ ನಿನ್ನ ದಿವ್ಯಸ್ಥಾನದಲ್ಲಿ ನೆಲೆಗೊಂಡಿರು. ಹೀಗೆಯೇ ಒಂದೊಂದು ಕಲ್ಪದಲ್ಲಿಯೂ ನೀನು ಅವತರಿಸಿ, ಜನನ ಮರಣಗಳಿಂದ ಕಷ್ಟಪಡುತ್ತಿರುವ ಜನರನ್ನು ಕಷ್ಟದಿಂದುದ್ಧರಿಸುತ್ತಿರು' ಹೀಗೆಂದು ಹೊಗಳುತ್ತ, ಆ ದೇವಸಮೂಹವೆಲ್ಲ ದಿವ್ಯತೇಜಸ್ಸುಳ್ಳ ವಾಸುದೇವನನ್ನು ಹಿಂಬಾಲಿಸಿ ಅವನಮೇಲೆ ಪುಷ್ಪವರ್ಷವನ್ನು ಕರೆಯುತ್ತಬಂದಿತು.

ಓ ರಾಜಾ! ಆ ವಾಸುದೇವನು ಸೂರ್ಯಮಂಡಲದ ಮಾರ್ಗವಾಗಿ ಪ್ರವೇಶಿಸುವ ಸಮಯದಲ್ಲಿ ಒಂದು ಅಶರೀರವಾಣಿಯು 'ಓ ದೇವತೆಗಳಿರಾ! ನಾಲ್ಕು ಭುಜಗಳಿಂದಕೂಡಿ ಮಹಾಮಹಿಮೆಯುಳ್ಳುದಾಗಿ, ಪ್ರಾಣವಿಲ್ಲದಂತೆ ತೋರಿದರೂ ನಿರಪಾಯವಾಗಿ ಜೀವಿಸುತ್ತ, ಈಗ ಭೂಮಿಯಲ್ಲಿ ನೆಲೆಗೊಂಡಿರುವ ನನ್ನ ಸ್ವರೂಪವನ್ನು ನೀವು ಪೂಜಿಸಿರಿ! ನಾನು ಯಾವಾಗಲೂ ಅದರಲ್ಲಿ ವಾಸಮಾಡುತ್ತಿರುವೆನು' ಎಂದಿತು. ಬ್ರಹ್ಮನನ್ನು ಮುಂದಿಟ್ಟುಕೊಂಡು ಬಂದ ದೇವತೆಗಳೆಲ್ಲರೂ, ಈ ಅಶರೀರವಾಕ್ಯನ್ನು ಕೇಳಿ ಅಲ್ಲಿಂದ ಮುಂದೆ ಹೋಗಲಾರದೆ, ಭಕ್ತಿಯಿಂದ ಅವನನ್ನು ಧ್ಯಾನಿಸಿ ಆ ಪರಮಪುರುಷನನ್ನು ಕೊಂಡಾಡುತ್ತ, ಅಲ್ಲಿಂದ ಹಿಂತಿರುಗಿ ತಮ್ಮತಮ್ಮ ಸ್ಥಾನಗಳಿಗೆ ಬಂದು ಸೇರಿದರು

ಇದು ಐದನೆಯ ಅಧ್ಯಾಯವು.

ದಾರುಕನು ಹಸ್ತಿನಾಪುರಕ್ಕೆ ಹೋಗಿ ಯಾದವರ ನಾಶವನ್ನು ಪಾಂಡವರಿಗೆ ತಿಳಿಸಿದುದು. ಅರ್ಜುನನು ದ್ವಾರಕೆಗೆ ಬಂದು ರುಕ್ಮಿಣಿ ಮೊದಲಾದವರನ್ನು ಸಮಾಧಾನಗೊಳಿಸಿ, ವಸುದೇವನ ಬಳಿಗೆ ಬಂದುದು

ಓ ಜನಮೇಜಯರಾಜಾ! ದಾರುಕನು ಇತ್ತಲಾಗಿ ಕೌರವರಾಜಧಾನಿಯಾದ ಹಸ್ತಿನಾಪುರಕ್ಕೆ ಬಂದು, ಪಾಂಡವರನ್ನು ಕಂಡು, ವೃಷ್ಣಿಗಳೆಲ್ಲರೂ ಮುಸಲಪ್ರಹಾರದಿಂದ ಅನ್ಯೋನ್ಯವಾಗಿ ಹೊಡೆದಾಡಿ ಕೊಲೆಗೀ

ಡಾದ ವಿಷಯವನ್ನು ತಿಳಿಸಿದನು. ವೃಷ್ಣಿಗಳು, ಭೋಜರು, ಅಂಧಕ
ಕುಕುರರು, ಮೊದಲಾದ ಸಮಸ್ತ ಯಾದವರೂ ಮೃತರಾದುದನ್ನು ಕೆ
ಪಾಂಡವರು ದುಃಖದಿಂದಲೂ, ಭಯದಿಂದಲೂ ವ್ಯೆಮರೆತಂತಾದ
ಶ್ರೀಕೃಷ್ಣನಿಗೆ ಪ್ರಿಯಮಿತ್ರನಾದ ಅರ್ಜುನನು, ಆ ಪಾಂಡವರೆಲ್ಲರ ಅ
ಮತಿಯನ್ನು ಕೇಳಿಕೊಂಡು, ಒಡನೆ ತನ್ನ ಮಾವನನ್ನು ನೋಡುವ
ಕ್ಕಾಗಿ ದ್ವಾರಕೆಗೆ ಹೊರಟನು. ಮತ್ತು ಅವನು ಪಾಂಡವರ ದುಃಖಸ
ಧಾನಕ್ಕಾಗಿ "ಇದು ಎಂದಿಗೂ ಹೀಗೆ ನಡೆದಿರಲಾರ"ದೆಂದು ಹೆ
ಒಡನೆಯೇ ಪ್ರಯಾಣಹೊರಟನು. ಅವನು ದಾರುಕನನ್ನೂ ಸಂಗಡ
ದುಕೊಂಡು, ವೃಷ್ಣಿಗಳ ನಿವಾಸವಾದ ದ್ವಾರಕೆಗೆ ಬಂದು ನೋಡುವಾ
ಆ ನಗರಿಯು, ಗಂಡನು ಸತ್ತ ವಿಧವೆಯಂತೆ ಕೇವಲ ಕಾಂತಿಶೂನ್ಯವ
ಕಾಣಿಸಿತು. ಇದಕ್ಕೆಮೊದಲು ತ್ರೈಲೋಕ್ಯನಾಥನಾದ ಶ್ರೀಕೃಷ್ಣ
ಯಾವ ಸ್ತ್ರೀಯರಿಗೆ ಸರ್ವವಿಧದಲ್ಲಿಯೂ ರಕ್ಷಕನಾಗಿದ್ದನೋ, ಅಂ
ಯಾದವಸ್ತ್ರೀಯರು ಅನಾಥೆಯರಾಗಿ ಅರ್ಜುನನನ್ನು ಕಂಡೊಡನೆ ಗ
ಯಾಗಿ ರೋದಿಸತೊಡಗಿದರು. ಶ್ರೀವಾಸುದೇವನಿಂದ ಪರಿಗ್ರಹಿಸಲ್ಪಟ್ಟ
ಹದಿನಾರುಸಾವಿರ ಮಂದಿ ಸ್ತ್ರೀಯರೂ ಅರ್ಜುನನನ್ನು ಕಂಡೊಡನೆ
ದಾಗಿ ರೋದಿಸತೊಡಗಿದರು. ಅವರ ಆಕ್ರೋಶಧ್ವನಿಯು ಅತಿಪ್ರ
ವಾಯಿತು. ಆ ಸ್ತ್ರೀಯರ ಗೋಳನ್ನೂ, ಅವರ ಸ್ಥಿತಿಯನ್ನೂ ನೋ
ಅರ್ಜುನನಿಗೆ ಕಣ್ಣುಗಳಲ್ಲಿ ಫಳಫಳನೆ ನೀರು ಸುರಿಯುತ್ತಿತ್ತು.
ಯಾದ ಕೃಷ್ಣನನ್ನೂ, ಮಕ್ಕಳನ್ನೂ ಕಳೆದುಕೊಂಡು, ದಿಕ್ಕಿಲ್ಲದಂತೆ ಗೆ
ಳಾಡುತ್ತಿರುವ ಅವರ ಸ್ಥಿತಿಯನ್ನು ಅರ್ಜುನನು ನೋಡಿ ಸಹಿಸಲಾ
ಹೋದನು. ಆಗ ದ್ವಾರಕೆಯು ಅರ್ಜುನನಿಗೆ ಭಯಂಕರವಾದ ವೈತ
ಯಂತೆ ಕಾಣಿಸಿತು. ವೃಷ್ಣ್ಯಂಧಕರೇ ಮೊದಲಾದ ಯಾದವ ವೀರರೆ
ಜಲಸಮೃದ್ಧಿಯಿಂದಲೂ, ಕುದುರೆಗಳೆಂಬ ಮೀನುಗಳಿಂದಲೂ, ರ
ಳೆಂಬ ತೆಪ್ಪಗಳಿಂದಲೂ, ವಾದ್ಯಗಳ ಮತ್ತು ರಥಗಳ ಘೋಷವೆಂಬ ವೆ
ತದಿಂದಲೂ, ದೊಡ್ಡ ಮನೆಗಳು, ದೇವಾಲಯಗಳು ಮುಂತಾದ ಕಟ್ಟ
ಗಳೆಂಬ ದೊಡ್ಡ ಮೊಸಳೆಗಳಿಂದಲೂ, ನವರತ್ನಗಳೆಂಬ ಪಾಚಿಗಳಿಂದಲ
ವಜ್ರಮಯವಾದ ಪ್ರಾಕಾರಗಳೆಂಬ ಕಟ್ಟುಗಳಿಂದಲೂ, ರಾಮಕೃಷ್ಣರೆ

ದೊಡ್ಡ ತಿಮಿತಿಮಿಂಗಿಲಗಳಿಂದಲೂ ಶೋಭಿಸುತ್ತಿದ್ದ ಆ ದ್ವಾರಕೆಯೆಂಬ ನದಿಯು ಆಗ ಸಂಪೂರ್ಣವಾಗಿ ಒಣಗಿಹೋದಂತೆ ಕಾಣಿಸಿತು. ಮತ್ತು ರಾಜಬೀದಿಗಳೆಂಬ ಪ್ರವಾಹದ ಸುಳಿಗಳಿಂದಲೂ, ಚೌಕಗಳೆಂಬ ಮಡುಗಳಿಂದಲೂ ಶೋಭಿಸುತ್ತಿದ್ದ ಆ ದ್ವಾರಕೆಯೆಂಬ ನದಿಯು ಈಗ ಕಾಲಪಾಶಗಳಿಂದಲೂ, ಕ್ರೂರನಕ್ರಗಳಿಂದಲೂ (ಮೊಸಳೆ) ಕೂಡಿದ ಭಯಂಕರವಾದ ವೈತರಣಿನದಿಯಂತೆ ಕಣ್ಣಿಗೆ ಕಾಣಿಸಿತು. ವೃಷ್ಣಿಗಳ ಸುಳಿವೇ ಇಲ್ಲದಂತೆ ಕೇವಲ ಕಾಂತಿಹೀನವಾಗಿ, ಹಿಮಗಾಲದ ಕಮಲಸರೋವರದಂತೆ ಕಳೆಗುಂದಿದ್ದ ಆ ದ್ವಾರಕೆಯನ್ನೂ, ಶ್ರೀಕೃಷ್ಣಪತ್ನಿಯರ ಸ್ಥಿತಿಯನ್ನೂ ಕಂಡು ಅರ್ಜುನನು, ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸುತ್ತ ಥಟ್ಟನೆ ಮೂರ್ಛಿತನಾಗಿ ಬಿದ್ದನು. ಸತ್ರಾಜಿತ್ತಿನ ಮಗಳಾದ ಸತ್ಯಭಾಮೆಯೂ, ರುಕ್ಮಿಣಿಯೂ ಅರ್ಜುನನನ್ನು ಕಂಡೊಡನೆ ಅವನ ಮುಂದೆ ಬಿದ್ದು ರೋದಿಸಿದರು. ಆಮೇಲೆ ಯಾದವಸ್ತ್ರೀಯರೆಲ್ಲರೂ ಮುಂದೆ ಬಂದು ಮೂರ್ಛಿತನಾದ ಅರ್ಜುನನನ್ನು ಮೇಲಕ್ಕೆಬ್ಬಿಸಿ, ಒಂದು ಕಾಂಚನಪೀಠದ ಮೇಲೆ ಕುಳ್ಳಿರಿಸಿ ಉಪಚರಿಸಿದರು. ಆಗ ಅರ್ಜುನನು ಅವರ ಮುಂದೆ ಶ್ರೀಕೃಷ್ಣನ ಮಹಿಮೆಯನ್ನು ಹೇಳುತ್ತ, ಅವರೆಲ್ಲರಿಗೂ ತಕ್ಕ ಸಮಾಧಾನಗಳನ್ನು ಹೇಳಿ ತನ್ನ ಮಾವನಾದ ವಸುದೇವನನ್ನು ನೋಡುವುದಕ್ಕಾಗಿ, ಅವನ ಅರಮನೆಗೆ ಹೊರಟನು.

ಇದು ಆರನೆಯ ಅಧ್ಯಾಯವು.

---

ವಸುದೇವನು ತನ್ನ ಮನೆಗೆ ಬಂದ ಅರ್ಜುನನಿಗೆ ಯಾದವರ ನಾಶಕ್ಕೆ ಕಾರಣವನ್ನು ತಿಳಿಸಿದುದು. ಮತ್ತು ಕೃಷ್ಣನು ಹೇಳಿಹೋದ ಮಾತನ್ನು ಅರ್ಜುನನಿಗೆ ತಿಳಿಸಿ, ರಾಜ್ಯ, ಸ್ತ್ರೀ, ಧನಾದಿಗಳನ್ನೆಲ್ಲ ಒಪ್ಪಿಸಿ ತಾನು ಪ್ರಾಣತ್ಯಾಗಮಾಡುವುದಾಗಿ ಹೇಳಿದುದು.

ಓ ಜನಮೇಜಯರಾಜಾ! ವೀರನಾದ ಅರ್ಜುನನು ತನ್ನಲ್ಲಿಗೆ ಬಂದುದನ್ನು ನೋಡಿ, ಪುತ್ರಶೋಕದಿಂದ ಪೀಡಿಗೆನಾಗಿದ್ದ ವಸುದೇವನಿಗೆ

ಆ ದುಃಖವು ಮತ್ತಷ್ಟು ಹೆಚ್ಚಿತು ಅವನನ್ನು ನೋಡಿದೊಡನೆ ಅರ್ಜುನನೂ ಕೂಡ ಅತ್ಯಂತದುಃಖಾಕುಲನಾಗಿ ಕಣ್ಣೀರನ್ನು ಸುರಿಸುತ್ತ, ಆ ವಸುದೇವನ ಪಾದಗಳಮೇಲೆ ಬಿದ್ದನು. ಹೀಗೆ ತನ್ನ ಕಾಲುಗಳಮೇಲೆ ಬಿದ್ದ ಸೋದರಳಿಯನನ್ನು ವಸುದೇವನು ಕೈಹಿಡಿದು ಮೇಲಕ್ಕೆತ್ತಿ, ತನ್ನ ಪ್ರೀತಿಗಾಗಿ ಅವನ ತಲೆಯನ್ನು ಆಘ್ರಾಣಿಸುವುದಕ್ಕೆ ಪ್ರಯತ್ನಿಸಿದನು. ಆದರೆ ಅವನಿಗೆ ದುಃಖದಿಂದ ಯಾವುದೂ ಸಾಧ್ಯವಾಗಲಿಲ್ಲ. ವೃದ್ಧನಾದ ವಸುದೇವನು ಪ್ರಯತ್ನದಿಂದ ಕೈಗಳನ್ನು ನೀಡಿ, ಅರ್ಜುನನನ್ನಾಲಿಂಗಿಸಿಕೊಂಡು, ಗಟ್ಟಿಯಾಗಿ ರೋದಿಸತೊಡಗಿದನು. ತನ್ನ ಮಗನಾದ ಕೃಷ್ಣನನ್ನೂ, ಸಹೋದರರನ್ನೂ, ಪುತ್ರಪೌತ್ರದೌಹಿತ್ರರನ್ನೂ, ಮಿತ್ರರನ್ನೂ, ಸ್ಮರಿಸಿಕೊಂಡು ಬಹಳವಾಗಿ ರೋದಿಸುತ್ತ 'ಕುಮಾರಾ! ಅರ್ಜುನಾ! ಹಿಂದೆ ಯಾರು ಅನೇಕರಾಜರನ್ನೂ, ದೈತ್ಯರನ್ನೂ ಯುದ್ಧದಲ್ಲಿ ನೂರಾರು ಸಂಖ್ಯೆಯಿಂದ ಜಯಿಸಿದರೋ, ಅವರೊಬ್ಬರೂ ಈಗ ಕಾಣಿಸುವುದಿಲ್ಲ. ಅವರನ್ನು ನೋಡದೆಯೂ ಈಗ ನಾನು ಬದುಕಿರುವೆನಲ್ಲಾ ? ನನಗೆ ಸಾವೇ ಇಲ್ಲವೆಂದು ತೋರುವುದು. ಅರ್ಜುನಾ! ನಿನಗೆ ಅತ್ಯಂತ ಪ್ರಿಯ ಶಿಷ್ಯರಾಗಿ, ನಿನ್ನಿಂದ ಗೌರವಿಸಲ್ಪಡುತ್ತಿದ್ದ ಆ ಪ್ರದ್ಯುಮ್ನ ಸಾತ್ಯಕಿಗಳ ದುರ್ನಯದಿಂದಲ್ಲವೇ ಅಷ್ಟುಮಂದಿ ಯಾದವರೂ ಸಾಯುವಂತಾಯಿತು. ವೃಷ್ಣಿವಂಶದ ವೀರರೊಳಗೆಲ್ಲ ಇಬ್ಬರೇ ಅತಿರಥರೆಂದು ಪ್ರಖ್ಯಾತಿಗೊಂಡ ಅವರಿಬ್ಬರನ್ನೂ ನೀನು ಮತುಮಾತಿಗೂ ಪ್ರಶಂಸೆಮಾಡುತ್ತಿದ್ದೆಯಲ್ಲವೆ? ಶ್ರೀಕೃಷ್ಣನ ಪ್ರೀತಿಗೆ ಮುಖ್ಯಪಾತ್ರರಾಗಿದ್ದ ಅವರಿಬ್ಬರೇ ಈ ಯಾದವ ಕುಲನಾಶಕ್ಕೆ ಮುಖ್ಯಕಾರಣರಾದರಲ್ಲಾ ? ಓ ಅರ್ಜುನಾ! ಆ ಸಾತ್ಯಕಿಯನ್ನಾಗಲಿ, ಯಾವಾಗಲೂ ಕ್ರೂರಸ್ವಭಾವವಿಲ್ಲದ ಪ್ರದ್ಯುಮ್ನನನ್ನಾಗಲಿ, ಕೃತವರ್ಮನನ್ನಾಗಲಿ ನಾವೇಕೆ ನಿಂದಿಸಬೇಕು? ಅವರನ್ನು ನಿಂದಿಸುವುದು ಸರಿಯಲ್ಲ. ಇದಕ್ಕೆಲ್ಲ ಮೊದಲನೆಯ ಕಾರಣವು ಬ್ರಾಹ್ಮಣಶಾಪವೇ. ಲೋಕಪ್ರಭುವೆನಿಸಿದ ಯಾವ ಕೃಷ್ಣನು ಹಿಂದೆ ಕೇಶಿಯೆಂಬ ದಾನವನನ್ನೂ, ಕಂಸನನ್ನೂ, ಶಿಶುಪಾಲನನ್ನೂ, ಏಕಲವ್ಯನೆಂಬ ವ್ಯಾಧನನ್ನೂ, ಕಳಿಂಗ, ಮಾಗಧ, ಗಾಂಧಾರರಾಜರನ್ನೂ, ಕಾಶೀರಾಜನಾದ ಪೌಂಡ್ರಕನನ್ನೂ, ಮರುಭೂಮಿಯ ರಾಜರನ್ನೂ, ಪೂರ್ವದಕ್ಷಿಣದೇಶದ ಅರಸ

ರನ್ನೂ, ಪರ್ವತಪ್ರದೇಶದಲ್ಲಿದ್ದ ರಾಜರನ್ನೂ ಲೀಲಾಮಾತ್ರದಿಂದ ಕೊಂದನೋ, ಅಂತಹ ಸರ್ವಸಮರ್ಥನಾದ ಮಧುಸೂದನನೇ ಈ ಅಕೃತ್ಯಗಳನ್ನೆಲ್ಲ ನೋಡಿ ಉದಾಸೀನನಾಗಿದ್ದಮೇಲೆ, ಇನ್ನು ಮಾಡತಕ್ಕುದೇನು? ಅರ್ಜುನಾ! ಆದಿಪುರುಷನೂ, ದೋಷರಹಿತನೂ, ದೇವದೇವನೂ, ಅಚ್ಯುತನೂ ಆದ ಗೋವಿಂದನ ಪ್ರಭಾವವನ್ನು ನೀನೊಬ್ಬನು, ನಾರದನೊಬ್ಬನು, ತಪಸ್ಸಿದ್ಧರಾದ ಮಹರ್ಷಿಗಳು, ಇಷ್ಟುಮಂದಿಮಾತ್ರ ತಿಳಿದಿರುವರೇ ಹೊರತು ನಮ್ಮಂತವರಿಗೆ ಹೇಗೆ ತಿಳಿಯುವುದು? ನನ್ನ ಮಗನೆನಿಸಿಕೊಂಡ ಆ ಲೋಕಪ್ರಭುವು ತನ್ನ ಬಂಧುಗಳ ವಿನಾಶವನ್ನು ಕಣ್ಣಾರೆ ನೋಡಿಯೂ ಸುಮ್ಮನೆ ತಟಸ್ಥನಾಗಿದ್ದನಲ್ಲವೆ? ಓ ಪರಂತಪಾ! ಹಿಂದೆ ಗಾಂಧಾರಿಯು ಹೇಳಿದ ಮಾತೂ, ಋಷಿಗಳು ನುಡಿದ ವಾಕ್ಯಗಳೂ ಈಗ ನಿಜವಾದುವು. ಲೋಕಪ್ರಭುವಾದ ಕೃಷ್ಣನಿಗೆ ಆ ಮಹಾತ್ಮರ ಮಾತುಗಳನ್ನು ಸುಳ್ಳಾಗಿಸುವುದು ಇಷ್ಟವಿಲ್ಲ ಅರ್ಜುನಾ! ಅಷ್ಟೇಕೆ? ಇದಕ್ಕೆ ಮೊದಲು ಅಶ್ವತ್ಥಾಮನ ಅಸ್ತ್ರದಿಂದ ದಗ್ಧನಾದ ನಿನ್ನ ಮೊಮ್ಮಗನನ್ನು (ಪರೀಕ್ಷಿತ್ತನ್ನು) ಕೃಷ್ಣನು ತನ್ನ ತೇಜಸ್ಸಿನಿಂದ ನಿನ್ನಿದಿರಾಗಿಯೇ ಪುನಃ ಬದುಕಿಸಲಿಲ್ಲವೆ? ಅಂತವನಿಗೆ ಈಗ ಯಾದವರನ್ನು ಬದುಕಿಸುವುದೊಂದು ಅಸಾಧ್ಯಕಾರ್ಯವಾಗಿದ್ದಿತೆ? ಆದರೆ ಅವನಿಗೆ ಅವರನ್ನು ಬದುಕಿಸುವುದೇ ಇಷ್ಟವಿಲ್ಲ ಓ ಪಾರ್ಥಾ! ಆ ಕೃಷ್ಣನು ತನ್ನ ಪುತ್ರಪೌತ್ರಾದಿ ಬಂಧುವರ್ಗಗಳೆಲ್ಲ ಮೃತರಾಗಿ ಬಿದ್ದುದನ್ನು ನೋಡಿದಮೇಲೆ ನನ್ನನ್ನು ಕುರಿತು ಹೀಗೆಂದು ಹೇಳಿದನು 'ಜನಕಾ! ಯಾದವಕುಲಕ್ಕೆ ನಾಶವು ಪ್ರಾಪ್ತವಾಯಿತು. ಅರ್ಜುನನು ಶೀಘ್ರದಲ್ಲಿಯೇ ಈ ದ್ವಾರಕೆಗೆ ಬರುವನು. ವೃಷ್ಣಿಗಳ ದೊಡ್ಡ ವಿನಾಶವನ್ನು ಅವನಿಗೆ ನೀನೇ ತಿಳಿಸಬೇಕು. ಅವನಿಗೆ ಯಾದವರ ಕೊಲೆಯು ತಿಳಿದೊಡನೆ, ಖಂಡಿತವಾಗಿಯೂ ಇಲ್ಲಿಗೆ ಬಂದೇಬರುವನು. ಇದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ನಾನೇ ಅರ್ಜುನನೆಂದೂ, ಅರ್ಜುನನೇ ನಾನೆಂದೂ ತಿಳಿ. ನಮ್ಮಿಬ್ಬರಲ್ಲಿ ಭೇದವಿಲ್ಲ. ಆ ಅರ್ಜುನನು ಏನು ಹೇಳಿದರೆ ಅದನ್ನು ಹಾಗೆಯೇ ನಡೆಸಬೇಕೆಂದು ತಿಳಿ. ಮೃತರಾದವರಿಗೆಲ್ಲ ಆ ಅರ್ಜುನನೇ ಅಪರಸಂಸ್ಕಾರಗಳನ್ನು ನಡೆಸುವನು. ಮುಂದೆ ನಿನಗೂ ಅವನೇ ಔರ್ಧ್ವದೈಹಿಕವನ್ನು (ಅಪರಸಂಸ್ಕಾರಗಳನ್ನು)

ಮಾಡುವನು. ಇದಲ್ಲದೆ ಅರ್ಜುನನು ಈ ದ್ವಾರಕಾನಗರಿಗೆ ಬಂದು ಇಲ್ಲಿಂದ ಹಿಂತಿರುಗಿಹೋದೊಡನೆ, ಕೋಟೆ ಕೊತ್ತಲಗಳಿಂದಲೂ, ಅಟ್ಟಲೆಗಳಿಂದಲೂ ಶೋಭಿತವಾದ ಈ ನಗರಿಯನ್ನು ಸಮುದ್ರವು ತನ್ನೊಳಗೆ ಮುಳುಗಿಸಿಕೊಂಡುಬಿಡುವುದು. ಈಗಲೇ ನಾನು ಹೋಗಿ ಪವಿತ್ರವಾದ ಒಂದು ಸ್ಥಳದಲ್ಲಿ ಯೋಗನಿಯಮವನ್ನು ಹಿಡಿದು, ಬಲರಾಮನೊಡಗೂಡಿ ಈ ಲೋಕವನ್ನು ಬಿಟ್ಟುಹೋಗುವುದಕ್ಕಾಗಿ ಕಾಲವನ್ನು ನಿರೀಕ್ಷಿಸುತ್ತಿರುವೆನು. ಆದುದರಿಂದ ಈಗಲೇ ನಾನು ವನಕ್ಕೆ ಹೊರಡುವೆನು' ಎಂದು ಹೇಳಿ, ಈ ಸ್ತ್ರೀಬಾಲಕರೊಡನೆ ನನ್ನನ್ನು ಇಲ್ಲಿ ಬಿಟ್ಟು, ನಮಗೆ ತಿಳಿಯದಂತೆ ಎಲ್ಲಿಯೋ ಹೊರಟುಹೋದನು. ಅರ್ಜುನಾ! ಬಂಧುಗಳನ್ನೆಲ್ಲ ಕಳೆದುಕೊಂಡು, ಆ ರಾಮಕೃಷ್ಣರನ್ನೂ ಕಾಣದೆ ನಾನು ಆ ವ್ಯಸನದಿಂದ ಆಹಾರವನ್ನೇ ಭುಜಿಸುವುದಿಲ್ಲ. ನನ್ನ ದೇಹವು ಮೇಲೆಮೇಲೆ ಕೃಶವಾಗುತ್ತಲೇ ಇದೆ. ನನಗೆ ಹೇಗಿದ್ದರೂ ಈ ದುಃಖದಿಂದ ಬಿಡುಗಡೆಯಿಲ್ಲ. ನಾನು ಇನ್ನುಮೇಲೆ ಬದುಕಲೂ ಆರೆನು ದೈವಾಧೀನದಿಂದ ಈಗ ನೀನು ಇಲ್ಲಿಗೆ ಬಂದಿರುವೆ. ಶ್ರೀಕೃಷ್ಣನು ಏನನ್ನು ಹೇಳಿ ಹೋದನೋ ಅದರಂತೆ ನೀನು ನಡೆಸು. ಇದೋ! ಈ ನನ್ನ ರಾಜ್ಯವನ್ನೂ, ಸ್ತ್ರೀಯರನ್ನೂ, ರತ್ನಗಳನ್ನೂ ನಿನ್ನ ವಶಕ್ಕೆ ಬಿಟ್ಟಿರುವೆನು. ಇನ್ನುಮೇಲೆ ನಾನು ನನ್ನ ಪ್ರಾಣಗಳನ್ನೂ ಇಟ್ಟುಕೊಂಡಿರುವವನಲ್ಲ. ಪಾರ್ಥಾ! ಇನ್ನು ನೀನು ಕೃಷ್ಣಾಜ್ಞೆಯಂತೆ ನಡೆಸು' ಎಂದನು.

ಇದು ಏಳನೆಯ ಅಧ್ಯಾಯವು.

ಅರ್ಜುನನು ವಸುದೇವನನ್ನು ಸಮಾಧಾನಗೊಳಿಸಿ ದ್ವಾರಕೆಯು ಮುಳುಗಿಹೋಗುವುದಾಗಿ ಅಲ್ಲಿನ ಜನರಿಗೆ ತಿಳಿಸಿ, ಇಂದ್ರಪ್ರಸ್ಥಕ್ಕೆ ಹೋಗಲು ಪ್ರೇರಿಸಿದುದು. ವಸುದೇವನ ದೇಹತ್ಯಾಗವು. ಪುರಜನರು ಅಪರಕ್ರಿಯೆಗಳನ್ನು ಮಾಡಿ, ದ್ವಾರಕೆಯನ್ನು ಬಿಟ್ಟಮೇಲೆ ಸಮುದ್ರದಲ್ಲಿ ದ್ವಾರಕೆಯು ಮುಳುಗಿದುದು ಅರ್ಜುನನು ವಜ್ರಾದಿಗಳನ್ನು ಅವರವರ ರಾಜ್ಯದಲ್ಲಿ ಅಭಿಷೇಕಮಾಡಿದುದು ರುಕ್ಮಿಣಿ ಮೊದಲಾದವರ ಅಗ್ನಿಪ್ರವೇಶವು. ಬೇರೆ ಕೆಲವರು ತಪಸ್ಸಿಗೆ ಹೋದುದು

ಜನಮೇಜಯರಾಜಾ! ಕೇಳು! ಅರ್ಜುನನು ಮಾವನಾದ ವಸುದೇವನ ಮಾತನ್ನು ಕೇಳಿ ಬಹಳ ದುಃಖಿತನಾಗಿ, ದೀನಮುಖದಿಂದ ಹೀಗೆಂದು ಹೇಳುವನು. 'ಮಾವಾ! ವೃಷ್ಣಿಪ್ರಮುಖನಾದ ಆ ಸಾತ್ಯಕಿಯಿಂದಲೂ, ಇತರ ಬಂಧುಗಳಿಂದಲೂ ಶೂನ್ಯವಾದ ಈ ಭೂಮಿಯನ್ನು ನಾನು ಇನ್ನು ಬಹುಕಾಲ ನೋಡಿಕೊಂಡಿರಲಾರೆನು. ನಾನೊಬ್ಬನುಮಾತ್ರವಲ್ಲ. ರಾಜನಾದ ನಮ್ಮಣ್ಣನು, ಭೀಮಸೇನನು, ನಕುಲಸಹದೇವರು, ದ್ರೌಪದಿ, ಈ ಆರುಮಂದಿಯೂ ಯಾವಾಗಲೂ ಏಕಮನಸ್ಸುಳ್ಳವರೆಂದು ತಿಳಿ ಧರ್ಮರಾಜನಿಗೂಕೂಡ ಇದನ್ನು ಬಿಟ್ಟುಹೋಗುವುದರಲ್ಲಿ ಯಾವಾಗಲೂ ಆತುರವಿದ್ದೇ ಇರುವುದು. ಅದಕ್ಕೆ ಈಗ ಕಾಲವು ಬಂದುಬಿಟ್ಟಿತೆಂದು ತಿಳಿ. ಓ ಕಾಲಜ್ಞನೇ! ಈಗಲೇ ನಾನು ವೃಷ್ಣಿಪತ್ನಿಯರನ್ನೂ, ಮಕ್ಕಳನ್ನೂ, ಮುದುಕರನ್ನೂ ಕರೆದುಕೊಂಡು ಇಂದ್ರಪ್ರಸ್ಥಕ್ಕೆ ಹೊರಡುವೆನು' ಎಂದು ಹೇಳಿ, ಸಮೀಪದಲ್ಲಿದ್ದ ದಾರುಕನನ್ನು ಕರೆದು 'ದಾರುಕಾ! ಯಾದವಮಂತ್ರಿಗಳನ್ನೂ, ಇಲ್ಲಿ ಉಳಿದಿರುವ ಯಾದವವೀರರನ್ನೂ ಈಗಲೇ ನಾನು ನೋಡಬೇಕಾಗಿದೆ. ನಡೆ ಅಲ್ಲಿಗೆ ಹೋಗುವೆವು' ಎಂದು ಹೇಳಿ ಯಾದವರ ಸುಧರ್ಮೆಯೆಂಬ ಸಭೆಗೆ ಹೊರಟನು. ಮಹಾವ್ಯಸನದಿಂದ ಅರ್ಜುನನು ಆ ಯಾದವಸಭೆಗೆ ಪ್ರವೇಶಿಸಿ, ಆಸನದಲ್ಲಿ ಕುಳಿತೊಡನೆ ಅಲ್ಲಿನ ಎಲ್ಲಾ ಪ್ರಜೆಗಳೂ, ಪುರವಾಸಿಗಳೂ, ನಗರವಾಸಿಗಳೂ, ಬ್ರಾಹ್ಮಣರೂ

ದುಃಖದಿಂದ ತಪಿಸುತ್ತ ಅವನನ್ನು ಸುತ್ತಿಮುತ್ತಿ ನಿಂತರು. ಏನೊಂದೂ ತೋರದೆ ಬುದ್ಧಿಭ್ರಮೆಹಿಡಿದವರಂತೆ ನಿಂತಿದ್ದ ಅವರನ್ನು ನೋಡಿ ಅರ್ಜುನನು 'ಎಲೈ ಪೂಜ್ಯರೇ! ನಿಮ್ಮ ವಾಹನಗಳನ್ನೂ, ಆಸ್ತಿಪಾಸ್ತಿಗಳನ್ನೂ, ನಿಮ್ಮಲ್ಲಿರುವ ಒಡವೆ ವಸ್ತುಗಳೆಲ್ಲವನ್ನೂ ಸಿದ್ಧಪಡಿಸಿಕೊಳ್ಳಿರಿ ಈ ದ್ವಾರಕೆಯನ್ನು ಶೀಘ್ರದಲ್ಲಿಯೇ ಸಮುದ್ರವು ತನ್ನಲ್ಲಿ ಮುಳುಗಿಸಿಕೊಳ್ಳುವುದು. ಆದುದರಿಂದ ಇಲ್ಲಿರುವ ವೃಷ್ಣಿಗಳು, ಅಂಧಕರು ಮೊದಲಾದವರನ್ನೆಲ್ಲ ನಾನು ಇಂದ್ರಪ್ರಸ್ಥಕ್ಕೆ ಕರೆದುಕೊಂಡುಹೋಗಿ ಬಿಡುವೆನು ಅಲ್ಲಿ ಈ *ವಜ್ರನು ಮುಂದೆ ನಿಮಗೆ ರಾಜನಾಗುವನು. ಇದಕ್ಕೆ ಏಳನೆಯ ದಿನದಲ್ಲಿ ಸೂರ್ಯನು ಉದಯಿಸುತ್ತಿರುವಾಗ ಈ ನಗರವು ಸಮುದ್ರದಲ್ಲಿ ಮುಳುಗಿಹೋಗುವುದು ಅಷ್ಟರಲ್ಲಿ ನಾವೆಲ್ಲರೂ ಇದನ್ನು ಬಿಟ್ಟುಹೋಗಿರಬೇಕು. ಬೇಗನೆ ಅಣಿಮಾಡಿರಿ' ಎಂದನು ಅರ್ಜುನನಿಂದ ಈ ಮಾತನ್ನು ಕೇಳಿದೊಡನೆ, ಎಲ್ಲರೂ ಆತುರದಿಂದ ಪ್ರಯಾಣಸನ್ನಾಹಗಳನ್ನು ನಡೆಸುತಿದ್ದರು. ಆ ರಾತ್ರಿ ಅರ್ಜುನನು ಮಹಾವ್ಯಸನದಿಂದ ಶ್ರೀಕೃಷ್ಣನ ಅರಮನೆಯಲ್ಲಿಯೇ ತಂಗಿದ್ದನು ರಾತ್ರಿಯು ಕಳೆದು ಬೆಳಗಾದೊಡನೆ ವಸುದೇವನು, ಆತ್ಮವನ್ನು ಯೋಗದಲ್ಲಿ ನೆಲೆಗೊಳಿಸಿ ಶರೀರತ್ಯಾಗದಿಂದ ಊರ್ಧ್ವಗತಿಯನ್ನು ಹೊಂದಿದನು. ಅವನ ಅರಮನೆಯಲ್ಲಿ ಯಾದವಸ್ತ್ರೀಯರ ಭಯಂಕರವಾದ ರೋದನಧ್ವನಿಯು ಕೇಳಿಸಿತು. ಅಂತಃಪುರಸ್ತ್ರೀಯರೆಲ್ಲರೂ ತಮ್ಮ ಮೈಮೇಲಿದ್ದ ಪುಷ್ಪಗಳನ್ನೂ, ಆಭರಣಗಳನ್ನೂ ತೆಗೆದುಹಾಕಿ ತಲೆಬಿಚ್ಚಿಕೊಂಡು ಎದೆಯನ್ನು ಕೈಗಳಿಂದ ಬಡಿದುಕೊಳ್ಳುತ್ತ ಘಟ್ಟಿಯಾಗಿ ರೋದಿಸಿದರು. ದೇವಕಿ, ಭದ್ರೆ, ರೋಹಿಣಿ, ಮದಿರೆ, ಇವರೂ, ಇನ್ನೂ ಇತರ ಯಾದವಸ್ತ್ರೀಯರೂ ತಮ್ಮತಮ್ಮ ಪತಿಗಳ ದೇಹದೊಡನೆ ಚಿತೆಯನ್ನೇರಿ ಸಹಗಮನಮಾಡಲು ಯತ್ನಿಸುತ್ತಿದ್ದರು. ಆಮೇಲೆ ಅರ್ಜುನನು ಮನುಷ್ಯರಿಂದ ಹೊರಲ್ಪಡುವ ಅಮೂಲ್ಯವಾದ ವಿಮಾನದಲ್ಲಿ ವಸುದೇವನ ದೇಹವನ್ನಿಟ್ಟು ಊರಹೊರಕ್ಕೆ ಸಾಗಿಸುವಂತೆ ನಿಯಮಿಸಿದನು. ದ್ವಾರಕಾವಾಸಿಗಳಾದ ಸಮಸ್ತ ಪ್ರಜೆಗಳೂ ಮಹಾವ್ಯಸನದೊಡನೆ ಆ

* ಶ್ರೀಕೃಷ್ಣನ ಮಗನು ಪ್ರದ್ಯುಮ್ನನು, ಪ್ರದ್ಯುಮ್ನನ ಮಗನು ಅನಿರುದ್ಧನು, ಅನಿರುದ್ಧಪುತ್ರನು ವಜ್ರನು

ವಿಮಾನವನ್ನು ಹಿಂಬಾಲಿಸಿದರು. ಅಶ್ವಮೇಧಯಾಗಕ್ಕೆ ಉಪಯೋಗಿಸ ತಕ್ಕ ಪವಿತ್ರವಾದ ಕೊಡೆಯೂ, ಜ್ವಲಿಸುವ ಮಂತ್ರಾಗ್ನಿಗಳೂ ಯಾಜಕರೂ ಆ ವಿಮಾನದ ಮುಂಭಾಗದಲ್ಲಿ ಬರುತ್ತಿದ್ದರು ಅಂತಃಪುರದ ರಾಜಸ್ತ್ರೀಯ ರೆಲ್ಲರೂ ಅಲಂಕೃತರಾಗಿ ಇನ್ನೂ ಸಾವಿರಾರುಮಂದಿ ಯಾದವಸ್ತ್ರೀಯರೊ ಡನೆಯೂ, ಸೊಸೆಯರೊಡನೆಯೂ ಆ ವಿಮಾನವನ್ನು ಹಿಂಬಾಲಿಸಿದರು. ಆ ಮಹಾತ್ಮನು ಬದುಕಿದ್ದ ಕಾಲದಲ್ಲಿ ಅವನಿಗೆ ಯಾವ ದೇಶವು ಪ್ರಿಯವೆನಿ ಸಿದ್ದಿತೋ, ಅಲ್ಲಿಗೆ ಅವನನ್ನು ತಂದಿಟ್ಟು ಪಿತೃಮೇಧಸಂಸ್ಕಾರವನ್ನು ನಡೆಸಿದರು ಅವನ ಶರೀರವನ್ನು ಚಿತೆಯಮೇಲೆ ಏರಿಸಿದೊಡನೆ ಅವನ ನಾಲ್ವರು ಪತ್ನಿಯರೂ, ಪತಿಲೋಕಪ್ರಾಪ್ತಿಗಾಗಿ ಅದೇ ಚಿತೆಯನ್ನೇರಿ ಮಲಗಿದರು ನಾಲ್ಕುಮಂದಿ ಪತ್ನಿಯರೊಡನೆ ಚಿತೆಯಮೇಲಿದ್ದ ಆ ವಸು ದೇವನ ದೇಹವನ್ನು ಅರ್ಜುನನು ಚಂದನ ಮೊದಲಾದ ಉತ್ತಮತರದ ಗಂಧದ ಕಟ್ಟಿಗೆಗಳಿಂದ ದಹನಮಾಡಿಸಿದನು. ಆಗ ಧಗಧಗನೆ ಉರಿಯು ತ್ತಿರುವ ಆ ಚಿತಾಗ್ನಿಯ ಶಬ್ದವೂ, ಬ್ರಾಹ್ಮಣರ ಸಾಮಗಾನಧ್ವನಿಯೂ, ಸುತ್ತಲೂ ನಿಂತು ರೋದಿಸುತ್ತಿರುವವರ ಆಕ್ರಂದನಧ್ವನಿಯೂ, ಒಂದಾಗಿ ಪ್ರಬಲಶಬ್ದವಾಯಿತು. ಆಮೇಲೆ ವಜ್ರನೇ ಮೊದಲಾದ ವೃಷ್ಣ್ಯಂಧಕ ಕುಮಾರರೂ, ಯಾದವಸ್ತ್ರೀಯರೂ ಮಹಾತ್ಮನಾದ ವಸುದೇವನಿಗೆ ಜಲ ತರ್ಪಣಗಳನ್ನು ಮಾಡಿದರು. ಅರ್ಜುನನು ಹೀಗೆ ಧರ್ಮಲೋಪವಿಲ್ಲ ದಂತೆ ಸಂಸ್ಕಾರಗಳನ್ನೆಲ್ಲ ನಡೆಸಿದಮೇಲೆ, ವೃಷ್ಣಿಗಳು ಹೊಡೆದಾಡಿ ಸತ್ತ ಸ್ಥಳಕ್ಕೆ ಹೊರಟುಬಂದನು. ಅಲ್ಲಿ ಮೃತರಾಗಿ ಬಿದ್ದಿದ್ದ ಆ ಯಾದ ವವೀರರನ್ನೆಲ್ಲ ನೋಡಿ, ಅತ್ಯಂತ ದುಃಖಿತನಾಗಿ, ಕೊನೆಗೆ ಕಾಲೋ ಚಿತವಾದ ಕಾರ್ಯವೇನೋ ಅದಕ್ಕೆ ಆರಂಭಿಸಿದನು. ಬ್ರಾಹ್ಮಣಶಾಪ ಕ್ಕೀಡಾಗಿ, ಮುಸಲರೂಪಗಳಾದ ಹೊಡಕೆಯ ಕಡ್ಡಿಗಳಿಂದ ತಮ್ಮೊಳಗೆ ಹೊಡೆದಾಡಿ ಸತ್ತ ಆ ಯಾದವರಿಗೆಲ್ಲ, ಅವರವರ ಅಂತಸ್ಥಿಗೆ ತಕ್ಕಂತೆ ಕ್ರಮವಾಗಿ, ಎಲ್ಲಾ ಕರ್ಮಗಳನ್ನೂ ಮಾಡಿಸಿದನು. ಆಮೇಲೆ ಶ್ರೀಕೃಷ್ಣ ನಿಗೆ ಪ್ರಿಯಶಿಷ್ಯನಾದ ಅರ್ಜುನನು, ಆ ಭಗವಂತನು ತನ್ನ ಪ್ರಾಕೃತ ಶರೀರವನ್ನು ಬಿಟ್ಟುಹೋಗಿದ್ದ ಸ್ಥಳಕ್ಕೆ ಬಂದು, ನಿಶ್ಚೇತನವಾದ ಆ ಶರೀರ ವನ್ನು ನೋಡಿ, ಹಿಂದೆ ಕೃಷ್ಣನು ಹೇಳಿದ ಮಾತುಗಳನ್ನೆಲ್ಲ ಮನಸ್ಸಿಗೆ

ತಂದುಕೊಂಡು, ದುಃಖದಿಂದ ಸ್ವಲ್ಪಹೊತ್ತು ಮೋಹಗೊಂಡಂತಾದನು. ಆಮೇಲೆ ರಾಮಕೃಷ್ಣರಿಬ್ಬರ ಶರೀರಗಳನ್ನೂ ತನ್ನ ಆಪ್ತರಾದ ಪುರುಷರಿಂದ ದಹನಮಾಡಿಸಿ, ಅವರಿಗೆ ಲೋಕರೀತಿಯಾಗಿ ನಡೆಸಬೇಕಾದ ಅಪರಕಾರ್ಯಗಳನ್ನೆಲ್ಲ ನಡೆಸಿದನು ಅಲ್ಲಿಂದ ಏಳನೆಯ ದಿವಸಕ್ಕೆ ಸರಿಯಾಗಿ ರಥವನ್ನೇರಿ ವೇಗದಿಂದ ಹೊರಡುವುದಕ್ಕೆ ಯತ್ನಿಸಿದನು ಯಾದವಸ್ತ್ರೀಯರೂಕೂಡ ಎತ್ತು, ಕುದುರೆ, ಒಂಟೆ, ಇವುಗಳಿಂದ ಕೂಡಿದ ರಥಗಳಲ್ಲಿ ಕುಳಿತು, ವ್ಯಸನದಿಂದ ಗೋಳಿಡುತ್ತ ಅರ್ಜುನನನ್ನು ಹಿಂಬಾಲಿಸಿದರು. ಭೃತ್ಯರು, ಕುದುರೆಯ ಸೈನಿಕರು, ರಥಿಕರು, ವೃದ್ಧರು, ಬಾಲಕರು, ಮೊದಲಾದ ಪುರಜನಗಳೆಲ್ಲರೂ ಆ ಸ್ತ್ರೀಸಮೂಹಕ್ಕೆ ಕಾವಲಾಗಿ, ಅವರನ್ನು ಸುತ್ತಿಮುತ್ತಿ ಬಹಳ ಎಚ್ಚರದಿಂದ ಕರೆದುಕೊಂಡುಬರುತ್ತಿದ್ದರು. ವೀರರೊಬ್ಬರೂ ಇಲ್ಲದಿರಲು, ನಗರವಾಸಿಗಳಾದ ಜನಗಳೇ ಅರ್ಜುನಾಜ್ಞೆಯಿಂದ ಯಾದವಸ್ತ್ರೀಯರಿಗೆ ಬೆಂಗಾವಲಾಗಿ ಬಂದರು ಆನೆಯ ಸೈನಿಕರು ಪರ್ವತಾಕಾರವಾದ ಆನೆಗಳನ್ನೇರಿ, ಪಾದರಕ್ಷಕರೊಡನೆ ಉತ್ತಮಾಯುಧಗಳನ್ನು ಹಿಡಿದು ಬರುತ್ತಿದ್ದರು. ಅಂಧಕರ ಮತ್ತು ವೃಷ್ಣಿಗಳ ಕುಮಾರರೆಲ್ಲರೂ ಅರ್ಜುನನ ಸಮೀಪದಲ್ಲಿ ಬಂದರು ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಅರ್ಜುನನನ್ನು ಹಿಂಬಾಲಿಸಿದರು. ಶ್ರೀಕೃಷ್ಣನ ಪರಿಗ್ರಹಗಳಾದ ಹದಿನಾರುಸಾವಿರಮಂದಿ ಸ್ತ್ರೀಯರೂ ಕೃಷ್ಣನ ಮೊಮ್ಮಗನಾದ ವಜ್ರನನ್ನು ಸುತ್ತಿಮುತ್ತಿ ಹೊರಟುಬರುತ್ತಿದ್ದರು. ಪತಿಪುತ್ರರನ್ನೆಲ್ಲ ಕಳೆದುಕೊಂಡ ಅಂಧಕ ಭೋಜ ವೃಷ್ಣಿಸ್ತ್ರೀಯರು, ನೂರು ಸಾವಿರ ಲಕ್ಷ್ಯಸಂಖ್ಯೆಯಿಂದ ಅರ್ಜುನನನ್ನು ಹಿಂಬಾಲಿಸುತ್ತಿದ್ದರು. ಮಹಾಸಮುದ್ರದಂತಿದ್ದ ಆ ಯಾದವಕುಲವನ್ನೆಲ್ಲ ಅರ್ಜುನನು ಬಹಳ ಎಚ್ಚರದಿಂದ ಸಾಗಿಸುತ್ತಿದ್ದನು. ಈ ಜನಸಮೂಹವೆಲ್ಲ ದ್ವಾರಕಾನಗರವನ್ನು ಬಿಟ್ಟು ಬಂದೊಡನೆ, ಮಹಾಸಮುದ್ರವು ಉಕ್ಕಿಬಂದು, ರತ್ನಸಂಪೂರ್ಣವಾದ ದ್ವಾರಕೆಯನ್ನು ತನ್ನ ನೀರಿನಲ್ಲಿ ಮುಳುಗಿಸಿಕೊಂಡಿತು. ಪುರುಷಶ್ರೇಷ್ಠನಾದ ಅರ್ಜುನನು ಆ ಯಾದವಕುಲದೊಡನೆ ದ್ವಾರಕೆಯಲ್ಲಿ ಯಾವಯಾವ ಸ್ಥಳಗಳನ್ನು ದಾಟಿ ಮುಂದೆ ಬರುತ್ತಿದ್ದನೋ, ಆಯಾ ಸ್ಥಳವು ಆಗಾಗಲೇ ನೀರಿನಲ್ಲಿ ಮುಳುಗಿಹೋಗುತ್ತಿದ್ದಿತು. ಈ ಮಹಾಶ್ಚರ್ಯ

ವನ್ನು ನೋಡಿ ದ್ವಾರಕಾವಾಸಿಗಳೆಲ್ಲರೂ 'ಆಹಾ! ದೈವವಿಲಾಸವೇ!' ಎಂದು ಹೇಳುತ್ತ, ಮುಂದೆ ಮುಂದೆ ವೇಗದಿಂದ ನಡೆಯುತ್ತಿದ್ದರು. ಅರ್ಜುನನು ಆ ಜನರನ್ನೆಲ್ಲ ರಮ್ಯವಾದ ಕಾಡುಗಳ ಮಾರ್ಗವಾಗಿಯೂ, ಬೆಟ್ಟಗುಡ್ಡಗಳನ್ನೇರಿಯೂ, ನದೀತೀರಗಳಲ್ಲಿ ತಂಗಿಯೂ, ಬಹಳ ಪ್ರಯತ್ನದಿಂದ ಸಾಗಿಸಿಕೊಂಡುಬರುತ್ತಿದ್ದನು. ಯಾದವಸ್ತ್ರೀಯರು ಅವನನ್ನು ಹಿಂಬಾಲಿಸುತ್ತಿದ್ದರು. ಎಲ್ಲರೂ ಫಲಸಮೃದ್ಧವಾದ ಪಂಚನದವೆಂಬ ಸ್ಥಳಕ್ಕೆ ಬಂದರು ಪಶುಗಳಿಂದಲೂ, ಧಾನ್ಯಗಳಿಂದಲೂ ಸಮೃದ್ಧವಾದ ಆ ಪ್ರದೇಶದಲ್ಲಿ ಅರ್ಜುನನು, ಆ ಸ್ತ್ರೀಯರನ್ನೆಲ್ಲ ಇಳಿಸಿ, ಅಲ್ಲಿ ತಂಗಿದ್ದನು ವೀರನಾದ ಅರ್ಜುನನೊಬ್ಬನೇ ಹೀಗೆ ಅನೇಕಸ್ತ್ರೀಯರಿಗೆ ಕಾವಲಾಗಿ ಬಂದಿರುವುದನ್ನು ನೋಡಿದಾಗ, ಅಲ್ಲಿ ಹೊಂಚುಹಾಕುತ್ತಿದ್ದ ಕೆಲವು ಚೋರರಿಗೆ, ಅನಾಥೆಯರಾದ ಆ ಯಾದವಸ್ತ್ರೀಯರಮೇಲೆಯೂ, ಅವರ ಒಡವೆವಸ್ತುಗಳಮೇಲೆಯೂ ಕಣ್ಣುಬಿದ್ದಿತು ಪಾಪಬುದ್ಧಿಯುಳ್ಳವರೂ, ಅಮಂಗಳಸ್ವರೂಪಿಗಳೂ ಆದ ಆ ಬೇಡರು, ಕಾಲಪ್ರೇರಿತರಾಗಿ ಬುದ್ಧಿಗೆಟ್ಟು, ಒಂದಾಗಿನೇರಿ ಬಂದು ಒಬ್ಬರಿಗೊಬ್ಬರು 'ಎಲಾ! ಬನ್ನಿರಿ! ಬೇಗಬನ್ನಿರಿ! ಬಿಲ್ಲುಗಾರನಾದ ಈ ಅರ್ಜುನನೊಬ್ಬನೇ ಗಂಡನಿಲ್ಲದ ಈ ಮುದುಕಿಯರನ್ನೂ, ಬಾಲಕಿಯರನ್ನೂ ಕರೆದುಕೊಂಡುಹೋಗುತ್ತಿರುವನು. ನಮ್ಮನ್ನು ಮೀರಿ ಇಷ್ಟು ಮಂದಿಯನ್ನೂ ಹೇಗೆ ಸಾಗಿಸಿಕೊಂಡುಹೋಗುವನು? ಇಲ್ಲಿ ಬಂದಿರುವ ಯೋಧರೋ ದುರ್ಬಲರು' ಎಂದು ನಿರ್ಧರಿಸಿಕೊಂಡು, ಸಾವಿರಾರುಮಂದಿ ಕಳ್ಳರು ದೊಣ್ಣೆಗಳನ್ನು ಹಿಡಿದು ಗುಂಪಾಗಿ ಬಂದು ಆ ಯಾದವರ ಆಸ್ತಿ ಪಾಸ್ತಿಗಳನ್ನೆಲ್ಲಾ ಕದ್ದುಕೊಂಡುಹೋಗುವ ಉದ್ದೇಶದಿಂದ ಹುಂಕಾರದಿಂದಲೂ, ಕೂಗಾಟದಿಂದಲೂ ಜನರನ್ನು ಹೆದರಿಸುತ್ತ ಅವರನ್ನು ಮುತ್ತಿದರು. ಕಾಲಚೋದಿತರಾಗಿ ಬಂದ ಆ ಕಳ್ಳರು, ಹಿಂದೆ ಬರುತ್ತಿದ್ದ ಯಾದವಸ್ತ್ರೀಯರನ್ನು ತಡೆದುದನ್ನು ಅರ್ಜುನನು ಥಟ್ಟನೆ ಹಿಂತಿರುಗಿ ನೋಡಿ, ನಗುಮುಖದಿಂದ ಅವರನ್ನು ಕುರಿತು 'ಎಲೈ! ಧರ್ಮವನ್ನು ತಿಳಿಯದ ಮೂಢರೆ! ಹೊರಟುಹೋಗಿರಿ! ನಿಮಗೆ ಬದುಕಬೇಕೆಂಬ ಆಸೆಯಿದ್ದರೆ ಈಗಲೇ ಅವರನ್ನು ಬಿಟ್ಟು ಹಿಂತಿರುಗಿರಿ. ಹಾಗಿಲ್ಲದಿದ್ದರೆ ನನ್ನ ಬಾಣಗಳಿಂದ ಗಾಯಪಟ್ಟು ಪಶ್ಚಾತ್ತಾಪಪಡುವಿರಿ' ಎಂದನು. ಅರ್ಜು

ನನು ಹೀಗೆ ಹೇಳಿ ಬಾರಿಬಾರಿಗೂ ತಡೆಯುತ್ತಿದ್ದರೂ, ಮೂಢಬುದ್ಧಿಯುಳ್ಳ ಆ ಕಳ್ಳರು ಅವನ ಮಾತನ್ನು ಲಕ್ಷ್ಯಮಾಡದೆ, ಅಲ್ಲಿದ್ದ ಎಲ್ಲಾ ಜನರ ಮೇಲೆಯೂ ಬೀಳುವುದಕ್ಕೆ ಮುಂದೆಬಿದ್ದರು. ಒಡನೆ ಅರ್ಜುನನು ಗಾಂಡೀವವೆಂಬ ಮಹತ್ತಾದ ದಿವ್ಯಧನುಸ್ಸನ್ನು ನಾಣೇರಿಸುವುದಕ್ಕೆ ಯತ್ನಿಸಿದನು. ಮೊದಲಿನಂತೆ ಅದು ಸುಲಭವಾಗಿ ಬಗ್ಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಕೊನೆಗೆ ಹೇಗೋ ಪ್ರಯತ್ನಪಟ್ಟು ಅದಕ್ಕೆ ನಾಣನ್ನೆಳೆದು ಕಟ್ಟಿದನು. ಕಳ್ಳರಾದರೋ ಅಲ್ಲಲ್ಲಿ ಜನರನ್ನು ಹಿಡಿದು ಎಳೆದಾಡುತ್ತಿದ್ದರು ಆಗ ಅರ್ಜುನನು ತನ್ನ ಶಸ್ತ್ರಗಳನ್ನೆಲ್ಲ ಜ್ಞಾಪಿಸಿಕೊಂಡರೂ, ಯಾವುದೂ ಇವನ ನೆನಪಿಗೆ ಬರಲಿಲ್ಲ. ಅವನಿಗೆ ತಿಳಿದಿದ್ದ ಶಸ್ತ್ರಗಳೆಲ್ಲವೂ ಮರೆತು ಹೋಗಿದ್ದುವು. ಆಗ ಅರ್ಜುನನಿಗೆ ಹಿಂದಿನ ಯುದ್ಧದಲ್ಲಿ ತನಗಿದ್ದ ಅತಿಶಯವಾದ ಭುಜಪರಾಕ್ರಮವು ಆಗ ಕೆಲಸಕ್ಕೆ ಬಾರದೆ ನಷ್ಟವಾದುದನ್ನೂ, ಅಸ್ತ್ರಗಳೆಲ್ಲವೂ ಮರೆತುಹೋದುದನ್ನೂ ನೋಡಿ, ಮನಸ್ಸಿಗೆ ಬಹಳವಾದ ಭಯವೂ, ನಾಚಿಕೆಯೂ ತೋರಿತು. ಆನೆ, ಕುದುರೆ, ರಥಗಳಮೇಲೆ ಯುದ್ಧಮಾಡತಕ್ಕ ಯೋಧರಿಗೂ ಆಗ ಮೊದಲಿನಂತೆ ಕೈನಡೆಯದೆಹೋಯಿತು. ಕಳ್ಳರು ಸ್ವೇಚ್ಛೆಯಾಗಿ ಕೊಳ್ಳೆಹೊಡೆಯುತಿದ್ದುದನ್ನು ತಪ್ಪಿಸುವುದಕ್ಕೆ ಅವರಿಂದ ಸಾಧ್ಯವಾಗಲಿಲ್ಲ ಹೆಂಗಸರೇ ಅಧಿಕವಾಗಿದ್ದುದರಿಂದ ಕಳ್ಳರು ಅವರಮೇಲೆ ಬೀಳುವುದನ್ನು ತಪ್ಪಿಸಲು ಅರ್ಜುನನು ಎಷ್ಟೆಷ್ಟೋ ಪ್ರಯತ್ನಪಟ್ಟನು. ಆದರೇನು? ಎಲ್ಲಾ ಯಾದವವೀರರೂ ಕಣ್ಣೆದಿರಾಗಿ ನೋಡುತ್ತಿರುವಾಗಲೇ ಕಳ್ಳರು ಅನೇಕ ಯಾದವಸ್ತ್ರೀಯರನ್ನು ನಾನಾ ಕಡೆಗಳಿಂದ ಸೆಳೆಯುತ್ತಿದ್ದರು. ಕೆಲವು ಸ್ತ್ರೀಯರು ತಾವೇ ಇಷ್ಟಪಟ್ಟು ಆ ಕಳ್ಳರೊಡನೆ ಓಡಿದರು. ಅರ್ಜುನನಾದರೋ ಇದನ್ನೆಲ್ಲ ನೋಡಿ ವ್ಯಸನಾಕ್ರಾಂತನಾಗಿ ಕೆಲವುಮಂದಿ ಯಾದವಭಟರ ಸಹಾಯವನ್ನಿಟ್ಟುಕೊಂಡು ಕಳ್ಳರಮೇಲೆ ಬಾಣಗಳನ್ನು ಬಿಡುತ್ತ ಬಹಳಮಂದಿಯನ್ನು ಕೊಂದನು. ಆದರೇನು? ಇಷ್ಟರಲ್ಲಿ ಅವನ ಬತ್ತಳಿಕೆಯಲ್ಲಿದ್ದ ಬಾಣಗಳು ಕ್ಷಣಮಾತ್ರದಲ್ಲಿಯೇ ತೀರಿದೋದುವು. ಹಿಂದೆ ಎಷ್ಟೋ ರಕ್ತಗಳನ್ನು ಕುಡಿದು, ಅಕ್ಷಯಗಳೆನಿಸಿದ ಆ ಬಾಣಗಳು ಈಗ ಕೈಗೆ ಬಾರದೆ ಕ್ಷಯಿಸಿಹೋದುವು. ಹೀಗೆ ಬಾಣಗಳೂ ತನ್ನ ಕೈಗೆ ಬಾರದಿರಲು, ಇಂದ್ರಪುತ್ರನಾದ

ಅರ್ಜುನನು ದುಃಖದಿಂದಲೂ, ಸಂಕಟದಿಂದಲೂ ಕುದಿಯುತ್ತ, ಕೊನೆಗೆ ತನ್ನ ಬಿಲ್ಲಿನ ತುದಿಯಿಂದಲೇ ಕಳ್ಳರನ್ನು ಹೊಡೆದಟ್ಟುವುದಕ್ಕೆ ಯತ್ನಿಸಿದನು. ಆದರೇನು ? ಓ ಜನಮೇಜಯರಾಜಾ ! ಅರ್ಜುನನು ನೋಡುತ್ತಿರುವಾಗಲೇ, ಆ ಮ್ಲೇಚ್ಛರು ನಾನಾಕಡೆಗಳಲ್ಲಿ ಯಾದವಸ್ತ್ರೀಯರನ್ನು ಎತ್ತಿಕೊಂಡು ಹೊರಟೇಹೋದರು. ಇದನ್ನೆಲ್ಲ ನೋಡಿದಮೇಲೆ ಅರ್ಜುನನಿಗೆ ಇದೆಲ್ಲ ದೈವಕೃತವೆಂದು ಮನಸ್ಸಿಗೆ ತೋರಿತು. ಪುರುಷಪ್ರಯತ್ನದಲ್ಲಿ ಫಲವಿಲ್ಲನೆಂದು ನಿರ್ಧರವಾಯಿತು. ದುಃಖದಿಂದ ನಿಟ್ಟುಸಿರು ಬಿಡುತ್ತ ಸುಮ್ಮನೆ ನಿಂತುಬಿಟ್ಟನು. ಆಗ ಅವನಿಗೆ ತನ್ನ ಅಸ್ತ್ರಗಳು ಸ್ಮರಣೆಗೆ ಬಾರದೆಹೋದುದೊಂದು, ಮೊದಲಿನಂತೆ ಭುಜದಲ್ಲಿ ಬಲವಿಲ್ಲದುದೊಂದು, ಗಾಂಡೀವಧನುಸ್ಸು ತನಗೆ ವಶವಾಗದಿದ್ದುದೊಂದು, ಮೊದಲು ಅಕ್ಷಯವಾಗಿದ್ದ ಬಾಣಗಳು ಕ್ಷಯಿಸಿಹೋದುದೊಂದು, ಇವನ್ನೆಲ್ಲ ನೋಡಿದಮೇಲೆ ಇದು ದೈವಕಾರ್ಯವೆಂಬ ನಿರ್ಧರಹುಟ್ಟಿ, ಇನ್ನು ತನ್ನಿಂದೇನೂ ಸಾಗದೆಂದು ಅಲ್ಲಿಂದ ಹಿಂತಿರುಗಿಬಿಟ್ಟನು ಇಷ್ಟರಲ್ಲಿ ಕಳ್ಳರು ಅನೇಕ ಯಾದವಸ್ತ್ರೀಯರನ್ನೂ, ಅಪರಿಮಿತವಾದ ಧನವನ್ನೂ ಎತ್ತಿಕೊಂಡುಹೋಗಿಬಿಟ್ಟರು. ಆಮೇಲೆ ಅಲ್ಲಲ್ಲಿ ಉಳಿದಿದ್ದ ಕೆಲವುಮಂದಿ ಸ್ತ್ರೀಯರನ್ನುಮಾತ್ರ ಅರ್ಜುನನು ತನ್ನೊಡನೆ ಕರೆದುಕೊಂಡು, ಕುರುಕ್ಷೇತ್ರಕ್ಕೆ ಬಂದಿಳಿದನು. ಅಲ್ಲಿಗೆ ಬಂದಮೇಲೆ ಯುಧಿಷ್ಠಿರನ ಸಮ್ಮತಿಯಮೇರೆಗೆ ವಂಶಕರ್ತರಾದ ಕೆಲಕೆಲವುಮಂದಿ ರಾಜಕುಮಾರರನ್ನು ಅಲ್ಲಲ್ಲಿನ ಕೆಲವು ದೇಶಗಳಲ್ಲಿ ನೆಲೆಗೊಳಿಸಿದನು. ಕೃತವರ್ಮನ ಮಗನನ್ನು ಮೃತ್ತಿಕಾನದಿಯೆಂಬ ನಗರದಲ್ಲಿಯೂ, ಅಶ್ವಪತಿಯೆಂಬವನನ್ನು ಖಾಂಡವಾರಣ್ಯವೆಂಬ ದೇಶದಲ್ಲಿಯೂ ಇಟ್ಟನು. ಕಳವುಹೋಗಿ ಮಿಕ್ಕ ಭೋಜರಾಜನ ಪತ್ನಿಯರನ್ನೂ ಮುದುಕರನ್ನೂ, ಮಕ್ಕಳನ್ನೂ, ಸ್ತ್ರೀಯರನ್ನೂ ಕರೆತಂದು ಇಂದ್ರಪ್ರಸ್ಥದಲ್ಲಿರಿಸಿದನು. ಯುಯುಧಾನನ (ಸಾತ್ಯಕಿಯ) ಪ್ರಿಯಪುತ್ರನನ್ನು ಕೆಲವುಮಂದಿ ಮುದುಕರು ಮಕ್ಕಳೊಡನೆ ಕರೆತಂದು ಸರಸ್ವತೀನದಿಯ ತೀರದಲ್ಲಿ ಇರಿಸಿದನು. ಇಂದ್ರಪ್ರಸ್ಥದಲ್ಲಿ ವಜ್ರನಿಗೆ ರಾಜ್ಯವನ್ನು ಕೊಟ್ಟನು. ವಜ್ರನು ಬಹಳವಾಗಿ ನಿವಾರಿಸಿದರೂ ಕೇಳದೆ, ಅಕ್ರೂರಪತ್ನಿಯರು ತಪಸ್ಸಿಗಾಗಿ ಹೊರಟುಹೋದರು. ರುಕ್ಮಿಣಿ, ಗಾಂಧಾರರಾಜಕುಮಾರಿ, ಶೈಬ್ಯೆ,

ಹೈಮವತಿ, ಜಾಂಬವತಿ, ಇವರಿಷ್ಟುಮಂದಿ ಕೃಷ್ಣಪತ್ನಿಯರೂ ಅಗ್ನಿಪ್ರವೇಶವನ್ನು ಮಾಡಿದರು. ಸತ್ಯಭಾಮೆಯೂ, ಇತರ ಕೃಷ್ಣಪತ್ನಿಯರೂ ತಪಸ್ಸಿಗಾಗಿ ಕಾಡಿಗೆ ಹೊರಟುಹೋದರು. ದ್ವಾರಕೆಯಿಂದ ಅರ್ಜುನನನ್ನು ಹಿಂಬಾಲಿಸಿ ಬಂದ ಅಲ್ಲಿನ ನಿವಾಸಿಗಳು ಕೆಲವರು ಅರ್ಜುನನಿಂದ ವಜ್ರನ ರಕ್ಷಣೆಯಲ್ಲಿರಿಸಲ್ಪಟ್ಟರು. ಹೀಗೆ ಅವರವರಿಗೆ ತಕ್ಕ ಸ್ಥಾನಗಳನ್ನು ಕಲ್ಪಿಸಿದಮೇಲೆ, ಅರ್ಜುನನು ಹಿಂದೆ ನಡೆದ ಸಂಗತಿಯನ್ನು ನೆನೆಸಿಕೊಂಡು ವ್ಯಸನಾಕ್ರಾಂತನಾಗಿ ಮಹಾತ್ಮನಾದ ಕೃಷ್ಣದ್ವೈಪಾಯನನು (ವ್ಯಾಸನು), ಇದ್ದಲ್ಲಿಗೆ ಹೋದನು

ಇದು ಎಂಟನೆಯ ಅಧ್ಯಾಯವು.

ಆಶ್ರಮದಲ್ಲಿದ್ದ ವ್ಯಾಸನಿಗೆ ಅರ್ಜುನನು ಹೋಗಿ ದ್ವಾರಕೆಯ ವೃತ್ತಾಂತವನ್ನು ತಿಳಿಸಿದುದು ವ್ಯಾಸನು ಯುಧಿಷ್ಠಿರನೇ ಮೊದಲಾದವರೂ ಶೀಘ್ರದಲ್ಲಿ ಸ್ವರ್ಗವನ್ನೇರುವುದಾಗಿ ತಿಳಿಸಿದುದು ಆಮೇಲೆ ಅರ್ಜುನನು ಹಸ್ತಿನಾವತಿಯಲ್ಲಿ ಯುಧಿಷ್ಠಿರನ ಬಳಿಗೆ ಬಂದು ದ್ವಾರಕಾ ವೃತ್ತಾಂತವನ್ನು ತಿಳಿಸಿದುದು

ಓ ಜನಮೇಜಯರಾಜಾ! ಒಡನೆ ಅರ್ಜುನನು ವ್ಯಾಸಾಶ್ರಮಕ್ಕೆ ಬಂದು, ಅಲ್ಲಿ ಏಕಾಂತವಾಗಿ ಕುಳಿತಿದ್ದ ಆ ಸತ್ಯವತೀಪುತ್ರನಾದ ಮಹರ್ಷಿಯನ್ನು ಕಂಡನು. ಮುಂದೆ ಹೋಗಿ 'ಮಹಾತ್ಮಾ! ನಾನು ಅರ್ಜುನನು' ಎಂದು ತನ್ನ ಹೆಸರನ್ನು ತಿಳಿಸಿ ನಮಸ್ಕರಿಸಿದನು. ವ್ಯಾಸನು ಅವನಿಗೆ ಸುಖಾಗಮನವನ್ನು ಹೇಳಿ ಕರೆಯುತ್ತ, ಬಹಳ ವ್ಯಸನದಿಂದ ವ್ಯಾಕುಲನಾಗಿ ಆಗಾಗ ನಿಟ್ಟುಸಿರನ್ನು ಬಿಡುತ್ತ ನಿಂತಿದ್ದ ಆ ಅರ್ಜುನನನ್ನು ನೋಡಿ ಹೀಗೆಂದು ಹೇಳುವನು. 'ಅರ್ಜುನಾ! ಏನಿದು? ನಿನ್ನ ಮುಖವು ಹೀಗೆ ಕಳೆಗುಂದಿರಲು ಕಾರಣವೇನು? *ನಖೋದಕ, (ಉಗುರು ನೀರು) ಕೇಶೋ

* ಉಗುರು ನೀರು, ಕೂದಲು ನೀರು, ಬಟ್ಟೆಯ ಸೆರಗಿನ ನೀರು ಇವು ಮೇಲೆ ಬೀಳಬಾರದು. ಕೊಡದ ನೀರನ್ನು ಸ್ನಾನಪಾನಗಳಿಗೆ ಉಪಯೋಗಿಸುವಾಗ, ಮೇಲಿನ ಸ್ವಲ್ಪ ನೀರನ್ನು ಚೆಲ್ಲಿಬಿಟ್ಟು, ಆಮೇಲೆ ಉಪಯೋಗಿಸಬೇಕೆಂಬುದು ಶಾಸ್ತ್ರವಿಧಿ.

ದಕ, (ಕೂದಲು ನೀರು) ದಶೋದಕ, (ವಸ್ತ್ರದ ಸೆರಗಿನ ನೀರು) ಕುಂಭ ಮುಖೋದಕ, (ಕೊಡದ ಬಾಯಿಯ ನೀರು) ಇವುಗಳಲ್ಲಿ ಯಾವುದಾದರೂ ನಿನ್ನ ಮೇಲೆ ಬಿದ್ದಿತೆ? ಮುಟ್ಟಾಗಿ ಮನೆಯಿಂದ ಹೊರಗಾಗಿದ್ದ ಸ್ತ್ರೀಯಲ್ಲಿ ಸಂಗಮವನ್ನು ಮಾಡಿದೆಯಾ? ಬ್ರಹ್ಮಹತ್ಯೆಯನ್ನೇನಾದರೂ ನಡೆಸಿದೆಯಾ? ಅಥವಾ ಯುದ್ಧದಲ್ಲಿ ಪರಾಜಿತನಾಗಿ ಬಂದೆಯಾ? ಈ ಏಳು ಕಾರಣಗಳಿಂದ ಹೊರತು ಬೇರೆ ವಿಧವಾಗಿ ಮನುಷ್ಯನಿಗೆ ಇಷ್ಟೊಂದು ಕಳೆಗುಂದುವಕಾರಣವಿಲ್ಲ! ನಾನು ಆ ವಿಷಯವನ್ನು ಕೇಳಬಹುದಾದರೆ ಬೇಗನೆ ತಿಳಿಸು' ಎಂದನು. ಅದಕ್ಕಾ ಅರ್ಜುನನು 'ಮುನೀಂದ್ರಾ! ನೀನು ಕೇಳಿದುದೊಂದೂ ಕಾರಣವಲ್ಲ. ಕೇಳು. ನೀಲಮೇಘಶ್ಯಾಮನೂ, ಶ್ರೀಮಂತನೂ, ಪುಂಡರೀಕಾಕ್ಷನೂ ಆದ ಶ್ರೀಕೃಷ್ಣನು ತನ್ನಣ್ಣನಾದ ಬಲರಾಮನೊಡಗೂಡಿ, ತನ್ನ ಮಾನವದೇಹವನ್ನು ಬಿಟ್ಟು ಸ್ವರ್ಗಕ್ಕೆ ಹೋಗಿಬಿಟ್ಟನು. ಆ ವಿಷಯವನ್ನು ನೆನೆಸಿಕೊಂಡು ನನಗೆ ಮಹತ್ತಾದ ದುಃಖವುಂಟಾಗಿದೆ. ಆಗಾಗ ಮೂರ್ಛೆಯೂ ಬರುತ್ತಿದೆ ದೇವದೇವನೂ, ಅಮೃತಸ್ವರೂಪಿಯೂ ಆದ ಆ ಕೃಷ್ಣನು ಹಿಂದೆ ನನ್ನೊಡನೆ ಆಡುತಿದ್ದ ಮಾತುಗಳನ್ನೂ, ಅವನ ಅಂಗಸ್ಪರ್ಶವನ್ನೂ, ಅವನ ದರ್ಶನಾನಂದವನ್ನೂ ಅನುಭವಿಸುತಿದ್ದ ನನಗೆ ಅದನ್ನು ಸ್ಮರಿಸಿಕೊಂಡಹಾಗೆಲ್ಲ ಮನಸ್ಸು ತಬ್ಬಿಬ್ಬಾಗುತ್ತಿದೆ. ಬ್ರಹ್ಮಶಾಪದಿಂದುಂಟಾದ ಒಂದು ಒನಕೆಯು ಎಲ್ಲಾ ಯಾದವರ ನಾಶಕ್ಕೆ ಕಾರಣವಾಯಿತು. ಪ್ರಭಾಸತೀರದಲ್ಲಿ ನಡೆದ ಆ ಕೊಲೆಯು ನೋಡುವವರಿಗೆ ರೋಮಾಂಚವನ್ನು ಹುಟ್ಟಿಸುವಂತೆ ಭಯಂಕರವಾಯಿತು. ಶೂರರೂ, ಸಿಂಹಪರಾಕ್ರಮಿಗಳೂ, ಮಹಾತ್ಮರೂ ಆದ ವೃಷ್ಣಿಗಳು, ಅಂಧಕರು, ಭೋಜರು, ಇವರೆಲ್ಲರೂ ಒಬ್ಬರಿಗೊಬ್ಬರು ಹೊಡೆದಾಡಿ ಸತ್ತರು. ಮಹಾಗದೆಗಳು, ಪರಿಘಗಳು, ಶಕ್ತ್ಯಾಯುಧಗಳು, ಇವುಗಳ ಪೆಟ್ಟಿಗೂ ಲಕ್ಷ್ಯಮಾಡದ ಅಂತಹ ಮಹಾವೀರರೆಲ್ಲರೂ ಸಮುದ್ರ ತೀರದಲ್ಲಿ ಬೆಳೆದ ಹೊಡಕೆಗಳ ಪೆಟ್ಟಿನಿಂದ ಸತ್ತರು. ಈ ಕಾಲವೈಪರೀತ್ಯವನ್ನು ನೋಡಿದೆಯಾ? ಮಹಾಬಾಹುಬಲಶಾಲಿಗಳಾದ ಐದುಲಕ್ಷ ಯಾದವರು ಒಬ್ಬರಿಗೊಬ್ಬರು ಹೊಡೆದು ಎಲ್ಲರೂ ಸತ್ತರು. ಆ ಯಾದವರ ಮತ್ತು ಶ್ರೀಕೃಷ್ಣನ ಮರಣವನ್ನು ನೆನೆಸಿಕೊಂಡಹಾಗೆಲ್ಲ ನನ್ನ ಮನಸ್ಸು

ಸಹಿಸಲಾರದೆ ತಬ್ಬಿಬ್ಬಾಗುವುದು. ಸಮುದ್ರವು ಒಣಗಿದಹಾಗೆಯೂ, ಮಂದರಪರ್ವತವು ಕದಲಿದಹಾಗೆಯೂ, ಆಕಾಶವು ತಲೆಯಮೇಲೆ ಬಿದ್ದ ಹಾಗೆಯೂ, ಅಗ್ನಿಯು ಶೈತ್ಯವನ್ನು ಹೊಂದಿದಹಾಗೆಯೂ ಈ ಮೇಲಿನ ವೃತ್ತಾಂತವು ಈಗಲೂಕೂಡ ನನ್ನ ಮನಸ್ಸಿಗೆ ನಿಜವೆಂದೇ ತೋರುವುದಿಲ್ಲ. ಶಾರ್ಙ್ಗಪಾಣಿಯಾದ ಆ ಕೃಷ್ಣನೆಂದರೇನು? ಅವನಿಗೆ ಸಾವೆಂದರೇನು? ಅದನ್ನು ಕೇಳಿಯೂ ನನಗೆ ನಂಬಿಕೆಯೇ ಹುಟ್ಟುವುದಿಲ್ಲ. ಮುನೀಂದ್ರಾ! ಕೃಷ್ಣನನ್ನಗಲಿ ಕ್ಷಣಮಾತ್ರವೂ ನಾನು ಬದುಕಿರಲಾರೆನು. ಇವೆಲ್ಲಕ್ಕಿಂತಲೂ ಕಷ್ಟತರವಾದ ಮತ್ತೊಂದು ಸಂಗತಿಯನ್ನು ಕೇಳು. ಅದನ್ನು ನೆನೆಸಿಕೊಂಡರೆ ನನ್ನ ಹೃದಯವು ಭೇದಿಸಿದಂತಾಗುವುದು ನಾನು ಧನುರ್ಧಾರಿಯಾಗಿ ದ್ವಾರಕೆಯಿಂದ ಯಾದವಸ್ತ್ರೀಯರನ್ನು ಕರೆದುತರುವಾಗ, ಪಂಚನದಪ್ರದೇಶದಲ್ಲಿದ್ದ ಕೆಲವು ಕಳ್ಳರು ಬಂದು, ನನ್ನ ಕಣ್ಣೆದಿರಾಗಿಯೇ ಅವರನ್ನೆಲ್ಲ ಭಂಗಪಡಿಸಿ ಅನೇಕರನ್ನು ಅಪಹರಿಸಿಕೊಂಡುಹೋದರು. ಆಗ ಅವರನ್ನೋಡಿಸಿ ನಿಗ್ರಹಿಸುವುದಕ್ಕಾಗಿ ನಾನು ಬಿಲ್ಲನ್ನು ಬಗ್ಗಿಸಿ ನಾಣೇರಿಸುವುದಕ್ಕೆ ಹೋದಾಗ, ಅದನ್ನು ಬಗ್ಗಿಸುವುದಕ್ಕೂ ನನಗೆ ಸಾಧ್ಯವಾಗಲಿಲ್ಲ ನನ್ನ ಭುಜದಲ್ಲಿ ಮೊದಲಿನ ಬಲವೂ ಇರಲಿಲ್ಲ. ನನಗೆ ತಿಳಿದಿದ್ದ ಅಸ್ತ್ರಗಳೆಲ್ಲವೂ ಮರೆತುಹೋದುವು ನನ್ನ ಅಕ್ಷಯತೂಣೀರದಲ್ಲಿ ಪರಂಪರಯಾಗಿ ಬರುತ್ತಿದ್ದ ಬಾಣಗಳು ಕ್ಷಣಮಾತ್ರದಲ್ಲಿ ತೀರಿಹೋದುವು. ಇಷ್ಟು ಅವಸ್ಥೆಯನ್ನೂ ನಾನು ಅನುಭವಿಸಿದೆನು. ಮುನೀಂದ್ರಾ! ಹಿಂದೆ ನನಗೆ ಯಾವಾಗಲೂ ದರ್ಶನಕೊಡುತ್ತ ಮುಂದೆ ನಿಂತಿದ್ದ ಅಪ್ರಮೇಯಸ್ವರೂಪನೂ, ಶಂಖಚಕ್ರಗದಾಧಾರಿಯೂ, ಚತುರ್ಭುಜನೂ, ಪೀತಾಂಬರಧಾರಿಯೂ, ನೀಲಮೇಘಶ್ಯಾಮನೂ, ಪುಂಡರೀಕಾಕ್ಷನೂ, ಮಹಾ ತೇಜಸ್ವಿಯೂ ಆದ ಯಾವನು ನನ್ನ ಮುಂದೆ ರಥದಲ್ಲಿ ಕುಳಿತು ನನಗೆ ಶ್ರಮವಿಲ್ಲದಂತೆ ತನ್ನ ತೇಜಸ್ಸಿನಿಂದಲೇ ಶತ್ರುಗಳನ್ನು ದಹಿಸುತ್ತಿದ್ದನೋ ಅಂತಹ ಮಹಾನುಭಾವನು ಈಗ ನನ್ನ ಕಣ್ಣಿಗೆ ಬೀಳುವುದಿಲ್ಲ. ಹಿಂದೆ ಕುರುಕ್ಷೇತ್ರಯುದ್ಧದಲ್ಲಿ ಯಾವನು ತನ್ನ ತೇಜಸ್ಸಿನಿಂದಲೇ ಶತ್ರುಸೈನ್ಯಗಳನ್ನು ಕೊಂದಮೇಲೆ, ನಾನು ಗಾಂಡೀವದಿಂದ ಪ್ರಯೋಗಿಸಲ್ಪಟ್ಟ ಬಾಣದಿಂದ ನೆಪಮಾತ್ರಕ್ಕೆ ಅವರನ್ನು ಕೆಡಹುತಿದ್ದೆನೋ ಅಂತವನನ್ನು

ಕಾಣದೆ ಈಗ ತತ್ತಳಿಸುವೆನು. ನನ್ನ ತಲೆಯು ತಿರುಗುತ್ತಿರುವುದು ನನ್ನ ಮನಸ್ಸಿಗೆ ಯಾವ ವಿಧದಿಂದಲೂ ಶಾಂತಿಯೇ ಇಲ್ಲದಂತಾಗಿದೆ. ದೇವಕೀ ನಂದನನೂ, ದೇವದೇವನೂ, ಪ್ರಭುವೂ, ವಾಸುದೇವನೂ ಆದ ಆ ಜನಾರ್ದನನನ್ನು ಕಾಣದೆ ನಾನು ಇನ್ನು ಬದುಕಿರಲಾರನು. ಆ ವಿಷ್ಣುವು ಹೊರಟುಹೋದುದನ್ನು ಕೇಳಿ ನನಗೆ ದಿಕ್ಕುಗಳೇ ಕಾಣದಂತಾಗಿವೆ. ನಾನೂ ಈಗ ಮೃತಪ್ರಾಯನೇ ಆಗಿರುವೆನು ಸಮಸ್ತ ಬಂಧುಗಳನ್ನೂ, ಬಲ ವೀರ್ಯಗಳನ್ನೂ ಕಳೆದುಕೊಂಡು ಸರ್ವಶೂನ್ಯನಾಗಿ, ಅಲ್ಲಲ್ಲಿ ಅಲೆದಾಡುತ್ತಿರುವ ನನಗೆ, ಮುಂದ ಶ್ರೇಯಸ್ಸಿಗೆ ದಾರಿಯೇನೆಂಬುದನ್ನು ತಿಳಿಸುವುದಕ್ಕೆ ನೀನೇ ಸಮರ್ಥನು. ಈಗ ಬೇರೆ ಯಾರೂ ನನಗೆ ಮಾರ್ಗದರ್ಶಕರಿಲ್ಲ' ಎಂದನು

ಅದಕ್ಕಾ ವ್ಯಾಸಮುನಿಯು 'ಅರ್ಜುನಾ! ಇದಕ್ಕಾಗಿ ನೀನೇಕೆ ಕೊರಗುವೆ? ನಿನ್ನವರಲ್ಲರೂ ದೇವಾಂಶದವರು ಲೋಕದಲ್ಲ ಧರ್ಮವ್ಯವಸ್ಥೆಗಾಗಿ ದೇವದೇವನಾದ ಆ ಭಗವಂತನ ಸಂಕಲ್ಪದಿಂದ ಅವರು ಹುಟ್ಟಿದ್ದರು. ಈಗ ಅವರ ಕಾರ್ಯವು ಮುಗಿದಮೇಲೆ ತಿರುಗಿ ಸ್ವಸ್ಥಾನಕ್ಕೆ ಹೋಗುವುದಕ್ಕಾಗಿಯೇ ಆ ಪ್ರಭುವಿನಿಂದ ಉಪೇಕ್ಷೆಮಾಡಿ ಬಿಡಲ್ಪಟ್ಟರು. ವೃಷ್ಣಿಗಳು, ಅಂಧಕರು, ಮೊದಲಾದ ಯಾದವರಲ್ಲರೂ ಬ್ರಹ್ಮಶಾಪದಿಂದ ದಗ್ಧರಾಗಿ ನಾಶಕ್ಕೀಡಾದರು ಅವರಿಗಾಗಿ ನೀನು ಶೋಕಿಸಬೇಕಾದ ಕಾರಣವಿಲ್ಲ ಅದು ಹಾಗೆಯೇ ನಡೆಯಬೇಕಾಗಿದ್ದುದು ನಡೆದುಹೋಯಿತು. ಯಾದವರ ಈ ದುರದೃಷ್ಟವನ್ನು ತಪ್ಪಿಸಲು ಸರ್ವಸಮರ್ಥನಾದ ಕೃಷ್ಣನಿಗೆ ಶಕ್ತಿಯಿದ್ದರೂ, ಅವನು ಉದಾಸೀನನಾಗಿದ್ದುದು ಈ ಕಾರಣದಿಂದಲೇ ಎಂದು ತಿಳಿ! ಸರ್ವಶಕ್ತನಾದ ಆ ಗೋವಿಂದನು, ಚರಾಚರಾತ್ಮಕವಾದ ತ್ರೈಲೋಕ್ಯವನ್ನೇ ಮೊತ್ತಕ್ಕೆ ತಲೆಕೆಳಗಾಗಿ ಮಾಡಬಲ್ಲ ಸಾಮರ್ಥ್ಯವುಳ್ಳವನು. ಅಂತವನಿಗೆ ಆ ಮಹರ್ಷಿಗಳ ಶಾಪವನ್ನು ತಪ್ಪಿಸುವುದು ಅಸಾಧ್ಯವಾಗಿದ್ದಿತೇ? ಅರ್ಜುನಾ! ಹಿಂದೆ ಯಾದವಸ್ತ್ರೀಯರಲ್ಲಿ ಅಷ್ಟಾವಕ್ರಮುನಿಯು ಕುಪಿತನಾಗಿ, ಪ್ರಭಾಸತೀರ್ಥದಲ್ಲಿ ಶಪಿಸಿದ ಕಾರಣದಿಂದ, ಅವರನ್ನು ರಕ್ಷಿಸುವುದಕ್ಕಾಗದಂತೆ ನಿನಗೆ ಮೊದಲಿದ್ದ ಬಲವು ತಗ್ಗಿಹೋ

ಯಿತು. ಪಾರ್ಥಾ! ಶಂಖಚಕ್ರಗದಾಧರನೂ, ಚತುರ್ಭುಜನೂ, ಪುರಾತನ ಮಹರ್ಷಿಯೂ ಆದ ಯಾವನು, ನಿನ್ನಲ್ಲಿರುವ ಪ್ರೇಮದಿಂದ ನಿನ್ನ ರಥದ ಮೂಕಿಯಮೇಲೆ ಕುಳ್ಳಿರುತಿದ್ದನೋ, ಆ ವಾಸುದೇವನು ಭೂಭಾರವನ್ನು ಇಳಿಸುವುದಕ್ಕಾಗಿ ಅವತರಿಸಿದ್ದವನು. ಅಂತಹ ಪುಂಡರೀಕಾಕ್ಷನು ಆ ಅವತಾರಪ್ರಯೋಜನವನ್ನು ಮುಗಿಸಿದಮೇಲೆ, ಆ ಮಾನವಶರೀರವನ್ನು ಬಿಟ್ಟು ತನ್ನ ನಿಜಸ್ಥಾನವಾದ ಪರಮವೈಕುಂಠವನ್ನು ಸೇರಿ ಅಲ್ಲಿ ನೆಲೆಗೊಂಡಿರುವನು. ನೀನೂಕೂಡ ಅದೇಕಾರ್ಯಕ್ಕಾಗಿ ಈ ಭೂಮಿಗೆ ಬಂದವನು. ಇಲ್ಲಿ ನಿನ್ನ ಅಣ್ಣನಾದ ಭೀಮನ ಮತ್ತು ತಮ್ಮಂದಿರಾದ ನಕುಲಸಹದೇವರ ಸಹಾಯದಿಂದ ಆ ದೇವಕಾರ್ಯವನ್ನು ನಡೆಸಿದೆ. ನೀವು ಆ ಕಾರ್ಯಸಿದ್ಧಿಯನ್ನು ಹೊಂದಿ ಕೃತಕೃತ್ಯರಾದಿರಿ! ಇನ್ನು ನಿಮಗೂ ಇಲ್ಲಿಂದ ಹೊರಡುವುದಕ್ಕೆ ಕಾಲವು ಸಮಿಾಪಿಸಿತು. ನೀವೂ ಹೊರಡುವುದೇ ಈಗ ನಿಮಗೆ ಶ್ರೇಯಸ್ಕರವೆಂದು ಭಾವಿಸುವೆನು. ಓ ಕುಮಾರಾ! ಲೋಕದಲ್ಲಿ ಬಲವೂ, ಬುದ್ಧಿಯೂ, ತೇಜಸ್ಸೂ, ಮುಂದಾಲೋಚನೆಯೂ, ಅನುಕೂಲಕಾಲದಲ್ಲಿ ಸುಲಭವಾಗಿ ಅನುಕೂಲಿಸಿಬರುವುವು. ವಿಪರೀತ ಕಾಲದಲ್ಲಿ ಅವೇ ಪ್ರತಿಕೂಲವಾಗಿ ನಶಿಸುವುವು. ಪ್ರಪಂಚಕ್ಕೆ ಕಾರಣವೆನಿಸಿದ ಇವೆಲ್ಲವೂ ಕಾಲದಿಂದಲೇ (ಈಶ್ವರನಿಂದಲೇ) ಉಂಟಾದುವು. ಆ ಕಾಲವೇ ತಿರುಗಿ ಅಪಹರಿಸಿಕೊಂಡುಹೋಗುವುದು. ಲೋಕದಲ್ಲಿ ಬಹಳ ಬಲಾಢ್ಯನಾಗಿದ್ದವನು ದುರ್ಬಲನಾಗುವುದೂ, ಒಳ್ಳೇ ಪ್ರಭುವಾಗಿದ್ದವನು ಆಮೇಲೆ ಮತ್ತೊಬ್ಬನ ಆಜ್ಞಾಧಾರಕನಾಗಿರುವುದೂ ಇವೆಲ್ಲಾ ಕಾಲದ ಮಹಿಮೆಯೇ ಎಂದು ತಿಳಿ. ನಿನ್ನ ದಿವ್ಯಾಸ್ತ್ರಗಳೂ ಕೂಡ ಇಲ್ಲಿ ತಾವು ಮಾಡಬೇಕಾಗಿದ್ದ ಕಾರ್ಯಗಳನ್ನು ನಡೆಸಿ ಮುಗಿಸಿದಮೇಲೆ, ತಾವು ಬಂದ ದಾರಿಯನ್ನು ಹಿಡಿದು ಹೊರಟುಹೋದುವು. ಮುಂದೆ ತಿರುಗಿ ಕಾಲವು ಬಂದಾಗ ಅವು ನಿನ್ನ ಕೈಗೆ ಬಂದೇಬರುವುವು. ಓ ಭರತೋತ್ತಮಾ! ನಿಮಗೂ ಈಗ ಉತ್ತಮಗತಿಯನ್ನು ಹೊಂದುವುದಕ್ಕೆ ಅನುಕೂಲವಾದ ಕಾಲವು ಒದಗಿಬಂದಿದೆ. ಇದು ನಿಮಗೆ ಒಳ್ಳೇ ಶ್ರೇಯಸ್ಕರವೆಂದೇ ತೋರುವುದು' ಎಂದನು.

ಓ ಜನಮೇಜಯರಾಜಾ! ವ್ಯಾಸಮುನಿಯ ಈ ಬುದ್ಧಿವಾದಗಳನ್ನು ಕೇಳಿದಮೇಲೆ, ಅರ್ಜುನನು ಅವನ ಅನುಮತಿಯನ್ನು ಪಡೆದು, ಅಲ್ಲಿಂದ ಹಸ್ತಿನಾವತಿಗೆ ಬಂದು ಅಲ್ಲಿ ಯುಧಿಷ್ಠಿರನನ್ನು ಕಂಡು ನಡೆದ ಸಂಗತಿಯನ್ನೆಲ್ಲ ಯಥಾವತ್ತಾಗಿ ತಿಳಿಸಿದನು.

ಇದು ಒಂಭತ್ತನೆಯ ಅಧ್ಯಾಯವು.

# ಮೌಸಲಪರ್ವವು ಸಂಪೂರ್ಣವು

ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ

ಭದ್ರಂ ! ಶುಭಂ !! ಮಂಗಳಂ !!!

ಶ್ರೀ. ಶ್ರೀ. ಶ್ರೀ

ಶ್ರೀ

ಶ್ರೀ

ವ್ಯಾಸಮಹರ್ಷಿಪ್ರಣೀತ

# ಶ್ರೀಮಹಾಭಾರತವು

(ಕರ್ಣಾಟಕ ವಚನವು)

## ಮಹಾಪ್ರಸ್ಥಾನಿಕಪರ್ವವು.

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರ ವಿರಚಿತವು.

ಪ್ರಕಾಶಕರು:

ಕರ್ಣಾಟಕ ಡಿಪೋ,

1/59, ಸನ್ನಿಧಿ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

1935

## All Rights Reserved.

ಕಾಪಿರೈಟ್, ೧೯೩೨–ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಇದರ ಗ್ರಂಥಕರ್ತರಿಗೆ ಸೇರಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಭಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

# ವಿಷಯಾನುಕ್ರಮಣಿಕೆ.

ಅಧ್ಯಾಯ ಪುಟ.


೧. ಯುಧಿಷ್ಠಿರನು ಸ್ವರ್ಗಕ್ಕೆ ಹೋಗಲುದ್ದೇಶಿಸಿ, ಪರೀಕ್ಷಿತ್ತಿಗೆ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ, ಯುಯುತ್ಸುವಿನಲ್ಲಿ ರಾಜ್ಯವನ್ನೊಪ್ಪಿಸಿ, ನಗರವಾಸಿಗಳ ಅನುಮತಿಯನ್ನು ಪಡೆದು, ತನ್ನ ತಮ್ಮಂದಿರೊಡನೆಯೂ, ದ್ರೌಪದಿಯೊಡನೆಯೂ, ಒಂದು ನಾಯಿಯೊಡನೆಯೂ ಹೊರಟುದು. ಅರ್ಜುನನು ದಾರಿಯಲ್ಲಿ ಅಗ್ನಿಯ ಮಾತಿನಂತೆ ತನ್ನ ಬಿಲ್ಲನ್ನೂ, ಬತ್ತಳಿಕೆಯನ್ನೂ ಸಮುದ್ರದಲ್ಲಿ ಬಿಸುಟುದು . . ೧

೨ ಪಾಂಡವರೂ, ದ್ರೌಪದಿಯೂ ಸಾಲಾಗಿ ಹೋಗುತ್ತಿರುವಾಗ, ಒಬ್ಬೊಬ್ಬರಾಗಿ ಕೆಳಗೆ ಬಿದ್ದುದು. ಭೀಮನು ಕೇಳುತ್ತಿರುವವರೆಗೂ ಯುಧಿಷ್ಠಿರನು ಅವರೆಲ್ಲರೂ ಬೀಳುವುದಕ್ಕೆ ಕಾರಣವನ್ನು ತಿಳಿಸಿದುದು ನಾಯಿಯು ಒಂದುಮಾತ್ರ ಅವರನ್ನು ಹಿಂಬಾಲಿಸುತ್ತಲೇ ಇದ್ದುದು . ೬

೩. ಯುಧಿಷ್ಠಿರನು ಸ್ವರ್ಗಕ್ಕೆ ಹೋದಾಗ, ಇಂದ್ರನು ಅಲ್ಲಿ ಆತನನ್ನು ರಥವನ್ನೇರುವಂತೆ ಹೇಳಿದುದು ಯುಧಿಷ್ಠಿರನು ತನ್ನ ಜತೆಯಲ್ಲಿ ಬರುತ್ತಿದ್ದ ನಾಯಿಯನ್ನು ಬಿಡಲು ಸಮ್ಮತಿಸದಿದ್ದುದು. ಯಮನು ಪ್ರತ್ಯಕ್ಷನಾದುದು. ಯುಧಿಷ್ಠಿರನು ಸ್ವರ್ಗದಲ್ಲಿ ಭೀಮಾದಿಗಳನ್ನು ಕಾಣದೆ ಅವರಿರುವ ಸ್ಥಳಕ್ಕೆ ತಾನೂ ಹೋಗಲು ಅಪೇಕ್ಷಿಸಿದುದು . ೮

# ಶ್ರೀಮಹಾಭಾರತವು

## ಮಹಾಪ್ರಸ್ಥಾನಿಕಪರ್ವವು.

---

**ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ ।**
**ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್**

ಯುಧಿಷ್ಠಿರನು ಸ್ವರ್ಗಕ್ಕೆ ಹೋಗಲುದ್ದೇಶಿಸಿ, ಪರೀಕ್ಷಿತ್ತಿಗೆ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ, ಯುಯುತ್ಸುವಿನಲ್ಲಿ ರಾಜ್ಯವನ್ನೊಪ್ಪಿಸಿ, ನಗರವಾಸಿಗಳ ಅನುಮತಿಯನ್ನು ಪಡೆದು, ತನ್ನ ತಮ್ಮಂದಿರೊಡನೆಯೂ, ದ್ರೌಪದಿಯೊಡನೆಯೂ, ಒಂದು ನಾಯಿಯೊಡನೆಯೂ ಹೊರಟುದು. ಅರ್ಜುನನು ವಾರಿಯಲ್ಲಿ ಅಗ್ನಿಯ ಮಾತಿನಂತೆ ತನ್ನ ಬಿಲ್ಲನ್ನೂ, ಬತ್ತಳಿಕೆಯನ್ನೂ ಸಮುದ್ರದಲ್ಲಿ ಬಿಸುಟುದು

ಜನಮೇಜಯರಾಜನು ವೈಶಂಪಾಯನನನ್ನು ಕುರಿತು ‘ ಮುನೀಂದ್ರಾ! ವೃಷ್ಣಿಗಳ ಮತ್ತು ಅಂಧಕರ ಕುಲದಲ್ಲಿ ಜನಿಸಿದ ಮುಸಲದಿಂದ ಯಾದವರಲ್ಲಿ ಉಂಟಾದ ಕಲಹವನ್ನೂ, ಕೃಷ್ಣನು ಈ ಲೋಕವನ್ನು ಬಿಟ್ಟು ಹೊರಟುಹೋದುದನ್ನೂ ಕೇಳಿದಮೇಲೆ ಪಾಂಡವರು ಮಾಡಿದುದೇನು? ಎಂದು ಕೇಳಿದನು.

ಆಗ ವೈಶಂಪಾಯನನು ‘ ರಾಜೇಂದ್ರಾ! ವೃಷ್ಣಿಗಳ ಮಹಾನಾಶವನ್ನು ಕೇಳಿದಮೇಲೆ ಧರ್ಮರಾಜನು ಸಕಲವನ್ನೂ ತ್ಯಜಿಸಿ ಹೊರಡುವ

ಅಭಿಪ್ರಾಯವುಳ್ಳವನಾಗಿ ಅರ್ಜುನನನ್ನು ಕುರಿತು 'ಓ ಧೀಮಂತಾ! ಹೇಗಿದ್ದರೂ ಕಾಲವು ಎಲ್ಲಾ ಪ್ರಾಣಿಗಳನ್ನೂ ಪಕ್ವಮಾಡುವುದು. ಆದುದ ರಿಂದ ನಾನೂ ಈಗ ಕಾಲಪಾಶಕ್ಕೆ ಗುರಿಯಾಗುವುದನ್ನೇ (ಮರಣವನ್ನು) ಆಶಿಸುವೆನು. ನೀನೂ ನಿನ್ನಲ್ಲಿ ಆಲೋಚಿಸಿನೋಡು' ಎಂದನು. ಅದನ್ನು ಕೇಳಿ ಅರ್ಜುನನು 'ಅದಕ್ಕೆ ತಡೆಯೇನು? ಕಾಲವು ನಿತ್ಯವೇ! ಜೀವಿಗ ಳನ್ನು ಹೇಗೂ ಬಿಡದು. ಅದು ಈಗಲೇ ಬರಲಿ' ಎಂದು ಅಣ್ಣನಾದ ಯುಧಿಷ್ಠಿರನ ವಾಕ್ಯವನ್ನು ಅನುಮೋದಿಸಿದನು. ಅರ್ಜುನನ ಅಭಿಪ್ರಾ ಯವನ್ನು ತಿಳಿದು ಭೀಮಸೇನನೂ, ನಕುಲಸಹದೇವರೂ ಅರ್ಜುನನ ಮಾತನ್ನೇ ಅನುವಾದಿಸಿದರು. ಆಮೇಲೆ ಯುಧಿಷ್ಠಿರನು ಧರ್ಮಸಾಧನೆ ಗಾಗಿ ಹೊರಡುವ ಉದ್ದೇಶದಿಂದ ವೈಶ್ಯಾಪುತ್ರನಾದ ಯುಯುತ್ಸುವನ್ನು ಕರೆಸಿ, ರಾಜ್ಯವೆಲ್ಲವನ್ನೂ ಆತನಲ್ಲಿ ಒಪ್ಪಿಸಿದನು. ತನ್ನ ರಾಜ್ಯದಲ್ಲಿ ಪರೀಕ್ಷಿ ತ್ತಿಗೆ ಅಭಿಷೇಕಮಾಡಿ, ಸುಭದ್ರೆಯನ್ನು ಕುರಿತು, 'ಅಮ್ಮಾ! ನಿನ್ನ ಮೊಮ್ಮಗನಾದ ಈತನೇ ಈಗ ಕೌರವರಾಜನು. ಯಾದವರಲ್ಲಿ ಜೀವ ದಿಂದುಳಿದ ವಜ್ರನು ಈಗ ಅವರಿಗೆ ಅರಸನಾಗಿರುವನಷ್ಟೆ? ಅದೇ ರೀತಿ ಯಲ್ಲಿ ಈಗ ಹಸ್ತಿನಾಪುರದ ರಾಜನಾಗಿರುವ ಪರೀಕ್ಷಿತ್ತನ್ನೂ, ಇಂದ್ರಪ್ರಸ್ಥ ದಲ್ಲಿ ಯಾದವಕುಲದರಸನಾಗಿರುವ ಆ ವಜ್ರನನ್ನೂ ಇಬ್ಬರನ್ನೂ ನೀನು ರಕ್ಷಿಸುತ್ತಿರಬೇಕು. ಈ ಮುಖ್ಯಧರ್ಮವನ್ನು ಬಿಟ್ಟು ನೀನು ಅಧ ರ್ಮಕ್ಕೆ ಎಡೆಗುಡಬೇಡ' ಎಂದನು. ಆಮೇಲೆ ತನ್ನ ತಮ್ಮಂದಿರೊಡನೆ ವಾಸುದೇವನಿಗೂ, ವೃದ್ಧನಾದ ಮಾತುಲನಿಗೂ, ಬಲರಾಮನೇ ಮೊದ ಲಾದವರಿಗೂ ಶ್ರದ್ಧೆಯಿಂದ ಜಲತರ್ಪಣಮಾಡಿದನು. ಅವರೆಲ್ಲರಿಗೂ ವಿಧ್ಯುಕ್ತರೀತಿಯಲ್ಲಿ ಶ್ರಾದ್ಧಗಳನ್ನು ನಡೆಸಿದನು. ಯುಧಿಷ್ಠಿರನು ಪ್ರಯ ತ್ನಪೂರ್ವಕವಾಗಿ ಶಾರ್ಙ್ಗಪಾಣಿಯಾದ ಶ್ರೀಕೃಷ್ಣನನ್ನುದ್ದೇಶಿಸಿ, ಆತನ ದಿವ್ಯನಾಮಗಳನ್ನು ಕೀರ್ತಿಸುತ್ತ, ಬಹಳ ಶ್ರದ್ಧೆಯಿಂದ ವ್ಯಾಸ, ನಾರದ, ಮಾರ್ಕಂಡೇಯ, ಭರದ್ವಾಜ, ಯಾಜ್ಞ್ಯವಲ್ಕನೇ ಮೊದಲಾದ ಮಹರ್ಷಿ ಗಳಿಗೆ ಮೃಷ್ಟಾನ್ನಭೋಜನದಿಂದ ಸಂತರ್ಪಣಮಾಡಿಸಿದನು. ಲಕ್ಷಲೆಕ್ಕ ದಲ್ಲಿ ವಸ್ತ್ರಗಳನ್ನೂ, ಗ್ರಾಮಗಳನ್ನೂ, ರಥಗಳನ್ನೂ, ಸ್ತ್ರೀಯರನ್ನೂ ಬ್ರಾಹ್ಮಣರಿಗೆ ದಾನಮಾಡಿದನು. ಇವೆಲ್ಲವೂ ಮುಗಿದಮೇಲೆ ಆತನು

ನಗರದಲ್ಲಿ ಪೂಜ್ಯನೂ, ಗುರುವೂ ಆದ ಕೃಪನನ್ನು ಕರೆದು, ಆಸನದಲ್ಲಿ ಕುಳ್ಳಿರಿಸಿ ಮರ್ಯಾದೆಮಾಡಿ, ಪರೀಕ್ಷಿತ್ತನ್ನು ಆತನಿಗೆ ಶಿಷ್ಯನನ್ನಾಗಿ ಒಪ್ಪಿಸಿದನು. ಎಲ್ಲಾ ಜನರನ್ನೂ ಬರಮಾಡಿ ತನ್ನ ಉದ್ದೇಶವನ್ನು ತಿಳಿಸಿದನು. ಆ ಪಟ್ಟಣದ ಮತ್ತು ದೇಶದ ಜನರೆಲ್ಲರೂ ಧರ್ಮರಾಜನ ಮಾತುಗಳನ್ನು ಕೇಳಿ ವ್ಯಸನಗೊಂಡರು. ಆಗ ಯಾರಿಗೂ ಸಂತೋಷವಿರಲಿಲ್ಲ. ಆದರಿಂದ ಅವರೆಲ್ಲರೂ ಆ ರಾಜನನ್ನು ಕುರಿತು ' ಹೀಗೆ ಮಾಡಬಾರದು ' ಎಂದರು ಆದರೆ ಕಾಲಧರ್ಮವನ್ನು ಅರಿತ ಯುಧಿಷ್ಠಿರನು ಅದಕ್ಕೆ ಸಮ್ಮತಿಸದೆ, ಶ್ರೀಕೃಷ್ಣನೇ ತಮ್ಮನ್ನು ಬಿಟ್ಟುಹೋಗಿರುವಾಗ, ತಾವಿರುವುದೇಕೆಂದು ತನ್ನ ನಗರದ ಮತ್ತು ದೇಶದ ಜನರೆಲ್ಲರ ಅನುಮತಿಯನ್ನೂ ಪಡೆದು ತಾನೂ ಹೊರಡುವುದಾಗಿ ತೀರ್ಮಾನಿಸಿದನು. ಇಷ್ಟರಲ್ಲಿ ಆ ದೇಶದಲ್ಲಿ ಒಬ್ಬನು ಒಂದು ಭೂಮಿಯನ್ನು ಇನ್ನೊಬ್ಬನಿಗೆ ವಿಕ್ರಯಿದಾಗ, ಅದನ್ನು ಕೊಂಡುಕೊಂಡು ಆ ಭೂಮಿಗೆ ಯಜಮಾನನಾದವನು, ಹಿಂದೆ ಯಜಮಾನನಾಗಿದ್ದವನು, ಆ ಊರಿನ ರಾಜನು, ಇವರೆಲ್ಲರೂ ಏಕಕಾಲದಲ್ಲಿ ಆ ಸ್ವತ್ತಿಗೆ ಆಸೆಪಟ್ಟು, ಆ ಭೂಮಿಯವಿಷಯವಾಗಿ ವ್ಯಾಜ್ಯವನ್ನು ಹೂಡಿದ್ದರು. ಈ ಸಂಭವವನ್ನು ನೋಡಿ ಸಹದೇವನು ಕಲಿಯುಗವು ಪ್ರಾಪ್ತವಾಯಿತೆಂದು ತಿಳಿದು ನಗುತ್ತ, ' ಧರ್ಮವು ನಶಿಸಿತು. ಸಾಂಕರ್ಯವು ತಲೆಯೆತ್ತುತ್ತಿದೆ ' ಎಂದು ಯುಧಿಷ್ಠಿರನಿಗೆ ತಿಳಿಸಿದನು. ಕುರುಕುಲಶ್ರೇಷ್ಠನಾದ ಧರ್ಮರಾಜನು ಅದನ್ನು ಕೇಳಿ ವ್ಯಾಕುಲಗೊಂಡು, ' ಇನ್ನು ನಾನು ಇಲ್ಲಿ ಜೀವಿಸಿದ್ದುದು ಸಾಕು ' ಎಂದು ಹೇಳುತ್ತ, ಒಡನೆ ತನ್ನ ಮೈಮೇಲೆ ಧರಿಸಿದ್ದ ಆಭರಣಗಳನ್ನೆಲ್ಲ ಕಳೆದು ಮರದತೊಗಟೆಗಳನ್ನು ಧರಿಸಿಕೊಂಡನು. ಭೀಮಾರ್ಜುನನಕುಲಸಹದೇವರೂ, ದ್ರೌಪದಿಯೂ ಅದೇ ರೀತಿಯಲ್ಲಿ ಚೀರವಸ್ತ್ರಗಳನ್ನುಟ್ಟರು. ಅವರೆಲ್ಲರೂ ಅಗ್ನಿಯನ್ನು ವಿಸರ್ಜಿಸುವುದಕ್ಕಾಗಿ ಕೊನೆಯಲ್ಲಿ ಮಾಡಬೇಕಾದ ಇಷ್ಟಿಯನ್ನು ಮಾಡಿ, ಅಗ್ನಿಗಳನ್ನು ಆತ್ಮಸಮಾರೋಪಣೆಮಾಡಿಕೊಂಡು, ಅದನ್ನು ನೀರಿನಲ್ಲಿ ಬಿಟ್ಟು ಹೊರಟರು. ಆಮೇಲೆ ಅಲ್ಲಿದ್ದ ಬೇರೆ ಎಲ್ಲಾ ಸ್ತ್ರೀಯರೂ, ದ್ರೌಪದೀಸಹಿತರಾಗಿ ಹೊರಟ ಪಂಚಪಾಂಡವರನ್ನು ನೋಡಿ ಹಿಂದೆ ದ್ಯೂತದಲ್ಲಿ ಜಯಿಸಲ್ಪಟ್ಟು ಅರಣ್ಯಕ್ಕೆ ಹೊರಟಾಗ ಹೇಗೋ ಹಾಗೆ, ಗಟ್ಟಿಯಾಗಿ

ಅತ್ತರು. ಯುಧಿಷ್ಠಿರನ ಉದ್ದೇಶವನ್ನೂ, ಯಾದವರ ನಾಶವನ್ನೂ ಕೇಳಿದ ಮೇಲೆ ಆ ಸಹೋದರರೆಲ್ಲರಿಗೂ ನಗರವನ್ನು ಬಿಟ್ಟು ಹೊರಡುವ ವಿಷಯ ದಲ್ಲಿ ಸಂತೋಷವೇ ಇದ್ದಿತು. ಐದುಮಂದಿ ಸಹೋದರರು, ಆರನೆಯವ ಳಾದ ದ್ರೌಪದಿ, ಏಳನೆಯದೊಂದು ನಾಯಿ, ಇಷ್ಟು ಮಂದಿಯೂ ಹಸ್ತಿನಾ ಪುರದಿಂದ ಹೊರಟರು. ಪಟ್ಟಣದ ಜನರೂ, ಅಂತಃಪುರಸ್ತ್ರೀಯರೂ, ಸ್ವಲ್ಪದೂರದವರೆಗೆ ಅವರನ್ನು ಹಿಂಬಾಲಿಸಿ ಹೋದರು ಆದರೆ ಅವರಲ್ಲಿ ಒಬ್ಬರಾದರೂ ಪಾಂಡವರನ್ನು ಹಿಂತಿರುವಂತೆ ಹೇಳಲಾರದೆಹೋದರು. ಸ್ವಲ್ಪದೂರ ಹೋದಮೇಲೆ ನಗರ ಜನರು ಹಿಂತಿರುಗಿಬಿಟ್ಟರು ಕೃಪನೇ ಮೊದಲಾದವರು ಯುಯುತ್ಸುವಿನ ಆಶ್ರಯದಲ್ಲಿ ನಿಂತರು ನಾಗ ಕನ್ನಿಕೆಯಾದ ಉಲೂಪಿಯು ಗಂಗಾಪ್ರವೇಶಮಾಡಿದಳು. ಚಿತ್ರಾಂಗ ದೆಯು ಮಣಲೂರಪುರವನ್ನು ಕುರಿತು ಹೊರಟಳು. ಇತರ ಸ್ತ್ರೀಯರು ಪರೀಕ್ಷಿತ್ತಿನ ಆಶ್ರಯದಲ್ಲಿ ನಿಂತರು. ಆಮೇಲೆ ಮಹಾತ್ಮರಾದ ಪಾಂಡ ವರೂ, ದ್ರೌಪದಿಯೂ ಉಪವಾಸಹಿಡಿದು, ಪೂರ್ವಾಭಿಮುಖವಾಗಿ ಹೊರ ಟರು. ಯೋಗಿಗಳಾಗಿ, ಸನ್ಯಾಸಧರ್ಮವನ್ನು ಅವಲಂಬಿಸಿ, ಅವರೆಲ್ಲರೂ ಮುಂದೆಮುಂದೆ ನಾನಾದೇಶಗಳನ್ನೂ, ನದಿಗಳನ್ನೂ, ಸಮುದ್ರಗಳನ್ನೂ ದಾಟಿಹೋದರು. ಎಲ್ಲರಿಗೆ ಮುಂದೆ ಯುಧಿಷ್ಠಿರನು, ಅವನ ಹಿಂದೆ ಭೀಮಸೇನನು, ಆತನ ಹಿಂದೆ ಅರ್ಜುನನು, ಆತನ ಹಿಂದೆ ಕ್ರಮವಾಗಿ ನಕುಲಸಹದೇವರು, ಹೀಗೆ ವರಿಸೆಯಾಗಿ ಹೊರಟರು. ಇವರೆಲ್ಲರಿಗೂ ಹಿಂದೆ ಸುಂದರವಾದ ನಿತಂಬಗಳೂ, ತಾವರೆಯ ದಳಗಳಂತೆ ಅಂದವಾದ ಕಣ್ಣುಗಳೂ ಉಳ್ಳ ಸ್ತ್ರೀರತ್ನವೆನಿಸಿದ ದ್ರೌಪದಿಯು ಹೊರಟಳು. ಹೀಗೆ ಹೊರಟ ಪಾಂಡವರೊಡನೆ ನಾಯಿಯೂ ಹೋಗುತಿದ್ದಿತು. ಆ ವೀರರು ಕ್ರಮವಾಗಿ ಲೌಹಿತ್ಯವೆಂಬ ಸಮುದ್ರವನ್ನು ಸಮೀಪಿಸಿದರು. ಅರ್ಜು ನನು ಬೇರೊಬ್ಬರಿಗೆ ದುರ್ಲಭವಾದ ಉತ್ತಮವಸ್ತುಗಳೆಂಬ ತನ್ನ ದಿವ್ಯ ಧನುಸ್ಸನ್ನೂ, ಅಕ್ಷಯವಾದ ಬತ್ತಳಿಕೆಗಳನ್ನೂ ಬಿಡದೆ ತನ್ನೊಡನೆ ಸಾಗಿಸಿಕೊಂಡೇ ಹೋಗುತ್ತಿದ್ದನು. ಆಗ ತಮ್ಮೆದಿರಿಗೆ ಪರ್ವತದಂತೆ ದಾರಿಯನ್ನು ಮುಚ್ಚಿಕೊಂಡು ಪುರುಷಾಕಾರದಿಂದ ಪ್ರತ್ಯಕ್ಷನಾಗಿ ನಿಂತಿದ್ದ ಒಂದು ವ್ಯಕ್ತಿಯನ್ನು ಕಂಡರು. ಆ ಪುರುಷನು ಪಾಂಡವರನ್ನು ಕುರಿತು

'ಓ! ಓ! ವೀರರಾದ ಪಾಂಡುಪುತ್ರರೇ! ನಾನು ಅಗ್ನಿ! ಮಹಾಬಾಹುವಾದ ಯುಧಿಷ್ಠಿರಾ! ಓ ಶತ್ರುಭೀಕರನಾದ ಭೀಮಸೇನನೇ! ಓ ಅರ್ಜುನಾ! ಎಲೈ ವೀರರಾದ ನಕುಲಸಹದೇವರೇ! ನನ್ನ ಮಾತನ್ನು ಲಾಲಿಸಿರಿ. ಕೃಷ್ಣಾರ್ಜುನರ ಪ್ರಭಾವದಿಂದ ಅಗ್ನಿಯಾದ ನಾನು ಖಾಂಡವವನವನ್ನು ದಹಿಸಿದೆನು. ಈ ಅರ್ಜುನನು ತನ್ನ ದಿವ್ಯಧನುಸ್ಸಾದ ಆ ಗಾಂಡೀವವನ್ನು ಇಲ್ಲಿಯೇ ಬಿಟ್ಟು ಮುಂದೆ ಅರಣ್ಯಕ್ಕೆ ಹೊರಡಲಿ. ಇನ್ನು ಈ ಗಾಂಡೀವಧನುಸ್ಸಿನಿಂದ ಈತನಿಗೆ ಯಾವ ಪ್ರಯೋಜನವೂ ಇಲ್ಲ. ಮಹಾತ್ಮನಾದ ಕೃಷ್ಣನಲ್ಲಿದ್ದ ಚಕ್ರವೂ ಹೋಯಿತು. ಮುಂದೆ ಬೇಕಾದಾಗ ಅವರ ಕೈಗೆ ಬಂದುಸೇರುವುದು. ಧನುಶ್ರೇಷ್ಠವಾದ ಈ ಗಾಂಡೀವವನ್ನು ನಾನು ಅರ್ಜುನನಿಗಾಗಿ ವರುಣನಿಂದ ತಂದೆನು. ಇದನ್ನು ವರುಣನಿಗೇ ಹಿಂತಿರುಗಿ ಕೊಡಬೇಕು' ಎಂದನು. ಆ ಭ್ರಾತೃಗಳೆಲ್ಲರೂ ಸಮ್ಮತಿಸಿ ಅರ್ಜುನನಿಗೆ ಪ್ರೋತ್ಸಾಹಿಸಲು, ಆತನು ಆ ಗಾಂಡೀವಧನುಸ್ಸನ್ನೂ, ಅಕ್ಷಯಬಾಣಗಳುಳ್ಳ ಶ್ರೇಷ್ಠವಾದ ಎರಡು ಬತ್ತಳಿಕೆಗಳನ್ನೂ ನೀರಿನಲ್ಲಿ ಬಿಸುಟನು. ಒಡನೆ ಅಗ್ನಿಯೂ ಅಲ್ಲಿಯೇ ಮರೆಯಾದನು. ಪಾಂಡವರು ಅಲ್ಲಿಂದ ದಕ್ಷಿಣದಿಕ್ಕನ್ನು ಕುರಿತು ಹೊರಟರು. ಅವರು ಲವಣಸಮುದ್ರದ ಉತ್ತರತೀರದಲ್ಲ ದಕ್ಷಿಣಪಶ್ಚಿಮವಾಗಿ ನಡೆದು, ಅಲ್ಲಿಂದ ಪುನಃ ಉತ್ತರದಿಕ್ಕಿಗೆ ತಿರುಗಿ, ಸಮುದ್ರದಲ್ಲಿ ಮುಳುಗಿಹೋಗಿದ್ದ ದ್ವಾರಕೆಯನ್ನು ನೋಡಿದರು. ಆಮೇಲೆ ಅವರೆಲ್ಲರೂ ಭೂಮಿಯನ್ನು ಪ್ರದಕ್ಷಿಣೆಮಾಡುವ ಉದ್ದೇಶದಿಂದ ಪುನಃ ತಿರುಗಿ ಪಶ್ಚಿಮದಿಕ್ಕಿಗೆ ತಿರುಗಿದರು.

ಇದು ಮೊದಲನೆಯ ಅಧ್ಯಾಯವು.

ಪಾಂಡವರೂ, ದ್ರೌಪದಿಯೂ ಸಾಲಾಗಿ ಹೋಗುತ್ತಿರುವಾಗ ಒಬ್ಬೊಬ್ಬರಾಗಿ ಕೆಳಗೆ ಬಿದ್ದುದು. ಭೀಮನು ಕೇಳುತ್ತಿರುವವರೆಗೂ ಯುಧಿಷ್ಠಿರನು ಅವರೆಲ್ಲರೂ ಬೀಳುವುದಕ್ಕೆ ಕಾರಣವನ್ನು ತಿಳಿಸಿದುದು ನಾಯಿಯು ಒಂದುಮಾತ್ರ ಅವರನ್ನು ಹಿಂಬಾಲಿಸುತ್ತಲೇ ಇದ್ದುದು.

ಆಮೇಲೆ ಯೋಗವನ್ನು ಹಿಡಿದು ಜಿತೇಂದ್ರಿಯರಾಗಿದ್ದ ಅವರು ಉತ್ತರಾಭಿಮುಖವಾಗಿ ಹೊರಟು, ಹಿಮಾಲಯವೆಂಬ ದೊಡ್ಡ ಪರ್ವತವನ್ನು ದೂರದಿಂದ ಕಂಡರು ಹಾಗೆಯೇ ಅದರ ಸಮೀಪಕ್ಕೆ ಹೋಗಿ ಅಲ್ಲಿ ವಾಲುಕಾರ್ಣವವನ್ನೂ, ಪರ್ವತಶ್ರೇಷ್ಠವಾದ ಮೇರುವನ್ನೂ ಕಂಡರು ಯೋಗಧರ್ಮವನ್ನವಲಂಬಿಸಿದ ಅವರೆಲ್ಲರೂ ವೇಗದಿಂದ ನಡೆದುಹೋಗುತ್ತಿರುವಾಗ, ದ್ರೌಪದಿಯು ಯೋಗವು ತಪ್ಪಿ ಧಟ್ಟನೆ ಭೂಮಿಯಲ್ಲಿ ಬಿದ್ದಳು. ಆಕೆಯು ಬಿದ್ದುದನ್ನು ಕಂಡು ಮಹಾಬಲಶಾಲಿಯಾದ ಭೀಮಸೇನನು ದ್ರೌಪದಿಯನ್ನು ನೋಡುತ್ತ ಧರ್ಮರಾಜನನ್ನು ಕುರಿತು 'ಅಣ್ಣಾ! ರಾಜಪುತ್ರಿಯಾದ ಈ ದ್ರೌಪದಿಯು ಯಾವ ಅಧರ್ಮಕಾರ್ಯವನ್ನೂ ಮಾಡಿದವಳಲ್ಲ ಹಾಗಿರುವಾಗ ಈಕೆಯು ಇದ್ದಕ್ಕಿದ್ದಹಾಗೆ ನೆಲದಮೇಲೆ ಬಿದ್ದ ಕಾರಣವೇನು? ತಿಳಿಸು' ಎಂದನು. ಅದಕ್ಕೆ ಯುಧಿಷ್ಠಿರನು 'ಭೀಮಸೇನಾ! ಈಕೆಗೆ ಅರ್ಜುನನೊಬ್ಬನಲ್ಲಿ ಪಕ್ಷಪಾತವು ಹೆಚ್ಚು ಅದಕ್ಕೆ ಫಲವಾಗಿ ಇದನ್ನು ಅನುಭವಿಸುವಳು. ಇರಲಿ! ನಡೆ' ಎಂದು ಹೇಳಿ ಯುಧಿಷ್ಠಿರನು ಆಕೆಯನ್ನು ತಾನು ಕಣ್ಣೆತ್ತಿಯೂ ನೋಡದೆ, ಮನಸ್ಸನ್ನು ನಿಗ್ರಹಿಸಿಕೊಂಡು ಮುಂದೆಮುಂದೆ ಸಾಗುತ್ತಿದ್ದನು. ಸ್ವಲ್ಪಮುಂದೆ ಹೋದಮೇಲೆ ಧೀಮಂತನಾದ ಸಹದೇವನು ನೆಲದಮೇಲೆ ಬಿದ್ದನು. ಅದನ್ನು ನೋಡಿ ಭೀಮಸೇನನು ತಿರುಗಿ ರಾಜನನ್ನು ಕುರಿತು 'ಆರ್ಯಾ! ಇದೇನು? ಯಾವಾತನು ನಮ್ಮೆಲ್ಲರಿಗೂ ಸೇವೆಮಾಡಿಕೊಂಡು, ನಿರಹಂಕಾರನಾಗಿದ್ದನೋ, ಮಾದ್ರೀಪುತ್ರನಾದ ಆ ಸಹದೇವನು ಈಗ ಯಾವ ಕಾರಣದಿಂದ ಭೂಮಿಗೆ ಬಿದ್ದುಬಿಟ್ಟನು?' ಎಂದು ಕೇಳಿದನು. ಆಗ ಯುಧಿಷ್ಠಿರನು 'ಭೀಮಾ! ಹಾಗಲ್ಲ! ಈತನು ತನಗೆ ಸಮಾನನಾದ ಪಂಡಿತನೇ

ಇಲ್ಲವೆಂಬ ಗರ್ವದಿಂದಿದ್ದನು. ಆ ದೋಷಕ್ಕಾಗಿ ಇವನು ಕೆಳಗೆ ಬಿದ್ದನು' ಎಂದು ಹೇಳಿ, ಆ ಸಹದೇವನನ್ನೂ ಅಲ್ಲಿಯೇ ಬಿಟ್ಟುಬಿಟ್ಟು, ತನ್ನ ಇತರ ಸಹೋದರರೊಡನೆಯೂ, ನಾಯಿಯೊಡನೆಯೂ ಮುಂದೆ ಹೊರಟನು. ದ್ರೌಪದಿಯೂ, ಸಹದೇವನೂ ನೆಲದಮೇಲೆ ಬಿದ್ದುದನ್ನು ನೋಡಿ ದುಃಖಿಸುತ್ತ ಮುಂದೆ ಹೋಗುತಿದ್ದ ನಕುಲನೂ ಬಿದ್ದುಬಿಟ್ಟನು. ಸುಂದರಾಂಗನಾದ ನಕುಲನು ಕೆಳಗೆ ಬಿದ್ದುದನ್ನು ನೋಡಿ ಭೀಮಸೇನನು ಯುಧಿಷ್ಠಿರನನ್ನು ಕುರಿತು 'ಮಹಾಧರ್ಮಬುದ್ಧಿಯುಳ್ಳವನೂ, ನಮ್ಮಲ್ಲಿ ವಿಧೇಯನೂ, ಕೋಮಲಾಂಗನೂ ಆದ ನಕುಲನೂ ನೆಲದಮೇಲೆ ಬಿದ್ದುಬಿಟ್ಟನಲ್ಲಾ ? ಏನಿದು ?' ಎಂದನು ಆಗ ಧರ್ಮಾತ್ಮನೂ, ಪ್ರಾಜ್ಞನೂ ಆದ ಯುಧಿಷ್ಠಿರನು 'ಓ ಭೀಮಸೇನಾ ! ಇವನಿಗೂಕೂಡ ಮನಸ್ಸಿನಲ್ಲಿ 'ಸೌಂದರ್ಯದಲ್ಲಿ ತನಗೆ ಸಮಾನನು ಯಾವನೂ ಇಲ್ಲ ಲೋಕದೊಳಗೆಲ್ಲ ನಾನೇ ಅತ್ಯಂತ ಸುಂದರನು' ಎಂಬ ಗರ್ವವಿದ್ದಿತು. ಆದುದರಿಂದ ಈ ನಕುಲನು ಕೆಳಗೆ ಬಿದ್ದನು ವೀರಾ ! ಇರಲಿ ! ಬಾ! ಮನುಷ್ಯನು ತಾನು ಮಾಡಿದ ಕಾರ್ಯಕ್ಕೆ ತಕ್ಕ ಫಲವನ್ನು ಅವಶ್ಯವಾಗಿ ಅನುಭವಿಸುವನು' ಎಂದು ಪ್ರತ್ಯುತ್ತರಕೊಟ್ಟನು. ಅವರು ಮುಂದೆ ಹೋಗುತ್ತಿರಲು, ಶತ್ರುನಾಶಕನಾದ ಅರ್ಜುನನು ತನ್ನ ಹಿಂದೆ ಬಿದ್ದವರೆಲ್ಲರನ್ನೂ ನೋಡಿ ಶೋಕದಿಂದ ತಪಿಸುತ್ತ ನಡೆಯುತ್ತಿರುವಾಗ ತಾನೂ ಧೊಪ್ಪನೆ ಬಿದ್ದನು. ಪುರುಷಶ್ರೇಷ್ಠನೂ, ಇಂದ್ರಪರಾಕ್ರಮವುಳ್ಳವನೂ, ಅಜೇಯನೂ ಆದ ಅರ್ಜುನನು ಕೆಳಗೆ ಬಿದ್ದು ಮರಣಾವಸ್ಥೆಯಲ್ಲಿದ್ದಾಗ ಭೀಮಸೇನನು ತಿರುಗಿ ಯುಧಿಷ್ಠಿರನನ್ನು ಕುರಿತು, 'ಮಹಾತ್ಮನಾದ ಈತನು ವಿನೋದಕಾಲದಲ್ಲಿಯೂ ಸುಳ್ಳುಹೇಳಿದುದನ್ನು ನಾವು ಕಾಣೆವು. ಅಂತಹ ಈತನು ಪ್ರಜ್ಞೆತಪ್ಪಿ ಬಿದ್ದುದಕ್ಕೆ ಕಾರಣವೇನು ? ಇವನಲ್ಲಿ ಇದಕ್ಕೆ ಕಾರಣವಾದ ದೋಷವೇನು ?' ಎಂದನು ಆಗ ಯುಧಿಷ್ಠಿರನು 'ಹಿಂದಿನ ಯುದ್ಧದಲ್ಲಿ ಈತನು 'ತಾನೇ ಏಕಾಕಿಯಾಗಿ ಶತ್ರುಗಳನ್ನು ಇದಿರಿಸುವೆನು' ಎಂದು ಹೇಳುತ್ತಿದ್ದನು. ಮಹಾಶೂರನೆಂಬ ಗರ್ವದಿಂದಿದ್ದ ಈತನು ಹಾಗೆ ಮಾಡಲಿಲ್ಲ. ಆದುದರಿಂದ ಈತನು ಹೀಗೆ ಬಿದ್ದುಬಿಟ್ಟನು. ಅಲ್ಲದೆ ಈ ಅರ್ಜುನನು ಧನುರ್ಧಾರಿಗಳೆಲ್ಲರನ್ನೂ ಅವಮಾನಪಡಿಸಿರುವನು. ಕ್ಷೇಮಾಭಿಲಾಷಿಯಾದ

ವನು ಯಾವನೂ ಹಾಗೆ ಮಾಡಬಾರದು' ಎಂದು ಹೇಳಿ ಮುಂದಕ್ಕೆ ಹೊರಟನು. ಆಮೇಲೆ ಸ್ವಲ್ಪಹೊತ್ತಿನಲ್ಲಿ ಭೀಮಸೇನನೂ ಬಿದ್ದನು. ಹಾಗೆ ಕೆಳಗೆ ಬೀಳುವಾಗ ಭೀಮಸೇನನು 'ರಾಜಾ! ಇದೋ! ನೋಡು! ನೋಡು! ನಿನ್ನ ಪ್ರಿಯನಾದ ನಾನೂ ಬಿದ್ದುಬಿಟ್ಟೆನು. ನಾನು ಬಿದ್ದುದಕ್ಕೆ ಕಾರಣವೇನು? ನಿನಗೆ ತಿಳಿದಿದ್ದರೆ ತಿಳಿಸು' ಎಂದು ಕೇಳಿದನು. ಆದಕ್ಕೆ ಯುಧಿಷ್ಠಿರನು 'ಓ ಕುಂತೀಪುತ್ರಾ! ನೀನು ಅಮಿತಭೋಜಿಯಾಗಿದ್ದೆ! ನಿನ್ನ ದೇಹದಾರ್ಢ್ಯದಿಂದ ಇತರರನ್ನು ಲಕ್ಷಿಸದೆ ಆತ್ಮಸ್ತುತಿಮಾಡಿಕೊಳ್ಳುತಿದ್ದೆಯಲ್ಲವೆ? ಆದರಿಂದ ನೀನೂ ಹೀಗೆ ಬೀಳಬೇಕಾಯಿತು' ಎಂದು ಹೇಳಿ ಆತನನ್ನೂ ನೋಡದೆ ಮುಂದಕ್ಕೆ ಹೊರಟನು. ಜನಮೇಜಯ ರಾಜಾ! ಆಗಾಗ ನಾನು ನಿನಗೆ ತಿಳಿಸುತಿದ್ದ ಆ ನಾಯಿಯೊಂದೇ ಧರ್ಮರಾಜನನ್ನು ಬಿಡದೆ ಹಿಂಬಾಲಿಸುತಿದ್ದಿತು' ಎಂದನು.

ಇದು ಎರಡನೆಯ ಅಧ್ಯಾಯವು.

ಯುಧಿಷ್ಠಿರನು ಸ್ವರ್ಗಕ್ಕೆ ಹೋದಾಗ ಇಂದ್ರನು ಅಲ್ಲಿ ಆತನನ್ನು ರಥವನ್ನೇರುವಂತೆ ಹೇಳಿದುದು. ಯುಧಿಷ್ಠಿರನು ತನ್ನ ಜತೆಯಲ್ಲಿ ಬರುತ್ತಿದ್ದ ನಾಯಿಯನ್ನು ಬಿಡಲು ಸಮ್ಮತಿಸದಿದ್ದುದು. ಯಮನು ಪ್ರತ್ಯಕ್ಷನಾದುದು. ಯುಧಿಷ್ಠಿರನು ಸ್ವರ್ಗದಲ್ಲಿ ಭೀಮಾದಿಗಳನ್ನು ಕಾಣದೆ ಅವರಿರುವ ಸ್ಥಳಕ್ಕೆ ತಾನೂ ಹೋಗಲು ಅಪೇಕ್ಷಿಸಿದುದು.

ಇಷ್ಟರಲ್ಲಿ ದೇವೇಂದ್ರನು ಭೂವ್ಯಾಕಾಶಗಳನ್ನೆಲ್ಲ ಮೊಳಗಿಸುವ ಮಹಾಧ್ವನಿಯುಳ್ಳ ತನ್ನ ರಥದಲ್ಲಿ ಕುಳಿತು ಧರ್ಮರಾಜನ ಸಮೀಪಕ್ಕೆ ಬಂದು ಆತನನ್ನು ಕುರಿತು 'ಯುಧಿಷ್ಠಿರಾ! ಬಾ! ಈ ರಥವನ್ನೇರಿ ಕುಳ್ಳಿರು' ಎಂದನು. ಆಗ ಆತನು ಮೃತರಾಗಿ ಬಿದ್ದ ತನ್ನ ಭ್ರಾತೃಗಳನ್ನು ನೋಡಿ ವ್ಯಾಕುಲಚಿತ್ತದಿಂದ ತಪಿಸುತ್ತ, ಇಂದ್ರನನ್ನು ಕುರಿತು 'ಓ ದೇವೇಂದ್ರಾ! ನನ್ನ ಸಹೋದರರೆಲ್ಲರೂ ಅಲ್ಲಿ ಬಿದ್ದಿರುವರು. ಅವರೆಲ್ಲರೂ

ನನ್ನೊಡನೆ ಬರಬೇಕು. ಆ ಸಹೋದರರನ್ನು ಬಿಟ್ಟು ನಾನುಮಾತ್ರ ಸ್ವರ್ಗಕ್ಕೆ ಹೋಗಲು ಇಷ್ಟಪಡಲಾರೆನು. ಸುಕುಮಾರಿಯೂ, ಸದಾ ಸುಖದಲ್ಲಿಯೇ ಬಳೆದವಳೂ ಆದ ಆ ಪಾಂಚಾಲರಾಜಪುತ್ರಿಯೂ ನಮ್ಮೊಡನೆ ಬರಬೇಕು. ಅದನ್ನು ನೀನೂ ಅಂಗೀಕರಿಸುವೆಯಾ?' ಎಂದನು. ಅದಕ್ಕೆ ಇಂದ್ರನು ದ್ರೌಪದಿಯೊಡನೆ ಮೊದಲೇ ಸ್ವರ್ಗಸ್ಥರಾಗಿರುವ ಎಲ್ಲಾ ಭ್ರಾತೃಗಳನ್ನೂ ನೀನು ಸ್ವರ್ಗದಲ್ಲಿ ಕಾಣಬಹುದು. ಅವರಿಗಾಗಿ ವ್ಯಸನಪಡಬೇಡ. ಅವರೆಲ್ಲರೂ ಇಲ್ಲಿ ತಮ್ಮ ಮಾನುಷಶರೀರಗಳನ್ನು ತ್ಯಜಿಸಿ, ಸ್ವರ್ಗದಲ್ಲಿ ದಿವ್ಯಶರೀರದಿಂದಿರುವರು ನೀನುಮಾತ್ರ ಈ ಶರೀರದೊಡನೆಯೇ ಸ್ವರ್ಗಕ್ಕೆ ಹೋಗುವೆ. ಇದರಲ್ಲಿ ಸಂದೇಹವಿಲ್ಲ' ಎಂದನು. ಆಗ ಯುಧಿಷ್ಠಿರನು 'ಓ ದೇವೇಂದ್ರಾ! ನೀನು ಹಿಂದುಮುಂದಿನದಕ್ಕೆಲ್ಲ ಪ್ರಭು! ಸರ್ವಶಕ್ತನು. ಆದುದರಿಂದ ಈ ನಾಯಿಗೆ ಯಾವಾಗಲೂ ನನ್ನಲ್ಲಿ ಭಕ್ತಿಯುಂಟು ಇದೂ ನನ್ನೊಡನೆ ಅಲ್ಲಿಗೆ ಬರಲಿ! ನನ್ನ ದಯಾಸ್ವಭಾವವು ನಿನಗೆ ತಿಳಿದೇ ಇದೆಯಲ್ಲವೆ?' ಎನಲು, ಇಂದ್ರನು 'ಓ ರಾಜಾ! ಈಗ ನೀನು ದೇವತ್ವವನ್ನೂ, ನನಗೆ ಸಮಾನತ್ವವನ್ನೂ ಸಕಲಸಂಪತ್ತನ್ನೂ, ಸಿದ್ಧಿಯನ್ನೂ, ಸ್ವರ್ಗಸುಖಗಳನ್ನೂ ಸಂಪಾದಿಸಿರುವೆ. ಈಗ ಈ ನಾಯಿಯನ್ನು ಬಿಟ್ಟುಬರುವುದರಿಂದ ನೀನು ನಿಷ್ಕರುಣಿಯಾಗುವುದಿಲ್ಲ' ಎಂದನು. ಅದಕ್ಕೆ ಯುಧಿಷ್ಠಿರನು 'ಓ ಸಹಸ್ರಾಕ್ಷಾ! ಆ ಹೀನಕಾರ್ಯವನ್ನು ನಾನು ಮಾಡಲಾರೆನು. ಎಷ್ಟೇ ಸುಖಸಂಪತ್ತಿಗಾಗಿ ನಾನು ನನ್ನಲ್ಲಿ ವಿಶ್ವಾಸವುಳ್ಳ ಪ್ರಾಣಿಯನ್ನು ಬಿಡಬೇಕಾಗಿದ್ದರೂ, ಆ ಸುಖಸಂಪತ್ತುಗಳ ಸಂಬಂಧವೇ ನನಗೆ ಬೇಡ' ಎಂದನು. ಆಗ ಇಂದ್ರನು ಸ್ವರ್ಗಲೋಕದಲ್ಲಿ ನಾಯಿಯನ್ನು ಇಟ್ಟುಕೊಂಡಿರುವವರಿಗೆ ಸ್ಥಳವಿಲ್ಲ. ಕ್ರೋಧವಶರೆಂಬ ರಾಕ್ಷಸರು ಅಂತಹ ಅಶುದ್ಧರು ಮಾಡಿದ ಯಾಗ ತಟಾಕ ಪ್ರತಿಷ್ಠೆ ಮೊದಲಾದ ಧರ್ಮಗಳ ಫಲವನ್ನೆಲ್ಲ ಅಪಹರಿಸುವರು. ಆದುದರಿಂದ ನೀನು ಇದನ್ನಾಲೋಚಿಸಿ ನಾಯಿಯನ್ನು ಬಿಟ್ಟು ಬಾ! ಇದರಿಂದ ನಿನಗೆ ನಿಷ್ಕಾರುಣ್ಯವೇನೂ ಇಲ್ಲ' ಎಂದನು. ಅದಕ್ಕೆ ಯುಧಿಷ್ಠಿರನು 'ಓ ಮಹೇಂದ್ರಾ! ಈ ಲೋಕದಲ್ಲಿ ಮರೆಹೊಕ್ಕ ಭಕ್ತರನ್ನು ತ್ಯಜಿಸುವುದು ಮಹಾಪಾಪವೆಂದೂ, ಬ್ರಹ್ಮಹತ್ಯಾದೋಷಕ್ಕೆ ಸಮಾನವಾದುದೆಂದೂ

ಹೇಳುವರು ಆದುದರಿಂದ ನಾನು ಆತ್ಮಸುಖವನ್ನು ಕೋರಿ, ಈ ನಾಯಿ ಯನ್ನು ಈಗಲೂ, ಇನ್ನು ಮುಂದೆ ಯಾವ ಕಾಲದಲ್ಲಿಯೂ, ಯಾವ ರೀತಿ ಯಲ್ಲಿಯೂ ಬಿಡಲಾರೆನು. ಹೆದರಿಬಂದವನನ್ನೂ, ಭಕ್ತನನ್ನೂ, ವ್ಯಾಕು ಲಗೊಂಡವನನ್ನೂ, ಅನಾಥನಾಗಿ ಬೇರೆ ಗತಿಯಿಲ್ಲವೆಂದು ಬಂದವನನ್ನೂ, ಸೋತವನನ್ನೂ, ಪ್ರಾಣಸಂರಕ್ಷಣೆ ಮಾಡಿಕೊಳ್ಳಬೇಕೆಂದು ಅಪೇಕ್ಷಿಸು ವವನನ್ನೂ ನನ್ನ ಪ್ರಾಣವೇ ಹೋಗುವಂತಿದ್ದರೂ ಬಿಡಲಾರೆನು. ಇದು ನನ್ನ ನಿತ್ಯವ್ರತವು' ಎಂದನು ಆದಕ್ಕಾ ಇಂದ್ರನು ತಿರುಗಿ 'ರಾಜಾ! ಬಹಿರಂಗವಾಗಿ ನಾಯಿಯ ದೃಷ್ಟಿಗೆ ಬಿದ್ದ ಯಜ್ಞ ದಾನ ಹೋಮಾದಿಗ ಳನ್ನೆಲ್ಲ ಕ್ರೋಧವಶರು ಅಪಹರಿಸುವರು. ಆದುದರಿಂದ ಈ ನಾಯಿಯನ್ನು ಬಿಟ್ಟುಬಿಡು ಈ ನಾಯಿಯನ್ನು ಬಿಟ್ಟುಬಂದರೆಮಾತ್ರ ನೀನು ದೇವ ಲೋಕವನ್ನು ಸೇರಬಹುದು ಓ ವೀರಾ! ಭ್ರಾತೃಗಳನ್ನೂ, ಪ್ರಿಯ ಪತ್ನಿಯಾದ ದ್ರೌಪದಿಯನ್ನೂ ಬಿಟ್ಟು ನಿನ್ನ ಪುಣ್ಯಕರ್ಮವಶದಿಂದ ನೀನು ಈ ಲೋಕವನ್ನು ಪಡೆದಿರುವೆ ಈಗಲೂ ನೀನು ಈ ನಾಯಿಯನ್ನೇಕೆ ಬಿಡದಿರುವೆ? ಸಕಲವನ್ನೂ ತ್ಯಾಗಮಾಡಿ ಬಂದೂ, ಇನ್ನೂ ನಿನ್ನ ಬುದ್ಧಿ ಭ್ರಮೆ ಹೋಗಲಿಲ್ಲವೇ?' ಎಂದನು ಯುಧಿಷ್ಠಿರನು 'ಮೃತರಾದವ ರೊಡನೆ ಮಿತ್ರತ್ವ ಶತ್ರುತ್ವಗಳೆರಡೂ ಬಿಟ್ಟುಹೋಗುವುವಲ್ಲವೆ? ಮತ್ತು ಸತ್ತವರನ್ನು ಬದುಕಿಸುವುದು ಹೇಗೂ ಸಾಧ್ಯವಿಲ್ಲ. ಆದುದರಿಂದ ನಾನು ಅವರೆಲ್ಲರನ್ನೂ ತ್ಯಜಿಸಿದೆನೇಹೊರತು ಜೀವಸಹಿತರಾದವರನ್ನು ಬಿಡಲಿಲ್ಲ ಶರಣಾಗತನಾದವನನ್ನು ರಕ್ಷಿಸದಿರುವುದು, ಸ್ತ್ರೀಹತ್ಯೆ, ಬ್ರಾಹ್ಮ ಣದ್ರವ್ಯವನ್ನು ಅಪಹರಿಸುವುದು, ಮಿತ್ರದ್ರೋಹ ಇವು ನಾಲ್ಕೂ ಭಕ್ತ ನಾದವನನ್ನು ತೊರೆಯುವುದಕ್ಕೆ ಸಮಾನವೆಂದು ನನ್ನ ಅಭಿಪ್ರಾಯವು' ಎಂದನು ಧರ್ಮರಾಜನ ಮಾತುಗಳನ್ನು ಕೇಳಿ ಧರ್ಮಸ್ವರೂಪಿಯಾದ ಯಮ ನು ಸಂತೋಷಗೊಂಡು ಯುಧಿಷ್ಠಿರರಾಜನನ್ನು ಸ್ತುತಿಸುತ್ತಾ ಈ ಹಿತ ವಾಕ್ಯಗಳನ್ನು ಹೇಳತೊಡಗಿದನು. "ರಾಜೇಂದ್ರಾ! ನೀನು ನಿನ್ನ ತಂದೆ ಯಾದ ಪಾಂಡುವಿಗೆ ತಕ್ಕ ನಡೆಯಿಂದಲೂ, ನಿನ್ನ ಬುದ್ಧಿವಂತಿಕೆಯಿಂದ ಲೂ, ಎಲ್ಲಾ ಪ್ರಾಣಿಗಳಲ್ಲಿಯೂ ನಿನಗಿರುವ ಈ ಭೂತದಯೆಯಿಂದಲೂ, ನೀನು ಉತ್ತಮಕುಲಜನೆಂಬುದರಲ್ಲಿ ಸಂದೇಹವೇ ಇಲ್ಲ. ಹಿಂದೆ ದ್ವೈತ

ವನದಲ್ಲಿ ಪಾನೀಯಕ್ಕಾಗಿ ಹೋಗಿದ್ದ ನಿನ್ನ ಭ್ರಾತೃಗಳೆಲ್ಲರೂ ಕೊಲ್ಲಲ್ಪಟ್ಟಿದ್ದಾಗಲೂ ಹೀಗೆಯೇ ನಾನು ನಿನ್ನನ್ನು ಪರೀಕ್ಷಿಸಿದೆನು. ಆಗ ನಿನ್ನ ಸ್ವಂತ ತಾಯಿಯಾದ ಕುಂತಿಯೂ, ಸವತಿತಾಯಿಯಾದ ಮಾದ್ರಿಯೂ ಇಬ್ಬರೂ ಸಮಾನಸ್ಥಿತಿಯಲ್ಲಿರಬೇಕೆಂಬುದಕ್ಕಾಗಿ, ಭೀಮಸೇನಾರ್ಜುನರೆಂಬ ಇಬ್ಬರು ಸಹೋದರರನ್ನೂ ಬಿಟ್ಟು, ನಕುಲನುಮಾತ್ರ ಬದುಕಬೇಕೆಂದು ಅಪೇಕ್ಷಿಸಿದೆಯಲ್ಲವೆ? ಅದರಂತೆಯೇ ಈಗ ಈ ನಾಯಿಯನ್ನು ಭಕ್ತನೆಂದು ಭಾವಿಸಿ, ದೇವರಥವನ್ನೂ ಒಲ್ಲದೆಹೋದೆ. ಆದುದರಿಂದ ಸ್ವರ್ಗದಲ್ಲಿ ನಿನಗೆ ಸಮಾನನಾದ ರಾಜನು ಒಬ್ಬನಾದರೂ ಇಲ್ಲ. ನಿನಗೆ ಈ ನಿನ್ನ ಮಾನವ ಶರೀರನೊಡನೆಯೇ ಅಕ್ಷಯಲೋಕಗಳು ಲಭಿಸಲಿ. ನೀನು ಉತ್ತಮವಾದ ದೇವಗತಿಯನ್ನು ಆರ್ಜಿಸಿದೆ" ಎಂದನು. ಆಮೇಲೆ ಧರ್ಮದೇವತೆಯೂ, ಇಂದ್ರನೂ, ಮರುತ್ತುಗಳೂ, ಅಶ್ವಿನೀದೇವತೆಗಳೂ, ಇತರ ದೇವತೆಗಳೂ, ದೇವರ್ಷಿಗಳೂ ಯುಧಿಷ್ಠಿರನನ್ನು ರಥದಲ್ಲಿ ಏರಿಸಿಕೊಂಡರು. ಸಿದ್ಧರೂ, ಕಾಮಚಾರಿಗಳೂ, ಪಾಪಹೀನರೂ, ನಿರ್ದುಷ್ಟ ಪುಣ್ಯಶಾಲಿಗಳೂ, ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲಿಯೂ ಧರ್ಮನಿರತರೂ ಆದ ಅವರೆಲ್ಲರೂ ತಮ್ಮತಮ್ಮ ವಿಮಾನಗಳಲ್ಲಿ ಹೊರಟರು. ಯುಧಿಷ್ಠಿರನು ದಿವ್ಯರಥದಲ್ಲಿ ಏರಿ, ತನ್ನ ತೇಜಸ್ಸಿನಿಂದ ಭೂವ್ಯೋಮಾಕಾಶಗಳನ್ನು ಬೆಳಗುತ್ತ, ವೇಗದಿಂದ ಅಂತರಿಕ್ಷಮಾರ್ಗವಾಗಿ ಪ್ರಯಾಣಮಾಡಿದನು ಆಮೇಲೆ ದೇವಲೋಕವಾಸಿಯೂ, ಸಮಸ್ತ ಲೋಕವನ್ನೂ ತಿಳಿದವನೂ, ಉತ್ತಮಜ್ಞಾನಪ್ರದನೂ, ಮಹಾತಪಸ್ವಿಯೂ ಆದ ನಾರದನು, ಆಗ ಉಚ್ಚಧ್ವನಿಯಿಂದ ಹೀಗೆಂದು ಹೇಳುವನು. "ನಾನು ಹಿಂದಿನ ಅನೇಕ ರಾಜರ್ಷಿಗಳನ್ನು ಕಣ್ಣಾರೆ ನೋಡಿರುವೆನು. ಧ್ಯಾನದೃಷ್ಟಿಯಿಂದಲೂ ಕಾಣುತ್ತಿರುವೆನು. ಕೌರವರಾಜನಾದ ಈ ಯುಧಿಷ್ಠಿರನು ಅವರೆಲ್ಲರ ಕೀರ್ತಿಯನ್ನೂ ಮರೆಸಿ ಮೇಲ್ಮೆಯನ್ನು ಪಡೆದಿರುವನು. ಈ ಪಾಂಡುಕುಮಾರನೊಬ್ಬನುಹೊರತು ಬೇರೆ ಯಾವ ರಾಜನೂ ಹೀಗೆ ತನ್ನ ಪ್ರತಾಪದಿಂದಲೂ, ಒಳ್ಳೇ ಅಭ್ಯಾಸವೆಂಬ ಸಂಪತ್ತಿನಿಂದಲೂ, ಲೋಕವೆಲ್ಲವನ್ನೂ ತುಂಬಿ ಸಶರೀರಿಯಾಗಿ ಇಲ್ಲಿಗೆ ಬಂದುದನ್ನು ನೋಡಲಿಲ್ಲ! ಕೇಳಿಯೂ ಇಲ್ಲ! ಓ ಪ್ರಭೂ! ನೀನು ಭೂಮಿಯಲ್ಲಿರುವಾಗ

ಭೂಮಿಯಲ್ಲಿ ದೇವತೆಗಳಿಗೆ ಆಶ್ರಯಗಳಾದ ಯಾವ ತೇಜಸ್ಸುಗಳನ್ನು ನೋಡಿದೆಯೋ, ಅಂತಹ ತೇಜಸ್ಸುಗಳನ್ನು ಇಲ್ಲಿ ಸಾವಿರಲೆಕ್ಕದಲ್ಲಿ ನೋಡಬಹುದು" ಎಂದನು. ನಾರದನ ಮಾತನ್ನು ಕೇಳಿ ಧರ್ಮಾತ್ಮನಾದ ಯುಧಿಷ್ಠಿರನು ಅಲ್ಲಿ ತನ್ನ ಭ್ರಾತೃಗಳನ್ನೂ, ತನ್ನ ಕಡೆಯ ಇತರ ರಾಜರನ್ನೂ ಕಾಣದುದಕ್ಕಾಗಿ, 'ನನ್ನ ಭ್ರಾತೃಗಳಿಗೆ ಈಗ ಯಾವ ಸ್ಥಾನವೊದಗಿರುವುದೋ ಅದು ಒಳ್ಳೆಯದಾಗಲಿ, ಕೆಟ್ಟದಾಗಲಿ, ಆ ಸ್ಥಾನವನ್ನೇ ನಾನೂ ಪಡೆಯಲು ಅಪೇಕ್ಷಿಸುವೆನು. ಇತರ ಲೋಕಗಳನ್ನು ನಾನು ಅಪೇಕ್ಷಿಸುವುದಿಲ್ಲ" ಎಂದನು. ಅದಕ್ಕೆ ಇಂದ್ರನು ಕರುಣೆಯಿಂದ ಆತನನ್ನು ಕುರಿತು "ಓ ರಾಜೋತ್ತಮಾ! ನೀನು ನಿನ್ನ ಪುಣ್ಯಕರ್ಮಗಳಿಂದ ಜಯಿಸಿದ ಈ ಉತ್ತಮಲೋಕದಲ್ಲಿ ಸುಖದಿಂದಿರು. ಮನುಷ್ಯಜನ್ಮದಲ್ಲಿದ್ದ ಆ ಸ್ನೇಹವನ್ನು ಈಗಲೂ ನೀನೇಕೆ ಕೊಂಡಾಡುವೆ? ಓ ಕುರುನಂದನಾ! ಯಾವ ಕಾಲದಲ್ಲಿಯೂ ಮನುಷ್ಯದುರ್ಲಭವಾದ ಉತ್ತಮಸಿದ್ಧಿಯನ್ನು ನೀನು ಪಡೆದಿರುವೆ. ನಿನ್ನ ಭ್ರಾತೃಗಳಿಗೆ ಇಂತಹ ಉತ್ತಮಸ್ಥಾನವು ಲಭಿಸಲಿಲ್ಲ. ಈಗಲೂ ನಿನ್ನನ್ನು ಮನುಷ್ಯಸ್ವಭಾವವು ಬಾಧಿಸುತ್ತಿರುವುದಲ್ಲವೆ? ಇದು ಸ್ವರ್ಗವು ದೇವಲೋಕವಾಸಿಗಳಾದ ದೇವರ್ಷಿಗಳನ್ನೂ, ಸಿದ್ಧರನ್ನೂ ನೋಡು" ಎಂದನು. ಆಗ ಯುಧಿಷ್ಠಿರನು "ಓ ಅಸುರಸಂಹಾರೀ! ಅವರನ್ನು ಬಿಟ್ಟು ನಾನು ಮಾತ್ರ ಇಲ್ಲಿರಲು ಸಮ್ಮತಿಸಲಾರೆನು. ಈಗ ನನ್ನ ಸಹೋದರರೆಲ್ಲಿರುವರೋ ಮತ್ತು ಶಾಮಲಾಂಗಿಯೂ, ಬುದ್ಧಿಮತಿಯೂ, ಗುಣವತಿಯೂ ಆಗಿ ಸ್ತ್ರೀರತ್ನವೆನಿಸಿದ ಆ ದ್ರೌಪದಿಯು ಎಲ್ಲಿರುವಳೋ, ನನ್ನ ಪುತ್ರರೆಲ್ಲಿರುವರೋ ಅಲ್ಲಿಗೇ ನಾನೂ ಹೋಗಲಪೇಕ್ಷಿಸುವೆನು" ಎಂದನು.

ಇದು ಮೂರನೆಯ ಅಧ್ಯಾಯವು.

## ಇಲ್ಲಿಗೆ ಮಹಾಪ್ರಸ್ಥಾನಿಕಪರ್ವವು ಮುಗಿದುದು.

ಶ್ರೀ ಕೃಷ್ಣಾಯ ಪರಬ್ರಹ್ಮಣೇ ನಮಃ

ಭದ್ರಂ! ಶುಭಂ!! ಮಂಗಳಂ!!!

ಶ್ರೀ

ಶ್ರೀ

ವ್ಯಾಸಮಹರ್ಷಿಪ್ರಣೀತ

# ಶ್ರೀಮಹಾಭಾರತವು

(ಕರ್ನಾಟಕ ವಚನವು)

## ಸ್ವರ್ಗಾರೋಹಣಪರ್ವವು

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರ್ ವಿರಚಿತವು.

ಪ್ರಕಾಶಕರು :

ಕರ್ನಾಟಕ ಡಿಪೋ,

1/59, ಸನ್ನಿಧಿ ಬೀದಿ, ತಿರುವಲ್ಲಿಕ್ಕೇಣಿ, ಮದರಾಸು.

1935

All Rights Reserved.

ಕಾಪಿರೈಟ್, ೧೯೩೨–ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಇದರ ಗ್ರಂಥಕರ್ತರಿಗೆ ಸೇರಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಭಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

# ವಿಷಯಾನುಕ್ರಮಣಿಕೆ.


| ಅಧ್ಯಾಯ | | ಪುಟ. |
|---|---|---|
| ೧. | ಯುಧಿಷ್ಠಿರನು ಸ್ವರ್ಗದಲ್ಲಿ ದುರ್ಯೋಧನನಿದ್ದ ವೈಭವವನ್ನು ಕಂಡು ಸಹಿಸಲಾರದೆ, ಆತನೊಡನೆ ಅಲ್ಲಿ ವಸಿಸಲು ಸಮ್ಮತಿಸದಿದ್ದುದು ತನ್ನ ತಮ್ಮಂದಿರಾದ ಭೀಮಾದಿಗಳನ್ನು ನೋಡಲು ಅಪೇಕ್ಷಿಸಿದುದು. | ೧ |
| ೨. | ಯುಧಿಷ್ಠಿರನು ತನ್ನ ಭ್ರಾತೃಗಳೊಡನೆಯೇ ತಾನಿರಬೇಕೆಂದು ನಿರ್ಬಂಧಿಸಿದುದು ದೇವದೂತನೊಬ್ಬನು ಆ ಬಂಧುಗಳನ್ನು ತೋರಿಸಲು ಧರ್ಮರಾಜನನ್ನು ನರಕಕ್ಕೆ ಕರೆದುಕೊಂಡುಹೋದುದು. ನರಕವನ್ನು ನೋಡಲಾರದೆ ಹಿಂತಿರುಗುವುದರಲ್ಲಿದ್ದ ಯುಧಿಷ್ಠಿರನು, ಅಲ್ಲಿರುವವರು ತನ್ನವರೆಂಬುದನ್ನು ತಿಳಿದು, ತಾನು ಅಲ್ಲಿಂದ ಬರಲಾರೆನೆಂದುದು. ದೇವದೂತನು ಅದನ್ನು ಇಂದ್ರನಿಗೆ ತಿಳಿಸಿದುದು . | ೪ |
| ೩. | ಯುಧಿಷ್ಠಿರನ ಅಭಿಪ್ರಾಯವನ್ನು ತಿಳಿದು ಇಂದ್ರಾದಿ ದೇವತೆಗಳು ಅಲ್ಲಿಗೆ ಬಂದುದು ಯಮನು ಯುಧಿಷ್ಠಿರನನ್ನು ಸ್ತುತಿಸಿ, ಆ ನರಕಗಳು ತನ್ನ ಮಾಯೆಯಿಂದಲೇ ತಲೆದೋರಿದುವೆಂದು ಹೇಳಿದುದು. ಯುಧಿಷ್ಠಿರನು ದೇವಶರೀರವನ್ನು ಧರಿಸಿ, ದೇವರ್ಷಿಗಣಗಳಿಂದ ಸ್ತುತಿಸಲ್ಪಡುತ್ತ ತಮ್ಮಂದಿರಿರುವ ಸ್ಥಳಕ್ಕೆ ಹೊರಟುದು . | ೮ |
| ೪. | ಯುಧಿಷ್ಠಿರನು ಸ್ವರ್ಗದಲ್ಲಿ ಕೃಷ್ಣನನ್ನೂ, ಕರ್ಣನನ್ನೂ ಇನ್ನೂ ಇತರರನ್ನೂ ಕಂಡುದು. ತಮ್ಮ ತಮ್ಮ ಸ್ಥಾನಗಳಲ್ಲಿದ್ದ ದ್ರೌಪದೀಪುತ್ರರೇ ಮೊದಲಾದವರನ್ನು ಇಂದ್ರನು ಯುಧಿಷ್ಠಿರನಿಗೆ ತೋರಿಸಿದುದು . | ೧೨ |
| | ಭೀಷ್ಮನೇ ಮೊದಲಾದವರು ಸ್ವರ್ಗವನ್ನು ಅನುಭವಿಸಿದಮೇಲೆ ತಮ್ಮ ತಮ್ಮ ದೇವರೂಪಗಳಲ್ಲಿ ಸೇರಿದುದು. ಜನಮೇಜಯನು ಆಸ್ತಿಕನೇ ಮುಂತಾದವರನ್ನು ಪೂಜಿಸಿ ಯಾಗವನ್ನು ಪೂರೈಸಿದಮೇಲೆ, ಹಸ್ತಿನಾಪುರಕ್ಕೆ ಹೋಗಿ ರಾಜ್ಯಭಾರಮಾಡಿದುದು. ಸೂತಪೌರಾಣಿಕನು ಭಾರತಕಥೆಯನ್ನು ಮುಗಿಸಿ ಅದರ ಮಹಿಮೆಯನ್ನು ತಿಳಿಸಿದುದು . | ೧೪ |



# ಶ್ರೀಮಹಾಭಾರತವು

## ಸ್ವರ್ಗಾರೋಹಣಪರ್ವವು

---

**ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ ।**
**ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್**

ಯುಧಿಷ್ಠಿರನು ಸ್ವರ್ಗದಲ್ಲಿ ದುರ್ಯೋಧನನಿದ್ದ ವೈಭವವನ್ನು ಕಂಡು ಸಹಿಸಲಾರದೆ, ಆತನೊಡನೆ ಅಲ್ಲಿ ವಸಿಸಲು ಸಮ್ಮತಿಸದಿದ್ದುದು. ತನ್ನ ತಮ್ಮಂದಿರಾದ ಭೀಮಾದಿಗಳನ್ನು ನೋಡಲು ಅಪೇಕ್ಷಿಸಿದುದು.

ಜನಮೇಜಯನು "ಓ ಮುನಿವರಾ! ನನ್ನ ತಾತಂದಿರಾದ ಪಾಂಡವರೂ, ಧೃತರಾಷ್ಟ್ರಕುಮಾರರೂ ಸ್ವರ್ಗದಲ್ಲಿ ಯಾವಯಾವ ಸ್ಥಾನಗಳನ್ನು ಪಡೆದರೋ ಅದನ್ನು ತಿಳಿಯಲಪೇಕ್ಷಿಸುವೆನು. ಆಶ್ಚರ್ಯಚರಿತ್ರವುಳ್ಳ ವ್ಯಾಸಮಹರ್ಷಿಯಿಂದ ಅನುಗ್ರಹಿಸಲ್ಪಟ್ಟ ನೀನು ಸಕಲವನ್ನೂ ಅರಿತವನಾಗಿರುವುದರಿಂದ, ಈ ನನ್ನ ಪ್ರಶ್ನೆಗೆ ಉತ್ತರವನ್ನು ತಿಳಿಸಬೇಕು" ಎಂದನು.

ಆಗ ವೈಶಂಪಾಯನನು 'ಓ ರಾಜಾ! ನಿನ್ನ ತಾತಂದಿರಾದ ಯುಧಿಷ್ಠಿರಾದಿಗಳು (ಬೇರೆಬೇರೆ ಮೂರು ಸ್ಥಾನಭೇದಗಳುಳ್ಳ) ಸ್ವರ್ಗವನ್ನು ಸೇರಿ ಮಾಡಿದ ಕಾರ್ಯವನ್ನು ತಿಳಿಸುವೆನು ಕೇಳು. ಯುಧಿಷ್ಠಿರನು ಮೊದಲು ದುರ್ಯೋಧನನನ್ನು ಸ್ವರ್ಗದಲ್ಲಿ ಕಂಡಾಗ, ಅಲ್ಲಿ ಅವನು ಅದ್ಭುತತೇಜಸ್ಸಿನಿಂದ ಉತ್ತಮಾಸನದಲ್ಲಿ ಕುಳಿತಿದ್ದನು. ವೀರಲಕ್ಷ್ಮೀವಿಶಿಷ್ಟನಾದ

ಆತನ ಕಾಂತಿಯು ಸೂರ್ಯಕಾಂತಿಗೆ ಸಮಾನವಾಗಿದ್ದಿತು. ಪುಣ್ಯ ಕರ್ಮಗಳನ್ನು ಮಾಡಿ ಬಂದ ಅನೇಕದೇವತೆಗಳೂ, ಸಾಧ್ಯರೂ ಅವನನ್ನು ಸುತ್ತಿಮುತ್ತಿ ಸೇವಿಸುತ್ತಿದ್ದರು. ದುರ್ಯೋಧನನ ಈ ಮೇಲ್ಮೆಯನ್ನು ನೋಡಿ ಸಹಿಸಲಾರದೆ ಧರ್ಮರಾಜನು ಅಲ್ಲಿರುವವರನ್ನು ನೋಡಿ 'ಆಹಾ! ಧೂರ್ತನೂ, ದುರಾಶೆಯುಳ್ಳವನೂ, ಮುಂದಾಲೋಚನೆಯಿಲ್ಲದವನೂ, ಆದ ಈ ದುರ್ಯೋಧನನಿರುವ ಲೋಕದಲ್ಲಿ ಆತನೊಡನೆ ವಾಸಿಸಲು ನಾನು ಇಷ್ಟಪಡುವುದಿಲ್ಲ. ಓ ದೇವತೆಗಳೇ! ಯಾವನ ದೆಸೆಯಿಂದ ಹಿಂದೆ ನಾವು ಅರಣ್ಯದಲ್ಲಿ ಮಹಾಕಷ್ಟಗಳನ್ನು ಅನುಭವಿಸಿದೆವೋ, ಯಾವನ ದೆಸೆಯಿಂದ ನಾವು ನಮ್ಮ ಸುಹೃತ್ತುಗಳನ್ನೂ, ಬಂಧುಗಳನ್ನೂ ಯುದ್ಧದಲ್ಲಿ ಬಲಾತ್ಕಾರದಿಂದ ಕೊಂದೆವೋ, ಮತ್ತು ಯಾವ ಧೂರ್ತನ ಆಜ್ಞೆಯಿಂದ ಕೋಮಲಾಂಗಿಯೂ, ಧರ್ಮಜ್ಞಳೂ ಆದ ನಮ್ಮ ಪತ್ನಿ ಪಾಂಚಾಲಪುತ್ರಿಯು ಸಭಾಮಧ್ಯದಲ್ಲಿ ಕೌರವರೆಲ್ಲರೂ ನೋಡುತ್ತಿರುವಹಾಗೆ ಎಳೆದಾಡಲ್ಪಟ್ಟಳೋ, ಅಂತಹ ದುರ್ಯೋಧನನನ್ನು ಕಣ್ಣಿಂದ ನೋಡುವುದೂ ನನಗೆ ಇಷ್ಟವಿಲ್ಲ. ನನ್ನ ಸಹೋದರರೆಲ್ಲಿರುವರೋ ನಾನೂ ಅಲ್ಲಿಗೇ ಹೋಗುವೆನು. ಈ ಸ್ಥಾನವು ನನಗೆ ಬೇಡ!' ಎಂದು ಗಟ್ಟಿಯಾಗಿ ಕೂಗಿ ಹೇಳಿ, ಥಟ್ಟನೆ ಅಲ್ಲಿಂದ ಹಿಂತಿರುಗಿಬಿಟ್ಟನು.

ಆಗ ನಾರದನು ಆತನನ್ನು ನೋಡಿ ನಗುತ್ತ 'ಓ ರಾಜೋತ್ತಮಾ! ನೀನು ಹೀಗೆ ತಿಳಿಯಬಾರದು. ಈ ಸ್ವರ್ಗಕ್ಕೆ ಬಂದುಸೇರಿದಮೇಲೆ ಆ ವಿರೋಧಭಾವವೆಲ್ಲವೂ ತಾನಾಗಿ ಬಿಟ್ಟುಹೋಗುವುದು. ಯುಧಿಷ್ಠಿರಾ! ದುರ್ಯೋಧನನ ವಿಷಯದಲ್ಲಿ ನೀನು ಈ ರೀತಿ ಎಣಿಸಬೇಡ! ನನ್ನ ಮಾತನ್ನು ಕೇಳು. ಈ ದುರ್ಯೋಧನರಾಜನು, ಈಗ ಸ್ವರ್ಗವಾಸಿಗಳಾದ ಎಲ್ಲಾ ದೇವತೆಗಳಿಂದಲೂ, ಯುದ್ಧದಲ್ಲಿ ತಮ್ಮ ಶರೀರವನ್ನು ಹೋಮಮಾಡಿ ವೀರಸ್ವರ್ಗವನ್ನು ಪಡೆದ ರಾಜಕುಮಾರರಿಂದಲೂ ಇಲ್ಲಿ ಪೂಜಿಸಲ್ಪಡುತ್ತಿರುವನು. ದೇವಸಮಾನರಾದ ನಿಮ್ಮನ್ನು ಇವನು ಅನೇಕವಿಧದಲ್ಲಿ ಬಾಧಿಸಿದ್ದರೂ ಕೊನೆಗೆ ಯುದ್ಧದಲ್ಲಿ ಹತನಾದುದರಿಂದ, ಈ ಪದವಿಯನ್ನು ಪಡೆದನು. ಮಹಾಭಯವು ಸಂಭವಿಸಿದಾಗಲೂ ನಿರ್ಭಯನಾಗಿ ಭೂಮಿ

ಯನ್ನು ಆಳುತ್ತಿದ್ದ ಈ ದುರ್ಯೋಧನನು, ತನ್ನ ಕ್ಷತ್ರಿಯಧರ್ಮದಿಂದಲೇ ಈ ಸ್ಥಾನವನ್ನು ಪಡೆದಿರುವನು. ಹಿಂದೆ ದ್ಯೂತದಿಂದುಂಟಾದ ಕೇಡನ್ನೆಲ್ಲ ನೀನು ಮನಸ್ಸಿನಲ್ಲಿಡಬಾರದು. ದ್ರೌಪದಿಯ ಕಷ್ಟವನ್ನೂ ಈಗ ಸ್ಮರಿಸ ಬಾರದು. ಯುದ್ಧಗಳಲ್ಲಿಯೂ, ಇತರ ಸಂದರ್ಭಗಳಲ್ಲಿಯೂ ನಿಮಗೆ ಜ್ಞಾತಿಗಳಿಂದ ಸಂಭವಿಸಿದ ಕಷ್ಟಗಳಾವುವನ್ನೂ ಈಗ ನೀನು ನೆನೆಸ ಬಾರದು. ನೀನು ಇಲ್ಲಿ ದುರ್ಯೋಧನನೊಡನೆ ಸೇರಿ ಅನ್ಯೋನ್ಯವಾಗಿರು. ರಾಜಾ! ಇದು ಸ್ವರ್ಗಲೋಕವು. ಇಲ್ಲಿ ವಿರೋಧಭಾವಗಳೇನೂ ಇರಬಾ ರದು' ಎಂದನು.

ಧರ್ಮರಾಜನು ನಾರದನ ಈ ಮಾತುಗಳನ್ನು ಕೇಳಿ 'ಓ ಬ್ರಹ್ಮರ್ಷೀ! ಇವನು ಧರ್ಮವನ್ನು ತಿಳಿಯದವನು! ಮಹಾಪಾಪಿ! ಲೋಕದ ಸಜ್ಜನ ರೆಲ್ಲರಿಗೂ ಕೇಡನ್ನು ಮಾಡಿದವನು. ಮನುಷ್ಯರಿಂದಲೂ, ಆನೆಗಳಿಂದಲೂ ತುಂಬಿದ್ದ ಭೂಮಿಯನ್ನೆಲ್ಲ ಯುದ್ಧದ ನೆವದಿಂದ ಶೂನ್ಯವಾಗಿ ಮಾಡಿದ ವನು. ನಮ್ಮನ್ನೂ ಕೋಪಾಗ್ನಿಗೆ ಗುರಿಮಾಡಿ, ಈ ಅನರ್ಥಗಳನ್ನೆಲ್ಲ ತಂದಿಟ್ಟ ನೀಚನಾದ ದುರ್ಯೋಧನನಿಗೇ ಇಂತಹ ಸನಾತನವಾದ ವೀರಸ್ವರ್ಗವು ಲಭಿಸಿದಮೇಲೆ, ಮಹಾವೀರರೂ, ಮಹಾತ್ಮರೂ, ದೃಢವ್ರ ತರೂ, ಸತ್ಯಪ್ರತಿಜ್ಞೆಯುಳ್ಳವರೂ ಆದ ನನ್ನ ಸಹೋದರರಿಗೆ ಇನ್ನೂ ಉತ್ತಮಲೋಕಗಳು ಲಭಿಸಿರಬೇಕಲ್ಲವೆ? ಆ ನನ್ನ ಸಹೋದರರನ್ನೂ, ಮಹಾತ್ಮನೂ ಸತ್ಯಸಂಧನೂ ಕುಂತೀಪುತ್ರನೂ ಆದ ಕರ್ಣನನ್ನೂ, ಧೃಷ್ಟ ದ್ಯುಮ್ನನನ್ನೂ, ಸಾತ್ಯಕಿಯನ್ನೂ, ಧೃಷ್ಟದ್ಯುಮ್ನನ ಪುತ್ರರನ್ನೂ ನಾನು ನೋಡಲಪೇಕ್ಷಿಸುವೆನು. ಯಾವ ರಾಜರು ಕ್ಷತ್ರಿಯಧರ್ಮವನ್ನವ ಲಂಬಿಸಿ ನಮಗಾಗಿ ಆಯುಧಪ್ರಹಾರಗಳಿಂದ ಮೃತರಾದರೋ ಅವರೆಲ್ಲರೂ ಈಗ ಎಲ್ಲಿರುವರು? ಆ ರಾಜರನ್ನು ನಾನು ಎಲ್ಲಿ ಕಾಣಬಹುದು? ವಿರಾ ಟನು, ದ್ರುಪದನು, ಧೃಷ್ಟಕೇತು, ಪಾಂಚಾಲಕುಮಾರನಾದ ಶಿಖಂಡಿ, ದ್ರೌಪದೀಪುತ್ರರು, ಅಜೇಯನಾದ ಅಭಿಮನ್ಯು, ಇವರೆಲ್ಲರನ್ನೂ ಈಗಲೇ ನಾನು ನೋಡಬೇಕೆಂದು ಅಪೇಕ್ಷಿಸುವೆನು' ಎಂದನು.

ಇದು ಮೊದಲನೆಯ ಅಧ್ಯಾಯವು.

ಯುಧಿಷ್ಠಿರನು ತನ್ನ ಭ್ರಾತೃಗಳೊಡನೆಯೇ ತಾನಿರಬೇಕೆಂದು ನಿರ್ಬಂಧಿಸಿದುದು. ದೇವದೂತನೊಬ್ಬನು ಆ ಬಂಧುಗಳನ್ನು ತೋರಿಸಲು ಧರ್ಮರಾಜನನ್ನು ನರಕಕ್ಕೆ ಕರೆದುಕೊಂಡುಹೋದುದು. ನರಕವನ್ನು ನೋಡಲಾರದೆ ಹಿಂತಿರುಗುವುದರಲ್ಲಿದ್ದ ಯುಧಿಷ್ಠಿರನು, ಅಲ್ಲಿರುವವರು ತನ್ನವರೆಂಬುದನ್ನು ತಿಳಿದು, ತಾನು ಅಲ್ಲಿಂದ ಬರಲಾರೆನೆಂದುದು. ದೇವದೂತನು ಅದನ್ನು ಇಂದ್ರನಿಗೆ ತಿಳಿಸಿದುದು.


ತಿರುಗಿ ಧರ್ಮರಾಜನು 'ಓ ದೇವತೆಗಳಿರಾ! ಮಹಾಪರಾಕ್ರಮಶಾಲಿಯಾದ ಕರ್ಣನೂ ಇಲ್ಲಿ ಕಾಣಿಸುವುದಿಲ್ಲ! ನನ್ನ ಸಹೋದರರೂ, ಮಹಾತ್ಮರಾದ ಯುಧಾಮನ್ಯು, ಉತ್ತಮೌಜಸ್ಸು ಎಂಬವರೂ ಇಲ್ಲಿ ಕಾಣಿಸಲಿಲ್ಲ. ಯಾವ ಮಹಾರಥರು ನನಗಾಗಿ ಯುದ್ಧವೆಂಬ ಅಗ್ನಿಯಲ್ಲಿ ತಮ್ಮ ಶರೀರಗಳನ್ನು ಹೋಮಮಾಡಿದರೋ, ಯಾವ ರಾಜರೂ, ರಾಜಕುಮಾರರೂ ನನಗಾಗಿ ಯುದ್ಧದಲ್ಲಿ ಕೊಲ್ಲಲ್ಪಟ್ಟರೋ, ಮಹಾರಥರೂ, ಪುರುಷಶ್ರೇಷ್ಠರೂ ಆದ ಅವರೆಲ್ಲರೂ ಈಗ ಎಲ್ಲಿರುವರು? ಆ ಮಹಾತ್ಮರೆಲ್ಲರೂ ಇದೇ ಪುಣ್ಯಲೋಕವನ್ನು ಪಡೆದಿರಬೇಕಲ್ಲವೆ? ಅವರೆಲ್ಲರೂ ಇಲ್ಲಿ ಸೇರಿದ್ದಪಕ್ಷದಲ್ಲಿ, ನಾನೂ ಆ ಮಹಾತ್ಮರೊಡನೆ ಇಲ್ಲಿಯೇ ವಾಸಮಾಡುತ್ತಿದ್ದೆನು. ಅವರು ಶಾಶ್ವತವಾದ ಈ ಶುಭಲೋಕವನ್ನು ಸೇರಲಿಲ್ಲವೇನು? ಹಾಗೆ ಅವರು ಇಲ್ಲಿಗೆ ಬಾರದಿದ್ದರೆ, ಅಂತಹ ಬಂಧುಗಳೂ, ಸಹೋದರರೂ ಇಲ್ಲದ ಈ ಸ್ಥಳದಲ್ಲಿ ನಾನೂ ವಾಸಮಾಡಲಾರೆನು ಹಿಂದೆ ಮೃತರಾದವರಿಗೆಲ್ಲ ನಾನು ಜಲತರ್ಪಣವನ್ನು ಮಾಡುವಾಗ 'ಕರ್ಣನಿಗೆ ತರ್ಪಣವನ್ನು ಬಿಡು' ಎಂದು ಹೇಳಿದ ನನ್ನ ತಾಯಿಯ ಮಾತನ್ನು ನೆನೆಸಿಕೊಂಡು ಈಗ ವ್ಯಸನಪಡುತ್ತಿರುವೆನು. ತಾಯಿಯ ಪಾದಗಳಿಗೆ ಸಮಾನವಾದ ಆ ಕರ್ಣನ ಎರಡು ಪಾದಗಳನ್ನು ನೋಡಿಯೂ ನಾನು ಹಿಂದೆ ಅವನೊಡನೆ ಸೇರಿ ಸಮಾಧಾನದಿಂದಿರಲಿಲ್ಲ. ಅದಕ್ಕಾಗಿ ಈಗ ನಾನು ಪರಿತಪಿಸುತ್ತಿರುವೆನು. ಕರ್ಣನೊಡನೆ ಸೇರಿದ ನಮ್ಮನ್ನು ಇಂದ್ರನೂ ಜಯಿಸಲಾರನು. ನಾನು ತಿಳಿಯದೆ ಯಾವನನ್ನು ಸವ್ಯಸಾಚಿಯಿಂದ

ಕೊಲ್ಲಿಸಿದೆನೋ, ಸೂರ್ಯಕುಮಾರನಾದ ಆ ಕರ್ಣನು ಈಗ ಎಲ್ಲಿದ್ದರೂ, ಆತನನ್ನು ನೋಡಿಯೇ ತೀರಬೇಕೆಂದು ನನಗೆ ಆತುರವಿದೆ. ಭಯಂಕರ ಪರಾಕ್ರಮಿಯೂ, ನನಗೆ ಪ್ರಾಣಪ್ರಿಯನೂ ಆದ ಭೀಮನನ್ನೂ, ಇಂದ್ರ ಸಮಾನನಾದ ಅರ್ಜುನನನ್ನೂ, ಯಮಸಮಾನರಾದ ನಕುಲಸಹದೇವ ರನ್ನೂ, ಧರ್ಮಶೀಲೆಯಾದ ಆ ದ್ರೌಪದಿಯನ್ನೂ ನಾನು ಈಗಲೇ ನೋಡ ಬೇಕು ಅವರಿಲ್ಲದ ಈ ಸ್ಥಳದಲ್ಲಿ ಕ್ಷಣಮಾತ್ರವೂ ನಾನು ನಿಲ್ಲಲಾರೆನು. ಸತ್ಯವಾಗಿ ಹೇಳುವೆನು. ದೇವಶ್ರೇಷ್ಠರೇ! ಆ ಭ್ರಾತೃಗಳಿಲ್ಲದಮೇಲೆ ನನಗೆ ಈ ಸ್ವರ್ಗದಿಂದೇನು ಪ್ರಯೋಜನವು? ಅವರು ಎಲ್ಲಿರುವರೋ ಅದೇ ನನಗೆ ಸ್ವರ್ಗವೇಹೊರತು ಇದು ನನಗೆ ಸ್ವರ್ಗವಲ್ಲ' ಎಂದನು.

ಆಗ ದೇವತೆಗಳು 'ಓ ಯುಧಿಷ್ಠಿರಾ! ನಿನಗೆ ಆ ಆಸೆಯಿರುವು ದಾದರೆ ಅಲ್ಲಿಗೇ ಹೋಗುವೆವು. ತಾಮಸವು ಬೇಡ. ನಾವು ದೇವೇಂ ದ್ರನ ಆಜ್ಞೆಯಂತೆ ನಿನಗೆ ಪ್ರಿಯವನ್ನುಂಟುಮಾಡುವುದರಲ್ಲಿಯೇ ಆಸಕ್ತ ರಾಗಿರುವೆವು' ಎಂದರು. ಆಮೇಲೆ ದೇವತೆಗಳು ದೇವದೂತನೊಬ್ಬನನ್ನು ಕರೆದು 'ಯುಧಿಷ್ಠಿರನಿಗೆ ಇವನ ಸುಹೃತ್ತುಗಳನ್ನೆಲ್ಲ ತೋರಿಸು' ಎಂದು ಆಜ್ಞಾಪಿಸಿದರು. ಓ ರಾಜೋತ್ತಮಾ! ಧರ್ಮರಾಜನು ದೇವದೂತ ನನ್ನು ಹಿಂಬಾಲಿಸಿ ಹೊರಟನು. ಇಬ್ಬರೂ ಒಂದು ದುರ್ಗಮವಾದ ದಾರಿ ಯನ್ನು ಹಿಡಿದು ಹೋಗುತ್ತಿದ್ದರು. ಆ ಮಾರ್ಗವೋ ಅತಿಭಯಂಕರ ವಾಗಿ, ಎಲ್ಲೆಲ್ಲಿಯೂ ಪಾಚಿಗಳಂತೆಯೂ, ಗರಿಕೆಗಳಂತೆಯೂ ತಲೆಕೂ ದಲುಗಳು ಹರಡಬಿದ್ದಿರುವುವು ಎಲ್ಲೆಲ್ಲಿಯೂ ಕತ್ತಲೆಕವಿದಿರುವುದು! ರಕ್ತಮಾಂಸಗಳ ಕೆಸರು! ಪಾಪಿಗಳ ದುರ್ಗಂಧವಿಶಿಷ್ಟವಾದ ಗಾಳಿ! ಇವು ಗಳಿಗಾಗಿ ಅಲ್ಲಲ್ಲಿ ಕಾಡುನೊಣಗಳು ಹಾರಾಡುವುವು! ಅಲ್ಲಲ್ಲಿ ಭಯಂಕರ ರೂಪವುಳ್ಳ ಕರಡಿಗಳು! ಎಲ್ಲ ನೋಡಿದರೂ ಹೆಣಗಳು! ಎಲುಬಿನ ರಾಶಿ ಗಳು! ಕಿತ್ತ ಕೂದಲುಗಳು! ಕಬ್ಬಿಣದಂತೆ ಗಟ್ಟಿಯಾದ ಕೊಕ್ಕುಗಳುಳ್ಳ ಹದ್ದು ಕಾಗೆಗಳೂ, ಕ್ರಿಮಿಕೀಟಗಳೂ ಭಯಂಕರವಾಗಿ ಸಂಚರಿಸುತ್ತಿರು ವುವು! ಸೂಜಿಯಂತೆ ಮೂತಿಯುಳ್ಳ ವಿಂಧ್ಯಪರ್ವತಕ್ಕೆ ಸಮಾನಗಳಾದ ದೊಡ್ಡ ಪ್ರೇತಗಳು ಸಂಚರಿಸುತ್ತಿರುವುವು. ತೋಳು, ತೊಡೆ, ಕೈ, ಕಾಲು,

ಹೊಟ್ಟೆ ಮುಂತಾದ ಅವಯವಗಳು ತುಂಡುತುಂಡಾಗಿ ಬಿದ್ದು ಅವುಗಳಿಂದ ರಕ್ತ ಮೇದೋ ಮಾಂಸಗಳು ಪ್ರವಾಹರೂಪವಾಗಿ ಹರಿಯುತ್ತಿರುವುವು. ಹೀಗೆ ಹೆಣಗಳ ದುರ್ವಾಸನೆಯಿಂದ ಕೂಡಿ, ಅಮಂಗಳಕರವಾಗಿ, ನೋಡುವವರಿಗೆ ರೋಮಾಂಚವನ್ನೆಬ್ಬಿಸುವಂತಿದ್ದ ಆ ಮಾರ್ಗದಲ್ಲಿ ಧರ್ಮರಾಜನು ವಿಧವಿಧವಾಗಿ ಮನಸ್ಸಿನಲ್ಲಿ ಕಳವಳಿಸುತ್ತ ಮುಂದೆ ಸಾಗುತಿದ್ದನು. ಆ ದಾರಿಯಲ್ಲಿ ಹೋಗುವಾಗ, ಅಲ್ಲಲ್ಲಿ ಕುದಿಯುವ ನೀರಿನಿಂದ ತುಂಬಿ ದುರ್ಗಮವಾದ ನದಿಗಳು! ಹರಿತವಾದ ಕತ್ತಿಗಳಿಂದ ನಾಟಿದ ಅಸಿತಪತ್ರವನಗಳು! ಕಾದ ಮರಳು! ಕಾದ ಕಲ್ಲುಗಳು! ಕಾದ ಕಬ್ಬಿಣದ ಹಲಗೆಗಳು! ಕುದಿಯುತ್ತಿರುವ ಎಣ್ಣೆಯ ಕೊಪ್ಪರಿಗೆಗಳು, ತೀಕ್ಷ್ಣವಾದ ಮುಳ್ಳುಗಳಿಂದ ಕೂಡಿ ಮುಟ್ಟಲಸಾಧ್ಯವಾದ ಮುಳ್ಳುಗಿಡಗಳು, ಇವುಗಳೊಳಗೆಲ್ಲ ಪಾಪಕರ್ಮಿಗಳು ಅನುಭವಿಸುವ ಹಲವು ಯಾತನೆಗಳನ್ನೂ ನೋಡಿದನು. ದುರ್ಗಂಧವಿಶಿಷ್ಟವಾದ ಆ ಮಾರ್ಗವನ್ನು ಕಂಡು, ಧರ್ಮರಾಜನು ದೇವದೂತನನ್ನು ಕುರಿತು 'ಅಯ್ಯಾ! ನಾವು ಈ ಮಾರ್ಗದಲ್ಲಿ ಇನ್ನೂ ಎಷ್ಟು ದೂರ ಸಾಗಬೇಕು? ನನ್ನ ಸಹೋದರರೆಲ್ಲಿರುವರೋ ತಿಳಿಸು. ಈ ಪ್ರದೇಶವು ದೇವತೆಗಳಲ್ಲಿ ಯಾವನಿಗೆ ಸೇರಿದುದು?' ಎಂದನು.

ಅದಕ್ಕೆ ದೇವದೂತನು 'ಯುಧಿಷ್ಠಿರಾ! ಇಲ್ಲಿಯವರೆಗೆಮಾತ್ರವೇ ನೀನು ಬರಬಹುದು. ಇಲ್ಲಿಂದಲೇ ನಿನ್ನನ್ನು ಹಿಂತಿರುಗಿಸಬೇಕೆಂದು ನನಗೆ ದೇವತೆಗಳ ಆಜ್ಞೆ. ಕಷ್ಟವಾಗಿದ್ದರೆ ಈಗಲೇ ನೀನು ಹಿಂತಿರುಗಬಹುದು' ಎಂದನು. ಯುಧಿಷ್ಠಿರನು ಮಹಾವ್ಯಸನಗೊಂಡು ಆ ದುರ್ಗಂಧದಿಂದ ಪ್ರಜ್ಞೆತಪ್ಪಿದಂತಾಗಿ, ಥಟ್ಟನೆ ಅಲ್ಲಿಂದ ಹಿಂತಿರುಗಲು ಉದ್ದೇಶಿಸಿದನು. ಹೀಗೆ ದುಃಖಾಕುಲನಾದ ಯುಧಿಷ್ಠಿರನು ಅಲ್ಲಿಂದ ಹಿಂತಿರುಗುವಷ್ಟರಲ್ಲಿ, ಅವನಿಗೆ ಅಲ್ಲಿ ನಾನಾಕಡೆಗಳಿಂದ 'ಓ! ಓ! ಧರ್ಮಪುತ್ರಾ! ರಾಜರ್ಷೀ! ಪುಣ್ಯಮೂರ್ತೀ! ನಿಲ್ಲು! ನಿಲ್ಲು! ನಮ್ಮನ್ನು ಅನುಗ್ರಹಿಸು! ನೀನು ಒಂದು ಮುಹೂರ್ತಕಾಲದವರೆಗೆ ಇಲ್ಲಿ ನಿಂತಿದ್ದರೂ ಈ ನರಕಯಾತನೆಗಳು ನಮ್ಮನ್ನು ಪೀಡಿಸದಿರುವುವು' ಎಂಬ ದೀನವಾಕ್ಯಗಳು ಕೇಳಿಬಂದುವು ಅಲ್ಲಿ ವೇದನೆಗಳನ್ನು ಅನುಭವಿಸುತಿದ್ದ ಜನರು ಹೀಗೆ ದೈನ್ಯದಿಂದ ಮೊರೆಯಿಡು



ಪುಟ ೬. ದೇವದೂತನು ಧರ್ಮರಾಜನನ್ನು ನರಕಮಾರ್ಗವಾಗಿ ಕರೆತಂದುದು. ಅಲ್ಲಿ ತಪ್ತಕುಂಡ, ಕ್ರಕಚ, ಕಶಾಘಾತ, ಮೊದಲಾದ ಕ್ರೂರಯಾತನೆಗಳು ಧರ್ಮರಾಜನ ಕಣ್ಣಿಗೆ ಕಾಣಿಸಿದುದು.

ವುದನ್ನು ಕೇಳಿ ಯುಧಿಷ್ಠಿರನು ಅವರಲ್ಲಿ ಕರುಣೆಯಿಟ್ಟು 'ಹಾ! ಕಷ್ಟ ವೆ?' ಎಂದು ಹೇಳುತ್ತ ಸುಮ್ಮನೆ ನಿಂತನು. ದುಃಖದಿಂದ ತಪಿಸುತ್ತಿರುವ ಆ ಜನರ ಕಂಠಧ್ವನಿಯನ್ನು ಆತನು ಹಿಂದೆ ಅನೇಕಾವರ್ತಿ ಕೇಳಿದ್ದರೂ ಅವರಿಗೆ ಯಾರೆಂದು ತಿಳಿಯಲಿಲ್ಲ. ಅದಕ್ಕಾಗಿ ಆತನು 'ನೀವು ಯಾರು? ಏತಕ್ಕಾಗಿ ಇಲ್ಲಿರುವಿರಿ?' ಎಂದು ಕೇಳಿದನು. ಆಮೇಲೆ ಅವರಲ್ಲಿ ಒಬ್ಬೊಬ್ಬರೂ 'ಓ ಪ್ರಭೂ! ನಾನು ಕರ್ಣನು! ನಾನು ಭೀಮಸೇನನು! ನಾನು ಅರ್ಜುನನು! ನಾನು ನಕುಲನು! ನಾನು ಸಹದೇವನು! ನಾನು ಧೃಷ್ಟದ್ಯುಮ್ನನು! ನಾನು ದ್ರೌಪದಿ! ನಾವೇ ದ್ರೌಪದಿಯ ಪುತ್ರರು!' ಎಂದು ನಾನಾಕಡೆಗಳಿಂದ ಕೂಗಿಕೊಂಡರು. ಧರ್ಮರಾಜನು ಆ ಸ್ಥಳಕ್ಕೆ ಯೋಗ್ಯವಾದ ಆ ದೀನವಾಕ್ಯಗಳನ್ನು ಕೇಳಿ 'ಅಹಾ! ಇದೇನು? ಇದೇನು? ದೈವಕೃತ್ಯವೇ? ಮಹಾತ್ಮನಾದ ಕರ್ಣನೂ, ಸುಂದರಾಂಗಿಯಾದ ದ್ರೌಪದಿಯೂ, ದ್ರೌಪದೀಕುಮಾರರೂ ಮಾಡಿದ ಪಾಪಕರ್ಮಗಳೇನು? ಪಾಪ ಸಂಬಂಧವುಳ್ಳ ಮಹಾಭಯಂಕರವಾದ ಈ ಸ್ಥಳದಲ್ಲಿ ಅಂತಹ ಪುಣ್ಯಕರ್ಮಿಗಳಾದ ನಮ್ಮವರು ಸೇರಲು ಕಾರಣವೇನು? ಇವರೆಲ್ಲರೂ ಮಾಡಿದ ಪಾಪವೇನೋ ತಿಳಿಯಲಿಲ್ಲವಲ್ಲಾ? ಧೃತರಾಷ್ಟ್ರಪುತ್ರನಾದ ದುರ್ಯೋಧನನು ಯಾವ ಪುಣ್ಯಫಲದಿಂದ ಹಾಗೆ ಮೆರೆಯುವನೋ ಅದೂ ತಿಳಿಯಲಿಲ್ಲ. ಅವನು ತನ್ನಂತೆಯೇ ಪಾಪಶೀಲರಾದ ರಾಜರೊಡನೆ ತೇಜಸ್ವಿಯಾಗಿ ಮಹೇಂದ್ರಸಂಪತ್ತಿನಿಂದ ಮೆರೆಯುವುದೇಕೆ? ನಮ್ಮವರಾದರೋ ಧರ್ಮಜ್ಞರು! ಶೂರರು! ಸತ್ಯವ್ರತರು! ಶಾಸ್ತ್ರನಿಷ್ಠರು! ಕ್ಷತ್ರಿಯಧರ್ಮಾಸಕ್ತರು! ವಿದ್ವಾಂಸರು! ವಿಧ್ಯುಕ್ತರೀತಿಯಲ್ಲಿ ಯಾಗಮಾಡಿದವರು! ಹೇರಳವಾದ ದಕ್ಷಿಣೆಗಳನ್ನು ಕೊಟ್ಟವರು! ಇಂತವರೆಲ್ಲರೂ ಈ ನರಕಕ್ಕೆ ಗುರಿಯಾದ ಕಾರಣವೇನಿರಬಹುದು? ಇದೇನು? ನನಗೆ ನಿದ್ರೆಯೊ? ಎಚ್ಚರವೋ? ಅಥವಾ ಭ್ರಾಂತಿಯೋ? ಜ್ಞಾನದಿಂದಿರುವೆನೇ? ಅಥವಾ ನಾನು ಪ್ರಜ್ಞಾಹೀನನಾಗಿರುವೆನೇ? ಅಥವಾ ಇದು ಚಿತ್ತವಿಕಾರವೇ? ಚಿತ್ತಭ್ರಮೆಯೇ?' ಎಂದು ದುಃಖಶೋಕಗ್ರಸ್ತನಾಗಿ ನಾನಾರೀತಿಯಲ್ಲಿ ಕಳವಳಿಸಿದನು. ಅತ್ಯಾಕ್ರೋಶದಿಂದ ದೇವತೆಗಳನ್ನೂ, ಧರ್ಮವನ್ನೂ ನಿಂದಿಸ ತೊಡಗಿದನು. ಈ ಮಹಾಶೋಕದಿಂದ ತಪಿಸುತ್ತ ದೇವದೂತನನ್ನು

ಕುರಿತು 'ಅಯ್ಯಾ! ಇನ್ನುಮುಂದೆ ನಾನು ನಿನ್ನೊಡನೆ ಬರುವುದಿಲ್ಲ. ಇಲ್ಲಿಯೇ ನಿಲ್ಲುವೆನು. ನೀನು ಯಾರ ದೂತನೋ ಅವರ ಬಳಿಗೇ ನೀನು ಹೊರಟುಹೋಗು' ಎಂದನು. ಧರ್ಮರಾಜನು ಹೀಗೆ ಹೇಳುತ್ತಿರುವುದನ್ನು ಕೇಳಿ ದೇವದೂತನು ದೇವೇಂದ್ರನಿರುವ ಸ್ಥಳಕ್ಕೆ ಹೋಗಿ ಆತನು ಹೇಳಿದುದೆಲ್ಲವನ್ನೂ ಯಥಾವತ್ತಾಗಿ ತಿಳಿಸಿದನು.

ಇದು ಎರಡನೆಯ ಅಧ್ಯಾಯವು.

ಯುಧಿಷ್ಠಿರನ ಅಭಿಪ್ರಾಯವನ್ನು ತಿಳಿದು ಇಂದ್ರಾದಿ ದೇವತೆಗಳೇ ಅಲ್ಲಿಗೆ ಬಂದುದು ಯಮನು ಯುಧಿಷ್ಠಿರನನ್ನು ಸ್ತುತಿಸಿ, ಆ ನರಕಗಳು ತನ್ನ ಮಾಯೆಯಿಂದಲೇ ತಲೆದೋರಿದುವೆಂದು ಹೇಳಿದುದು ಯುಧಿಷ್ಠಿರನು ದೇವಶರೀರವನ್ನು ಧರಿಸಿ, ದೇವರ್ಷಿಗಣಗಳಿಂದ ಸ್ತುತಿಸಲ್ಪಡುತ್ತ ತಮ್ಮಂದಿರಿರುವ ಸ್ಥಳಕ್ಕೆ ಹೊರಟುದು.

ಕುಂತೀಪುತ್ರನಾದ ಧರ್ಮರಾಜನು ಒಂದು ಮುಹೂರ್ತದವರೆಗೆ ಹಾಗೆಯೇ ನಿಂತನು. ಒಡನೆಯೇ ಅಲ್ಲಿಗೆ ಇಂದ್ರನೇ ಮೊದಲಾದ ದೇವತೆಗಳೂ ಬಂದರು. ಧರ್ಮದೇವನೂ ಕೂಡ ರಾಜನನ್ನು ಪರೀಕ್ಷಿಸಿದ ಮೇಲೆ, ತನ್ನ ನಿಜರೂಪವನ್ನು ಧರಿಸಿ ಯುಧಿಷ್ಠಿರನಿರುವೆಡೆಗೆ ಬಂದನು. ಕಾಂತಿಯುಕ್ತರೂ, ಪುಣ್ಯಪುರುಷರೂ ಆದ ಆ ದೇವತೆಗಳು ಬಂದು ನಿಂತೊಡನೆ ಅಲ್ಲಿದ್ದ ಕತ್ತಲೆಯು ಬಿಟ್ಟುಹೋಯಿತು. ಅಲ್ಲಿ ಪಾಪಿಗಳಿಗೆ ನಡೆಯುತಿದ್ದ ಯಾತನೆಗಳೂ, ವೈತರಣೀನದಿಯೂ, ಮುಳ್ಳುತುಂಬಿದ ಕೂಟಶಾಲ್ಮಲಿವೃಕ್ಷವೂ, ಭಯಂಕರವಾದ ಕಬ್ಬಿಣದ ಕೊಪ್ಪರಿಗೆಗಳೂ, ಕಾಯ್ದ ಶಿಲೆಗಳೂ, ಅಲ್ಲಿ ಎಲ್ಲಾ ಕಡೆಗಳಲ್ಲಿಯೂ ಕಾಣಿಸುತಿದ್ದ ವಿಕೃತಶರೀರಗಳೂ, ಛಿನ್ನಭಿನ್ನವಾದ ಅವಯವಗಳೂ ಅದೃಶ್ಯವಾದುವು. ರಾಜನು ದೇವತೆಗಳೆಲ್ಲರನ್ನೂ ನೋಡಿದನು. ಆಗ ದೇವತೆಗಳ ಕಡೆಯಿಂದ ಸುಗಂಧವಿಶಿಷ್ಟವಾಗಿ ಸುಖಸ್ಪರ್ಶವುಳ್ಳ ತಂಗಾಳಿಯು ಬೀಸಿತು. ಮರುತ್ತು

ಗಳೂ, ಇಂದ್ರನೂ, ವಸುಗಳೂ, ಅಶ್ವಿನೀದೇವತೆಗಳೂ, ಸಾಧ್ಯರೂ, ರುದ್ರರೂ, ಆದಿತ್ಯರೂ, ಇತರ ದೇವತೆಗಳೂ, ಸಿದ್ಧರೂ, ಮಹರ್ಷಿಗಳೂ ಎಲ್ಲರೂ ಮಹಾತೇಜಸ್ವಿಯಾದ ಆ ಧರ್ಮಪುತ್ರನಿರುವ ಸ್ಥಳಕ್ಕೆ ಬಂದು ನೆರೆದರು. ಆಗ ದೇವೇಂದ್ರನು ದುಃಖಿತನಾಗಿದ್ದ ಯುಧಿಷ್ಠಿರನನ್ನು ಸಮಾಧಾನಗೊಳಿಸುತ್ತ, 'ಓ ಯುಧಿಷ್ಠಿರಾ! ಮಹಾಬಾಹೂ! ದೇವತೆ ಗಳೆಲ್ಲರೂ ನಿನ್ನಿಂದ ತೃಪ್ತರಾಗಿ ಪ್ರಸನ್ನರಾಗಿರುವರು. ಇನ್ನು ಸಾಕು! ಬಾ! ಬಾ! ನೀನು ಸಿದ್ಧಿಯನ್ನು ಪಡೆದೆ. ನಿನಗೆ ಅಕ್ಷಯವಾದ ಲೋಕ ಗಳು ಲಭಿಸುವುವು. ನಿನ್ನ ಭ್ರಾತೃಗಳಿಗೂ, ಸುಹೃತ್ತುಗಳಿಗೂ ಪೂಜ್ಯ ವಾದ ಶಾಶ್ವತಗತಿಯು ಏರ್ಪಟ್ಟಿತು. ನನ್ನ ಮಾತನ್ನು ಕೇಳು. ಎಲ್ಲಾ ರಾಜರೂ ನರಕವನ್ನು ಕಾಣಲೇಬೇಕು. ಪುಣ್ಯಪಾಪಗಳೆರಡೂ, ಎರಡು ಬಗೆಯಾಗಿರುವುವು ಯಾವನು ಮೊದಲು ಪುಣ್ಯಫಲವನ್ನು ಅನುಭವಿ ಸುವನೋ ಆಮೇಲೆ ಆತನು ನರಕವನ್ನು ಅನುಭವಿಸುವನು. ಯಾವನು ಮೊದಲು ನರಕವನ್ನು ಅನುಭವಿಸುವನೋ ಆಮೇಲೆ ಅವನು ಸ್ವರ್ಗವನ್ನು ಪಡೆಯುವನು. ಓ ಧರ್ಮಜ್ಞಾ! ಅಧಿಕಪಾಪವನ್ನು ಮಾಡಿದವನು ಮೊದಲು ಸ್ವರ್ಗದಲ್ಲ ಕೆಲವುಕಾಲಮಾತ್ರ ಇರುವನು ನೀನು ಅಧಿಕ ಪುಣ್ಯಗಳನ್ನು ಮಾಡಿದವನು! ನಿನ್ನಲ್ಲಿ ಪಾಪವೆಂಬುದು ಅತ್ಯಲ್ಪವಾದುದು. ಆ ಕಾರಣದಿಂದಲೇ ನಿನಗೆ ಹಿತೈಷಿಯಾದ ನಾನು ನಿನ್ನನ್ನು ಹೀಗೆ ಮೊದಲು ಆ ಪಾಪಫಲವನ್ನು ಕಳೆದುಕೊಂಡುಹೋಗುವುದಕ್ಕಾಗಿ ಈ ದಾರಿಯಿಂದ ನಡೆಸಿದೆನು ರಾಜಾ! ನೀನು ದ್ರೋಣನನ್ನು ಆತನ ಪುತ್ರನ ವಿಷಯವಾಗಿ ಯುದ್ಧವ್ಯಾಜದಿಂದ ವಂಚಿಸಿದೆಯಲ್ಲವೆ? ಆದುದ ರಿಂದ ನಿನಗೆ ಆ ಸ್ವಲ್ಪಪಾಪಕ್ಕಾಗಿ ಈ ನರಕವನ್ನು ತೋರಿಸಿದೆನು. ಭೀಮಸೇನನೂ, ಅರ್ಜುನನೂ, ನಕುಲಸಹದೇವರೂ, ದ್ರೌಪದಿಯೂ ನಿನ್ನಂತೆಯೇ ಅಲ್ಪ ಕಾರಣಗಳಿಂದ ನರಕಕ್ಕೆ ಗುರಿಯಾದರು. ಪುರುಷ ಶ್ರೇಷ್ಠಾ! ಇನ್ನು ನಡೆ! ನಿನ್ನ ಸಹೋದರರಿಗೂ ಈಗ ಪಾಪನಿವೃತ್ತಿಯಾ ಯಿತು. ಓ ಭರತಕುಲೋತ್ತಮಾ! ನಿನ್ನ ಕಡೆಗೆ ಸೇರಿದ್ದ ಯಾವಯಾವ ರಾಜರು ಯುದ್ಧದಲ್ಲಿ ಕೊಲ್ಲಲ್ಪಟ್ಟರೋ, ಅವರೆಲ್ಲರೂ ಈಗ ಸ್ವರ್ಗದಲ್ಲಿರು ವರು. ರಾಜೇಂದ್ರಾ! ಅದೋ ನೋಡು! ನೀನು ಯಾರಿಗಾಗಿ ಪರಿತಪಿ

ಸುವೆಯೋ, ಮಹಾಧನುರ್ಧಾರಿಯೂ, ಶಸ್ತ್ರವಿದ್ಯಾನಿಪುಣನೂ ಆದ ಆ ಕರ್ಣನು ಉತ್ತಮಗತಿಯನ್ನೇ ಪಡೆದಿರುವನು. ಓ ಪ್ರಭೂ! ಪುರುಷ ಶ್ರೇಷ್ಠನೂ, ಸೂರ್ಯಕುಮಾರನೂ ಆದ ಕರ್ಣನು ತನಗೆ ಉಚಿತವಾದ ಸ್ಥಾನವನ್ನೇ ಪಡೆದಿರುವನು ನೋಡು. ಶೋಕವನ್ನು ಬಿಡು. ತಮತಮಗೆ ಉಚಿತ ಸ್ಥಾನಗಳನ್ನು ಪಡೆದ ನಿನ್ನ ಭ್ರಾತೃಗಳನ್ನೂ, ಪುತ್ರರನ್ನೂ, ನಿನ್ನ ಕಡೆಯ ಇತರರಾಜರನ್ನೂ ನೋಡು. ನೀನು ಮೊದಲು ಕಷ್ಟವನ್ನು ಅನುಭವಿಸಿದುದಾಯಿತು. ಇನ್ನು ಶೋಕರೋಗಗಳನ್ನು ಬಿಟ್ಟು ನನ್ನೊಡನೆ ಸಂತೋಷದಿಂದಿರು. ನೀನು ಮಾಡಿದ ಪುಣ್ಯಕರ್ಮಗಳು, ತಪಸ್ಸು, ದಾನಗಳು, ನಿನ್ನ ಜ್ಞಾನಾರ್ಜನೆ, ಇವುಗಳ ಫಲವನ್ನೆಲ್ಲ ಇನ್ನುಮೇಲೆ ನೀನು ಅನುಭವಿಸು. ನಿನಗೆ ದೇವತೆಗಳೂ, ಗಂಧರ್ವರೂ, ಅಪ್ಸರಸ್ಸುಗಳೂ, ದಿವ್ಯವಾದ ಉಡಿಗೆತೊಡಿಗೆಗಳನ್ನು ಧರಿಸಿ, ಮಂಗಳಕರವಾಗಿ ನಿನ್ನನ್ನು ಸ್ವರ್ಗದಲ್ಲಿ ಉಪಚರಿಸಲಿ. ನೀನು ರಾಜಸೂಯಾಶ್ವಮೇಧಯಾಗಗಳಿಂದ ಜಯಿಸಿದ ಉತ್ತಮಲೋಕಗಳನ್ನೂ, ತಪಃಫಲವನ್ನೂ ಇನ್ನುಮೇಲೆ ಅನುಭವಿಸುತ್ತಿರು. ಓ ಯುಧಿಷ್ಠಿರಾ! ಅತ್ಯುತ್ತಮವಾದ ಲೋಕಗಳು ನಿನಗೆ ಲಭಿಸಿದುವು. ನೀನು ಅವುಗಳಲ್ಲಿ ಹರಿಶ್ಚಂದ್ರನಂತೆ ಸಂಚರಿಸುವೆ. ಮಾಂಧಾತನೆಂಬ ರಾಜರ್ಷಿಯೂ, ಭಗೀರಥರಾಜನೂ, ದುಷ್ಯಂತಕುಮಾರನಾದ ಭರತನೂ ಎಲ್ಲಿರುವರೋ ಅಲ್ಲಿಯೇ ನೀನೂ ಸುಖಿಸುವೆ. ಓ ಕುಂತೀಪುತ್ರಾ! ಪುಣ್ಯಕರವಾಗಿ, ಮೂರು ಲೋಕಗಳನ್ನೂ ಪವಿತ್ರಮಾಡತಕ್ಕ ಆಕಾಶಗಂಗೆಯೆಂಬ ದೇವನದಿಯು ಇದೋ ಇಲ್ಲಿರುವುದು ನೋಡು. ಇದರಲ್ಲಿ ಸ್ನಾನಮಾಡಿ ಮುಂದೆ ಹೊರಡು. ಇದರಲ್ಲಿ ಸ್ನಾನಮಾಡಿದಮಾತ್ರದಿಂದಲೇ ನಿನ್ನ ಮನುಷ್ಯಜನ್ಮವು ನೀಗುವುದು. ಆಗ ಶೋಕ, ಶ್ರಮ ದ್ವೇಷಾದಿಗಳೆಲ್ಲವೂ ನಿನ್ನನ್ನು ಬಿಟ್ಟುಹೋಗುವುವು' ಎಂದನು.

ದೇವೇಂದ್ರನು ಹೀಗೆ ಹೇಳಿದಮೇಲೆ, ಧರ್ಮಪುರುಷನು ಪ್ರತ್ಯಕ್ಷನಾಗಿ ತನ್ನ ಪುತ್ರನಾದ ಯುಧಿಷ್ಠಿರನನ್ನು ಕುರಿತು 'ಓ ಮಹಾಪ್ರಾಜ್ಞಾ! ಪುತ್ರಾ! ನನ್ನಲ್ಲಿ ನೀನು ತೋರಿಸಿದ ಭಕ್ತಿಯಿಂದಲೂ, ತಾಳ್ಮೆಯಿಂದಲೂ,

ಇಂದ್ರಿಯನಿಗ್ರಹದಿಂದಲೂ ನಾನು ಪ್ರೀತನಾದೆನು. ನಾನು ಈ ರೀತಿಯಲ್ಲಿ ನಿನ್ನನ್ನು ಈ ಮೂರನೆಯಸಾರಿ ಪರೀಕ್ಷಿಸಿದುದಾಯಿತು. ಓ ರಾಜಾ! ನೀನು ಸ್ವಭಾವದಿಂದಲೇ ನಿಶ್ಚಲನು. ನೀನು ಹಿಂದೆ ದ್ವೈತವನದಲ್ಲಿ ಅರಣಿಯನ್ನು ಅಪಹರಿಸಿಕೊಂಡುಹೋದ ಮೃಗವನ್ನು ಹುಡುಕಿಕೊಂಡು ಹೊರಟಾಗ, ನಾನು ನಿನ್ನನ್ನು ಮೊದಲು ಪರೀಕ್ಷಿಸಿ ಪ್ರಶ್ನಿಸಿದೆನು. ನೀನು ಆ ಪರೀಕ್ಷೆಯನ್ನು ದಾಟಿದೆ. ಸ್ವರ್ಗಾರೋಹಣಕಾಲದಲ್ಲಿ ದ್ರೌಪದಿಯೂ, ನಿನ್ನ ಸಹೋದರರೂ ಮೃತರಾಗಲು, ನಾಯಿಯ ರೂಪವನ್ನು ಧರಿಸಿ ಬಂದ ನಾನು ನಿನ್ನನ್ನು ಅಲ್ಲಿ ಮತ್ತೊಮ್ಮೆ ಪರೀಕ್ಷಿಸಿದೆನು. ಭ್ರಾತೃಗಳ ನಿಮಿತ್ತವಾಗಿ ನೀನು ಈಗ ನರಕದಲ್ಲಿಯೇ ಇರಲು ಅಪೇಕ್ಷಿಸಿದಾಗ, ಇದು ನನ್ನ ಮೂರನೆಯ ಪರೀಕ್ಷೆ. ಇದರಲ್ಲಿಯೂ ನೀನು ಜಯಿಸಿದೆ. ನೀನು ಬಹಳ ಪರಿಶುದ್ಧನು. ನಿರ್ದೋಷಿ ಆದುದರಿಂದ ನಿತ್ಯಸುಖಿಯಾಗಿರುವೆ. ನಿನ್ನ ಸಹೋದರರಾದರೂ ನರಕಕ್ಕೆ ಗುರಿಯಾಗತಕ್ಕವರಲ್ಲ. ದೇವೇಂದ್ರನ ಮಾಯೆಯಿಂದಲೇ ಇವೆಲ್ಲ ನಿನಗೆ ಈ ರೀತಿಯಾಗಿ ಕಾಣಿಸಿತು. ರಾಜರೆಲ್ಲರೂ ನರಕವನ್ನು ನೋಡಲೇ ಬೇಕು. ಅದಕ್ಕಾಗಿಯೇ ಒಂದು ಮುಹೂರ್ತಕಾಲದವರೆಗೆ ನೀನು ಈ ಮಹಾದುಃಖಕ್ಕೆ ಗುರಿಯಾಗಬೇಕಾಯಿತು. ಸವ್ಯಸಾಚಿಯಾಗಲಿ, ಭೀಮಸೇನನಾಗಲಿ, ನಕುಲಸಹದೇವರಾಗಲಿ, ಸತ್ಯಪ್ರತಿಜ್ಞೆಯುಳ್ಳವನೂ, ಶೂರನೂ ಆದ ಕರ್ಣನಾಗಲಿ ದೀರ್ಘಕಾಲದವರೆಗೆ ಈ ನರಕದಲ್ಲಿ ನಿಲ್ಲತಕ್ಕವರಲ್ಲ ಹಾಗೆಯೇ ದ್ರೌಪದಿಯೂ ನರಕಕ್ಕೆ ಗುರಿಯಾಗತಕ್ಕವಳಲ್ಲ. ಓ ಭರತಕುಲೋತ್ತಮಾ! ಬಾ! ಬಾ! ತ್ರಿಲೋಕಸಂಚಾರಿಯಾದ ಗಂಗೆಯನ್ನು ನೋಡು' ಎಂದನು.

ಆಮೇಲೆ ನಿನ್ನ ತಾತನು ಧರ್ಮದೇವತೆಯೊಡನೆಯೂ, ಎಲ್ಲಾ ದೇವತೆಗಳೊಡನೆಯೂ ಪುಣ್ಯಕರವೂ, ಪವಿತ್ರವೂ ಆದ ಗಂಗಾನದಿಗೆ ಹೋಗಿ, ಅದರಲ್ಲಿ ಸ್ನಾನಮಾಡಿ, ತನ್ನ ಮಾನುಷದೇಹವನ್ನು ನೀಗಿಕೊಂಡನು ಆ ನದಿಯಲ್ಲಿ ಸ್ನಾನಮಾಡಿದೊಡನೆಯೇ ಯುಧಿಷ್ಠಿರನು ದಿವ್ಯ ಶರೀರದಿಂದ ಕಾಣಿಸಿದನು. ಅವನಲ್ಲಿ ಅದಕ್ಕೆ ಮೊದಲು ತಲೆದೋರಿದ್ದ ಅಸೂಯಾಶೋಕಾದಿಗಳೆಲ್ಲವೂ ಹೋದುವು. ಆಮೇಲೆ ಅವನು ದೇವತೆ

ಗಳೊಡನೆಯೂ, ಧರ್ಮಪುರುಷನೊಡನೆಯೂ ಕೂಡಿ, ಮಹರ್ಷಿಗಳಿಂದ ಸ್ತುತಿಸಲ್ಪಡುತ್ತ, ಪುರುಷೋತ್ತಮರೂ, ಶೂರರೂ ಆದ ಆ ಪಾಂಡವರೂ, ಧೃತರಾಷ್ಟ್ರಕುಮಾರರೂ, ಯಾವ ಸ್ಥಳಗಳಲ್ಲಿ ಕೋಪತಾಪಗಳನ್ನು ಬಿಟ್ಟು ತಮ್ಮತಮ್ಮ ಸ್ಥಾನಗಳನ್ನು ಪಡೆದಿದ್ದರೋ, ಅಲ್ಲಿಗೆ ಹೋಗಿ ಸೇರಿದನು

ಇದು ಮೂರನೆಯ ಅಧ್ಯಾಯವು.

ಯುಧಿಷ್ಠಿರನು ಸ್ವರ್ಗದಲ್ಲಿ ಕೃಷ್ಣನನ್ನೂ, ಕರ್ಣನನ್ನೂ ಇನ್ನೂ ಇತರರನ್ನೂ ಕಂಡುದು. ತಮ್ಮತಮ್ಮ ಸ್ಥಾನಗಳಲ್ಲಿದ್ದ ದ್ರೌಪದೀಪುತ್ರರೇ ಮೊದಲಾದವರನ್ನು ಇಂದ್ರನು ಯುಧಿಷ್ಠಿರನಿಗೆ ತೋರಿಸಿದುದು.

ಆಮೇಲೆ ಧರ್ಮರಾಜನು, ದೇವತೆಗಳಿಂದಲೂ, ಋಷಿಗಳಿಂದಲೂ, ಮರುದ್ಗಣಗಳಿಂದಲೂ ಸ್ತುತಿಸಲ್ಪಡುತ್ತ, ಕೌರವಶ್ರೇಷ್ಠರಿದ್ದ ಸ್ಥಳಕ್ಕೆ ಬಂದನು. ಅಲ್ಲಿ ಆತನು ಮೊದಲು ಶ್ರೀಕೃಷ್ಣನನ್ನು ಕಂಡನು. ಆ ಕೃಷ್ಣನ ದಿವ್ಯಾದ್ಭುತರೂಪವನ್ನು ಕೇಳಬೇಕೆ? ಸಾಕ್ಷಾದ್ಬ್ರಹ್ಮಸ್ವರೂಪದಿಂದ ಮೆರೆಯುವನು! ಆದರೆ ಅವನು ಭೂಲೋಕದಲ್ಲಿ ಮನುಷ್ಯಾಕಾರದಿಂದಿದ್ದಾಗ ಕಾಣಿಸಿದ ಕೆಲವು ಹೋಲಿಕೆಗಳಿಂದ ಅವನು ಕೃಷ್ಣನೆಂಬುದು ಮಾತ್ರ ಸೂಚಿತವಾಗುವುದು. ಆತನೋ ದಿವ್ಯಕಾಂತಿಯಿಂದ ಜ್ವಲಿಸುತ್ತಿರುವನು! ಆತನ ಶಂಖಚಕ್ರಾದಿ ದಿವ್ಯಾಯುಧಗಳೆಲ್ಲ ಪುರುಷಾಕಾರದಿಂದ ಅವನನ್ನು ಸೇವಿಸುತ್ತಿರುವುವು. ಅರ್ಜುನನು ದಿವ್ಯಕಾಂತಿಯಿಂದ ಬೆಳಗುತ್ತ ಸಮೀಪದಲ್ಲಿದ್ದ ಆತನನ್ನು ಉಪಾಸಿಸುತ್ತಿರುವನು ಪುರುಷಶ್ರೇಷ್ಠರೂ, ದೇವಪೂಜಿತರೂ ಆದ ಅವರಿಬ್ಬರೂ ಯುಧಿಷ್ಠಿರನನ್ನು ನೋಡಿದೊಡನೆ ಹಿಂದಿನಂತೆ ಗೌರವದಿಂದ ಆದರಿಸಿದರು. ಅಲ್ಲಿಂದ ಮುಂದೆ ಹೋದಾಗ, ಅಲ್ಲಿ ಯುಧಿಷ್ಠಿರನಿಗೆ ಶಸ್ತ್ರವಿದ್ಯಾನಿಪುಣನಾದ ಕರ್ಣನು ದ್ವಾದಶಸೂರ್ಯರ ನಡುವೆ ಪ್ರತ್ಯೇಕ ಸ್ಥಳದಲ್ಲಿರುವಹಾಗೆ ಕಾಣಿಸಿದನು. ಮತ್ತೊಂದು ಸ್ಥಳದಲ್ಲಿ ಭೀಮಸೇನನನ್ನು ನೋಡಿದನು. ಆತನು ಮರುದ್ಗಣದಿಂದ ಪರಿವೃತನಾಗಿ, ಮೊದಲಿದ್ದ ರೂಪದಲ್ಲಿಯೇ ಮೂರ್ತಿ

ಮಂತನಾದ ವಾಯುದೇವನ ಪಕ್ಕದಲ್ಲಿ, ದಿವ್ಯಶರೀರದೊಡಗೂಡಿ ಮಹಾ ಕಾಂತಿಯಿಂದ ಶೋಭಿಸುತ್ತಿದ್ದನು ಹಾಗೆಯೇ ಅಶ್ವಿನೀದೇವತೆಗಳ ಸ್ಥಾನದಲ್ಲಿ ನಕುಲಸಹದೇವರು ತೇಜಸ್ಸಿನಿಂದ ಜ್ವಲಿಸುತ್ತಿರುವುದನ್ನು ಕಂಡನು. ಇನ್ನೊಂದುಕಡೆಯಲ್ಲಿ ತಾವರೆ ನೈದಿಲೆ ಹೂಗಳಿಂದ ಕೂಡಿದ ಮಾಲೆಯನ್ನು ಧರಿಸಿ, ಸ್ವರ್ಗವನ್ನೆಲ್ಲ ಬೆಳಗುವಂತೆ ಶರೀರಕಾಂತಿಯಿಂದ ಕೂಡಿದ್ದ ದ್ರೌಪದಿಯನ್ನೂ ನೋಡಿದನು. ಅವಳನ್ನು ಕಂಡೊಡನೆ ಧರ್ಮ ರಾಜನು ಆಕೆಯನ್ನು ಸ್ಪರ್ಶಿಸುವುದಕ್ಕೆ ಮುಂದೆ ಹೋದನು. ಆಗ ದೇವೇಂದ್ರನು ಆತನನ್ನು ಕುರಿತು ' ಓ ಯುಧಿಷ್ಠಿರಾ! ಈಕೆಯು ಅಯೋ ನಿಜೆ! ಸಾಮಾನ್ಯಮನುಷ್ಯರಂತೆ ಗರ್ಭದಿಂದ ಹುಟ್ಟಿದವಳಲ್ಲ. ಲೋಕ ಪ್ರಿಯಳಾದ ಲಕ್ಷ್ಮಿಯೇ ನಿಮಗಾಗಿ ದ್ರೌಪದಿಯ ರೂಪದಿಂದ ಮನುಷ್ಯ ಶರೀರವನ್ನು ಪಡೆದಿದ್ದಳು. ಈಕೆಯು ನಿಮಗಾಗಿಯೇ ಪರಮಶಿವನಿಂದ ಸೃಷ್ಟಿಸಲ್ಪಟ್ಟು, ದ್ರುಪದನ ಕುಲದಲ್ಲಿ ಹುಟ್ಟಿ, ನಿಮ್ಮ ವಶಳಾಗಿ ನಿಮ್ಮಿಂದ ಪೋಷಿಸಲ್ಪಟ್ಟಳು. ಓ ರಾಜಾ! ಮಹಾಭಾಗ್ಯಶಾಲಿಗಳೂ, ಅಗ್ನಿಕಾಂತಿಗೆ ಸಮಾನರೂ, ಮಹಾಪರಾಕ್ರಮಿಗಳೂ ಆದ ಈ ಐದುಮಂದಿ ಗಂಧರ್ವ ರೂ ನಿಮಗೆ ದ್ರೌಪದಿಯಲ್ಲಿ ಜನಿಸಿದ ಮಕ್ಕಳು. ಇದೋ! ಧೃತರಾಷ್ಟ್ರ ನೆಂಬ ಈ ಗಂಧರ್ವರಾಜನನ್ನು ನೋಡು ಈತನೇ ನಿನ್ನ ತಂದೆಯ ಜ್ಯೇಷ್ಠಸಹೋದರನಾದ ಧೃತರಾಷ್ಟ್ರನು. ಇದೋ! ಇಲ್ಲಿ ಆದಿತ್ಯರೊಡ ಗೂಡಿ ಪ್ರಕಾಶಿಸುವ ಈತನೇ ಅಗ್ನಿಕಾಂತಿಗೆ ಸಮಾನವಾದ ಕಾಂತಿಯುಳ್ಳ ವನೂ, ಸೂರ್ಯಕುಮಾರನೂ, ರಥಿಕಶ್ರೇಷ್ಠನೂ ಆಗಿ, ರಾಧೇಯನೆಂದು ಪ್ರಸಿದ್ಧಿಗೊಂಡಿದ್ದ ನಿನ್ನ ಅಣ್ಣನು. ಈತನನ್ನು ನೋಡಿದೆಯಷ್ಟೆ! ಮಹಾ ರಥರಾದ ವೃಷ್ಣಿಗಳೂ, ಅಂಧಕರೂ, ಸಾತ್ಯಕಿ ಮೊದಲಾದ ವೀರರೂ, ಮಹಾಬಲಶಾಲಿಗಳಾದ ಭೋಜರೂ, ಅದೋ! ಅಲ್ಲಿ ಸಾಧ್ಯರು, ದೇವತೆ ಗಳು, ವಿಶ್ವೇದೇವತೆಗಳು, ಮರುತ್ತುಗಳು, ಇವರ ಸಮೂಹದಲ್ಲಿ ಸೇರಿರುವು ದನ್ನು ನೋಡು ಸುಭದ್ರಾಪುತ್ರನೂ, ಅಜೇಯನೂ, ಮಹಾಧನುರ್ಧಾ ರಿಯೂ, ಚಂದ್ರಸಮಾನನೂ ಆದ ಅಭಿಮನ್ಯುವು ಇತ್ತಲಾಗಿ ಚಂದ್ರ ನೊಡನೆ ಇರುವುದನ್ನು ನೋಡಿದೆಯಾ! ನಿನ್ನ ತಂದೆಯೂ, ಶಸ್ತ್ರವಿದ್ಯಾ ನಿಪುಣನೂ ಆದ ಪಾಂಡುವು ಕುಂತೀ ಮಾದ್ರಿಯರೊಡನೆ ವಿಮಾನದಲ್ಲಿ

ಕುಳಿತು ಆಗಾಗ ನನ್ನ ಸಮೀಪಕ್ಕೆ ಬರುತ್ತಿರುವನು. ಶಂತನುಪುತ್ರನಾದ ಭೀಷ್ಮನು ಅಷ್ಟವಸುಗಳೊಡನೆ ಸೇರಿ ಇದೋ ಇಲ್ಲಿರುವನು ನೋಡು. ಗುರುವಾದ ದ್ರೋಣಾಚಾರ್ಯನು ಬೃಹಸ್ಪತಿಯ ಮಗ್ಗುಲಲ್ಲಿರುವುದನ್ನು ನೋಡು. ಇನ್ನೂ ಇತರರಾಜರೂ, ನಿಮ್ಮ ಕಡೆಯ ಯುದ್ಧವೀರರೂ, ಗಂಧರ್ವರೊಡನೆಯೂ, ಯಕ್ಷರೊಡನೆಯೂ, ಪುಣ್ಯಜನರೊಡನೆಯೂ ಕಲೆತಿರುವುದನ್ನು ನೋಡು. ಕೆಲವುಮಂದಿ ರಾಜರು ಗುಹ್ಯಕರ ಲೋಕವನ್ನು ಸೇರಿರುವರು. ತ್ರಿಕರಣಶುದ್ಧಿಯುಳ್ಳ ಆ ರಾಜರೆಲ್ಲರೂ ತಮ್ಮ ಶರೀರಗಳನ್ನು ಬಿಟ್ಟು, ಸ್ವರ್ಗವನ್ನು ಜಯಿಸಿ, ಇದೋ ಇಲ್ಲಿರುವುದನ್ನು ನೋಡು' ಎಂದನು.

ಇದು ನಾಲ್ಕನೆಯ ಅಧ್ಯಾಯವು.

ಭೀಷ್ಮನೇ ಮೊದಲಾದವರು ಸ್ವರ್ಗವನ್ನು ಅನುಭವಿಸಿದಮೇಲೆ ತಮ್ಮ ತಮ್ಮ ದೇವರೂಪಗಳಲ್ಲಿ ಸೇರಿದುದು. ಜನಮೇಜಯನು ಆಸ್ತಿಕನೇ ಮುಂತಾದವರನ್ನು ಪೂಜಿಸಿ ಯಾಗವನ್ನು ಪೂರೈಸಿದಮೇಲೆ, ಹಸ್ತಿನಾಪುರಕ್ಕೆ ಹೋಗಿ ರಾಜ್ಯಭಾರಮಾಡಿದುದು. ಸೂತಪೌರಾಣಿಕನು ಭಾರತಕಥೆಯನ್ನು ಮುಗಿಸಿ ಅದರ ಮಹಿಮೆಯನ್ನು ತಿಳಿಸಿದುದು.

ಆಗ ಜನಮೇಜಯರಾಜನು ವೈಶಂಪಾಯನಮುನಿಯನ್ನು ಕುರಿತು 'ಮುನೀಂದ್ರಾ! ಮಹಾತ್ಮರಾದ ಆ ಭೀಷ್ಮದ್ರೋಣರೂ, ಧೃತರಾಷ್ಟ್ರರಾಜನೂ, ವಿರಾಟದ್ರುಪದರೂ, ವಿರಾಟಪುತ್ರರಾದ ಶಂಖನೂ, ಉತ್ತರನೂ, ಮತ್ತು ಧೃಷ್ಟಕೇತು, ಜಯತ್ಸೇನನು, ಸತ್ಯಜಿತ್ತು, ದುರ್ಯೋಧನನ ಪುತ್ರರು, ಸುಬಲಪುತ್ರನಾದ ಶಕುನಿ, ಪರಾಕ್ರಮಶಾಲಿಗಳಾದ ಕರ್ಣಪುತ್ರರು, ಜಯದ್ರಥನು, ಘಟೋತ್ಕಚನು, ಪ್ರಸಿದ್ಧರೂ ವೀರರೂ ಆದ ಇತರ ರಾಜರು, ಇವರೆಲ್ಲ ಸ್ವರ್ಗದಲ್ಲಿ ಎಷ್ಟುಕಾಲದವರೆಗೆ ವಾಸಮಾಡುತ್ತಿದ್ದರು? ಅದನ್ನು ನನಗೆ ತಿಳಿಸು. ಅವರು ಅಲ್ಲಿಯೇ ನಿರಂತರವಾಗಿ ನೆಲಸಿದ್ದರೇ? ಅಥವಾ ತಮ್ಮ ತಮ್ಮ ಕರ್ಮಫಲವು ಮುಗಿದಮೇಲೆ ಆ ಪುರುಷ

ಶ್ರೇಷ್ಠರು ಬೇರೆ ಗತಿಯನ್ನು ಪಡೆದರೆ? ನನಗೆ ಅವೆಲ್ಲವನ್ನೂ ಕೇಳಬೇಕೆಂಬ ಕುತೂಹಲವಿದೆ. ನೀನು ನಿನ್ನ ತಪಃಪ್ರಭಾವದಿಂದ ಎಲ್ಲವನ್ನೂ ನೋಡುವೆಯಲ್ಲವೆ?' ಎಂದನು. ಆಗ ವ್ಯಾಸನಿಂದ ಅನುಮತಿಸಲ್ಪಟ್ಟ ಆ ಬ್ರಹ್ಮರ್ಷಿಯು ವಿವರಿಸತೊಡಗಿದನು.

'ಓ ರಾಜಾ! ಕರ್ಮಗಳು ಮುಗಿದೊಡನೆಯೇ ಎಲ್ಲರೂ ಪಡೆಯುತಕ್ಕ ಗತಿಯಾವುದೆಂಬ ದೇವರಹಸ್ಯವನ್ನು ತಿಳಿಸುವೆನು ಕೇಳು. ಮಹಾತೇಜಸ್ವಿಯೂ, ದಿವ್ಯಜ್ಞಾನಿಯೂ, ದೃಢವ್ರತನೂ, ಸರ್ವಜ್ಞನೂ ಆದ ವ್ಯಾಸಮುನಿಯು, ಕರ್ಮಗಳು ತೀರಿದಮೇಲೆ, ಇವರೆಲ್ಲರೂ ತಮ್ಮ ನಿಜರೂಪಗಳನ್ನೇ ಪಡೆಯುವರೆಂದು ಮೊದಲೇ ಹೇಳಿದ್ದನು. ಅದರಂತೆ ಮಹಾಪರಾಕ್ರಮಿಯಾದ ಭೀಷ್ಮನು ಅಷ್ಟವಸುಗಳಲ್ಲಿ ಸೇರಿಬಿಟ್ಟನು. ಈಗ ಅಷ್ಟವಸುಗಳೇ ಕಾಣುತ್ತಿರುವರು ನೋಡು. ದ್ರೋಣನು ಆಂಗಿರಸಪುತ್ರನಾದ ಬೃಹಸ್ಪತಿಯಲ್ಲಿ ಪ್ರವೇಶಿಸಿದನು. ಕೃತವರ್ಮನು ಮರುದ್ಗಣದಲ್ಲಿ ಪ್ರವೇಶಿಸಿದನು. ಪ್ರದ್ಯುಮ್ನನು ತಾನು ಜನ್ಮಿಸಿದಂತೆಯೇ ಸನತ್ಕುಮಾರನಲ್ಲಿ ಸೇರಿದನು. ಧೃತರಾಷ್ಟ್ರ ಗಾಂಧಾರಿಯರಿಬ್ಬರೂ ಇತರ ದುರ್ಲಭಗಳಾದ ಕುಬೇರ ಲೋಕಗಳನ್ನು ಸೇರಿದರು. ಪಾಂಡುವು ತನ್ನ ಇಬ್ಬರು ಪತ್ನಿಯರೊಡನೆ ಮಹೇಂದ್ರನ ಆಲಯದಲ್ಲಿ ಸೇರಿದನು. ವಿರಾಟ ದ್ರುಪದರು, ಧೃಷ್ಟಕೇತು, ನಿಶಠನು, ಅಕ್ರೂರನು, ಸಾಂಬನು, ಭಾನು, ಕಣ್ವನು, ವಿದೂರಥನು, ಭೂರಿಶ್ರವಸ್ಸು, ಶಲನು, ಭೂರಿ, ಉಗ್ರಸೇನನು, ವಸುದೇವನು, ಉತ್ತರನು, ಆತನ ಅಣ್ಣನಾದ ಶಂಖನು, ಈ ಮಹಾತ್ಮರೆಲ್ಲರೂ ವಿಶ್ವೇದೇವರಲ್ಲಿ ಪ್ರವೇಶಿಸಿದರು ಮಹಾಪರಾಕ್ರಮಿಯೂ, ಸೋಮಪುತ್ರನೂ ಆದ ವರ್ಚಸ್ಸೆಂಬವನೇ ಅರ್ಜುನನಿಗೆ ಅಭಿಮನ್ಯುವೆಂಬ ಪುತ್ರನಾಗಿ ಹುಟ್ಟಿದ್ದವನು. ಮಹಾರಥನಾದ ಆತನು ಕ್ಷತ್ರಿಯಧರ್ಮವನ್ನನುಸರಿಸಿ, ಯಾರಿಂದಲೂ ಮಾಡಲಾರದ ರೀತಿಯಲ್ಲಿ ಯುದ್ಧಮಾಡಿ ಕರ್ಮವು ಮುಗಿದಮೇಲೆ ಸೋಮನಲ್ಲಿ ಪ್ರವೇಶಿಸಿದನು. ಶಕುನಿಯು ದ್ವಾಪರವನ್ನು ಸೇರಿದನು. ಧೃಷ್ಟದ್ಯುಮ್ನನು ಅಗ್ನಿಯನ್ನು ಸೇರಿದನು. ಧೃತರಾಷ್ಟ್ರಪುತ್ರರೆಲ್ಲರೂ ರಾಕ್ಷಸರಲ್ಲಿ ಸೇರಿದರು. ವಿದುರ ಯುಧಿ

ಷ್ಠರರಿಬ್ಬರೂ ಧರ್ಮಪುರುಷನಲ್ಲಿ ಪ್ರವೇಶಿಸಿದರು. ಭಗವಂತನಾದ ಬಲರಾಮನು ಪಿತಾಮಹನ ಆಜ್ಞೆಯಂತೆ ಯೋಗವಮಾಡಿ ಪಾತಾಳದಲ್ಲಿ ಪ್ರವೇಶಿಸಿ ಭೂಮಿಯನ್ನು ಧರಿಸುತ್ತಿರುವನು ದೇವದೇವನೂ, ಸನಾತನನೂ ಪ್ರಸಿದ್ಧನೂ, ನಾರಾಯಣಾಂಶಸಂಭೂತನೂ ಆದ ಆ ವಾಸುದೇವನಾದರೋ, ತಾನು ಮಾಡಬೇಕಾಗಿದ್ದ ಕಾರ್ಯವು ಮುಗಿದಮೇಲೆ, ನಾರಾಯಣನಲ್ಲಿಯೇ ಸೇರಿದನು ಆ ವಾಸುದೇವನ ಪತ್ನಿಯರಾದ ಹತ್ತುಸಾವಿರ ಮಂದಿ ಸ್ತ್ರೀಯರೂ ಸ್ವಲ್ಪಕಾಲದಮೇಲೆ ಸರಸ್ವತೀನದಿಯಲ್ಲಿ ಮುಳುಗಿ, ತಮ್ಮ ಶರೀರಗಳನ್ನು ತ್ಯಜಿಸಿ, ಸ್ವರ್ಗದಲ್ಲಿ ಸೇರಿದರು. ಅವರೇ ಅಪ್ಸರಸ್ತ್ರೀಯರಾಗಿ ತಿರುಗಿ ಗೋವಿಂದನನ್ನು ಸೇವಿಸುವರು. ಆ ಮಹಾಯುದ್ಧದಲ್ಲಿ ಕೊಲ್ಲಲ್ಪಟ್ಟ ಘಟೋತ್ಕಚನೇ ಮುಂತಾದ ವೀರರು ದೇವತೆಗಳಲ್ಲಿಯೂ, ಯಕ್ಷರಲ್ಲಿಯೂ ಸೇರಿದರು. ಓ ರಾಜಾ! ದುರ್ಯೋಧನನಿಗೆ ಸಹಾಯಕರಾಗಿದ್ದ ರಾಕ್ಷಸರೆಲ್ಲರೂ ಕ್ರಮವಾಗಿ ಬೇರಬೇರೆ ಉತ್ತಮಲೋಕಗಳನ್ನು ಸೇರಿದರು. ಆ ಪುರುಷಶ್ರೇಷ್ಠರಲ್ಲರೂ ಇಂದ್ರ, ವರುಣ, ಕುಬೇರ ಲೋಕಗಳಲ್ಲಿ ಸೇರಿರುವರು. ಹೀಗೆ ಕೌರವ ಪಾಂಡವರ ವಿಷಯವಾದ ಈ ಮಹಾಭಾರತಕಥೆಯೆಲ್ಲವನ್ನೂ ಸಂಪೂರ್ಣವಾಗಿ ನಿನಗೆ ವಿಸ್ತರಿಸಿ ತಿಳಿಸಿರುವೆನು' ಎಂದನು.

ಜನಮೇಜಯನು ಯಾಗಕರ್ಮಗಳಲ್ಲಿ ನಿಪುಣನೂ, ಬ್ರಾಹ್ಮಣೋತ್ತಮನೂ ಆದ ವೈಶಂಪಾಯನನಿಂದ ಈ ಕಥೆಯೆಲ್ಲವನ್ನೂ ಕೇಳಿ ವಿಸ್ಮಯಪಡುತಿದ್ದನು. ಆಮೇಲೆ ಯಾಗವಮಾಡಿಸುವವರು ಕರ್ಮಗಳನ್ನೆಲ್ಲ ಸಾಂಗವಾಗಿ ಮುಗಿಸಿದರು ಆಸ್ತಿಕನು ಸರ್ಪಗಳನ್ನು ಪ್ರಾಣಾಪಾಯದಿಂದ ತಪ್ಪಿಸಿ ಸಂತೋಷದಿಂದಿದ್ದನು. ಜನಮೇಜಯನು ಭೂರಿದಕ್ಷಿಣೆಗಳಿಂದ ಬ್ರಾಹ್ಮಣರೆಲ್ಲರನ್ನೂ ಸಂತೃಪ್ತಿಗೊಳಿಸಿದನು. ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಎಲ್ಲರನ್ನೂ ಕಳುಹಿಸಿಕೊಟ್ಟಮೇಲೆ ಜನಮೇಜಯನು ಸಂತುಷ್ಟನಾಗಿ ತಕ್ಷಶಿಲೆಯಿಂದ ಹಸ್ತಿನಾವತಿಗೆ ಹಿಂತಿರುಗಿದನು. ಓ ಶೌನಕಾದಿಗಳೇ! ಜನಮೇಜಯನ ಸರ್ಪಯಾಗಕಾಲದಲ್ಲಿ, ವ್ಯಾಸಾನುಮತಿಯಿಂದ ವೈಶಂಪಾಯನನು ತಿಳಿಸಿದ ಮಹಾ

ಪ್ರಸಿದ್ಧವಾದ ಈ ಚರಿತ್ರೆಯನ್ನೆಲ್ಲ ನಿಮಗೆ ಪೂರ್ಣವಾಗಿ ತಿಳಿಸಿದುದಾಯಿತು. ಬ್ರಾಹ್ಮಣರೇ! ಈ ಇತಿಹಾಸವು ಅತಿಪವಿತ್ರವಾದುದು. ಪುಣ್ಯಕರವಾದುದು! ಈ ಗ್ರಂಥವನ್ನು ರಚಿಸಿದ ವ್ಯಾಸಮುನಿಯು ಸತ್ಯವಾದಿ! ಸರ್ವಜ್ಞನು! ಧರ್ಮಜ್ಞನು! ವಿದ್ವಾಂಸನು! ಪರೋಕ್ಷಜ್ಞಾನಿ! ಪರಿಶುದ್ಧಾತ್ಮನು! ತಪಸ್ಸಿನಿಂದ ಪರಿಶುದ್ಧವಾದ ಚಿತ್ತವುಳ್ಳವನು! ಸರ್ವಸಮರ್ಥನಾದ ಪ್ರಭು ಸಾಂಖ್ಯಯೋಗಗಳಲ್ಲಿ ನಿಪುಣನು ಅನೇಕ ತಂತ್ರಗಳನ್ನು ಚೆನ್ನಾಗಿ ತಿಳಿದವನು. ಅಂತಹ ಮಹಾತ್ಮನು ಪುಣ್ಯಾತ್ಮರಾದ ಪಾಂಡವರ ಮಹಿಮೆಯನ್ನೂ, ಅಧಿಕ ಪರಾಕ್ರಮಿಗಳೂ, ಸಂಪದ್ಯುಕ್ತರೂ ಆದ ಇತರಕ್ಷತ್ರಿಯರ ಕೀರ್ತಿಯನ್ನೂ, ದೇವದೇವನಾದ ವಾಸುದೇವನ ಲೀಲೆಯನ್ನೂ, ಸಕಲದೇವತೆಗಳೂ ತಮ್ಮ ಅಂಶದಿಂದ ಭೂಲೋಕದಲ್ಲಿ ಅವತರಿಸಿ ತಿರುಗಿ ನಿಜಲೋಕದಲ್ಲಿ ಸೇರಿದುದನ್ನೂ, ಇವನ್ನೆಲ್ಲ ತನ್ನ ದಿವ್ಯದೃಷ್ಟಿಯಿಂದ ನೋಡಿ ಈ ಗ್ರಂಥವನ್ನು ರಚಿಸಿದನು. ಈ ಮಹಾಕಥೆಯನ್ನು ಪರ್ವಕಾಲಗಳಲ್ಲಿ ಕೇಳುವ ಬ್ರಾಹ್ಮಣನು, ತನ್ನ ಪಾಪಗಳನ್ನೆಲ್ಲ ನೀಗಿ ಸ್ವರ್ಗವನ್ನು ಜಯಿಸಿ, ಮೋಕ್ಷವನ್ನೂ ಪಡೆಯುವನು. ವ್ಯಾಸಪ್ರೋಕ್ತವಾದ ಈ ಮಹಾಭಾರತವೆಂಬ ಐದನೆಯ ವೇದವನ್ನು ಮನಸ್ಥೈರ್ಯದಿಂದ ಸಂಪೂರ್ಣವಾಗಿ ಕೇಳುವವನಿಗೆ ಬ್ರಹ್ಮಹತ್ಯಾದಿ ದೋಷಗಳೂ ಕ್ಷಣಮಾತ್ರದಲ್ಲಿ ನಶಿಸುವುವು ಯಾವಾತನು ಶ್ರಾದ್ಧಕಾಲದಲ್ಲಿ ಈ ಗ್ರಂಥದ ಒಂದು ಶ್ಲೋಕದಲ್ಲಿ ನಾಲ್ಕನೆಯ ಒಂದುಭಾಗವನ್ನಾದರೂ ಬ್ರಾಹ್ಮಣರ ಕಿವಿಯಲ್ಲಿ ಬೀಳುವಂತೆ ಹೇಳುವನೋ, ಆತನ ಪಿತೃಗಳಿಗೆ ಅಕ್ಷಯವಾದ ಅನ್ನಪಾನಾದಿಗಳು ಲಭಿಸುವುವು. ಸಂಜೆಯ ವೇಳೆಗಳಲ್ಲಿ ಮಹಾಭಾರತವನ್ನು ಓದಿದರೆ, ಆ ಹಗಲು ತಾನು ಇಂದ್ರಿಯಗಳಿಂದಲೂ, ಮನಸ್ಸಿನಿಂದಲೂ ಮಾಡಿದ ಪಾಪಗಳೆಲ್ಲ ತೊಲಗುವುವು. ಬ್ರಾಹ್ಮಣನು ಪ್ರಾತಃಕಾಲದಲ್ಲಿ ಮಹಾಭಾರತವನ್ನು ಓದಿದರೆ, ಸ್ತ್ರೀಸಮೂಹದೊಡನೆ ಸೇರಿ ರಾತ್ರಿಯಲ್ಲಿ ಮಾಡಿದ ಪಾಪದಿಂದ ನಿವೃತ್ತನಾಗುವನು. ಈ ಗ್ರಂಥವು ಮಹತ್ತಾಗಿಯೂ, ಭಾರವತ್ತಾಗಿಯೂ, (ಪೂಜ್ಯವಾಗಿಯೂ) ಇರುವುದರಿಂದಲೇ ಮಹಾಭಾರತವೆಂದು ಪ್ರಸಿದ್ಧವಾಗಿರುವುದು. ಇದರ ತತ್ವಾರ್ಥವನ್ನು ತಿಳಿದವನ ಪಾಪಗಳೆಲ್ಲವೂ ತೊಲಗುವುವು. ಈ ಗ್ರಂಥವೊಂದೇ

ಹದಿನೆಂಟು ಪುರಾಣಗಳು, ಸಕಲ ಧರ್ಮಶಾಸ್ತ್ರಗಳು, ಷಡಂಗಗಳೊಡಗೂಡಿದ ಚತುರ್ವೇದಗಳು ಇವುಗಳಿಗೆ ಸಮಾನವು. ಮಹಾತ್ಮನೂ, ಹದಿನೆಂಟು ಪುರಾಣಗಳನ್ನು ರಚಿಸಿದವನೂ, ವೇದಕ್ಕೆ ಸಮುದ್ರಪ್ರಾಯನೂ ಆದ ಆ ಮುನಿಶ್ರೇಷ್ಠನ ಈ ಸಿಂಹನಾದವನ್ನು ಎಲ್ಲರೂ ಕೇಳಿರಿ! ಪೂಜ್ಯನೂ, ಪ್ರಭುವೂ ಆದ ಆ ವ್ಯಾಸಮುನಿಯು ಪುಣ್ಯಕರವಾದ ಈ ಮಹಾಭಾರತವೆಲ್ಲವನ್ನೂ ಮೂರುವರ್ಷಗಳ ಕಾಲದಲ್ಲಿ ರಚಿಸಿದನು. ಜಯವೆಂದು ಪ್ರಸಿದ್ಧವಾದ ಈ ಮಹಾಭಾರತವನ್ನು ಯಾವಾಗಲೂ ಭಕ್ತಿಯಿಂದ ಕೇಳಿದವನಿಗೆ ಸಂಪತ್ತೂ, ಕೀರ್ತಿಯೂ, ವಿದ್ಯೆಯೂ ಯಾವಾಗಲೂ ಒಂದಾಗಿ ಲಭಿಸುವುವು. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳಲ್ಲಿ ಯಾವುದೊಂದು ವಿಷಯವಾದರೂ, ಈ ಭಾರತದಲ್ಲಿರುವುದೇ ಬೇರೆ ಎಲ್ಲಾ ಗ್ರಂಥಗಳಲ್ಲಿಯೂ ಇರುವುವು. ಈ ಮಹಾಭಾರತದಲ್ಲಿಲ್ಲದುದು ಬೇರೆಲ್ಲಿಯೂ ಇಲ್ಲ. ಜಯವೆಂದು ಪ್ರಸಿದ್ಧವಾದ ಈ ಮಹಾಭಾರತವು ಎಲ್ಲಿ ಓದಲ್ಪಡುವುದೋ, ಅಲ್ಲಿ ಸಂಪತ್ತು, ಕೀರ್ತಿ, ವಿದ್ಯೆ, ಇವೆಲ್ಲ ಉಲ್ಲಾಸದಿಂದ ನರ್ತಿಸುತ್ತಿರುವುವು ಹಿಂದೆ ಇದೇ ಭಾರತಗ್ರಂಥವನ್ನು ವೈಶಂಪಾಯನನಿಂದ ಕೇಳಿದಾಗ, ಜನಮೇಜಯನೇ ಮೊದಲಾದ ರಾಜರೂ, ಆಸ್ತಿಕನೇ ಮೊದಲಾದ ಬ್ರಾಹ್ಮಣರೂ, ಧರ್ಮದತ್ತನೇ ಮುಂತಾದ ವೈಶ್ಯರೂ, ಸೋಮ್ಯವಂಶ್ಯನೇ ಮೊದಲಾದ ಶೂದ್ರರೂ, ಬ್ರಹ್ಮರ್ಷಿಯಾದ ಆತನನ್ನು ಸುವರ್ಣಪೀಠದಲ್ಲಿ ಕುಳ್ಳಿರಿಸಿ, ಲಕ್ಷ, ಹತ್ತುಸಾವಿರ, ನೂರು, ಹತ್ತು, ಈ ಲೆಕ್ಕದಲ್ಲಿ ಸುವರ್ಣನಾಣ್ಯಗಳಿಂದ ಪೂಜಿಸಿದರು. ತಮ್ಮ ಗರ್ಭದಲ್ಲಿ ಮೃತಶಿಶುಗಳೇ ಹುಟ್ಟುತಿದ್ದಾಗ, ಅಂತವರು ಹತ್ತು ನಿಷ್ಕಗಳನ್ನು ದಾನಮಾಡಿ, ಆ ಫಲದಿಂದ ಜೀವತ್ಪುತ್ರರನ್ನು ಪಡೆದಿರುವರು. ಜ್ವರಾದಿ ರೋಗಗಳಿಂದ ಬಾಧೆಪಡುತ್ತಿದ್ದವರು ನೂರು ನಿಷ್ಕಗಳನ್ನು ಕೊಟ್ಟು ಆ ವ್ಯಾಧಿಗಳನ್ನು ಗುಣಪಡಿಸಿಕೊಂಡರು. ಸಂತತಿಯಿಲ್ಲದವರು ಸಾವಿರನಿಷ್ಕಗಳನ್ನು ಕೊಟ್ಟು ಪುತ್ರಸಂತತಿಯನ್ನು ಪಡೆದರು. ಹೀಗೆ ಹಿಂದಿನವರೆಲ್ಲರೂ ಆಯುಸ್ಸನ್ನೂ, ಆರೋಗ್ಯವನ್ನೂ, ಐಶ್ವರ್ಯವನ್ನೂ, ಆಹಾರಸಮೃದ್ಧಿಯನ್ನೂ ಸಂತಾನಗಳನ್ನೂ ಪಡೆದರು. ಚಿನ್ನ, ಬೆಳ್ಳಿ, ರತ್ನಗಳನ್ನಾಗಲಿ, ಸರ್ವಸಾಮಗ್ರಿಗಳಿಂದ ತುಂಬಿ, ನಿಧಿ ನಿಕ್ಷೇಪಗಳೊಡಗೂಡಿ,

ಅಗ್ನಿಬಾಧಾದಿಗಳಿಂದ ಸುರಕ್ಷಿತವಾಗಿರುವಂತೆ ಇಟ್ಟಿಗೆಯ ಗೋಡೆಗಳಿಂದ ಕೂಡಿ, ದೇವರಮನೆ, ಯಜ್ಞಶಾಲೆ, ವ್ಯಾಸಂಗಶಾಲೆ, ಒಳಗಿನ ಮತ್ತು ಹೊರಗಿನ ಪ್ರಾಕಾರಗಳು, ಉಪ್ಪರಿಗಗಳು, ಗೋಶಾಲೆಗಳು, ಇವೆಲ್ಲವನ್ನೂ ಒಳಕೊಂಡಿರುವ ಗೃಹಗಳನ್ನಾಗಲಿ, ಅವೆಲ್ಲವೂ ಸೇರಿದಂತೆಯೋ, ಪ್ರತ್ಯೇಕ ವಾಗಿಯೋ ಸ್ವರ್ಗಾರೋಹಣಪರ್ವವನ್ನು ಕೇಳುವಾಗ ದಾನಮಾಡ ಬೇಕು. ಮೋಕ್ಷಾಪೇಕ್ಷಿಗಳಾಗಿ ದಾನಮಾಡಿದವರಿಗೆ ಪುನರ್ಜನ್ಮವಿಲ್ಲ. ಫಲಾಕಾಂಕ್ಷಿಯಾದವನು ಬ್ರಹ್ಮಕಲ್ಪದವರೆಗೆ ಬ್ರಹ್ಮಗೃಹದಲ್ಲಿ ಸುಖವಾಗಿ ವಾಸಮಾಡುವನು. ಈ ಪುರಾಣದಿಂದಲೇ ವೇದಾಂತಜ್ಞಾನವು ಲಭಿಸು ವುದರಿಂದ ಇದನ್ನು ಪಠಿಸಿ ಹೇಳುವವನೇ ಪರಮಗುರು! ಅಂತವನ ಪೂಜೆ ಯು ಈಶ್ವರಪೂಜೆಗೆ ಸಮಾನವು. ಭಾರತಪಠನಮಾಡಿದರೂ, ಶ್ರವಣ ಮಾಡಿದರೂ, ಈ ಗ್ರಂಥವನ್ನು ಬರೆದರೂ, ಅಂತವರನ್ನು ಸಿದ್ಧರೂ, ಬ್ರಹ್ಮ ರ್ಷಿಗಳೂ ಸಂತೋಷದಿಂದ ಆದರಿಸುವರು. ಮಹಾಭಾರತಪಠನಮಾಡು ವವನನ್ನು ಪೂಜಿಸದವರಿಗೆ ಇತರಸತ್ಕರ್ಮಗಳೆಲ್ಲ ವ್ಯರ್ಥವಾಗುವುವು. ಅವರನ್ನು ದೇವತೆಗಳೂ ಶಪಿಸುವರು. ಜಯವೆಂದು ಹೆಸರುಳ್ಳ ಈ ಇತಿ ಹಾಸವನ್ನು ಜಯಾಪೇಕ್ಷಿಗಳಾದ ರಾಜರೂ, ರಾಜಕುಮಾರರೂ, ಗರ್ಭಿಣೀ ಸ್ತ್ರೀಯರೂ ಅವಶ್ಯವಾಗಿ ಕೇಳಬೇಕು. ಸ್ವರ್ಗವನ್ನು ಅಪೇಕ್ಷಿಸುವವರಿಗೆ ಸ್ವರ್ಗವು ಲಭಿಸುವುದು. ಜಯಾಪೇಕ್ಷಿಗೆ ಜಯವು ಸಿದ್ಧವು. ಗರ್ಭವ ತಿಯು ಸುಪುತ್ರನನ್ನಾಗಲಿ, ಮಹಾಭಾಗ್ಯಶಾಲಿನಿಯಾದ ಪುತ್ರಿಯನ್ನಾಗಲಿ ಸುಖವಾಗಿ ಪಡೆಯುವಳು. ನಿತ್ಯಸಿದ್ಧನೂ, ಮೋಕ್ಷಸ್ವರೂಪಿಯೂ ಆದ ವ್ಯಾಸನು ಈ ಭಾರತಸಂವಿಧಾನವನ್ನು ಧರ್ಮಪ್ರಚಾರಕ್ಕಾಗಿಯೇ ರಚಿ ಸಿದನು. ಆತನು ಚತುರ್ವೇದಸಂಹಿತೆಗಳಿಗಿಂತ ಬೇರೆಯಾಗಿ, ಈ ಮಹಾಭಾರತವೆಂಬ ಅರುವತ್ತುಲಕ್ಷ ಸಂಹಿತೆಗಳನ್ನು ರಚಿಸಿದನು. ಅವು ಗಳಲ್ಲಿ ದೇವಲೋಕದಲ್ಲಿ ಮೂವತ್ತುಲಕ್ಷಗಳೂ, ಪಿತೃಲೋಕದಲ್ಲಿ ಹದಿ ನೈದುಲಕ್ಷಗಳೂ, ಯಕ್ಷಲೋಕದಲ್ಲಿ ಹದಿನಾಲ್ಕುಲಕ್ಷಗಳೂ ಇಡಲ್ಪಟ್ಟು, ಒಂದುಲಕ್ಷ ಸಂಹಿತೆಗಳುಮಾತ್ರ ಈ ಮನುಷ್ಯಲೋಕಕ್ಕೆ ತರಲ್ಪಟ್ಟುವು. ಇದನ್ನು ನಾರದನು ದೇವತೆಗಳಿಗೂ, ಅಸಿತನೆಂಬ ದೇವಲನು ಪಿತೃಗಳಿಗೂ, ಶುಕನು ಯಕ್ಷರಾಕ್ಷಸರಿಗೂ, ವೈಶಂಪಾಯನನು ಮನುಷ್ಯರಿಗೂ ತಿಳಿಸಿ

ದರು. ಓ ಶೌನಕರೇ! ಪುಣ್ಯಕರವೂ, ಸಾರಾರ್ಥವುಳ್ಳ ವೇದಕ್ಕೆ ಸಮಾನವೂ ಆದ ಈ ಇತಿಹಾಸವನ್ನು ಯಾವನು ಬ್ರಾಹ್ಮಣಮುಖದಿಂದ ಕೇಳುವನೋ, ಆತನಿಗೆ ಈ ಲೋಕದಲ್ಲಿ ಎಲ್ಲಾ ಇಷ್ಟಾರ್ಥಗಳೂ ನೆರವೇರಿ, ಉತ್ತಮಕೀರ್ತಿಯು ಲಭಿಸುವುದು. ಅವನು ಉತ್ತಮಸಿದ್ಧಿಯನ್ನು ಪಡೆಯುವನು. ಇದರಲ್ಲಿ ಸಂದೇಹವಿಲ್ಲ. ಪುಣ್ಯಕರವಾದ ಈ ಸಂಹಿತೆಯನ್ನು ತನ್ನ ಪುತ್ರನಾದ ಶುಕನಿಗೆ ಓದಿಸಿದ ವ್ಯಾಸನಲ್ಲಿ ಶ್ರದ್ಧಾಭಕ್ತಿಗಳನ್ನಿಟ್ಟು, ಒಂದು ಶ್ಲೋಕದ ನಾಲ್ಕನೆಯ ಒಂದುಭಾಗವನ್ನಾದರೂ ಓದಿ ಇತರರಿಗೆ ತಿಳಿಸುವವನು, ಭಾರತವೆಲ್ಲವನ್ನೂ ಸಂಪೂರ್ಣವಾಗಿ ಅಧ್ಯಯನಮಾಡಿದ ಪುಣ್ಯವನ್ನೂ, ಉತ್ತಮಸಿದ್ಧಿಯನ್ನೂ ಪಡೆಯುವನು ಅವನೊಬ್ಬನ ಪುಣ್ಯದಿಂದಲೇ ಹಿಂದೆಯೂ, ಇನ್ನು ಮುಂದೆಯೂ ಅವನ ಸಂಸಾರಕ್ಕೆ ಸಂಬಂಧಪಟ್ಟ ಸಾವಿರಾರುಮಂದಿ ತಂದೆತಾಯಿಯರೂ, ನೂರಾರುಮಂದಿ ಪತ್ನೀಪುತ್ರರೂ ಉತ್ತಮಗತಿಯನ್ನು ಪಡೆಯುವರು. ಮೂಢರಾದವರಿಗೆ ದಿನದಿನವೂ ಸಾವಿರಾರು ಸಂತೋಷಕಾರಣಗಳೂ, ನೂರಾರು ಭಯಕಾರಣಗಳೂ ಬರುತ್ತಿರುವುವು ಅವೊಂದೂ ಪಂಡಿತನನ್ನು ಬಾಧಿಸಲಾರವು. ನಾನು ಕೈಗಳನ್ನು ಮೇಲಕ್ಕೆತ್ತಿ ಘಂಟಾಘೋಷವಾಗಿ ಕೂಗಿ ಹೇಳಿದರೂ, ಯಾರೂ ಇದನ್ನು ಕೇಳುವುದಿಲ್ಲ. "*ಧರ್ಮದಿಂದಲೇ ಅರ್ಥವೂ, ಮೋಕ್ಷವೂ ಉಂಟಾಗುವುವು. ಹೀಗಿರುವಾಗಲೂ ಜನರು ಧರ್ಮವನ್ನೇಕೆ ಅನುಷ್ಠಿಸುವುದಿಲ್ಲ? ಕಾಮದಿಂದಾಗಲಿ, ಭಯದಿಂದಾಗಲಿ, ಜೀವರಕ್ಷಣೆಯ ಕಾರಣದಿಂದಲಾಗಲಿ, ಯಾವ ಸಂದರ್ಭದಲ್ಲಿಯೂ ಧರ್ಮವನ್ನುಮಾತ್ರ ಬಿಡಬಾರದು. ಧರ್ಮವು ನಿತ್ಯವಾದುದು. ಸುಖದುಃಖಗಳೆರಡೂ ಅನಿತ್ಯಗಳು. ಜೀವನು ನಿತ್ಯನು ಅದಕ್ಕೆ ಜನ್ಮಕಾರಣವಾದುದು ಅನಿತ್ಯವು" ಎಂಬೀ ಭಾರತಸಾವಿತ್ರಿಯನ್ನು ಯಾವಾತನು ಬೆಳಗಿನಜಾವದಲ್ಲಿ ಎದ್ದು ಚಿಂತಿಸುವನೋ, ಆತನು ಭಾರತವೆಲ್ಲವನ್ನೂ ಓದಿದ ಫಲವನ್ನೂ, ಅದರಿಂದ ಪರಬ್ರಹ್ಮವನ್ನೂ ಪಡೆಯುವನು. ಶಾಂತವಾದ ಸಮುದ್ರವೂ, ಹಿಮಾಚಲವೂ ರತ್ನಗಳಿಗೆ ಪ್ರಸಿದ್ಧನಿಧಿಗಳಾಗಿರುವಂತೆಯೇ, ಈ ಭಾರತವು ಜ್ಞಾನ

---

* ಈ ಮೇಲ್ಕಂಡ ಅನುವಾದವು ಭಾರತದ ಸಾರವನ್ನೆಲ್ಲ ಸಂಗ್ರಹಿಸಿದ ನಾಲ್ಕು ಶ್ಲೋಕಗಳಲ್ಲಿ ಗರ್ಭಿತವಾಗಿದೆ. ಇದನ್ನೇ ಭಾರತಸಾವಿತ್ರಿಯೆಂದು ತಿಳಿಯಬೇಕು.

ಗಳಿಗೆಲ್ಲ ನಿಧಿಯೆನಿಸಿದೆ. ವಿದ್ವಾಂಸನಾದ ಯಾವನು ವ್ಯಾಸರಚಿತವಾದ ಈ (ಐದನೆಯ) ವೇದವನ್ನು ಇತರರಿಗೆ ಹೇಳುವನೋ, ಆತನಿಗೆ ಸೌಭಾಗ್ಯ ಗಳೆಲ್ಲ ಲಭಿಸುವುವು. ದೃಢಚಿತ್ತದಿಂದ ಈ ಭಾರತವೆಂಬ ಆಖ್ಯಾನವನ್ನು ಓದುವವನು ಉತ್ತಮಸಿದ್ಧಿಯನ್ನು ಪಡೆಯುವನು. ಇದರಲ್ಲಿ ಸಂದೇಹವೇ ಇಲ್ಲ ಯಾವಾತನು ವ್ಯಾಸನ ತುಟಿಗಳಿಂದ ಹೊರಟುದೂ, ಮಹಾಮಹಿ ಮೆಯುಳ್ಳುದೂ, ಪವಿತ್ರವೂ, ಪಾಪನಾಶಕವೂ, ಶುಭವೂ ಆದ ಈ ಭಾರತ ವನ್ನು ಇನ್ನೊಬ್ಬರಿಂದ ಕೇಳಿ ತಿಳಿದುಕೊಳ್ಳುವನೋ, ಆತನಿಗೆ ಪುಷ್ಕರಾದಿ ತೀರ್ಥಸ್ನಾನದಿಂದಲೂ ಆಗಬೇಕಾದುದೇನೂ ಇಲ್ಲ. ಸುವರ್ಣಾಲಂಕೃತ ಗಳಾದ ನೂರು ಗೋವುಗಳನ್ನು ಒಳ್ಳೇ ವೇದಶಾಸ್ತ್ರಪಾರಂಗತನಾದ ಬ್ರಾಹ್ಮ ಣನಿಗೆ ದಾನಮಾಡುವುದರಿಂದ ಯಾವ ಫಲವು ಲಭಿಸುವುದೋ, ಆ ಫಲವೇ ಈ ಭಾರತವನ್ನು ಕೇಳುವವನಿಗೆ ಲಭಿಸುವುದು ಆಸ್ತಿಕನು ಶ್ರದ್ಧೆಯಿಂದ ಲೂ, ಸಂತೋಷದಿಂದಲೂ ಈ ಭಾರತವನ್ನು ಕೇಳುವುದರಿಂದ, ತನ್ನ ಮನೋಭೀಷ್ಟಗಳನ್ನೆಲ್ಲ ಪಡೆಯುವನು. ಯಾವ ವಿದ್ವಾಂಸನು ಶುದ್ಧ ನಾಗಿ, ಮನಸ್ಸಿನಲ್ಲಿ ಶ್ರೀಕೃಷ್ಣನನ್ನು ಸ್ಮರಿಸುತ್ತ, ದೃಢಭಕ್ತಿಯನ್ನಿಟ್ಟು, ಪುಣ್ಯಕರವೂ, ಅರ್ಥಗರ್ಭಿತವೂ, ವೇದಸಮಾನವೂ ಆದ ಈ ಇತಿಹಾಸ ವನ್ನು ಬ್ರಾಹ್ಮಣಮುಖದಿಂದ ಎಲ್ಲಾ ವರ್ಣದವರೂ ಕೇಳುವಂತೆ ಓದಿಸು ವನೋ ಆತನಿಗೆ ಸಕಲಪಾಪಗಳೂ ತೊಲಗುವುವು ಆತನು ಶುದ್ಧಾತ್ಮ ನೂ, ಲೋಕಪ್ರಸಿದ್ಧನೂ ಆಗಿ, ಸಕಲ ಭೋಗಗಳನ್ನೂ ಅನುಭವಿಸಿ, ಕೊನೆಗೆ ಆತ್ಯಂತಿಕ ಸುಖವನ್ನು ಪಡೆಯುವನು. ಈ ಮಹಾಭಾರತವನ್ನೆಲ್ಲ ಚೆನ್ನಾಗಿ ತಿಳಿದುಕೊಂಡ ದ್ವಿಜನು, ಸಕಲ ವೇದಗಳ ಅರ್ಥವನ್ನೂ ತಿಳಿದವ ನಾಗಿ, ಎಲ್ಲರಿಗೂ ಪೂಜಾರ್ಹನೂ, ಗೌರವಾರ್ಹನೂ ಆಗುವನು' ಎಂದನು.

ಇದು ಐದನೆಯ ಅಧ್ಯಾಯವು.

## ಇಲ್ಲಿಗೆ ಸ್ವರ್ಗಾರೋಹಣಪರ್ವವು ಮುಗಿದುದು.

# ಇಲ್ಲಿಗೆ ಶ್ರೀ ಮಹಾಭಾರತವು ಸಂಪೂರ್ಣವು.

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಶ್ರೀ　ಶ್ರೀ　ಶ್ರೀ

ಶ್ರೀಮದ್ದೇವಶಿಖಾಮಣೀ ತಿರುಮಲಾ
ಚಾರ್ಯಂ ನೆಗಳ್ದಂ ಗುಣೋ
ದ್ದಾಮಂ ಕೋಮಲಕಾವ್ಯಬಂಧಚತುರಂ
ಯದ್ವದ್ರಿನಾಥಾಶ್ರಯಂ
ಆ ಮಾಚಾರ್ಯನ ಸೂನು ತದ್ವರಕೃಪಾ
ಸಂಪ್ರಾಪ್ತವಿದ್ಯಂ ಬುಧ
ಸ್ತೋಮಂ ಮೆಚ್ಚುವಪೋಲ್ ನೆಗಳ್ದನಳಸಿಂ
ಗ್ರಾಚಾರ್ಯನೀ ಗ್ರಂಥಮಂ ||

ಲಾಭಸ್ತೇಷಾಂ ಜಯಸ್ತೇಷಾಂ
ಕುತಸ್ತೇಷಾಂ ಪರಾಭವಃ
ಯೇಷಾಮಿಂದೀವರಶ್ಯಾಮೋ
ಹೃದಯೇ ಸುಪ್ರತಿಷ್ಠಿತಃ ||

ಸ್ವಸ್ತಿಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ
ಗೋಬ್ರಾಹ್ಮಣೇಭ್ಯಶ್ಶುಭಮಸ್ತು ನಿತ್ಯಂ
ಲೋಕಾಸ್ಸಮಸ್ತಾಸ್ಸುಖಿನೋ ಭವಂತು ||

# ಶ್ರೀ ಮಹಾಭಾರತ ಶ್ರವಣವಿಧಿ.

---

## ಈ ಮುಂದಿನ ಅಧ್ಯಾಯವು ಭಾರತಕ್ಕೆ ಸೇರಿದುದಲ್ಲ. ಹರಿವಂಶದ ಕೊನೆಯಲ್ಲಿ ಈ ಅಧ್ಯಾಯವಿರುವುದರಿಂದ ಅದನ್ನು ಇಲ್ಲಿ ಕೊಟ್ಟಿದೆ.

ಜನಮೇಜಯನು ' ಓ ಮಹಾತ್ಮಾ! ವಿದ್ವಾಂಸರು ಯಾವ ವಿಧಿಯಿಂದ ಭಾರತವನ್ನು ಕೇಳಬೇಕು? ಹಾಗೆ ಕೇಳುವುದರಿಂದ ಫಲವೇನು? ಇದನ್ನು ಪಾರಾಯಣಮಾಡುವ ಕಾಲಗಳಲ್ಲಿ ಯಾವ ದೇವತೆಗಳನ್ನು ಪೂಜಿಸಬೇಕು? ಒಂದೊಂದು ಪರ್ವವೂ ಮುಗಿದಮೇಲೆ ಯಾವಯಾವ ದಾನಗಳನ್ನು ಮಾಡಬೇಕು? ಇದನ್ನು ಹೇಳುವವನು ಎಂತವನಾಗಿರಬೇಕು? ಇವೆಲ್ಲವನ್ನೂ ನನಗೆ ತಿಳಿಸು ' ಎಂದನು.

ಆಗ ವೈಶಂಪಾಯನನು ' ಓ ರಾಜಾ! ಭಾರತಶ್ರವಣವಿಧಿಯನ್ನೂ, ಅದರ ಫಲವನ್ನೂ ತಿಳಿಸುವೆನು ಕೇಳು. ದೇವತೆಗಳು ಲೀಲೆಗಾಗಿ ಸ್ವರ್ಗದಿಂದ ಭೂಮಿಯಲ್ಲಿ ಅವತರಿಸಿ, ತಮ್ಮ ಕಾರ್ಯವನ್ನು ಮುಗಿಸಿಕೊಂಡು, ತಿರುಗಿ ಸ್ವರ್ಗಕ್ಕೆ ಹೋಗಿಸೇರಿದರು. ಋಷಿಗಳೂ, ದೇವತೆಗಳೂ ಭೂಮಿಯಲ್ಲಿ ಹುಟ್ಟಿದ ಆ ವಿಷಯವನ್ನೇ ಇಲ್ಲಿ ಹೇಳುವುದರಿಂದ ನೀನು ಸಾವಧಾನವಾಗಿ ಕೇಳು. ರುದ್ರರು, ಸಾಧ್ಯರು, ವಿಶ್ವೇದೇವತೆಗಳು, ದ್ವಾದಶಾದಿತ್ಯರು, ಅಶ್ವಿನೀದೇವತೆಗಳು, ಲೋಕಪಾಲಕರು, ಮಹರ್ಷಿಗಳು, ಗುಹ್ಯಕರು, ಗಂಧರ್ವರು, ನಾಗರು, ವಿದ್ಯಾಧರರು, ಸಿದ್ಧರು, ಧರ್ಮದೇವತೆ, ಸ್ವಯಂಭು, ಕಾತ್ಯಾಯನ ಮುನಿ, ಪರ್ವತಗಳು, ಸಮುದ್ರಗಳು, ಅಪ್ಸರಸ್ಸುಗಳು, ಗ್ರಹಗಳು, ಸಂವತ್ಸರಗಳು, ಅಯನಗಳು, ಋತುಗಳು, ಚರಾಚರಸ್ವರೂಪವಾದ ಜಗತ್ತು, ಎಲ್ಲಾ ದೇವಾಸುರರು, ಇವರೆಲ್ಲರೂ ಒಂದಾಗಿ ಸೇರಿದುದನ್ನು ಈ ಭಾರತದಲ್ಲಿ ಕಾಣಬಹುದು. ಈ ಭಾರತಮೂಲಕವಾಗಿ ಅವರ ಪ್ರತಿಷ್ಠೆಗಳನ್ನು ಕೇಳಿ, ಅವರ ಹೆಸರುಗಳನ್ನೂ, ಕೃತ್ಯಗಳನ್ನೂ ಕೀರ್ತನಮಾಡಿದ ಮನುಷ್ಯನು, ಮಹಾಪಾಪಗಳನ್ನು ಮಾಡಿದ್ದರೂ, ಅದರಿಂದ ವಿಮೋ

ಚನೆಯನ್ನು ಪಡೆಯುವನೆಂಬುದರಲ್ಲಿ ಸಂದೇಹವೇನಿದೆ ? ಮನಸ್ಸನ್ನು ನಿಗ್ರಹಿಸಿ ಶುದ್ಧನಾಗಿ, ಈ ಇತಿಹಾಸವನ್ನು ಯಥಾವತ್ತಾಗಿ ಶಾಸ್ತ್ರವಿಧಿ ಯಿಂದ ಕೇಳಿ ಮುಗಿಸಬೇಕು. ಓ ಭರತಶ್ರೇಷ್ಠಾ! ಭಾರತವನ್ನು ಕೇಳಿ ದವನು ಅದನ್ನು ಮುಗಿಸಿದಮೇಲೆ, ಭಾರತದಲ್ಲ ಹೇಳಲ್ಪಟ್ಟ ಭೀಷ್ಮಾದಿ ಗಳನ್ನುದ್ದೇಶಿಸಿ, ಶಕ್ತಿಗನುಸಾರವಾಗಿ ಭಕ್ತಿಯೊಡನೆ ಬ್ರಾಹ್ಮಣರಿಗೆ ಮಹಾ ದಾನಗಳನ್ನು ಮಾಡಬೇಕು ಹಲವು ಬಗೆಯ ರತ್ನಗಳು, ಕರೆಯುವ ಕಂಚಿನಪಾತ್ರೆಗಳೊಡನೆ ಹಸುಗಳು, ಸಕಲ ಭೋಗವಸ್ತುಗಳೊಡನೆ ಅಲಂ ಕೃತೆಯರಾದ ಕನ್ಯೆಯರು, ನಾನಾಬಗೆಯ ವಿಮಾನಗಳು, ವಿಚಿತ್ರ ಗೃಹಗಳು, ಹೊಲಗದ್ದೆಗಳು, ವಸ್ತ್ರಗಳು, ಸುವರ್ಣಗಳು, ವಾಹನಗಳು, ಕುದುರೆಗಳು, ಆನೆಗಳು, ಶಯನಾಸನಗಳು, ಪಲ್ಲಕ್ಕಿಗಳು, ಅಲಂಕರಿಸ ಲ್ಪಟ್ಟ ರಥಗಳು, ಇವುಗಳೆಲ್ಲವೂ ಆ ಕಾಲದಲ್ಲಿ ದಾನಯೋಗ್ಯಗಳೇ! ಗೃಹದಲ್ಲಿ ಯಾವಯಾವ ಶ್ರೇಷ್ಠವಸ್ತುಗಳಿರುವುವೋ, ಯಾವಯಾವ ಉತ್ತಮ ಧನಗಳಿರುವುವೋ ಅವೆಲ್ಲವೂ ದಾನಯೋಗ್ಯಗಳೇ! ಅಷ್ಟೇಕೆ? ತನ್ನ ಪತ್ನೀ ಪುತ್ರರೊಡನೆ ತಾನೂ ಬ್ರಾಹ್ಮಣಸೇವೆಗಾಗಿ ಸಿದ್ಧನಾಗಿರ ಬೇಕು ಭಾರತಶ್ರವಣದಲ್ಲಿ ಅಪೇಕ್ಷೆಯುಳ್ಳವನು ಸುಹೃದಯನೂ, ಸಂತೋ ಷಚಿತ್ತನೂ, ಸತ್ಯಸನ್ಮಾರ್ಗಗಳಲ್ಲಿ ಆಶೆಯುಳ್ಳವನೂ ಆಗಿರಬೇಕು ಇಂದ್ರಿ ಯಗಳನ್ನು ನಿಗ್ರಹಿಸಿ, ಶುದ್ಧಚಿತ್ತನಾಗಿ, ಶ್ರದ್ಧಾಳುವಾಗಿ ಕ್ರೋಧವನ್ನು ಜಯಿಸಿರಬೇಕು. ಅಂತವನು ಕಡೆಯವರೆಗೂ ಈ ಭಾರತವನ್ನು ಓದಿ ಮುಗಿಸಿದರೆ ಪಾಪವಿಮುಕ್ತನಾಗಿ ಸಿದ್ಧಿಯನ್ನು ಪಡೆಯುವನು

ಭಾರತಕಥೆಯನ್ನು ಹೇಳತಕ್ಕವನೂ ಶುದ್ಧನಾಗಿ, ಒಳ್ಳೇ ಶೀಲಸ್ವ ಭಾವವುಳ್ಳವನಾಗಿರಬೇಕು. ಆಚಾರಶೀಲನಾಗಿ, ಧೌತವಸ್ತ್ರಧಾರಿಯಾಗಿ, ಜಿತೇಂದ್ರಿಯನಾಗಿರಬೇಕು. ಷೋಡಶ ಸಂಸ್ಕಾರಗಳನ್ನು ನಡೆಸಿಕೊಂಡವ ನಾಗಿ, ಸರ್ವಶಾಸ್ತ್ರಗಳನ್ನೂ ಬಲ್ಲವನಾಗಿರಬೇಕು. ರೂಪವಂತನೂ, ಶ್ರದ್ಧಾ ಳುವೂ, ಅಸೂಯಾರಹಿತನೂ, ಸುಲಕ್ಷಣಸಂಪನ್ನನೂ, ಸತ್ಯವಾದಿಯೂ ಆಗಿರಬೇಕು. ದಾನಮಾನಾದಿಗಳಿಂದ ಸತ್ಕೃತನಾದ ಅಂತಹ ವಿದ್ವಾಂ ಸನೇ ಭಾರತವನ್ನು ಇತರರಿಗೆ ಹೇಳುವುದಕ್ಕೆ ಯೋಗ್ಯನು. ಭಾರತವನ್ನು

ಹೇಳತಕ್ಕವನು ನಿಶ್ಚಿಂತನಾಗಿ, ಮನಸ್ಸನ್ನು ನಿಗ್ರಹಿಸಿ, ಸುಖಾಸೀನನಾಗಿ ಅತಿವಿಳಂಬವೂ ಇಲ್ಲದೆ, ಆತುರವೂ ಇಲ್ಲದೆ, ಅತ್ಯಾಯಾಸಕ್ಕೂ ಎಡೆಗೊಡದೆ ಸಾವಧಾನವಾಗಿ ಪಠಿಸಬೇಕು. ಪಠನಕಾಲದಲ್ಲಿ ಅಕ್ಷರಗಳೂ, ಸ್ವರಗಳೂ ಕಲೆಯದೆ ಸ್ಪಷ್ಟವಾಗಿರಬೇಕು ಸ್ವರಭಾವಗಳಿಗೆ ಅನುಸಾರವಾಗಿ ಪಠಿಸಬೇಕು. ಅರುವತ್ತುಮೂರು ವರ್ಣಗಳೂ, ಎಂಟು ವರ್ಣೋತ್ಪತ್ತಿಸ್ಥಾನಗಳೂ ಚೆನ್ನಾಗಿ ತೋರಬೇಕು. ಭಾರತಪಠನಾರಂಭದಲ್ಲಿ ಶ್ರೀಮನ್ನಾರಾಯಣನನ್ನೂ, ನರೋತ್ತಮನಾದ ನರನನ್ನೂ, ಸರಸ್ವತೀದೇವಿಯನ್ನೂ, ವ್ಯಾಸನನ್ನೂ ನಮಸ್ಕರಿಸಿ, ಜಯವೆಂಬ ಈ ಭಾರತವನ್ನು ಹೇಳಬೇಕು. ಕೇಳುವವನು ಕೂಡ ನೀತಿಪರನೂ ಶುದ್ಧನೂ ಆಗಿದ್ದು, ಮೇಲೆ ಹೇಳಿದ ಲಕ್ಷಣಗಳುಳ್ಳ ವಿದ್ವಾಂಸನಿಂದ ಕೇಳಿದಾಗಲೇ ಒಳ್ಳೇ ಫಲವನ್ನು ಹೊಂದುವನು ಒಂದಾವರ್ತಿ ಭಾರತವನ್ನೆಲ್ಲ ಕೇಳಿ ಮುಗಿಸಿದಮೇಲೆ, ಶಕ್ತ್ಯನುಸಾರವಾಗಿ ಬ್ರಾಹ್ಮಣರನ್ನು ತೃಪ್ತಿಪಡಿಸಿದವನು ಅಗ್ನಿಷ್ಟೋಮವೆಂಬ ಯಾಗವನ್ನು ಮಾಡಿದ ಫಲವನ್ನು ಪಡೆಯುವನು. ಅಂತವನು ಅಪ್ಸರಸ್ಸುಗಳೊಡಗೂಡಿದ ದಿವ್ಯವಿಮಾನವನ್ನೇರಿ ಸಂತೋಷದಿಂದ ದೇವತೆಗಳೊಡನೆ ಸ್ವರ್ಗದಲ್ಲಿ ಸುಖಿಸುವನು. ಎರಡು ಸಾರಿ ಇದನ್ನು ಮುಗಿಸಿದವನು ಅತಿರಾತ್ರವೆಂಬ ಯಾಗದ ಫಲವನ್ನು ಪಡೆದು, ಸಕಲರತ್ನಖಚಿತವಾದ ದಿವ್ಯವಿಮಾನವನ್ನೇರಿ (ದೇವಲೋಕಕ್ಕೆ ಹೋಗಿ) ದಿವ್ಯವಸ್ತ್ರಮಾಲ್ಯಾಭರಣಗಳಿಂದಲಂಕೃತನಾಗಿ, ಯಾವಾಗಲೂ ದೇವತೆಗಳಿಂದ ಪೂಜಿಸಲ್ಪಡುವನು. ಮೂರನೆಯ ಸಾರಿ ಈ ಭಾರತವನ್ನು ಓದಿ ಮುಗಿಸಿದವನು, ದ್ವಾದಶಾಹವೆಂಬ ಯಾಗದ ಫಲವನ್ನು ಪಡೆದು, ದೇವಸಮಾನನಾಗಿ ಹತ್ತುಸಾವಿರವರ್ಷಗಳು ದೇವಲೋಕದಲ್ಲಿ ವಾಸಿಸುವನು. ನಾಲ್ಕು ಸಾರಿ ಓದುವುದರಿಂದ, ವಾಜಪೇಯದ ಫಲವನ್ನೂ, ಐದುಸಾರಿ ಇದನ್ನು ಮುಗಿಸಿದವನು ಆ ವಾಜಪೇಯಕ್ಕೆ ಎರಡಷ್ಟು ಫಲವನ್ನೂ ಪಡೆದು, ಉದಿಸಿದ ಸೂರ್ಯನಂತೆಯೂ, ಅಗ್ನಿಯಂತೆಯೂ ಜ್ವಲಿಸುವ ವಿಮಾನದಲ್ಲಿ ದೇವತೆಗಳೊಡನೆ ಏರಿ ಕುಳಿತು, ಸ್ವರ್ಗಕ್ಕೆ ಹೋಗಿ, ಅಲ್ಲಿ ಹತ್ತುಸಾವಿರ ವರ್ಷಗಳವರೆಗೆ ಇಂದ್ರಗೃಹದಲ್ಲಿ ವಾಸಮಾಡುವನು. ಆರನೆಯಸಾರಿ ಈ ಭಾರತವನ್ನು ಕೇಳಿದವನು ಮೇಲೆ ಹೇಳಿದುದಕ್ಕೆ ದ್ವಿಗುಣವಾದ ಫಲ

ವನ್ನೂ, ಏಳನೆಯ ಆವರ್ತಿ ಕೇಳಿದವನು ಅದಕ್ಕೆ ತ್ರಿಗುಣವಾದ ಫಲವನ್ನೂ ಹೊಂದುವನು. ಅಂತವರೆಲ್ಲ ಕೈಲಾಸಶಿಖರದಂತೆ ಉನ್ನತವಾಗಿಯೂ, ವೈಡೂರ್ಯಮಯವಾದ ಉನ್ನತಾಸನಗಳಿಂದ ಕೂಡಿದುದಾಗಿಯೂ, ಹವಳಗಳಿಂದ ಅಲಂಕೃತವಾಗಿಯೂ, ಅಪ್ಸರಸ್ತ್ರೀಯರಿಂದ ಕೂಡಿ ಕಾಮುಗಮನವುಳ್ಳದಾಗಿಯೂ ಇರುವ ವಿಮಾನಗಳನ್ನೇರಿ, ಎರಡನೆಯ ಸೂರ್ಯನಂತೆ ಎಲ್ಲಾ ಲೋಕಗಳಲ್ಲಿಯೂ ಸಂಚರಿಸಬಲ್ಲರು ಎಂಟನೆಯ ಸಾರಿ ಇದನ್ನು ಕೇಳಿ ಪೂರ್ತಿಮಾಡಿದವನು, ರಾಜಸೂಯಯಾಗದ ಫಲವನ್ನು ಪಡೆದು, ಚಂದ್ರನಂತೆ ಪ್ರಕಾಶಿಸುವ ವಾಯುವೇಗವುಳ್ಳ ಕುದುರೆಗಳಮೇಲೆ ಹೂಡಿದ ವಿಮಾನವನ್ನೇರಿ, ಸರ್ವಾಭರಣಭೂಷಿತರಾದ ಮತ್ತು ಚಂದ್ರಕಾಂತಿಗಿಂತಲೂ ಅಧಿಕಕಾಂತಿವಿಶಿಷ್ಟವಾದ ಮುಖವುಳ್ಳ ಉತ್ತಮಸ್ತ್ರೀಯರ ನಡುವೆ ಸುಖಸುಪ್ತನಾಗಿ ಎಚ್ಚರಗೊಳ್ಳುವನು. ಒಂಭತ್ತನೆಯ ಆವರ್ತಿ ಭಾರತವನ್ನು ಪೂರ್ತಿಮಾಡಿದವನು ಅಶ್ವಮೇಧಯಾಗದ ಫಲವನ್ನು ಪಡೆದು, ಸ್ವರ್ಣಸ್ತಂಭಗಳಿಂದಲೂ, ವೈಡೂರ್ಯವೇದಿಕೆಗಳಿಂದಲೂ, ಚಿನ್ನದ ಗವಾಕ್ಷಗಳಿಂದಲೂಕೂಡಿ ಅಪ್ಸರಸ್ಸುಗಳ ಸಮೂಹಗಳಿಂದಲೂ, ಗಂಧರ್ವಚಾರಣರಿಂದಲೂ ಸೇವಿಸಲ್ಪಟ್ಟ ವಿಮಾನವನ್ನೇರಿ ದಿವ್ಯಕಾಂತಿಯಿಂದೊಪ್ಪುತ್ತ, ದಿವ್ಯಮಾಲೆಗಳನ್ನೂ, ದಿವ್ಯವಸ್ತ್ರಗಳನ್ನೂ, ದಿವ್ಯಚಂದನವನ್ನೂ ಧರಿಸಿ, ಸ್ವರ್ಗದಲ್ಲಿ ತಾನೂ ಒಬ್ಬ ದೇವತೆಯಂತೆ ದೇವತೆಗಳ ಸಮೂಹದಲ್ಲಿ ಸಂತೋಷದಿಂದಿರುವನು. ಹತ್ತುಸಾರಿ ಈ ಭಾರತವನ್ನು ಪೂರ್ತಿಮಾಡಿ ಬ್ರಾಹ್ಮಣರನ್ನು ತೃಪ್ತಿಗೊಳಿಸಿದವನು, ಕಿರುಗೆಜ್ಜೆಗಳ ಧ್ವನಿಗಳಿಂದಲೂ, ಸುವರ್ಣಧ್ವಜಪತಾಕೆಗಳಿಂದಲೂ, ರತ್ನಪೀಠಗಳಿಂದಲೂ, ವೈಡೂರ್ಯದ ತೋರಣಗಳಿಂದಲೂ, ಸುವರ್ಣಮಯವಾದ ಹಲವು ಜಾಲರಿಗಳಿಂದಲೂ, ಹವಳದ ಲೋವೆಗಳಿಂದಲೂ ಶೋಭಿತವಾಗಿ, ಗಾನನಿಪುಣರಾದ ಗಂಧರ್ವಾಪ್ಸರಸ್ಸುಗಳಿಂದ ತುಂಬಿದ ವಿಮಾನದಲ್ಲಿ ಸುಖವಾಗಿ ಕುಳಿತು, ಜಾಜ್ವಲ್ಯಮಾನವಾದ ಕಿರೀಟ ಕುಂಡಲ ಗಂಧಮಾಲ್ಯಾದಿಗಳಿಂದಲಂಕೃತನಾಗಿ, ಸಕಲ ಭೋಗಗಳನ್ನನುಭವಿಸುತ್ತ ಎಲ್ಲಾ ದೇವಲೋಕಗಳಲ್ಲಿಯೂ ಸಂಚರಿಸುವನು. ಹೀಗೆ ಹಲವುವರ್ಷಗಳು ಸ್ವರ್ಗದಲ್ಲಿದ್ದು, ಆಮೇಲೆ ಗಂಧರ್ವರೊಡಗೂಡಿ ಇಪ್ಪತ್ತೊಂದುಸಾವಿರವರ್ಷಗಳು ದೇವೇಂ

ದ್ರನಗರದಲ್ಲಿ ಆತನೊಡನೆ ಸೇರಿ ಸಂತೋಷದಿಂದಿರುವನು. ಮತ್ತು ದಿವ್ಯ ವಿಮಾನದಲ್ಲಿ ದೇವಕನ್ಯೆಯರೊಡನೆ ಕುಳಿತು ದೇವತೆಗಳಂತೆಯೇ ಹಲವು ಲೋಕಗಳಲ್ಲಿ ಸಂಚರಿಸುವನು. ಆಮೇಲೆ ಆತನು ಕ್ರಮವಾಗಿ ಸೂರ್ಯ ಗೃಹ, ಚಂದ್ರಗೃಹ, ಶಿವಗೃಹಗಳಲ್ಲಿದ್ದು, ಕಡೆಗೆ ವಿಷ್ಣುಲೋಕಕ್ಕೆ ಹೋ ಗುವನು. ಭಾರತಶ್ರವಣದಲ್ಲಿ ಮುಖ್ಯವಾಗಿ ಶ್ರದ್ಧೆಯೇ ಪ್ರಧಾನವೆಂದು ನನ್ನ ಗುರುವು ತಿಳಿಸಿರುವನು. ಈ ಭಾರತವನ್ನು ಹೇಳುವವನಿಗೆ ಎಲ್ಲಾ ಅಭೀಷ್ಟವಸ್ತುಗಳನ್ನಿತ್ತು ಸಂತೋಷಗೊಳಿಸಬೇಕು. ಗಜರಥತುರಗಗಳು, ವಿಮಾನಗಳು, ವಾಹನಗಳು, ತೋಳ್ಬಳೆಗಳು, ಕುಂಡಲಗಳು, ಪವಿತ್ರವಾದ ಯಜ್ಞೋಪವೀತಗಳು, ವಿಚಿತ್ರವಸ್ತ್ರಗಳು, ದಿವ್ಯಗಂಧಗಳು, ಇವುಗಳ ನ್ನೆಲ್ಲ ಯಥೇಷ್ಟವಾಗಿ ಕೊಟ್ಟು ಸತ್ಕರಿಸಬೇಕು. ಆತನನ್ನು ಪ್ರತ್ಯಕ್ಷ ದೈವ ದಂತೆ ಭಾವಿಸಿ ಪೂಜಿಸಬೇಕು. ಹೀಗೆ ಮಾಡುವವನು ವಿಷ್ಣುಲೋಕ ವನ್ನು ಪಡೆಯುವನು. ಅಲ್ಲದೆ ಭಾರತವನ್ನು ಓದಿಸುವಾಗ, ಒಂದೊಂದು ಪರ್ವದಲ್ಲಿಯೂ, ಬ್ರಾಹ್ಮಣರಿಗೆ ಮಾಡಬೇಕಾದ ದಾನಕ್ರಮಗಳನ್ನೆಲ್ಲ ತಿಳಿ ಸುವೆನು ಕೇಳು. ಬ್ರಾಹ್ಮಣನ ಕುಲ, ಗೋತ್ರ, ಜಾತಿ, ದೇಶ, ಸತ್ಯ, ಮಹಿಮೆ ಧರ್ಮ, ವೃತ್ತಿ, ಇವನ್ನೆಲ್ಲ ತಿಳಿದುಕೊಂಡು, ದೇಶವನ್ನಾಳತಕ್ಕ ರಾಜರಿಗೆ ಸ್ವಸ್ತಿವಾಚನವನ್ನು ಮಾಡಿಸಿ, ಆಮೇಲೆ ಕಾರ್ಯವನ್ನು ಪ್ರಾರಂಭಿಸ ಬೇಕು. ಪ್ರತಿಪರ್ವಗಳ ಸಮಾಪ್ತಿಯಲ್ಲಿ, ತನ್ನ ಶಕ್ತಿಗನುಸಾರವಾಗಿ ಬ್ರಾಹ್ಮಣರನ್ನು ಪೂಜಿಸಬೇಕು. ಆದಿಪರ್ವದಲ್ಲಿ ಪುರಾಣವನ್ನು ಹೇಳುವ ವನಿಗೆ ಗಂಧವಸ್ತ್ರಗಳೊಡನೆ ಉತ್ತಮವಾದ ಜೇನನ್ನೂ, ಪಾಯಸವನ್ನೂ ಭೋಜನಮಾಡಿಸಬೇಕು. ಇತರಬ್ರಾಹ್ಮಣರನ್ನೂ ಹಾಗೆಯೇ ಆದರಿಸ ಬೇಕು. ಆಸ್ತೀಕಪರ್ವದಲ್ಲಿ ಗಡ್ಡೆಗೆಣಸುಗಳು, ಜೇನು, ತುಪ್ಪ, ಇವುಗ ಳೊಡನೆ ಪಾಯಸಾನ್ನವನ್ನೂ, ಗುಡಾನ್ನವನ್ನೂ ಭೋಜನಮಾಡಿಸಬೇಕು. ಸಭಾಪರ್ವದಲ್ಲಿ ದಿವ್ಯರಸವುಳ್ಳ ಭಕ್ಷ್ಯಗಳೊಡನೆಯೂ, ಮೋದಕಗಳೊಡ ನೆಯೂ ಕೂಡಿದ ಅನ್ನದಿಂದ ಬ್ರಾಹ್ಮಣರಿಗೆ ಸಂತರ್ಪಣೆಮಾಡಿಸಬೇಕು. ಅರಣ್ಯಪರ್ವದಲ್ಲಿ ಬ್ರಾಹ್ಮಣೋತ್ತಮರನ್ನು ಗಡ್ಡೆಗೆಣಸುಗಳಿಂದ ತೃಪ್ತಿಪ ಡಿಸಬೇಕು. ಅರಣಿಪರ್ವದಲ್ಲಿ ಜಲಪೂರ್ಣಕಲಶಗಳನ್ನು ದಾನಮಾಡ ಬೇಕು ಮತ್ತು ಅವರವರಿಗೆ ಪ್ರಿಯವೂ, ಉತ್ತಮವೂ ಆದ ಕಂದಮೂಲಾ

ದಿಗಳೊಡನೆ ಅಪೇಕ್ಷಿತವಾದ ಎಲ್ಲಾ ಬಗೆಯ ಅನ್ನಗಳನ್ನೂ ಕೊಡಬೇಕು. ವಿರಾಟಪರ್ವದಲ್ಲಿ ನಾನಾಬಗೆಯ ವಸ್ತ್ರಗಳನ್ನು ದಾನಮಾಡಬೇಕು. ಉದ್ಯೋಗಪರ್ವದಲ್ಲಿ ಬ್ರಾಹ್ಮಣರನ್ನು ಗಂಧಪುಷ್ಪಗಳಿಂದಲಂಕರಿಸಿ, ಒಳ್ಳೇ ಸಂತರ್ಪಣೆಯನ್ನು ಮಾಡಿಸಬೇಕು. ಹಾಗೆಯೇ ಭೀಷ್ಮಪರ್ವದಲ್ಲಿ ಉತ್ತಮವಾಹನವನ್ನು ದಾನಮಾಡಿ, ಷಡ್ರಸಭರಿತವಾದ, ಮತ್ತು ಚೆನ್ನಾಗಿ ಸಂಸ್ಕರಿಸಲ್ಪಟ್ಟ ಅನ್ನವನ್ನು ಬಡಿಸಬೇಕು. ದ್ರೋಣಪರ್ವದಲ್ಲಿ ಬ್ರಾಹ್ಮಣರಿಗೆ ಉತ್ತಮಭೋಜನಗಳನ್ನೂ, ಬಿಲ್ಲುಬಾಣಗಳನ್ನೂ, ಶ್ರೇಷ್ಠವಾದ ಆಯುಧಗಳನ್ನೂ ದಾನಮಾಡಬೇಕು. ಕರ್ಣಪರ್ವದಲ್ಲಿ ರುಚಿಕರವಾದ ಪರಮಾನ್ನಗಳಿಂದ ಬ್ರಾಹ್ಮಣರಿಗೆ ಸಂತರ್ಪಣೆಮಾಡಿಸಬೇಕು ಓ ರಾಜೇಂದ್ರಾ! ಶಲ್ಯಪರ್ವದಲ್ಲಿ ಉತ್ತಮವಾದ ಭಕ್ಷ್ಯಗಳು, ಶರ್ಕರಾನ್ನಗಳು, ಅಪೂಪಗಳು, ಇವುಗಳಿಂದ ಸಮಾರಾಧನೆಯನ್ನು ಮಾಡಿಸಬೇಕು. ಗದಾಪರ್ವದಲ್ಲಿ ಮುದ್ಗಾನ್ನವನ್ನು ಕೊಡಬೇಕು ಸ್ತ್ರೀಪರ್ವದಲ್ಲ ಬ್ರಾಹ್ಮಣೋತ್ತಮರನ್ನು ರತ್ನಗಳಿಂದ ತೃಪ್ತಿಪಡಿಸಬೇಕು ಐಷೀಕಪರ್ವದ ಪ್ರಾರಂಭದಲ್ಲಿ ಘೃತಮಿಶ್ರವಾಗಿ, ಗುಣವಿಶಿಷ್ಟವಾಗಿ, ಚೆನ್ನಾಗಿ ಸಂಸ್ಕರಿಸಲ್ಪಟ್ಟ ಅನ್ನಗಳನ್ನು ಬಡಿಸಬೇಕು. ಶಾಂತಿಪರ್ವದಲ್ಲಿ ಬ್ರಾಹ್ಮಣರಿಗೆ ಮಹಾಸಂತರ್ಪಣೆಮಾಡಿಸಬೇಕು ಅಶ್ವಮೇಧಪರ್ವದಲ್ಲಿಯೂ, ಆಶ್ರಮವಾಸಿಕಪರ್ವದಲ್ಲಿಯೂ ಹಾಗೆಯೇ ಬ್ರಾಹ್ಮಣರಿಗೆ ತೃಪ್ತಿಕರವಾದ ಸಂತರ್ಪಣೆಮಾಡಿಸಬೇಕು. ಮೌಸಲಪರ್ವದಲ್ಲಿ ಸಕಲಗುಣವಿಶಿಷ್ಟಗಳಾದ ಗಂಧಮಾಲ್ಯಗಳನ್ನೂ, ಮಹಾಪ್ರಸ್ಥಾನಿಕದಲ್ಲಿ ರುಚಿಕರವಾದ ಅನ್ನಗಳನ್ನೂ ಕೊಡಬೇಕು. ಸ್ವರ್ಗಾರೋಹಣಪರ್ವದಲ್ಲಿಯೂ ಬ್ರಾಹ್ಮಣಭೋಜನಮಾಡಿಸಬೇಕು. ಹರಿವಂಶವು ಮುಗಿದೊಡನೆಯೇ ಬ್ರಾಹ್ಮಣರಿಗೆ ಸುವರ್ಣನಾಣ್ಯದ ದಕ್ಷಿಣೆಯೊಡನೆ ಗೋದಾನಮಾಡಬೇಕು. ದರಿದ್ರನಾಗಿದ್ದರೂ ನಿಷ್ಕಾರ್ಧವನ್ನಾದರೂ ದಕ್ಷಿಣೆಯಾಗಿ ಕೊಡಬೇಕು ಒಂದೊಂದು ಪರ್ವವು ಮುಗಿದೊಡನೆ ಪುರಾಣಹೇಳುವವನಿಗೆ ಸುವರ್ಣಾಲಂಕೃತವಾದ ಪುಸ್ತಕವನ್ನು ದಾನಮಾಡಬೇಕು. ಓ ಭರತಶ್ರೇಷ್ಠಾ! ಹರಿವಂಶಪರ್ವವು ಪೂರ್ತಿಯಾಗುವವರೆಗೂ ವಾಚಕನಿಗೆ ಪಾಯಸಾನ್ನವನ್ನಿಕ್ಕುತ್ತಿರಬೇಕು. ಪಠನಮಾಡಿದ ವಿದ್ವಾಂಸನು ಪರಿಶುದ್ಧನಾಗಿದ್ದು, ಎಲ್ಲಾ ಸಂಹಿತೆಗಳನ್ನೂ

ಪೂರ್ತಿಮಾಡಿದಮೇಲೆ, ಅವುಗಳನ್ನು ಪಟ್ಟೆಯ ವಸ್ತ್ರಗಳಿಂದ ಮುಚ್ಚಿ ಪವಿತ್ರವಾದ ಸ್ಥಳದಲ್ಲಿಡಬೇಕು ಧೌತವಸ್ತ್ರವನ್ನುಟ್ಟು, ಶುಚಿಯಾಗಿ, ಗಂಧಮಾಲ್ಯಗಳಿಂದ ದೇಹವನ್ನಲಂಕರಿಸಿಕೊಂಡು, ಜಿತೇಂದ್ರಿಯನಾಗಿ, ನಿಯತವ್ರತನಾಗಿ, ಆ ಸಂಹಿತಾಪುಸ್ತಕಗಳನ್ನು ಬೇರೆಬೇರೆಯಾಗಿ ಚಂದನಗಳಿಂದಲೂ, ಮಾಲೆಗಳಿಂದಲೂ, ಭಕ್ಷ್ಯಭೋಜ್ಯಗಳಿಂದಲೂ, ಪೇಯಗಳಿಂದಲೂ, ಶುಭಕರವಾದ ಹಲವು ಬಗೆಯ ವಸ್ತ್ರಗಳಿಂದಲೂ ಪೂಜಿಸಬೇಕು. ಆಮೇಲೆ ಚಿನ್ನ ಬೆಳ್ಳಿಯ ನಾಣ್ಯಗಳನ್ನು ದಕ್ಷಿಣೆಯಾಗಿ ಕೊಡಬೇಕು ಯಾವಾಗಲೂ ಪರಿಶುದ್ಧಮನಸ್ಸಿನಿಂದ ಮೂರುಪಲದಷ್ಟು ಸುವರ್ಣವನ್ನು ದಾನಮಾಡಬೇಕು. ದರಿದ್ರನಾಗಿದ್ದರೂ ಧನವಿಷಯದಲ್ಲಿ ವಂಚನೆಮಾಡದೆ, ಅದರಲ್ಲಿ ಅರ್ಧಭಾಗವನ್ನಾಗಲಿ, ಕೊನೆಗೆ ಕಾಲುಭಾಗವನ್ನಾಗಲಿ ಕೊಡಬೇಕು ಇಷ್ಟವಾದ ಪದಾರ್ಥಗಳನ್ನೆಲ್ಲ ಆ ಬ್ರಾಹ್ಮಣನಿಗೆ ದಾನಮಾಡಬೇಕು. ಭಾರತವನ್ನು ಹೇಳುವವನು ಗುರುಸಮಾನನಾದುದರಿಂದ, ಆತನನ್ನು ಎಲ್ಲಾ ವಿಧಗಳಲ್ಲಿಯೂ ಸಂತೋಷಪಡಿಸಬೇಕು ಸಕಲ ದೇವತೆಗಳನ್ನೂ, ನರನಾರಾಯಣರನ್ನೂ ಧ್ಯಾನಿಸಬೇಕು ಆಮೇಲೆ ಬ್ರಾಹ್ಮಣರನ್ನು ಚಂದನಗಳಿಂದಲೂ, ಮಾಲೆಗಳಿಂದಲೂ ಅಲಂಕರಿಸಿ, ನಾನಾಬಗೆಯ ದಾನಗಳಿಂದ ಅವರನ್ನು ತೃಪ್ತಿಪಡಿಸಬೇಕು. ಹೀಗೆ ಮಾಡುವುದರಿಂದ ಅತಿರಾತ್ರವೆಂಬ ಯಾಗವನ್ನು ಮಾಡಿದ ಫಲವನ್ನು ಪಡೆಯುವನು. ಒಂದೊಂದು ಪರ್ವದಲ್ಲಿಯೂ ಯಾಗದ ಫಲವುಂಟು. ಪುರಾಣಹೇಳುವ ವಿದ್ವಾಂಸನು, ಸ್ಫುಟಾಕ್ಷರಗಳೂ, ಪದಗಳೂ, ಸ್ವರವೂ ಉಳ್ಳವನಾಗಿರಬೇಕು. ಭವಿಷ್ಯವೆಂಬ ಭಾರತಭಾಗವನ್ನೂ ಹೇಳಿ ಮುಗಿಸಬೇಕು. ಬ್ರಾಹ್ಮಣೋತ್ತಮರಿಗೆ ಭೋಜನವಾದಮೇಲೆ, ಪಠನಮಾಡಿದವನಿಗೆ ಭೋಜನಮಾಡಿಸಿ, ಅಲಂಕರಿಸಿ, ಅವನ ಕೋರಿಕೆಗಳನ್ನೆಲ್ಲ ಈಡೇರಿಸಬೇಕು. ಪಾಠಕನನ್ನು ತೃಪ್ತಿಗೊಳಿಸುವುದೇ ದೇವತೆಗಳ ಪ್ರೀತಿ. ಬ್ರಾಹ್ಮಣೋತ್ತಮರಿಗೆ ಪ್ರೀತಿಯುಂಟಾದರೆ, ಎಲ್ಲಾ ದೇವತೆಗಳೂ ಸಂತೋಷಪಡುವರು ಆದುದರಿಂದ ಬ್ರಾಹ್ಮಣರನ್ನು ಉಚಿತರೀತಿಯಲ್ಲಿ ತೃಪ್ತಿಗೊಳಿಸಿ ಪೂಜಿಸಬೇಕು. ರಾಜಾ! ನಿನ್ನ ಅಪೇಕ್ಷೆಯಂತೆ ಭಾರತಶ್ರವಣವಿಧಿಯೆಲ್ಲವನ್ನೂ ನಿನಗೆ ತಿಳಿಸಿದೆನು. ಮುಖ್ಯವಾಗಿ ನೀನು ಶ್ರದ್ಧಾಳುವಾಗಿರಬೇಕು.

ಶ್ರೇಯಸ್ಸನ್ನು ಬಯಸುವವನು ಯಾವಾಗಲೂ ಭಾರತಶ್ರವಣ ಪಠನಗಳಲ್ಲಿ ಆಸಕ್ತನಾಗಿರಬೇಕು. ಹೆಚ್ಚೇಕೆ? ಭಾರತವು ಯಾವನ ಮನೆಯಲ್ಲಿರುವುದೋ ಆತನಿಗೆ ಜಯವು ಹಸ್ತಗತವಾದಂತೆಯೇ! ಈ ಇತಿಹಾಸವು ಮಹಾಪುಣ್ಯಕರವಾದುದು. ಇದರಲ್ಲಿ ಅನೇಕ ಕಥೆಗಳಿರುವುವು. ಈ ಗ್ರಂಥವು ದೇವತೆಗಳಿಗೂ ಆದರಣೀಯವು. ಇದೇ ಉತ್ತಮಸ್ಥಾನವು. ಇದೇ ಪರಮೋತ್ತಮ ಶಾಸ್ತ್ರವು. ಈ ಭಾರತವೇ ಮೋಕ್ಷಸಾಧಕವು ಇದು ಸತ್ಯವು. ಈ ಮಹಾಭಾರತವೆಂಬ ಆಖ್ಯಾನವನ್ನೂ, ಭೂಮಿಯನ್ನೂ, ಪಶುವನ್ನೂ, ಸರಸ್ವತಿಯನ್ನೂ, ಬ್ರಾಹ್ಮಣರನ್ನೂ, ಶ್ರೀಕೃಷ್ಣನನ್ನೂ ಸ್ತುತಿಸುವವನು ಎಂದಿಗೂ ಕಷ್ಟಕ್ಕೆ ಗುರಿಯಾಗುವುದಿಲ್ಲ. ಓ ಭರತಕುಲೋತ್ತಮಾ! ವೇದಗಳಲ್ಲಿ, ರಾಮಾಯಣದಲ್ಲಿ, ಮತ್ತು ಭಾರತದಲ್ಲಿ, ಆದಿಮಧ್ಯಾಂತಗಳಲ್ಲಿಯೂ, ಇನ್ನೂ ಎಲ್ಲಾ ಕಡೆಗಳಲ್ಲಿಯೂ, ವಿಷ್ಣುವು ಕೀರ್ತಿಸಲ್ಪಡುವನು. ಉತ್ತಮಗತಿಯನ್ನಪೇಕ್ಷಿಸುವವರು ಯಾವ ಗ್ರಂಥದಲ್ಲಿ ದಿವ್ಯವಾದ ವಿಷ್ಣುಕಥೆಗಳೂ, ಸನಾತನವಾದ ಶ್ರುತಿಗಳೂ ಅಡಗಿರುವುವೋ ಅದನ್ನೇ ಕೇಳಬೇಕು. ಆ ಲಕ್ಷಣಗಳಿರುವುದರಿಂದ ಈ ಮಹಾಭಾರತವು ಪವಿತ್ರವಾದುದು. ಇದು ಎಲ್ಲಾ ಧರ್ಮವಿಷಯಗಳನ್ನೂ ತಿಳಿಸುವುದು. ಆದುದರಿಂದ ಸಕಲಗುಣವಿಶಿಷ್ಟವಾದ ಇದನ್ನು ಕ್ಷೇಮಾಭಿಲಾಷಿಗಳೆಲ್ಲರೂ ಕೇಳಬೇಕು. ಇದನ್ನು ಕೇಳುವುದರಿಂದ ದುರಾಲೋಚನೆಗಳಿಂದಲೂ, ಅಸತ್ಯದಿಂದಲೂ ಸಂಪಾದಿಸಿದ ಪಾಪವೆಲ್ಲ, ಸೂರ್ಯೋದಯದಲ್ಲಿ ಕತ್ತಲೆಯು ಹೇಗೋ ಹಾಗೆ ನಶಿಸುವುದು ಅಷ್ಟಾದಶಪುರಾಣಗಳನ್ನು ಕೇಳುವುದರಿಂದುಂಟಾಗುವ ಫಲವೂ ಮಹಾಭಾರತಶ್ರವಣದಿಂದ ಲಭಿಸುವುದೆಂಬುದರಲ್ಲಿ ಸಂದೇಹವೇ ಇಲ್ಲ. ಇದನ್ನು ಕೇಳಿದ ಸ್ತ್ರೀಪುರುಷರೆಲ್ಲರೂ ವಿಷ್ಣುಸಾನ್ನಿಧ್ಯವನ್ನು ಪಡೆಯುವರು ಪುತ್ರಾಪೇಕ್ಷಿಗಳಾದ ಸ್ತ್ರೀಯರೆಲ್ಲರೂ ವಿಷ್ಣುವಿನ ಕೀರ್ತಿಯನ್ನು ಪ್ರತಿಪಾದಿಸತಕ್ಕ ಈ ಗ್ರಂಥವನ್ನು ಕೇಳಬೇಕು. ಫಲಾಪೇಕ್ಷಿಯಾದವನು ಭಾರತಪಠನಮಾಡತಕ್ಕವನಿಗೆ ತನ್ನ ಶಕ್ತ್ಯನುಸಾರವಾಗಿ ಕೊನೇಪಕ್ಷ ಐದು ಚಿನ್ನದ ನಾಣ್ಯವನ್ನಾದರೂ ಕೊಡಬೇಕು. ಭಾರತವನ್ನು ಓದುವವನಿಗೆ ಅವರವರು ತಮ್ಮ ಶಕ್ತ್ಯನುಸಾರವಾಗಿ ಸುವರ್ಣದಿಂದಲಂಕೃತವಾದ ಕೊಂಬುಗಳುಳ್ಳ ಮತ್ತು

ವಸ್ತ್ರಾಲಂಕೃತವಾದ ಕಪಿಲೆಯನ್ನು ಕರುವಿನೊಡನೆ ದಾನಕೊಡಬೇಕು. ಆತನ ಎರಡು ಕೈಗಳಿಗೂ ಆಭರಣಗಳನ್ನೂ, ಕಿವಿಗಳಿಗೆ ಕುಂಡಲಗಳನ್ನೂ ತೊಡಿಸಿ, ಅಧಿಕ ಧನವನ್ನೂ ಕೊಡಬೇಕು ಭೂದಾನ ಮಾಡಬೇಕು. ಭೂದಾನಕ್ಕೆ ಸಮಾನವಾದ ದಾನವು ಇದುವರೆಗೆ ಇದ್ದುದೂ ಇಲ್ಲ. ಮುಂದೆ ಇರುವುದೂ ಇಲ್ಲ. ಮನುಷ್ಯನು ಭಾರತವನ್ನು ಕೇಳಿದರೂ, ಇತರರಿಗೆ ಹೇಳಿದರೂ, ಸಕಲಪಾಪಗಳಿಂದ ನಿವೃತ್ತನಾಗಿ, ಚಿರಜೀವಿಯಾಗಿದ್ದು, ಕೊನೆಗೆ ವಿಷ್ಣುಸಾನ್ನಿಧ್ಯವನ್ನು ಪಡೆಯುವನು.

ಓ ಭರತಕುಲೋತ್ತಮಾ! ಭಾರತಶ್ರವಣದಿಂದ ಹನ್ನೊಂದುತಲೆ ಮೊರೆಯ ಎಲ್ಲಾ ಪಿತೃಗಳೊಡನೆ ತಾನೂ, ತನ್ನ ಪತ್ನಿಯೂ, ಮಕ್ಕಳೂ, ಉದ್ಧೃತರಾಗುವರು. ಈ ಭಾರತಗ್ರಂಥಸಂಖ್ಯೆಯಲ್ಲಿ ಹತ್ತರಲ್ಲಿ ಒಂದು ಪಾಲಿನಷ್ಟು ಹೋಮವನ್ನು ಮಾಡಬೇಕು. ಓ ಪುರುಷಶ್ರೇಷ್ಠಾ! ಹೀಗೆ ಭಾರತಪರನಶ್ರವಣವಿಧಿಗಳನ್ನೆಲ್ಲ ನಾನು ನಿನಗೆ ತಿಳಿಸಿರುವೆನು' ಎಂದನು.

## ಇದು ಹರಿವಂಶಾರ್ಗತವಾದ ಭಾರತಶ್ರವಣವಿಧಿಯೆಂಬ ಅಧ್ಯಾಯವು.

ಶ್ರೀಕೃಷ್ಣಾರ್ಪಣಮಸ್ತು

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ

ಶ್ರೀ ಶ್ರೀ ಶ್ರೀ

People's Printing & Publishing House, Ltd., Triplicane, Madras.